"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

## (ನೂರ ನಲವತ್ತೈದನೆಯ ಅಧಿವೇಶನ)

# ವಿಷಯಾನುಕ್ರಮಣಿಕೆ (Index)

ದಿನಾಂಕ:13ನೇ ಡಿಸೆಂಬರ್ 2021
ಸೋಮವಾರ


**1. ಸಂತಾಪ ಸೂಚನೆಗಳು**

ಶ್ರೀ ಕೋಣಿಜೇತಿ ರೋಸಯ್ಯ, ಶ್ರೀ ವಿರುಪಾಕ್ಷಪ್ಪ ಸಂಗಣ್ಣ ಅಂಗಡಿ, ಶ್ರೀ ಎಸ್.ಆರ್.ಮೋರೆ, ಶ್ರೀ ಪುನೀತ್ ರಾಜ್‌ಕುಮಾರ್, ಶ್ರೀ ಪಿ.ಭೋಜರಾಜ ಹೆಗ್ಡೆ, ಶ್ರೀ ಕೆ.ಎಸ್.ನಾರಾಯಣಾಚಾರ್ಯ, ನಾಡೋಜ ಹರಿಜನ ಪದ್ಮಮ್ಮ, ಶ್ರೀ ಎಸ್.ಶಿವರಾಂ, ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್ ಇವರ ನಿಧನದ ಬಗ್ಗೆ.

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

256-ಪುರಾತತ್ವ ಇಲಾಖೆಗೆ ಬಂದಿರುವ ಕೇಂದ್ರದ ಅನುದಾನ ಕುರಿತು

-ಡಾ: ತೇಜಸ್ವಿನಿ ಗೌಡ
-ಶ್ರೀಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು, ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿ ಪರಿಸ್ಥಿತಿ ಸಚಿವರ ಪರವಾಗಿ)

129-ರಾಜ್ಯದಲ್ಲಿ ಪರ್ವ ನಾಟಕ ಪ್ರದರ್ಶನ ಕುರಿತು

-ಶ್ರೀ ಪಿ.ಆರ್.ರಮೇಶ್
-ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

96-ಮೆಸ್ಕಾಂ ವಿಭಾಗದಲ್ಲಿ ಮಂಜೂರಾತಿಯಾದ ವಿದ್ಯುತ್ ಉಪಕೇಂದ್ರಗಳ ಕುರಿತು
-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ
-ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)


"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

136+66+140+08+117-ರಾಜ್ಯದ ಅನುದಾನಿತ ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನಿಧನ ಹಾಗೂ ನಿವೃತ್ತಿಯಿಂದ ತೆರವಾಗಿರುವ ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಕುರಿತು

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಪುಟ್ಟಣ್ಣ
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಅರುಣ ಶಹಾಪುರ
- ಡಾ: ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು)(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

11-ರಾಜ್ಯದ ಗ್ರಾಮೀಣ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ಅಗತ್ಯ ನುರಿತ ಸಿಬ್ಬಂದಿ ಒದಗಿಸುವ ಬಗ್ಗೆ

- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
- ಡಾ: ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

101-ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕ ಅಧೀಕ್ಷಕರ ವೇತನ ತಾರತಮ್ಯದ ಬಗ್ಗೆ

- ಶ್ರೀ ನಸೀರ್ ಅಹ್ಮದ್
- ಡಾ||ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು)(ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

146-ಐ.ಟಿ.ಐ. ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ

- ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್
- ಡಾ:ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು)

128-ಬೆಂಗಳೂರು ವಿಶ್ವವಿದ್ಯಾಲಯ ನಕಲಿ ಅಂಕಪಟ್ಟಿ ಹಗರಣ ಕುರಿತು

- ಶ್ರೀ ಬಿ.ಕೆ.ಹರಿಪ್ರಸಾದ್
- ಡಾ:ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು)

86- ದೇವಸ್ಥಾನ, ಚರ್ಚು, ಮಸೀದಿ ಹಾಗೂ ಪ್ರಾರ್ಥನಾಲಯಗಳ ವಿದ್ಯುತ್ ದರದ ಕುರಿತು
- ಶ್ರೀ ಮುನಿರಾಜು ಗೌಡ ಪಿ.ಎಂ.
-ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

84-ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಡಾ:ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

05-ವೈದ್ಯಕೀಯ ಸೀಟುಗಳ ಕುರಿತು
-ಶ್ರೀ ಎನ್.ರವಿಕುಮಾರ್
-ಡಾ:ಕೆ.ಸುಧಾಕರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು)

76-KREDL ನ ನೇಮಕಾತಿಯ ಬಗ್ಗೆ
-ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)
(ಶ್ರೀ ಕಾಂತರಾಜ್(ಬಿಎಂಎಲ್)ರವರ ಪರವಾಗಿ)
-ಶ್ರೀ ವಿ.ಸುನಿಲ್ ಕುಮಾರ್(ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

37-ಅನುದಾನ ಹಾಗೂ ಅನುದಾನರಹಿತ ಶಾಲಾ/ಕಾಲೇಜುಗಳ ಶಿಕ್ಷಕರಿಗೆ ಜ್ಯೋತಿ ಸಂಜೀವಿನಿ ಯೋಜನೆಯನ್ನು ವಿಸ್ತರಿಸುವ ಬಗ್ಗೆ
-ಶ್ರೀ ಎಸ್.ಎಲ್.ಭೋಜೇಗೌಡ
-ಡಾ:ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಆ)ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

ಅ) 19ನೇ ಡಿಸೆಂಬರ್ 2021ರಂದು ಕೆ.ಪಿ.ಎಸ್.ಸಿ.ಯಿಂದ ನಿಗದಿಯಾಗಿರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೋವಿಡ್ ಕಾರಣದಿಂದ ಮುಂದೂಡುವ ಬಗ್ಗೆ.

- ಶ್ರೀ ಯು.ಬಿ.ವೆಂಕಟೇಶ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ)ಕಾನೂನು ವಿಶ್ವವಿದ್ಯಾಲಯದ ಪರೀಕ್ಷೆಗೆ ಸಂಬಂಧಿಸಿದಂತೆ

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**4. ಕಾರ್ಯದರ್ಶಿಯವರ ವರದಿ**

**5. ಸಭೆಯ ಮುಂದಿಡಲಾದ ಕಾಗದಪತ್ರಗಳು**

**6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ**

"ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಠಿಯಿಂದ ಉಂಟಾಗಿರುವ ರೈತರ ಬೆಳೆನಾಶ ಮತ್ತು ಸಾರ್ವಜನಿಕ ಆಸ್ತಿ ಪಾಸ್ತಿ ನಷ್ಟವಾಗಿರುವ ಬಗ್ಗೆ"

-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

**7. ಗಮನ ಸೆಳೆಯುವ ಸೂಚನೆಗಳು**

**ಅ) 2013ನೇ ಸಾಲಿನಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ್ದರೂ ಸಹ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈಗಲೂ ಸಹ ಹಸ್ತಚಾಲಿತ ಸ್ಕ್ಯಾವೆಂಜಿಂಗ್ ಪದ್ಧತಿ ಚಾಲ್ತಿಯಲ್ಲಿರುವ ವಿಷಯದ ಬಗ್ಗೆ.**

-ಶ್ರೀ ಬಿ.ಕೆ.ಹರಿಪ್ರಸಾದ್

-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)

-ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
(ಸರ್ಕಾರದ ಮುಖ್ಯ ಸಚೇತಕರು)
-ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
-ಶ್ರೀ ಕೆ.ಎ.ತಿಪ್ಪೇಸ್ವಾಮಿ
-ಶ್ರೀ ಪಿ.ಆರ್.ರಮೇಶ್
-ಶ್ರೀ ಆರ್.ಧರ್ಮಸೇನಾ

**ಆ) ಕಬ್ಬಿಗೆ ವೈಜ್ಞಾನಿಕವಾದ ಬೆಲೆ ನಿಗದಿಪಡಿಸಿ, ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಬಾಕಿ ಹಣ ಪಾವತಿಸುವ ಬಗ್ಗೆ**

- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
(ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಗೋವಿಂದ ಎಂ.ಕಾರಜೋಳ[ಬೃಹತ್ ಹಾಗೂ ಮಧ್ಯಮ ನೀರಾವರಿ ಇಲಾಖೆ(ಜಲಸಂಪನ್ಮೂಲ)ಸಚಿವರು]
- ಶ್ರೀ ಲಕ್ಷ್ಮಣ ಸಂಗಪ್ಪ ಸವದಿ
- ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಶಂಕರ ಬ.ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು)
-ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಕೃಷಿ ಉದ್ದೇಶಕ್ಕಾಗಿ ಬಳಸುವ ಭೂಮಿಯ ಸರ್ವೆ ನಂಬರ್‌ಗಳ ಕನಿಷ್ಠ ವಿಸ್ತೀರ್ಣವನ್ನು ಕೊಡಗು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೂರು ಗುಂಟೆಗೆ ನಿಗದಿಪಡಿಸಿ, ಇನ್ನುಳಿದ ಜಿಲ್ಲೆಗಳಲ್ಲಿ 5 ಗುಂಟೆಗೆ ನಿಗದಿಪಡಿಸಿರುವುದರಿಂದ ಸಣ್ಣ ಹಿಡುವಳಿ ಜಮೀನು ಹೊಂದಿರುವ ರೈತರುಗಳು ವಿಭಾಗ ಮಾಡಿಕೊಳ್ಳಲು ಹಾಗೂ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲದಿರುವುದರಿಂದ ದಿನಾಂಕ 12.11.2021ರ ಆದೇಶ ಸಂಖ್ಯೆ:ಕಂ.ಇ.85 ಭೂದಾನ 2018ನ್ನು ಹಿಂದಕ್ಕೆ ಪಡೆಯುವ ಬಗ್ಗೆ.**

- ಶ್ರೀ ಕೆ.ಟಿ.ಶ್ರೀಕಂಠೇಗೌಡ
- ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಕಂದಾಯ ಸಚಿವರ ಪರವಾಗಿ)
- ಶ್ರೀ ಎಸ್.ಎಲ್.ಭೋಜೇಗೌಡ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**8. ಪ್ರಕಟಣೆಗಳು**

**9. ನಿಯಮ 330ರ ಮೇರೆಗೆ ಚರ್ಚೆ**

**ಅ) ಸರ್.ಎಂ.ವಿಶ್ವೇಶ್ವರಯ್ಯ 2ನೇ ಹಂತ ಬಡಾವಣೆ ರಚನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಉಲ್ಲಾಳ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ಜಮೀನುಗಳ ಭೂ ಮಾಲೀಕರಿಗೆ ಪರಿಹಾರ ನೀಡದಿರುವ ವಿಷಯದ ಕುರಿತು.**

-ಶ್ರೀ ಪುಟ್ಟಣ್ಣ
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಮುಖ್ಯಮಂತ್ರಿಗಳ ಪರವಾಗಿ)

**ಆ) ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ ಹಾಗೂ ಇನ್ನಿತರೆ ಕಾರಣಗಳಿಂದ ಖಾಲಿಯಾಗಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ನಿಯಮ ಬಾಹಿರವಾಗಿ ತಿರಸ್ಕರಿಸುತ್ತಿರುವ ಕುರಿತು.**

-ಶ್ರೀ ಅರುಣ ಶಹಾಪುರ
-ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)
(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)

**(ವಿಷಯವನ್ನು ಚರ್ಚಿಸಲಿಲ್ಲ)**

**ಇ) ಗ್ರಾಮಗಳಲ್ಲಿರುವ ನ್ಯಾಯಬೆಲೆ ಅಂಗಡಿಗಳು ಗ್ರಾಮದಿಂದ 3-4 ಕಿ.ಮೀ. ದೂರವಿರುವ ಕಾರಣ, ತಾಂಡಾ ಜನರಿಗೆ ಅನಾನುಕೂಲ ಆಗುತ್ತಿರುವುದರಿಂದ ಕನಿಷ್ಟ 100 ರೇಷನ್ ಕಾರ್ಡ್ ಹೊಂದಿರುವ ಪ್ರತಿಯೊಂದು ತಾಂಡಾಗಳಿಗೆ ಒಂದು ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವುದಾಗಿ ಘೋಷಣೆ ಮಾಡಿದ್ದರೂ ಸಹ ಸದರಿ ಯೋಜನೆಯನ್ನು ಜಾರಿಗೆ ತಂದಿಲ್ಲದಿರುವ ವಿಷಯದ ಕುರಿತು.**

-ಶ್ರೀ ಪ್ರಕಾಶ್ ಕೆ.ರಾಥೋಡ್
-ಶ್ರೀ ಉಮೇಶ್ ವಿ.ಕತ್ತಿ(ಅರಣ್ಯ, ಆಹಾರ, ಪಡಿತರ ವಿತರಣೆ, ಗ್ರಾಹಕ ವ್ಯವಹಾರ ಸಚಿವರು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**10. ಪ್ರಕಟಣೆ**

ಚುಕ್ಕೆ ಪಶ್ನೆ ಸಂಖ್ಯೆ 136+66+140+08+117ಕ್ಕೆ ಸಂಬಂಧಿಸಿದಂತೆ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಕರೆಯುವ ಬಗ್ಗೆ.

~~~~~~~~~~

**ಕರ್ನಾಟಕ ವಿಧಾನ ಪರಿಷತ್ತು**

***ಸೋಮವಾರ, 13ನೇ ಡಿಸೆಂಬರ್ 2021***

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 05 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ (ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”
~~~~~~~~~~

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(1026)13.12.2021/11.00/ಎಂ.ಎಂ-ವಿ.ಕೆ [ಎಂ.ಡಿ]

## 1. ಸಂತಾಪ ಸೂಚನೆಗಳು

ಶ್ರೀ ಕೋಣಿಜೇತಿ ರೋಸಯ್ಯ, ಶ್ರೀ ವಿರುಪಾಕ್ಷಪ್ಪ ಸಂಗಣ್ಣ ಅಗಡಿ, ಶ್ರೀ ಎಸ್.ಆರ್.ಮೋರೆ, ಶ್ರೀ ಪುನೀತ್ ರಾಜ್‌ಕುಮಾರ್, ಶ್ರೀ ಪಿ.ಭೋಜರಾಜ ಹೆಗ್ಡೆ, ಶ್ರೀ ಕೆ.ಎಸ್.ನಾರಾಯಣಾಚಾರ್ಯ, ನಾಡೋಜ ಹರಿಜನ ಪದ್ಮಮ್ಮ, ಶ್ರೀ ಎಸ್.ಶಿವರಾಂ, ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್ ಇವರ ನಿಧನದ ಬಗ್ಗೆ.

- - - - - - -

**ಸಭಾಪತಿಯವರು**:- ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ಕೋಣಿಜೇತಿ ರೋಸಯ್ಯ, ಮಾಜಿ ಸಚಿವರು, ಮಾಜಿ ಸಂಸದರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಿರೂಪಾಕ್ಷಪ್ಪ ಸಂಗಣ್ಣ ಅಗಡಿ, ಮಾಜಿ ಸಚಿವರು ಹಾಗೂ ಮಾಜಿ ವಿಧಾನ ಸಭೆಯ ಸದಸ್ಯರಾಗಿದ್ದ ಶ್ರೀ ಎಸ್.ಆರ್. ಮೋರೆ, ಕನ್ನಡ ಚಲನಚಿತ್ರ ರಂಗದ ಯುವ ನಟರಾದ ಶ್ರೀ ಪುನೀತ್ ರಾಜ್‌ಕುಮಾರ್, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಪಿ.ಭೋಜರಾಜ ಹೆಗ್ಡೆ, ಹಿರಿಯ ವಿದ್ವಾಂಸರು, ಲೇಖಕರು ಹಾಗೂ ಪ್ರವಚನಕಾರರಾಗಿದ್ದ ಶ್ರೀ ಕೆ.ಎಸ್. ನಾರಾಯಣಾಚಾರ್ಯ, ಹಿರಿಯ ಬಯಲಾಟ ಕಲಾವಿದೆ ನಾಡೋಜ ಹರಿಜನ ಪದ್ಮಮ್ಮ, ಕನ್ನಡ ಚಿತ್ರರಂಗದ ಹಿರಿಯ ನಟರಾದ ಶ್ರೀ ಎಸ್.ಶಿವರಾಂ ಹಾಗೂ ಭಾರತ ಸೇನಾಪಡೆಯ ಸಶಸ್ತ್ರ ಪಡೆಗಳ ಮುಖ್ಯಸ್ಥರಾದ ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

(ಮುಂದು)

(1027) 13-12-2021 KH/VK (MD) 11-10

(ಸಭಾಪತಿಯವರ ಉಪಸ್ಥಿತಿ)

## 1. ಶ್ರೀ ಕೋಣಿಜೇತಿ ರೋಸಯ್ಯ

ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ ಕೋಣಿಜೇತಿ ರೋಸಯ್ಯ ಅವರು ದಿನಾಂಕ:04.12.2021 ರಂದು ನಿಧನ ಹೊಂದಿರುತ್ತಾರೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

1933ರ ಜುಲೈ, 04ರಂದು ತಮಿಳುನಾಡಿನ ವೇಮೂರಿನಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ., ಪದವೀಧರರಾಗಿದ್ದರು. ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ವಿದ್ಯಾರ್ಥಿಗಳ ನಾಯಕರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದ್ದರು. 1968 ರಿಂದ 1985ರವರೆಗೆ ಸತತವಾಗಿ ಆಂಧ್ರ ಪ್ರದೇಶ ವಿಧಾನ ಪರಿಷತ್ತಿನ ಸದಸ್ಯರಾಗಿ, 1979 ರಿಂದ 1983ರವರೆಗೆ ಸಾರಿಗೆ ಮತ್ತು ಕಟ್ಟಡ, ವಸತಿ ಹಾಗೂ ಗೃಹ ಸಚಿವರಾಗಿ, 1989 ರಿಂದ 1994ರವರೆಗೆ ಸಾರಿಗೆ ಹಾಗೂ ವಿತ್ತ ಸಚಿವರಾಗಿ, 1998ರಲ್ಲಿ 12ನೇ ಲೋಕಸಭೆಗೆ ಲೋಕಸಭಾ ಸದಸ್ಯರಾಗಿ, 2009 ರಿಂದ 2010ರವರೆಗೆ ಆಂಧ್ರಪ್ರದೇಶದ 15ನೇ ಮುಖ್ಯಮಂತ್ರಿಯಾಗಿ, 2011 ರಿಂದ 2016ರವರೆಗೆ ತಮಿಳುನಾಡಿನ ರಾಜ್ಯಪಾಲರಾಗಿ, 2014ನೇ ಜೂನ್‌ನಿಂದ 2014ನೇ ಆಗಸ್ಟ್‌ವರೆಗೆ ಕರ್ನಾಟಕದ ರಾಜ್ಯಪಾಲರಾಗಿ ಶ್ರೀಯುತರು ಸೇವೆ ಸಲ್ಲಿಸಿದ್ದರು. ವಿತ್ತ ಸಚಿವರಾಗಿದ್ದ ಅವಧಿಯಲ್ಲಿ ಶಿಕ್ಷಕರು ನಿವೃತ್ತಿ ಸೌಲಭ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ಕ್ರಮವಹಿಸಿದ್ದರು. ಆಂಧ್ರಪ್ರದೇಶ ರಾಜ್ಯದಲ್ಲಿ ಸುದೀರ್ಘಾವಧಿ ಕಾಲ ಆರ್ಥಿಕ ಸಚಿವರಾಗಿ ಕಾರ್ಯನಿರ್ವಹಿಸಿ ಒಟ್ಟು 16 ಬಾರಿ ಆಯವ್ಯಯ ಮಂಡಿಸುವ ಮೂಲಕ ದೇಶದಲ್ಲಿ ದಾಖಲೆ ನಿರ್ಮಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಹಿರಿಯ ರಾಜಕಾರಣಿ ಹಾಗೂ ಆರ್ಥಿಕ ತಜ್ಞರೊಬ್ಬರನ್ನು ಕಳೆದುಕೊಂಡಂತಾಗಿದೆ.

## 2. ಶ್ರೀ ವಿರುಪಾಕ್ಷಪ್ಪ ಸಂಗಣ್ಣ ಅಗಡಿ

ಮಾಜಿ ಸಚಿವರು, ಮಾಜಿ ಸಂಸದರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ವಿರುಪಾಕ್ಷಪ್ಪ ಸಂಗಣ್ಣ ಅಗಡಿ ಅವರು ದಿನಾಂಕ:12.10.2021ರಂದು ನಿಧನ ಹೊಂದಿರುತ್ತಾರೆ.

1940ರ ಡಿಸೆಂಬರ್, 19ರಂದು ಕೊಪ್ಪಳದಲ್ಲಿ ಜನಿಸಿದ್ದ ಶ್ರೀಯುತರು ಬಿ.ಕಾಂ., ಪದವೀಧರರಾಗಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದರಲ್ಲದೇ, ಎಸ್.ವಿ.ಎಂ. ಶಾಲೆಯ ಸಂಸ್ಥಾಪಕ ಸದಸ್ಯರಾಗಿ, ಲಯನ್ಸ್ ಕ್ಲಬ್‌ನ ಚಾರ್ಟರ್ ಸದಸ್ಯರಾಗಿ, ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ, ನಗರ ಸಭೆಯ ಸದಸ್ಯರಾಗಿ ಹಾಗೂ ತಾಲ್ಲೂಕು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ವ್ಯವಸಾಯೋತ್ಪನ್ನ ಮಾರುಕಟ್ಟೆ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು 1985ರಲ್ಲಿ ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ 8ನೇ ವಿಧಾನ ಸಭೆಗೆ ಆಯ್ಕೆಯಾಗಿದ್ದು ವೈದ್ಯಕೀಯ ಶಿಕ್ಷಣ ಸಚಿವರಾಗಿಯೂ ಸೇವೆ ಸಲ್ಲಿಸಿರುತ್ತಾರೆ ಹಾಗೂ 2004ರಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## <u>3. ಎಸ್.ಆರ್. ಮೋರೆ</u>

ಮಾಜಿ ಸಚಿವರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಎಸ್.ಆರ್. ಮೋರೆ ರವರು ದಿನಾಂಕ:09.12.2021ರಂದು ನಿಧನ ಹೊಂದಿರುತ್ತಾರೆ.

1940ರ ಡಿಸೆಂಬರ್, 09ರಂದು ದಾವಣಗೆರೆಯಲ್ಲಿ ಜನಿಸಿದ್ದ ಶ್ರೀಯುತರು ಪದವೀಧರರರಾಗಿದ್ದು, ವೃತ್ತಿಯಲ್ಲಿ ಕೈಗಾರಿಕೋದ್ಯಮಿಯಾಗಿದ್ದರು. ಶ್ರೀಯುತರು ದುರ್ಬಲ ವರ್ಗದವರ ಏಳಿಗೆಗಾಗಿ ಶ್ರಮಿಸಿದ್ದರು. ಧಾರವಾಡ ವಿಧಾನಸಭಾ ಕ್ಷೇತ್ರದಿಂದ 07 ಹಾಗೂ 09ನೇ ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾಗಿ ಬಂಗಾರಪ್ಪ ಅವರ ಸರ್ಕಾರದಲ್ಲಿ ಸಹಕಾರ ಸಚಿವರಾಗಿ ಹಾಗೂ ಧರ್ಮಸಿಂಗ್ ಅವರ ಸರ್ಕಾರದಲ್ಲಿ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

## 4. ಶ್ರೀ ಪುನೀತ್ ರಾಜ್‌ಕುಮಾರ್

ಕನ್ನಡ ಚಿತ್ರರಂಗದ ಉದಯೋನ್ಮುಖ ಮೇರು ನಟರಾಗಿದ್ದ ಪುನೀತ್ ರಾಜ್‌ಕುಮಾರ್ ಅವರು ದಿನಾಂಕ: 29.10.2021 ರಂದು ನಿಧನ ಹೊಂದಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1975ರ ಮಾರ್ಚ್, 17 ರಂದು ಜನಿಸಿದ್ದ ಎಲ್ಲರ ಪಾಲಿನ ಪ್ರೀತಿಯ ಅಪ್ಪು ಅಭಿಮಾನಿಗಳ ಪಾಲಿಗೆ ಪವರ್‌ಸ್ಟಾರ್. ಜನಿಸಿದ 6 ತಿಂಗಳಿಗೆ ‘ಪ್ರೇಮದ ಕಾಣಿಕೆ’ ಚಲನಚಿತ್ರದ ಮೂಲಕ ಬೆಳ್ಳಿಪರದೆ ಏರಿದ ‘ಭಾಗ್ಯವಂತ’ ರಾಗಿದ್ದರು. 1980ರಲ್ಲಿ ‘ವಸಂತಗೀತೆ’, 1981ರಲ್ಲಿ ‘ಭಾಗ್ಯವಂತ’, 1982ರಲ್ಲಿ ‘ಚಲಿಸುವ ಮೋಡಗಳು’, 1983ರಲ್ಲಿ ’ಎರಡು ನಕ್ಷತ್ರಗಳು’, 1985ರಲ್ಲಿ ‘ಭಕ್ತ ಪ್ರಹ್ಲಾದ’ ಹಾಗೂ ‘ಬೆಟ್ಟದ ಹೂವು’ ಹೀಗೆ ಸಾಲು ಸಾಲು ಚಲನಚಿತ್ರಗಳಲ್ಲಿ ಬಾಲನಟನಾಗಿ ಅಭಿನಯಿಸಿದ ಅಪ್ಪು ‘ಬೆಟ್ಟದ ಹೂವು’ ಚಿತ್ರಕ್ಕೆ ಬಾಲ ಕಲಾವಿದ ರಾಷ್ಟ್ರೀಯ ಚಲನ ಚಿತ್ರ ಪ್ರಶಸ್ತಿ ಪಡೆದರು. ‘ಎರಡು ನಕ್ಷತ್ರ ಹಾಗೂ ‘ಚಲಿಸುವ ಮೋಡಗಳು’ ಚಿತ್ರಗಳ ಅಭಿನಯಕ್ಕೆ ಶ್ರೇಷ್ಠ ಬಾಲ ಕಲಾವಿದ ‘ರಾಜ್ಯ ಪ್ರಶಸ್ತಿ’ಗೆ ಭಾಜನರಾಗಿದ್ದರು.

ಬಾಲ ಕಲಾವಿದರಾಗಿ ಪ್ರೇಕ್ಷಕರ ಹುಬ್ಬೇರುವಂತೆ ನಟಿಸಿದ ಅಮೋಘ ಚಿತ್ರಗಳು ಚಿರಸ್ಥಾಯಿಯಾಗಿವೆ. ಬಾಲ್ಯದಲ್ಲಿ ನಟನೆ ಅಲ್ಲದೇ ಗಾಯನದಲ್ಲೂ ಮನೆ ಮಾತಾಗಿದ್ದರು. ನೃತ್ಯ, ಸಾಹಸ, ಈಜುಕಲೆಗಳಲ್ಲಿ ಕರಗತವನ್ನು ಹೊಂದಿದ್ದ ಅವರು ಅಭಿನಯದಲ್ಲಿಯೂ ಅಭಿಜಾತರಾಗಿದ್ದರು. 2002ರಲ್ಲಿ ನಾಯಕ ನಟರಾಗಿ ಬಂದ ಅವರು 27 ಚಲನಚಿತ್ರಗಳಲ್ಲಿ ನಾಯಕ ನಟನಾಗಿ ಅಭಿನಯಿಸಿ ಭಾರತ ಚಲನ ಚಿತ್ರರಂಗದಲ್ಲಿ ಅಜಾತಶತ್ರುವಾಗಿದ್ದರು.

ನಾಯಕ ನಟ, ನಿರ್ಮಾಪಕ ಹಾಗೂ ಹಿನ್ನೆಲೆ ಗಾಯಕರಾಗಿದ್ದ ಇವರ ಸೇವೆ ಕೇವಲ ಸಿನಿಮಾ ರಂಗಕ್ಕೆ ಸೀಮಿತವಾಗಿರದೇ ಸಾಮಾಜಿಕ ಸಮಾಜಮುಖಿಯಾಗಿ ಸೇವೆ ಸಲ್ಲಿಸಿ ಶೈಕ್ಷಣಿಕ ರಾಯಭಾರಿಯಾಗಿಯೂ ಗಮನಾರ್ಹವಾದ ಸೇವೆ ಸಲ್ಲಿಸಿರುತ್ತಾರೆ. ಗ್ರಾಮೀಣ ಮಕ್ಕಳ ಶಿಕ್ಷಣ, ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆ ಕಡೆಗೆ ಆಕರ್ಷಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿರುವುದಲ್ಲದೆ ರಾಜ್ಯದ ಪ್ರತಿಷ್ಠಿತ ಕೆ.ಎಂ.ಎಫ್ ಸಂಸ್ಥೆಯ ಜನಪ್ರಿಯ ಬ್ರ್ಯಾಂಡ್ ‘ನಂದಿನಿ’, ಸಂಸ್ಥೆಗೆ ರಾಯಭಾರಿಯಾಗಿ ‘ಸರ್ವ ಶಿಕ್ಷಣ ಅಭಿಯಾನ’ದ ‘ಹೆಣ್ಣು ಮಕ್ಕಳಿಗೆ ಕಡ್ಡಾಯ ಶಿಕ್ಷಣ’, ‘ಪಲ್ಸ್ ಪೊಲಿಯೋ ಜಾಗೃತಿ’, ರಾಜ್ಯ ಚುನಾವಣಾ ಆಯೋಗದ ‘ಮತದಾನ ಜಾಗೃತಿ ಅಭಿಯಾನ’, ‘ಸಂಚಾರ ನಿಯಮಗಳನ್ನು ಪಾಲಿಸಲು ಜಾಗೃತಿ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಮೂಡಿಸಲು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ರಾಯಭಾರಿಯಾಗಿ, 'ರಕ್ತ ದಾನ ಮಾಡಿ ಜೀವ ಉಳಿಸಿ', 'ಫಿಟ್ ಇಂಡಿಯಾ ಚಾಲೆಂಜ್', 'ಅಂತರ ರಾಷ್ಟ್ರೀಯ ಯೋಗಾ ದಿನ', 'ಸ್ವಚ್ಚ ಭಾರತ ಅಭಿಯಾನ', 'ಕೊರೋನಾ ವಿರುದ್ಧ ಜನಜಾಗೃತಿ', ಎಲ್.ಇ.ಡಿ. ಬಲ್ಪ್ ರಾಯಭಾರಿ ಹೀಗೆ ಮುಂತಾದ ಸರ್ಕಾರ ಮತ್ತು ಅನೇಕ ಸಂಘ-ಸಂಸ್ಥೆಗಳು ನಡೆಸುತ್ತಿದ್ದ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳಿಗೆ ಯಾವುದೇ ಸಂಭಾವನೆ ಪಡೆಯದೆ ಪ್ರಚಾರ ರಾಯಭಾರಿಯಾಗಿ ಶ್ರೀಯುತರು ಕಾರ್ಯನಿರ್ವಹಿಸುವ ಮೂಲಕ ಜನಪರ ಕಾಳಜಿಯನ್ನು ತೋರಿಸಿದ್ದಾರೆ.

ಬಡಮಕ್ಕಳಿಗೆ ಶಿಕ್ಷಣ ನೀಡಲು ಡಾ: ರಾಜಕುಮಾರ್ ರವರ ಹೆಸರಿನಲ್ಲಿ ಐ.ಎ.ಎಸ್, ಐ.ಪಿ.ಎಸ್ ತರಬೇತಿ ಶಾಲೆಯನ್ನು ಸಹ ತೆರದಿದ್ದರು. 'ಪಿಆರ್‌ಕೆ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರಡಿಯಲ್ಲಿ ಹೊಸ ಹೊಸ ಬಗೆಯ ಚಲನಚಿತ್ರಗಳನ್ನು ತಯಾರಿಸುತ್ತಿದ್ದುದ್ದಲ್ಲದೇ ಹೊಸ ಪ್ರತಿಭೆಗಳಿಗೆ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಉದ್ಯಮದ ಬೆಳವಣಿಗೆಗೂ ಪ್ರೋತ್ಸಾಹ ನೀಡಿದ್ದರು.

ಕಿರುತೆರೆಯಲ್ಲಿ 'ಕನ್ನಡದ ಕೋಟ್ಯಾಧಿಪತಿ' ಕಾರ್ಯಕ್ರಮದ ನಿರೂಪಕರಾಗಿ ಮಾತ್ರವಲ್ಲದೇ ಧಾರವಾಹಿಗಳನ್ನು ನಿರ್ಮಿಸುತ್ತಿದ್ದರು. ಕನ್ನಡ ಚಲನಚಿತ್ರ ರಂಗಕ್ಕೆ ಹೊಸ ಬಗೆಯ ತಂತ್ರಜ್ಞಾನವನ್ನು ಪರಿಚಯಿಸಬೇಕೆಂಬ ಅಪಾರ ತುಡಿತವನ್ನು ಹೊಂದಿದ್ದರು. ಕನ್ನಡದ ಕೋಟ್ಯಾಧಿಪತಿ ಕಾರ್ಯಕ್ರಮದ ಸಂಭಾವನೆಯನ್ನು ಪರೋಪಕಾರಕ್ಕೆ ನೀಡಿದ ಕನ್ನಡಿಗರ ದೈವರತ್ನರಾಗಿದ್ದರಲ್ಲದೆ ಅನೇಕ ಗೀತೆಗಳನ್ನು ಹಾಡಿ ಅದರಿಂದ ಬಂದ ಸಂಭಾವನೆಯನ್ನು ಆಶ್ರಮಗಳಿಗೆ ನೀಡಿದ ಕೊಡುಗೈದಾನಿ. ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗಾಗಿ, ಗೋಶಾಲೆಗಳಿಗೆ, ವೃದ್ಧಾಶ್ರಮಕ್ಕೆ, ತಮ್ಮದೇ ಕುಟುಂಬದ ಶಕ್ತಿಧಾಮ ಆಶ್ರಮಕ್ಕೆ ತಮ್ಮ ಸಂಭಾವನೆಯ ಬಹುಪಾಲು ಹಣವನ್ನು ಮೀಸಲಿಟ್ಟಿದ್ದ ಸಮಾಜಮುಖಿ ವ್ಯಕ್ತಿಯಾಗಿದ್ದರು.

"ಯೂತ್ ಐಕಾನ್" ಕನ್ನಡಡಿಗರ ಯುವರತ್ನ ಎಂದೇ ಬಿಂಬಿತರಾಗಿದ್ದ ಸಹೃದಯಿ ಪುನೀತ್ ರಾಜ್‌ಕುಮಾರ್‌ರವರು ಸದ್ದಿಲ್ಲದೆ ಸಾವಿರಾರು ಬದುಕುಗಳಿಗೆ

ಬೆಳಕಾಗಿದ್ದರು. ನೇತ್ರದಾನ ಮಾಡುವುದರ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದರು. ನೇತ್ರದಾನ ಮಾಡುವಲ್ಲಿ ನಾಡಿನ ಜನತೆಗೆ ಸ್ಫೂರ್ತಿದಾಯಕರಾಗಿದ್ದಾರೆ.

'ಶರಣರ ಗುಣವನ್ನು ಮರಣದಲ್ಲಿ ಕಾಣು' ಎಂಬ ನಾಣ್ನುಡಿಗೆ ಸಾಕ್ಷಿಯಾದ ಕನ್ನಡದ ಪ್ರತಿಭಾವಂತ ಹಾಗೂ ಉದಯೋನ್ಮುಖ ಮೇರು ನಟನ ಅಕಾಲಿಕ ನಿಧನದಿಂದಾಗಿ ರಾಜ್ಯ ಹಾಗೂ ಚಲನಚಿತ್ರ ರಂಗಕ್ಕೆ ಅಪಾರವಾದ ನಷ್ಟವುಂಟಾಗಿದೆ.

## 5. ಶ್ರೀ ಪಿ. ಭೋಜರಾಜ ಹೆಗ್ಡೆ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಪಿ. ಭೋಜರಾಜ ಹೆಗ್ಡೆ ಅವರು ದಿನಾಂಕ: 09.11.2021ರಂದು ನಿಧನ ಹೊಂದಿರುತ್ತಾರೆ.

1923ರ ಫೆಬ್ರುವರಿ, 13ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಪಡಂಗಡಿಯಲ್ಲಿ ಜನಿಸಿದ್ದ ಶ್ರೀಯುತರು ಉಜಿರೆ ರಬ್ಬರ್ ಸೊಸೈಟಿ ಹಾಗೂ ಮುಂಡಾಜೆಯ ಶತಾಬ್ದಿ ವಿದ್ಯಾಲಯ ಸಮಿತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1942ರಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಬ್ರಿಟೀಷರ ವಿರುದ್ಧ ನಡೆದ 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿದ್ದ ಶ್ರೀಯುತರು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಜೈಲುವಾಸ ಅನುಭವಿಸಿದ್ದರು. ಜೈನ ಮಠದ 'ತ್ಯಾಗಿ ಸೇವಾರತ್ನ' ಪ್ರಶಸ್ತಿ ಹಾಗೂ 'ಗ್ರಾಮೋದ್ಧಾರ' ಪ್ರಶಸ್ತಿಗೆ ಶ್ರೀಯುತರು ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸ್ವಾತಂತ್ರ್ಯ ಹೋರಾಟಗಾರರೊಬ್ಬರನ್ನು ಕಳೆದುಕೊಂಡಂತಾಗಿದೆ.

## 6. ಶ್ರೀ ಕೆ.ಎಸ್. ನಾರಾಯಣಾಚಾರ್ಯ

ಹಿರಿಯ ವಿದ್ವಾಂಸರು ಲೇಖಕರು ಹಾಗೂ ಪ್ರವಚನಕಾರರಾಗಿದ್ದ ಕೆ.ಎಸ್. ನಾರಾಯಣಾಚಾರ್ಯ ಅವರು ದಿನಾಂಕ: 27.11.2021ರಂದು ನಿಧನ ಹೊಂದಿರುತ್ತಾರೆ.

1933ರ ಅಕ್ಟೋಬರ್, 30 ರಂದು ಕನಕಪುರದಲ್ಲಿ ಜನಿಸಿದ್ದ ಶ್ರೀಯುತರು ಬಿಎಸ್ಸಿ, ಬಿಎ., ಹಾಗೂ ಎಂ.ಎ., ವ್ಯಾಸಂಗ ಮಾಡಿದ್ದರು. ಧಾರವಾಡದ ಕರ್ನಾಟಕ ಆರ್ಟ್ಸ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜಿನಲ್ಲಿ ಅಧ್ಯಾಪಕರಾಗಿ ಹಾಗೂ ಪ್ರವಚನಕಾರರಾಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಸಿದ್ಧ ಲೇಖಕರು, ಮೇರು ವಿದ್ವಾಂಸರು, ಹಿಂದುತ್ವ ರಾಷ್ಟ್ರೀಯತೆಯ ಪ್ರಖರ ಪ್ರತಿಪಾದಕರೂ ಆಗಿದ್ದ ಶ್ರೀಯುತರು ಧರ್ಮಶಾಸ್ತ್ರ ಪ್ರಚಾರದ ಮೂಲಕ ಖ್ಯಾತಿಗಳಿಸಿ 'ರಾಮಾಯಣಾಚಾರ್ಯ' ಎಂದೇ ಪ್ರಸಿದ್ಧಿ ಪಡೆದಿದ್ದರು. ಶ್ರೀಯುತರು 'ರಾಮಾಯಣ ಸಹಶ್ರೀ', 'ಆಚಾರ್ಯ ಚಾಣಕ್ಯ' ಸೇರಿದಂತೆ 200ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುತ್ತಾರಲ್ಲದೇ, ಕನ್ನಡ, ಇಂಗ್ಲಿಷ್, ಸಂಸ್ಕೃತ ಹಾಗೂ ತಮಿಳು ಭಾಷೆಯಲ್ಲಿ ರಾಮಾಯಣ, ಮಹಾಭಾರತ ಮತ್ತು ಶ್ರೀಮದ್ ಭಾಗವತ, ವೇದ-ಉಪನಿಷತ್ತುಗಳ ಕುರಿತು ವಿಸ್ತಾರವಾಗಿ ರಾಷ್ಟ್ರದ ವಿವಿದೆಡೆಗಳಲ್ಲಿ ಪ್ರವಚನ ನೀಡಿರುತ್ತಾರೆ. ವಿವಿಧ ಮಠಾಧೀಶರಿಂದ 'ವಿದ್ವನ್ಮಣಿ', 'ವೇದಭೂಷಣ', 'ವಾಲ್ಮೀಕಿ ಹೃದಯಜ್ಞ', 'ರಾಮಾಯಣಾಚಾರ್ಯ', 'ಮಹಾಭಾರತಾಚಾರ್ಯ' ಮೊದಲಾದ ಬಿರುದುಗಳಿಗೆ ಭಾಜನರಾಗಿದ್ದರಲ್ಲದೇ 1973ರಲ್ಲಿ ಗಮಕ ರತ್ನಾಕರ ಎಂಬ ಸಂಸ್ಕೃತಿ ಮಾಲೆಗೆ ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಬಹುಮಾನ ಮತ್ತು 2008ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ವಿದ್ವಾಂಸರೊಬ್ಬರನ್ನು ಕಳೆದುಕೊಂಡಂತಾಗಿದೆ.

## 7. ನಾಡೋಜ ಹರಿಜನ ಪದ್ಮಮ್ಮ

ರಂಗಭೂಮಿಯ ಹಿರಿಯ ಬಯಲಾಟ ಕಲಾವಿದೆ ನಾಡೋಜ ಹರಿಜನ ಪದ್ಮಮ್ಮ ಅವರು ದಿನಾಂಕ: 29.11.2021ರಂದು ನಿಧನ ಹೊಂದಿರುತ್ತಾರೆ.

ಬಳ್ಳಾರಿ ನಗರದ ಕಪ್ಪಗಲ್ಲು ಗ್ರಾಮದವರಾದ ಶ್ರೀಯುತರು ನಾಲ್ಕನೇ ತರಗತಿ ವ್ಯಾಸಂಗ ಮಾಡಿದ್ದರೂ ಕೂಡ ರಂಗಭೂಮಿ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದರು. ಬಯಲಾಟದಲ್ಲಿ ದ್ರೌಪದಿ, ಸೀತೆ, ಕುಂತಿ ಸೇರಿ ಹಲವು ಪಾತ್ರಗಳ ಮೂಲಕ ಜನಪ್ರಿಯರಾಗಿದ್ದ ಶ್ರೀಯುತರು ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ರಾಣಿ ಚೆನ್ನಮ್ಮ ಪ್ರಶಸ್ತಿ, ನಾಡೋಜ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಂಗಭೂಮಿ ಕಲಾವಿದೆಯೊಬ್ಬರನ್ನು ಕಳೆದುಕೊಂಡಂತಾಗಿದೆ.

(ಮುಂದು)

(1028) ಎಸ್‌ಪಿಆರ್/ಬಿಎನ್‌ಎಸ್ 11:20 13/12/2021

(ಸಭಾಪತಿಯವರ ಉಪಸ್ಥಿತಿ)

## 08. ಶ್ರೀ ಎಸ್.ಶಿವರಾಂ

ಕನ್ನಡ ಚಿತ್ರರಂಗದ ಹಿರಿಯ ಅಭಿಜಾತ ಕಲಾವಿದರಾದ ಎಸ್.ಶಿವರಾಂ ಅವರು ದಿನಾಂಕ 05/12/2021 ರಂದು ನಿಧನ ಹೊಂದಿರುತ್ತಾರೆ.

1938 ರಲ್ಲಿ ಆನೇಕಲ್ ಬಳಿಯ ಚೂಡಸಂದ್ರ ಎಂಬ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಆರು ದಶಕಗಳಿಂದ ಸಕ್ರಿಯವಾಗಿ ತಮ್ಮನ್ನು ಕನ್ನಡ ಚಿತ್ರರಂಗದಲ್ಲಿ ತೊಡಗಿಸಿಕೊಂಡಿದ್ದರು. 'ಶಿವರಾಮಣ್ಣ' ಎಂದೇ ಜನಪ್ರಿಯರಾಗಿದ್ದ ಶ್ರೀಯುತರು 'ಶಾರದ ನಾಟಕ ಮಂಡಳಿ' ಸ್ಥಾಪಿಸಿ 1,000 ಕ್ಕೂ ಹೆಚ್ಚಿನ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. 1965 ರಲ್ಲಿ 'ಬೆರೆತ ಜೀವ' ಸಿನೆಮಾನದಲ್ಲಿ ಬಣ್ಣ ಹಚ್ಚುವ ಮೂಲಕ ನಟನಾಗಿ ಚಿತ್ರರಂಗ ಪ್ರವೇಶಿಸಿದ ಶ್ರೀಯುತರು 600 ಕ್ಕೂ ಹೆಚ್ಚಿನ ಚಲನಚಿತ್ರಗಳಲ್ಲಿ ಅಭಿನಯಿಸಿ ತಮ್ಮ ಮನೋಜ್ಞ ಹಾಗೂ ಸಹಜ ಅಭಿನಯದಿಂದಲೇ ಚಿತ್ರರಸಿಕರ ಮನದಲ್ಲಿ ಶಾಶ್ವತವಾಗಿ ನೆಲೆಸಿರುತ್ತಾರೆ. ನಟರಾಗಿ, ನಿರ್ಮಾಪಕರಾಗಿ, ನಿರ್ದೇಶಕರಾಗಿ ಕಿರುತೆರೆ ಧಾರವಾಹಿಗಳನ್ನು ನಿರ್ಮಿಸುವ ಮೂಲಕ ಚಲನಚಿತ್ರ ರಂಗದ ಎಲ್ಲಾ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿದ ಕೀರ್ತಿಗೆ ಭಾಜನರಾಗಿರುತ್ತಾರೆ.

ವಿಶೇಷ ಚೇತನ ಮಕ್ಕಳ 'ಸಮರ್ಥನಂ' ಸಂಸ್ಥೆಗಾಗಿ ಶ್ರೀಯುತರು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಅದರಿಂದ ಬಂದ ಹಣವನ್ನು ಸಂಸ್ಥೆಗೆ ನೀಡುವ

ಮೂಲಕ ಸಮಾಜ ಸೇವೆ ಅಲ್ಲದೇ ಹಲವು ಸಂಘ-ಸಂಸ್ಥೆಗಳ ಸದಸ್ಯರಾಗಿ ಸಮಾಜಮುಖಿ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಶ್ರೀಯುತರು 'ರಾಜ್ಯೋತ್ಸವ ಪ್ರಶಸ್ತಿ', ತಾಯಿ ಸಾಹೇಬ ಚಿತ್ರದ ಅಭಿನಯಕ್ಕೆ 'ರಾಜ್ಯ ಪ್ರಶಸ್ತಿ', 'ವಿಷ್ಣುವರ್ಧನ್ ರಾಷ್ಟ್ರೀಯ ಪ್ರಶಸ್ತಿ'ಗಳು ಹಾಗೂ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಚಲನಚಿತ್ರ ರಂಗದ ಹಿರಿಯ ಕಲಾವಿದರೊಬ್ಬರನ್ನು ಕಳೆದುಕೊಂಡಂತಾಗಿದೆ.

## 09. ಶ್ರೀ ಬಿಪಿನ್ ಲಕ್ಷ್ಮಣ್ ಸಿಂಗ್ ರಾವತ್

ಭಾರತ ಸೇನಾಪಡೆಯ ಸಶಸ್ತ್ರಪಡೆಗಳ ಮುಖ್ಯಸ್ಥರಾದ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್ ಅವರು ದಿನಾಂಕ 08/12/2021 ರಂದು ನಿಧನ ಹೊಂದಿರುತ್ತಾರೆ.

1958 ರ ಮಾರ್ಚ್ 16 ರಂದು ಉತ್ತರಾಖಂಡದ ಪೌರಿ ಗರ್ವಾಲ್ ಜಿಲ್ಲೆಯ ಸೈನಾ ಗ್ರಾಮದಲ್ಲಿ ಜನಿಸಿದ್ದ ಶ್ರೀಯುತರು ಡೆಹರಾಡೂನ್‌ನಲ್ಲಿ ಹಾಗೂ ಶಿಮ್ಲಾದಲ್ಲಿ ಶಾಲಾಭ್ಯಾಸ ಪೂರೈಸಿದ ನಂತರ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಹಾಗೂ ಇಂಡಿಯನ್ ಮಿಲಿಟರಿ ಅಕಾಡೆಮಿಗೆ ಸೇರ್ಪಡೆಗೊಂಡರು. ಡಿಫೆನ್ಸ್ ಸರ್ವಿಸ್ ಸ್ಟಾಫ್ ಕಾಲೇಜಿನಲ್ಲಿ ವ್ಯಾಸಂಗ ಮತ್ತು ಎಂ.ಫಿಲ್. ಪದವಿಯನ್ನು ಹೊಂದಿದ್ದರು. 1978 ರಲ್ಲಿ ಸೇನೆಗೆ ಸೇರ್ಪಡೆಗೊಂಡು ಗೋರ್ಖಾ ರೈಫಲ್ಸ್‌ನಲ್ಲಿ ಸೇವೆ ಸಲ್ಲಿಸಲು ಪ್ರಾರಂಭಿಸಿದ ನಂತರ ಸೇನೆಯಲ್ಲಿ ಮೇಜರ್ ಆಗಿ, ಮೇಜರ್ ಜನರಲ್ ಆಗಿ, ಬ್ರಿಗೇಡಿಯರ್ ಆಗಿ, ಜನರಲ್ ಆಫೀಸರ್ ಆಗಿ, ಜನರಲ್ ಸ್ಟಾಫ್ ಆಫೀಸರ್ ಆಗಿ, ಲಾಗಿಸ್ಟಿಕ್ ಸ್ಟಾಫ್ ಆಫೀಸರ್ ಆಗಿ, ಕರ್ನಲ್ ಮಿಲಿಟರಿ ಸೆಕ್ರೆಟರಿಯಾಗಿ, ಡೆಪ್ಯೂಟಿ ಮಿಲಿಟರಿ ಸೆಕ್ರೆಟರಿ ಆಗಿ, ಸೀನಿಯರ್ ಇನ್ಸ್‌ಟ್ರಕ್ಟರ್ ಆಗಿ ವಿವಿಧ ಶ್ರೇಣಿಯ ಹುದ್ದೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇದಲ್ಲದೆ, ಶ್ರೀಯುತರು 2016 ರ ಸೆಪ್ಟೆಂಬರ್‌ನಲ್ಲಿ 37 ನೇ ಸೇನಾ ಉಪ ಮುಖ್ಯಸ್ಥರಾಗಿ, 2016 ರ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
---

ಡಿಸೆಂಬರ್‌ನಲ್ಲಿ 27 ನೇ ಸೇನಾ ಮುಖ್ಯಸ್ಥರಾಗಿ, 2019 ರ ಸೆಪ್ಟೆಂಬರ್‌ನಲ್ಲಿ ಸೇನಾ ಸಿಬ್ಬಂದಿ ಸಮಿತಿಯ 32 ನೇ ಛೇರ್ಮನ್ ಆಗಿ, ಹಾಗೂ 2019 ರ ಡಿಸೆಂಬರ್‌ನಲ್ಲಿ ದೇಶದ ಸಶಸ್ತ್ರ ಪಡೆಗಳ ಮೊದಲ ಮುಖ್ಯಸ್ಥರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸುವ ಮೂಲಕ ದೇಶದ ಭದ್ರತೆ, ಸೇನೆಗೆ ನೀಡಿದ ಕೊಡುಗೆ ಅನರ್ಘ್ಯವಾದುದು.

2015 ರ ಮ್ಯಾನ್ಮಾರ್ ಕಾರ್ಯಾಚರಣೆಯ ಮೇಲುಸ್ತುವಾರಿಯಾಗಿ, 2016 ರಲ್ಲಿ ಪಾಕಿಸ್ತಾನದ ಮೇಲೆ ನಡೆದ ಸರ್ಜಿಕಲ್ ಸ್ಟ್ರೈಕ್‌ನ ಯೋಜನೆಯ ಭಾಗವಾಗಿದ್ದ ಶ್ರೀಯುತರು 2017 ರಲ್ಲಿ ಡೋಕ್ಲಾಂ ಗಡಿಯಲ್ಲಿ ಚೀನಾ ಬಿಕ್ಕಟ್ಟು ಸೃಷ್ಟಿಸಿದ ಸಂದರ್ಭದಲ್ಲಿ ಚೀನಾ ಸೇನಾ ವಕ್ತಾರರ ಜೊತೆ ನಿರಂತರವಾಗಿ ಮಾತುಕತೆ, ಸಂಧಾನ, ತಂತ್ರಕೌಶಲಗಳ ಮೂಲಕ ಚೀನಾವನ್ನು ಹಿಂದೆ ಸರಿಯುವಂತೆ ಮಾಡಿದ್ದರು. ನಾಲ್ಕು ದಶಕಗಳಿಂದ ಸೇನೆಯಲ್ಲಿ ಸಲ್ಲಿಸಿದ್ದ ಅಪ್ರತಿಮ ಸೇವೆಯನ್ನು ಪರಿಗಣಿಸಿ ಪ್ರಸ್ತುತ ನ್ಯೂಕ್ಲಿಯರ್ ಕಮಾಂಡ್ ಅಥಾರಟಿಯ ಸದಸ್ಯ, ರಕ್ಷಣಾ ಸ್ವಾಧೀನ ಸಮಿತಿ ಹಾಗೂ ರಕ್ಷಣಾ ಯೋಜನಾ ಸಮಿತಿಯ ಸದಸ್ಯರಾಗಿದ್ದರು. ಸೇನೆಯ ಹಲವು ಜವಾಬ್ದಾರಿಗಳನ್ನು ನಿರ್ವಹಿಸಿದ್ದ ಶ್ರೀಯುತರು ಸೇನೆಯ ಮೂರು ಪಡೆಗಳ ಮಧ್ಯೆ ಸಂವಹನ, ಸಂಪರ್ಕ ಸಾಧಿಸುವ ನಿಟ್ಟಿನಲ್ಲಿ ನೀಡುತ್ತಿದ್ದ ರಕ್ಷಣಾ ಸಲಹೆ ಪ್ರಮುಖವಾಗಿತ್ತು. ದೇಶೀಯವಾಗಿ ಶಸ್ತ್ರಾಸ್ತ್ರ ಉತ್ಪಾದನೆ ಹೆಚ್ಚಿಸಲು ಯೋಜನೆಯನ್ನು ಸಿದ್ಧಪಡಿಸಿ ರಕ್ಷಣಾ ಬಂಡವಾಳ ಯೋಜನೆ ರೂಪಿಸುವ ಹೊಣೆಗಾರಿಕೆಯನ್ನು ಹೊಂದಿದ್ದರು.

ಉತ್ಕೃಷ್ಟ ಸೇವೆಗಾಗಿ ಸೇನೆಯಲ್ಲಿ ನೀಡಲಾಗುವ ಪರಮ ವಿಶಿಷ್ಟ ಸೇವಾ ಮೆಡಲ್, ಉತ್ತಮ ಯುದ್ಧ ಸೇವಾ ಮೆಡಲ್, ಅತಿ ವಿಶಿಷ್ಟ ಸೇವಾ ಮೆಡಲ್, ಯುದ್ದ ಸೇವಾ ಮೆಡಲ್, ಸೇನಾ ಮೆಡಲ್ ಹಾಗೂ ವಿಶಿಷ್ಟ ಸೇವಾ ಮೆಡಲ್‌ಗಳ ಪುರಸ್ಕಾರಗಳಿಗೆ ಶ್ರೀಯುತರು ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಹಿರಿಯ ವೀರ ಸೇನಾನಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

ಕುನೂರು ಕಾನನದಲ್ಲಿ ಘಟಿಸಿದ ಸೇನಾ ಹೆಲಿಕ್ಯಾಪ್ಟರ್ ದುರಂತದಲ್ಲಿ ಶ್ರೀಯುತರ ಪತ್ನಿ ಸೇರಿದಂತೆ ಸೇನೆಯ ಹಲವು ಅಧಿಕಾರಿಗಳಾದ ಬ್ರಿಗೇಡಿಯರ್ ಎಲ್.ಎಸ್.ಲಿಡ್ಡರ್, ಲೆಫ್ಟಿನಂಟ್ ಕರ್ನಲ್ ಹರ್ಜಿಂದರ್ ಸಿಂಗ್, ವಿಂಗ್ ಕಮಾಂಡರ್ ಪಿ.ಎಸ್.ಚೌಹಾಣ್, ಸ್ಕ್ವಾಡ್ರನ್ ಲೀಡರ್ ಕೆ.ಸಿಂಗ್, ಜೆಡಬ್ಲ್ಯೂಓ ದಾಸ್, ಜೆಡಬ್ಲ್ಯೂಓ ಪ್ರದೀಪ್, ನಾಯಕ್ ಜಿತೇಂದ್ರ ಕುಮಾರ್, ನಾಯಕ್ ವಿವೇಕ್ ಕುಮಾರ್, ನಾಯಕ್ ಬಿ.ಸಾಯಿತೇಜ, ನಾಯಕ್ ಗುರುಸೇವಕ್ ಸಿಂಗ್ ಹಾಗೂ ಸತ್ಪಾಲ್ ಅವರುಗಳು ಹುತಾತ್ಮರಾಗಿರುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಒಂಭತ್ತು ಮಂದಿ ಹಿರಿಯ ಗಣ್ಯರ ನಿಧನಕ್ಕೆ ಸಂತಾಪ ಸೂಚನೆಯನ್ನು ಮಂಡಿಸಲಾಗಿದೆ. ಇವುಗಳೆಲ್ಲದ್ದಕ್ಕೂ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಸಂತಾಪ ಸೂಚನೆಯಲ್ಲಿ ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾಗಿದ್ದ ಕೋಣಿಜೇತಿ ರೋಸಯ್ಯರವರ ಹೆಸರನ್ನು ಉಲ್ಲೇಖಿಸಲಾಗಿದೆ. 2009 ನೇ ಸಾಲಿನಲ್ಲಿ ಆಂಧ್ರಪ್ರದೇಶ ರಾಜ್ಯದ 15ನೇ ಮುಖ್ಯಮಂತ್ರಿಗಳಾಗಿ, ತಮಿಳುನಾಡಿನ ರಾಜ್ಯಪಾಲರಾಗಿ ಮತ್ತು 2014 ನೇ ಸಾಲಿನಲ್ಲಿ ನಮ್ಮ ರಾಜ್ಯದ ರಾಜ್ಯಪಾಲರಾಗಿ ಶ್ರೀಯುತರು ಸಲ್ಲಿಸಿದ ಸೇವೆಯನ್ನು ಅತ್ಯಂತ ಗೌರವದಿಂದ ಇಡೀ ರಾಜ್ಯವು ಸ್ಮರಿಸಿಕೊಳ್ಳುತ್ತದೆ. ಶ್ರೀಯುತರು ಆಂಧ್ರಪ್ರದೇಶದ ವಿತ್ತ ಸಚಿವರಾಗಿ 16 ಬಾರಿ ಆಯವ್ಯಯವನ್ನು ಮಂಡಿಸಿದ್ದಾರೆಂದರೆ, ಅವರಿಗಿರುವ ಆಡಳಿತಾತ್ಮಕವಾದ ಅನುಭವ ಮತ್ತು ಆರ್ಥಿಕ ನೀತಿಯ ಬಗ್ಗೆ ಅವರಿಗಿರುವ ಒಟ್ಟು ಯೋಚನೆಗಳು ಎಲ್ಲರಿಗೂ ಆಶ್ಚರ್ಯವನ್ನು ಹುಟ್ಟಿಸುತ್ತದೆ. ಅಂತಹ ಹಿರಿಯರನ್ನು ಈ ರಾಷ್ಟ್ರವು ಕಳೆದುಕೊಂಡಿದೆ. ನಮ್ಮ ದೇಶವು ಅತ್ಯಂತ ಹಿರಿಯ ರಾಜಕಾರಣಿ ಮತ್ತು ಶ್ರೇಷ್ಠ ಆರ್ಥಿಕ ತಜ್ಞರನ್ನು ಮತ್ತು ರಾಜ್ಯದ ರಾಜ್ಯಪಾಲರಾಗಿದ್ದ ಹಿರಿಯ ರಾಜಕಾರಣಿಯನ್ನು ರಾಜ್ಯವು ಕಳೆದುಕೊಂಡಿದೆ ಎಂದು ತಿಳಿಸುವ ಸಂತಾಪ ಸೂಚನೆಗೆ ಸಹಮತವನ್ನು ವ್ಯಕ್ತಪಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೂಪಾಕ್ಷಪ್ಪ ಸಂಗಣ್ಣ ಅಗಡಿಯವರು ಒಬ್ಬ ಸಹಕಾರಿ ಧುರೀಣ, ಶಿಕ್ಷಣ ತಜ್ಞ, ಹಿರಿಯ ರಾಜಕಾರಣಿಯಾಗಿದ್ದರು. ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ ಮತ್ತು ಕೆಲವು ವಿಶಿಷ್ಟ ಶಾಲೆಗಳ ಸಂಸ್ಥಾಪಕ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದರು. ಕೊಪ್ಪಳ ವಿಧಾನಸಭಾ ಕ್ಷೇತ್ರದಿಂದ 8 ನೇ ವಿಧಾನಸಭೆಗೆ ಆಯ್ಕೆಯಾಗಿ, ವೈದ್ಯಕೀಯ ಶಿಕ್ಷಣ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಆಯ್ಕೆಗೊಂಡು ಸೇವೆಯನ್ನೂ ಸಹ ಸಲ್ಲಿಸಿದ್ದಾರೆ. ಹೀಗೆ ಶ್ರೀಯುತರು ಜನಾನುರೆಯಾಗಿ ತಮ್ಮ ಜೀವನವನ್ನು ಸಾರ್ವಜನಿಕ ಸೇವೆಗೆ ಮುಡುಪಾಗಿಟ್ಟುಕೊಂಡಿದ್ದರು. ಇವರ ನಿಧನದಿಂದಾಗಿ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡ ಅನುಭವವು ಈ ರಾಜ್ಯಕ್ಕಾಗಿದೆ.

ಎಸ್.ಆರ್.ಮೋರೆಯವರು ಮಾಜಿ ಸಚಿವ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದರು. ಶ್ರೀಯುತರು ಅತ್ಯಂತ ದುರ್ಬಲ ವರ್ಗದವರ ಏಳಿಗೆಗಾಗಿ ಶ್ರಮಿಸಿದ್ದು, ಅವರ ವಿಶಿಷ್ಟತೆಯಾಗಿದ್ದು 07 ಮತ್ತು 09 ನೇ ವಿಧಾನಸಭೆಯ ಸದಸ್ಯರಾಗಿ ಶ್ರೀಯುತರು ಆಯ್ಕೆಗೊಂಡಿದ್ದರು. ಬಂಗಾರಪ್ಪರವರ ಸರ್ಕಾರದಲ್ಲಿ ಸಹಕಾರ ಸಚಿವರಾಗಿ ಹಾಗೂ ಧರ್ಮಸಿಂಗ್‌ರವರ ಸರ್ಕಾರದಲ್ಲಿ ಪೌರಾಡಳಿತ ಸಚಿವರಾಗಿ ಸೇವೆ ಸಲ್ಲಿಸಿದ್ದನ್ನು ಈ ರಾಜ್ಯದ ಜನತೆಯು ನೆನಪು ಮಾಡಿಕೊಳ್ಳಬೇಕಾಗಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಅಪಾರವಾದ ಅನುಭವ ಮತ್ತು ದೂರಗಾಮಿ ಯೋಜನೆಗಳು ಅವರಲ್ಲಿತ್ತು. ಸಹಕಾರ ಕ್ಷೇತ್ರದಲ್ಲಿಯೂ ಸಹ ಅವರು ಕಾರ್ಯನಿರ್ವಹಿಸಿದ್ದು, ಇಂತಹ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಇವರ ಸಂತಾಪ ಸೂಚನೆಗೆ ನಾನು ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಪುನೀತ್ ರಾಜ್‌ಕುಮಾರ್‌ರವರ ನಿಧನದಿಂದಾಗಿ ನಮ್ಮ ರಾಜ್ಯವು ಒಟ್ಟಾಗಿ ಮತ್ತು ಒಂದಾಗಿ ಮರುಗಿದ ವಾತಾವರಣ ಸೃಷ್ಟಿಯಾಗಿತ್ತು. ಇಡೀ ದೇಶದ ಬೇರೆ ಬೇರೆ ಕಡೆಗಳಲ್ಲಿ ಬಹುತೇಕ ಕನ್ನಡಿಗರು ಅತ್ಯಂತ ನೋವಿನಿಂದ ಈ ಸಂಕಟವನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಭವಿಸಿದ್ದನ್ನು ನಾವುಗಳೆಲ್ಲರೂ ಗಮನಿಸಿದ್ದೇವೆ. ಅವರ ಅಭಿಮಾನಿಗಳು ಅವರನ್ನು 'ಅಪ್ಪು' ಎಂದು ಕರೆಯುತ್ತಿದ್ದರು. ಅಭಿಮಾನಿಗಳ ಪಾಲಿಗೆ ಅವರು 'ಪವರ್ ಸ್ಟಾರ್' ಆಗಿದ್ದರು. ಆರು ತಿಂಗಳ ಪ್ರಾಯದವರಾಗಿದ್ದಲೇ 'ಪ್ರೇಮದ ಕಾಣಿಕೆ' ಎಂಬ ಚಿತ್ರದಲ್ಲಿ ಅಭಿನಯಿಸಿದ್ದರು. 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ಅವರು ಬಾಲನಟನಾಗಿ ಪ್ರಹ್ಲಾದನಾಗಿ ಅಭಿನಯಿಸಿರುವ ಪಾತ್ರ ಬಹಳ ದೊಡ್ಡ ಅದ್ಭುತವಾಗಿದೆ. ಕನ್ನಡಿಗರು ಮತ್ತು ಸಿನೆಮಾ ವೀಕ್ಷಣೆ ಮಾಡಿದವರು ಮತ್ತು ಅಪಾರವಾದ ಅವರ ಅಭಿಮಾನಿಗಳು ಇವತ್ತಿಗೂ ಸಹ ಇದನ್ನು ನೆನಪು ಮಾಡಿಕೊಳ್ಳುತ್ತಾರೆ. ಅನೇಕ ಶ್ರೇಷ್ಠ ಚಿತ್ರಗಳನ್ನು ಅವರು ನಟಿಸಿದ್ದು, ಬಾಲ ಕಲಾವಿದನಾಗಿ ಬಹಳ ದೊಡ್ಡ ಹೆಸರನ್ನು ಗಳಿಸಿದ ಕೀರ್ತಿಗೆ ಅವರು ಭಾಜನರಾಗಿದ್ದರು. ಸುಮಾರು 27 ಚಿತ್ರಗಳಲ್ಲಿ ನಾಯಕನಟನಾಗಿ ಅಭಿನಯಿಸಿದ್ದು ಮಾತ್ರವಲ್ಲದೇ ಸಮಾಜ ಮತ್ತು ಸಾರ್ವಜನಿಕರ ಜೀವನದ ಪಾಲಿಗೆ ಅಜಾತಶತ್ರುವಾಗಿದ್ದನ್ನು ನಾವು ಇಲ್ಲಿ ಉಲ್ಲೇಖಿಸಬೇಕು. ಅವರ ಸೇವೆಯು ಕೇವಲ ಸಿನೆಮಾಗಳಿಗೆ ಮಾತ್ರವೇ ಸೀಮಿತವಾಗಿರಲಿಲ್ಲ, ಸಾರ್ವಜನಿಕರ ಹಾಗೂ ಅನೇಕ ಸಂಕಷ್ಟದಲ್ಲಿದ್ದವರಿಗೆ ನೆರವಾಗುತ್ತಿದ್ದರಲ್ಲದೆ, ನೂರಾರು ಶಾಲೆಗಳನ್ನು ಮತ್ತು ಅನೇಕ ಗೋಶಾಲೆಗಳನ್ನು ಅವರು ನಡೆಸುತ್ತಿದ್ದರು. ಯಾರಿಗೂ ಗೊತ್ತಿಲ್ಲದಂತೆ ವೃದ್ಧಾಶ್ರಮಗಳನ್ನು ನಡೆಸುವ [illegible]ಪಾರವು ಅವರಿಗಿತ್ತು. ಶಿಕ್ಷಣ, ಅನಾಥ ಮಕ್ಕಳು ಹಾಗೂ ವೃದ್ಧರಿಗೆ ತಮ್ಮ ಅನೇಕ ದುಡಿಮೆಯ ಬಹುಭಾಗವನ್ನು ನೀಡುತ್ತಿದ್ದದ್ದು ಮತ್ತು ಅನೇಕರಿಗೆ ಸೇವೆ ಮಾಡುತ್ತಿರುವ ಸಂಗತಿಗಳು ಅವರ ನಿಧನದ ತರುವಾಯ ನಮಗೆ, ರಾಜ್ಯಕ್ಕೆ ಮತ್ತು ಜನತೆಗೆ ಅರ್ಥವಾಗಿದೆ ಎನ್ನುವುದನ್ನು ನಾನು ಇಲ್ಲಿ ಉಲ್ಲೇಖಿಸಬಯಸುತ್ತೇನೆ. ಅವರ ವಿಶಿಷ್ಟತೆ ಮತ್ತು ಜನಪ್ರಿಯತೆಯನ್ನು ಹೇಳುವುದಾದರೆ, ರಾಜ್ಯದಲ್ಲಿ ಮತ್ತು ದೇಶದ ಬೇರೆ ಬೇರೆ ಭಾಗಗಳಲ್ಲಿ ಯಾವುದೇ ಒಳ್ಳೆಯ ಕಾರ್ಯಕ್ರಮಗಳಾದರೆ, ಅವುಗಳಿಗೆ ರಾಯಭಾರಿಯಾಗಿ ಭಾಗವಹಿಸುವ ರೂಢಿಯನ್ನು ಅವರು ಬೆಳೆಸಿಕೊಂಡಿದ್ದರು. ಇದು ಕೆ.ಎಂ.ಎಫ್. ಸಂಸ್ಥೆಯ ನಂದಿನಿ ಹಾಲಿನಿಂದ ಪ್ರಾರಂಭವಾಗಿ, ಪಲ್ಸ್ ಪೋಲಿಯೋ, ಮತದಾನ ಜಾಗೃತಿ ಅಭಿಯಾನ, ಅಂತರಾಷ್ಟ್ರೀಯ ಯೋಗ ದಿನ, ಸ್ವಚ್ಛ ಭಾರತ ಅಭಿಯಾನ ಹಾಗೂ ಇತ್ತೀಚಿನ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕೊರೋನಾ ವಿರುದ್ಧ ಜನಜಾಗೃತಿ, ಎಲ್.ಇ.ಡಿ. ಬಲ್ಬ್ ಹೀಗೆ ಹಲವಾರು ಕಾರ್ಯಕ್ರಮಗಳಿಗೆ ಅವರು ರಾಯಭಾರಿಯಾಗಿ, ಜನಜಾಗೃತಿಯನ್ನುಂಟು ಮಾಡುವ ಕೆಲಸಗಳನ್ನು ಮಾಡಿದ್ದರು. ಡಾ|| ರಾಜ್‌ಕುಮಾರ್ ರವರ ಹೆಸರಿನಲ್ಲಿ ಅನಾಥ ಮಕ್ಕಳಿಗೆ ಉಚಿತವಾದ ಶಿಕ್ಷಣವನ್ನು ನೀಡುವ ಕೆಲಸಗಳನ್ನು ಅವರು ಮಾಡುತ್ತಿದ್ದರು. ನಮಗೆ ಯಾರಿಗೂ ತಿಳಿಯದಂತೆ, ಅವರು ಡಾ|| ರಾಜ್‌ಕುಮಾರ್ ಅಕಾಡೆಮಿ ಫಾರ್ ಸಿವಿಲ್ ಸರ್ವಿಸಸ್ ಮೂಲಕ ತಮ್ಮ ತಂದೆಯ ಹೆಸರಿನಲ್ಲಿ ಭಾರತೀಯ ಆಡಳಿತ ಮತ್ತು ಪೊಲೀಸ್ ಸೇವೆಗಳಿಗೆ ತರಬೇತಿ ಶಾಲೆಯನ್ನು ತೆರೆದಿದ್ದು, ಬಡ ಮಕ್ಕಳಿಗೆ ಉಚಿತವಾಗಿ ತರಬೇತಿಯನ್ನು ನೀಡುತ್ತಿದ್ದರು. ಇವುಗಳಿಂದ ಅವರ ಹೃದಯ ವೈಶ್ಯಾಲತೆಯನ್ನು ನಾವಿಲ್ಲಿ ಉಲ್ಲೇಖಿಸಬೇಕು. ಕಿರುತೆರೆಯಲ್ಲಿ ತೆರೆಕಂಡ 'ಕನ್ನಡದ ಕೋಟ್ಯಧಿಪತಿ' ಕಾರ್ಯಕ್ರಮದಲ್ಲಿ ಬಂದ ಎಲ್ಲಾ ಸಂಭಾವನೆಗಳನ್ನು ಸಾವಿರಾರು ಮಕ್ಕಳಿಗೆ ಉಚಿತವಾಗಿ ಶಿಕ್ಷಣ ನೀಡುವುದಕ್ಕೆ ಮೀಸಲಿಟ್ಟಿದ್ದರು. ಇವುಗಳಿಂದ ಅವರ ಸಮಾಜಮುಖಿ ಕೆಲಸಗಳು ನಮಗೆ ಅರ್ಥವಾಗುತ್ತವೆ.

(ಮುಂದು)

**(1029) 11.30 13-12-2021 ಸಿಎಸ್/ಬಿಎನ್‌ಎಸ್**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಅತ್ಯಂತ ನೋವಿನ ಸಂಗತಿ ಎಂದರೆ ಬಹಳ ಎಳೆಯ ವಯಸ್ಸಿನಲ್ಲಿಯೇ ನಮ್ಮ ರಾಜ್ಯ ಮತ್ತು ನಮ್ಮ ಚಿತ್ರರಂಗ ಅವರನ್ನು ಕಳೆದುಕೊಳ್ಳಬೇಕಾಗಿ ಬಂದಿತು. ಕಾರಣ ಏನೇ ಆಗಿದ್ದರೂ ಸಹ ಅವರನ್ನು ಅಗಲಿದ ನೋವು ಇಡೀ ದೇಶದ ಹಾಗೂ ನಾಡಿನ ಜನರನ್ನು ಬಹುಕಾಲ ಕಾಡುತ್ತಿದೆ ಎನ್ನುವುದನ್ನು ಮರೆಯಲಿಕ್ಕೆ ಸಾಧ್ಯವಿಲ್ಲ. ಅವರ ಪಾರ್ಥಿವ ಶರೀರವನ್ನು 25 ಲಕ್ಷ ಜನರು ವೀಕ್ಷಿಸಿದ್ದಾರೆಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಇದೊಂದು ದಾಖಲೆ ಆಗಿದೆ. ಅವರ ಕಣ್ಣುಗಳನ್ನು ದಾನ ಮಾಡುವ ಮೂಲಕ ಸಾವಿನಲ್ಲೂ ಸಹ ಸಾರ್ಥಕತೆಯನ್ನು ಮೆರೆದಿದ್ದಾರೆ. ಇದರ ಮೂಲಕ ದೇಶದ ಮತ್ತು ರಾಜ್ಯದ ಜನತೆಗೆ ಒಂದು ಹೊಸ ಸಂದೇಶವನ್ನು ಸಾರಿದ್ದಾರೆ.

---

ಪುನೀತ್ ರಾಜ್‌ಕುಮಾರ್ ಅವರ ಅಣ್ಣಂದಿರಾದ ಶ್ರೀ ಶಿವರಾಜ್‌ಕುಮಾರ್‌ರವರು ಮತ್ತು ಶ್ರೀ ರಾಘವೇಂದ್ರ ರಾಜ್‌ಕುಮಾರ್‌ರವರು ಮತ್ತು ಶ್ರೀ ಪುನೀತ್ ರಾಜ್ ಕುಮಾರ್‌ರವರ ಪತ್ನಿ ಅಪ್ಪುವನ್ನು ನೆನೆದು ಇಂದಿಗೂ ಸಹ ಕಣ್ಣೀರಿಡುವುದನ್ನು ಇಡೀ ದೇಶ ನೋಡಿ ಭಾವುಕರಾಗುತ್ತಾರೆ. ಅಂತಹ ಒಬ್ಬ ಶ್ರೇಷ್ಠ ಕಲಾವಿದರನ್ನು ಕಳೆದುಕೊಂಡ ಹಿನ್ನೆಲೆಯಲ್ಲಿ ಈ ವಿಧಾನ ಪರಿಷತ್ತಿನ ಮೂಲಕ ತಾವು ಏನು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ, ಅದಕ್ಕೆ ಇಡೀ ರಾಜ್ಯದ ಪರವಾಗಿ ಈ ಸದನದ ಮೂಲಕ ತಮಗೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ.

ಇನ್ನು 5ನೇ ಉಲ್ಲೇಖದಲ್ಲಿ ಭೋಜರಾಜ ಹೆಗ್ಡೆಯವರು ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಉಲ್ಲೇಖಿಸಲಾಗಿದೆ. ಶ್ರೀಯುತರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯ ತಾಲ್ಲೂಕಿನ ಪಡಂಗಡಿಯಲ್ಲಿ ಹುಟ್ಟಿ ಬೆಳೆದವರು, ಅವರು ಸಹಕಾರಿ ಕ್ಷೇತ್ರದಲ್ಲಿ ತುಂಬಾ ಕೆಲಸಗಳನ್ನು ಮಾಡಿದ್ದಾರೆ. ಮುಂಡಾಜೆಯ ಶತಾಬ್ದಿ ವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದಂತಹ ಹಿರಿಯರು, 1942 ರಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಬ್ರಿಟಿಷರ ವಿರುದ್ಧ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರದ ವಿರುದ್ಧ ಹೋರಾಟ ನಡೆಸಿ ಜೈಲು ಸೇರಿದ್ದರು. ಅವರು ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಗ್ರಾಮೀಣಾಭಿವೃದ್ಧಿಯ ಬಗ್ಗೆ ಅವರಿಗೆ ವಿಶೇಷವಾದ ಕಾಳಜಿಯಿತ್ತು. ಇವರ ನಿಧನದಿಂದ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡ ನೋವನ್ನು ಇತ್ತೀಚಿನ ದಿವಸಗಳಲ್ಲಿ ಈ ರಾಜ್ಯ ಅನುಭವಿಸಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಸದನದಲ್ಲಿ ಉಲ್ಲೇಖಿಸುತ್ತೇನೆ.

ಶ್ರೀ ಕೆ.ಎಸ್.ನಾರಾಯಣಾಚಾರ್ಯರವರು ಹಿರಿಯ ವಿದ್ವಾಂಸರು ಹಾಗೂ ಲೇಖಕರು, ಪ್ರವಚನಕಾರರು ಆಗಿರುವ ಬಗ್ಗೆ ಇವರ ನಿಧನದ ಬಗ್ಗೆ ತಾವು ಉಲ್ಲೇಖಿಸಿದ್ದೀರಿ. ಬಹುಶಃ ಧಾರ್ಮಿಕತೆಯ ಮತ್ತು ಆಧ್ಯಾತ್ಮದ ಚೌಕಟ್ಟಿನಲ್ಲಿ ಒಂದು ಸುಲಲಿತವಾದ ಬರವಣಿಗೆ ಹೊಂದಿದ್ದ ಒಬ್ಬ ಶ್ರೇಷ್ಠವಾದ ವಿದ್ವಾಂಸರನ್ನು ಕಳೆದುಕೊಂಡ ಆತಂಕ ನಮಗೆಲ್ಲರಿಗೂ ಆಗಿದೆ ಎನ್ನುವುದನ್ನು ನಾನು ಇಲ್ಲಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಲ್ಲೇಖಿಸುತ್ತೇನೆ. ಒಬ್ಬ ಪ್ರಸಿದ್ಧ ಲೇಖಕರು ಹಾಗೂ ವಿದ್ವಾಂಸರಾಗಿ ರಾಷ್ಟ್ರೀಯತೆಯ ಪ್ರಖರ ಪ್ರತಿಪಾದಕರಾಗಿ ಧರ್ಮ ಶಾಸನದ ಬಗ್ಗೆ ಅನೇಕ ಪ್ರಚಾರವನ್ನು ಮಾಡಿದ್ದರು. ಅವರನ್ನು ರಾಮಾಯಣಾಚಾರ್ಯ ಎಂದು ಕರೆಯಲಾಗುತ್ತಿತ್ತು. ಶ್ರೀಯುತರು ರಾಮಾಣಯದ ಬಗ್ಗೆ ಮತ್ತು ಅನೇಕ ವಿಚಾರಗಳ ಬಗ್ಗೆ 200ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಕನ್ನಡ, ಇಂಗ್ಲೀಷ್, ಸಂಸ್ಕೃತ ಹಾಗೂ ತಮಿಳು ಭಾಷೆಗಳಲ್ಲಿ ಸಹ ರಾಮಾಯಣ ಮಹಾಭಾರತ ಮತ್ತು ಶ್ರಿಮದ್ ಭಾಗವತ ಮತ್ತು ವೇದ ಉಪನಿಷತ್ತುಗಳ ಬಗ್ಗೆ ಬಹಳ ಹಕ್ಕಿನಿಂದ ಮಾತನಾಡತಕ್ಕ ಅನುಭವಗಳನ್ನು ಅವರು ಹೊಂದಿದ್ದರು. ಅನೇಕ ಪ್ರಶಸ್ತಿಗಳು ಮತ್ತು ಬಿರುದುಗಳು ಅವರಿಗೆ ಬಂದಿದ್ದವು. 2008ರಲ್ಲಿ ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ಕೂಡ ನೀಡಲಾಗಿತ್ತು. ಅತ್ಯಂತ ಹಿರಿಯ ವಿದ್ವಾಂಸರನ್ನು ಕಳೆದುಕೊಂಡಿರುವ ನೋವನ್ನು ನಮ್ಮ ಕರ್ನಾಟಕ ರಾಜ್ಯ ಅನುಭವಿಸಿದೆ.

ನಾಡೋಜ ಪದ್ಮಮ್ಮನವರ ಬಗ್ಗೆ ತಾವು ಉಲ್ಲೇಖಿಸಿದ್ದೀರಿ. ಅವರ ಹೆಸರಿನ ಮುಂದೆ ಹರಿಜನ ಎನ್ನುವ ಪದವನ್ನು ಬಳಸಲಾಗಿದೆ. ಪದ್ಮಮ್ಮ ಎನ್ನುವ ಒಬ್ಬ ಮಹಿಳೆ ರಂಗಭೂಮಿಯಲ್ಲಿ ಮತ್ತು ಬಯಲಾಟದಲ್ಲಿ ಒಬ್ಬ ಶ್ರೇಷ್ಠ ಕಲಾವಿದೆಯಾಗಿ ಇಡೀ ಬದುಕನ್ನು ಅವರು ಸವೆಸಿದರು. ಬಯಲಾಟದಲ್ಲಿ ದ್ರೌಪದಿಯಾಗಿ, ಸೀತೆಯಾಗಿ, ಕುಂತಿಯಾಗಿ ಅನೇಕ ಜನಪ್ರಿಯ ಪಾತ್ರಗಳನ್ನು ಅವರು ಮಾಡಿದ್ದರು. ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಹಾಗೆ ನಾಡೋಜ ಪ್ರಶಸ್ತಿ ಸೇರಿದಂತೆ ಅನೇಕ ಹಿರಿಯ ಪ್ರಶಸ್ತಿಗಳು ಕಟ್ಟಕಡೆಯ ಸಮಾಜದಿಂದ ಮೇಲೆದ್ದು ಬಂದಂತಹ ಪದ್ಮಮ್ಮನವರಿಗೆ ದೊರಕಿದೆ. ಅಂತಹ ಒಬ್ಬ ಹಿರಿಯ ಕಲಾವಿದೆಯನ್ನು ಕಳೆದುಕೊಂಡ ದುಗುಡ ಈ ರಾಜ್ಯಕ್ಕೆ ಆಗಿದೆ ಎಂದು ತಮ್ಮ ಪ್ರಸ್ತಾಪಕ್ಕೆ ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ.

ಶ್ರಿ ಎಸ್.ಶಿವರಾಂರವರು, ಕನ್ನಡ ಚಿತ್ರರಂಗದ ಅಭಿಜಾತ ಕಲಾವಿದರಾದ ಶ್ರೀ ಶಿವರಾಂರವರ ಬಗ್ಗೆ ತಾವು ಉಲ್ಲೇಖಿಸಿದ್ದೀರಿ. ಅವರನ್ನು ಎಲ್ಲರೂ ಸಹ ಶಿವರಾಮಣ್ಣ ಎಂದು ಕರೆಯುತ್ತಿದ್ದರು ಎನ್ನುವುದನ್ನು ತಾವು ಸಹ ಉಲ್ಲೇಖಿಸಿದ್ದೀರಿ. ಶಾರದ ನಾಟಕ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಮಂಡಳಿಯನ್ನು ತೆರೆದು ಸಾವಿರಕ್ಕೂ ಹೆಚ್ಚು ನಾಟಕಗಳಲ್ಲಿ ಅವರು ಅಭಿನಯಿಸಿದ್ದರು. 600ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅವರು ಪಾತ್ರವನ್ನು ಮಾಡಿದ್ದರು. ಮಾನ್ಯ ಸಭಾಪತಿಯವರೆ, ಶರಪಂಜರ ಎನ್ನುವ ಒಂದು ಸಿನಿಮಾ ಬಂದಿತ್ತು. ಅದರಲ್ಲಿ ಶಿವರಾಂರವರು ಅಡಿಗೆ ಭಟ್ಟರ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಅಲ್ಲಿಯವರೆಗೆ ಶಿವರಾಂ ರವರ ಹಾಸ್ಯ ನಟನೆಯ ಬಗ್ಗೆ ರಾಜ್ಯದ ಜನತೆಗೆ ತಿಳಿದಿರಲಿಲ್ಲ. ಆ ಚಿತ್ರದಲ್ಲಿ ಅವರು ಒಂದು ಸೌಟನ್ನು ಕೈಯಲ್ಲಿಡುಕೊಂಡು, ಅವರ ಹೇಳುವ ಒಂದು ಸಂಭಾಷಣೆ ಬಹಳ ಜನಪ್ರಿಯವಾಗಿತ್ತು. ಶರಪಂಜರ ಚಿತ್ರ ಅವರಿಗೆ ಬಹಳ ದೊಡ್ಡ ಜನಪ್ರಿಯತೆಯನ್ನು ತಂದುಕೊಟ್ಟಿತ್ತು.

ಅವರು ಸಮರ್ಥಂ ಎನ್ನುವ ಒಂದು ಸಂಸ್ಥೆಯನ್ನು ಹುಟ್ಟುಹಾಕಿ ಅಲ್ಲಿದ್ದ ಅಂಗವಿಕಲ ಮಕ್ಕಳಿಗೆ ತಾವು ದುಡಿಯುತ್ತಿದ್ದ ಹಣದಲ್ಲಿ ಖರ್ಚು ಮಾಡುತ್ತಿದ್ದರು. ಹೀಗೆ ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡಿ, ಅನೇಕ ಪ್ರಶಸ್ತಿ ಮತ್ತು ಬಿರುದುಗಳಿಗೆ ಭಾಜನರಾಗಿದ್ದ ಶಿವರಾಂ ರವರನ್ನು ನಾವು ಕಳೆದುಕೊಂಡ ಬಗ್ಗೆ ತಾವು ಉಲ್ಲೇಖಿಸಿದ್ದೀರಿ, ಆ ಸಂತಾಪಕ್ಕೆ ನನ್ನ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ.

ಇನ್ನೂ ಅತ್ಯಂತ ನೋವಿನ ಸಂಗತಿ ಏನೆಂದರೆ ಭಾರತ ಸೇನಾ ಪಡೆಯ ಸಶಸ್ತ್ರಪಡೆಗಳ ಮುಖ್ಯಸ್ಥರಾದ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್ ಅವರು ಮತ್ತು ಅವರ ಜೊತೆಯಲ್ಲಿ ಹೆಲಿಕಾಪ್ಟರ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಅವರ ಪತ್ನಿ ಮತ್ತು ಇನ್ನಿತರ ಸೇನಾ ಅಧಿಕಾರಿಗಳ ಸಾವು ಇಡೀ ರಾಷ್ಟ್ರಕ್ಕೆ ಅತ್ಯಂತ ನೋವು ಮತ್ತು ಸಂಕಟವನ್ನು ಉಂಟು ಮಾಡಿದೆ. ಮಾನ್ಯ ಪ್ರಧಾನ ಮಂತ್ರಿಯವರಿಂದ ಹಿಡಿದು ಸಮಾಜದ ಕಟ್ಟಕಡೆಯ ಮನುಷ್ಯ ಕೂಡ ಅತ್ಯಂತ ನೋವಿನಿಂದ ಈ ಘಟನೆಯನ್ನು ಅತ್ಯಂತ ಭಾವುಕರಾಗಿ ಸಂತಾಪಸೂಚನೆಯನ್ನು ವ್ಯಕ್ತಪಡಿಸಿದ್ದನ್ನು ತಾವು ಕೂಡ ಗಮನಿಸಿದ್ದೀರಿ. ಶ್ರೀಯುತರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ ಹಾಗೂ ಇಂಡಿಯನ್ ಮಿಲಿಟರಿ ಅಕಾಡೆಮಿಗೆ ಸೇರ್ಪಡೆಗೊಂಡರು. ಆನಂತರ ಅವರು ಸೇನೆಗೆ ಸೇರಿಕೊಂಡು ಗೋರ್ಖಾ ರೈಫಲ್ಸ್‌ನಲ್ಲಿ ಸೇವೆ ಸಲ್ಲಿಸಿದ ನಂತರ ಸೇನೆಯಲ್ಲಿ ಮೇಜರ್ ಆಗಿ ಕೆಲಸಗಳನ್ನು

---

ಮಾಡುತ್ತಾರೆ. ಬಿಗ್ರೇಡಿಯರ್ ಆಗಿ, ಜನರಲ್ ಆಫೀಸರ್ ಆಗಿ , ಜನರಲ್ ಸ್ಟಾಫ್ ಆಫೀಸರ್ ಆಗಿ ಅನೇಕ ಹುದ್ದೆಗಳನ್ನು ಅವರು ನಿರ್ವಹಿಸಿದ್ದಾರೆ. ಶ್ರೀಯುತರು 2016ರಲ್ಲಿ 37ನೇ ಸೇನಾ ಉಪ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ತಾವೇ ಉಲ್ಲೇಖಿಸಿದಂತೆ 2019ರಲ್ಲಿ ಸೇನಾ ಸಿಬ್ಬಂದಿ ಸಮಿತಿಯ 32ನೇ ಛೇರ್ಮನ್ ಆಗಿ ಹಾಗೂ 2019ರಲ್ಲಿ ದೇಶದ ಸಶಸ್ತ್ರಪಡೆಗಳ ಮೊದಲ ಮುಖ್ಯಸ್ಥರಾಗಿ ಆಯ್ಕೆಯಾಗಿ ಇಡೀ ರಾಷ್ಟ್ರಕ್ಕೆ ಅವರ ಬದುಕನ್ನು ಸಮರ್ಪಣೆ ಮಾಡಿದ್ದನ್ನು ನಾವು ನೋಡಿದ್ದೇವೆ. ಭಾರತದಂತಹ ದೇಶದಲ್ಲಿ ಸೈನಿಕ ಶಿಕ್ಷಣವನ್ನು ಪ್ರಾಥಮಿಕ ಶಾಲೆಯ ಹಂತದಲ್ಲಿಯೇ ನೀಡಬೇಕಾಗಿದೆ, ಪ್ರತಿ ಕುಟುಂಬದ ಮೇಲೂ ದೇಶ ರಕ್ಷಣೆಯ ಹೊಣೆ ಹೊರಿಸುವ ಅನಿವಾರ್ಯ ಸ್ಥಿತಿ ನಮ್ಮಲ್ಲಿದೆ ಎನ್ನುವುದನ್ನು ಅವರು ಪ್ರತಿಪಾದನೆ ಮಾಡುತ್ತಿದ್ದರು. ಬಿಪಿನ್ ಯುವಕರಿಗೆ ಸೇನಾಪಡೆಗೆ ಸೇರುವಂತೆ ಉತ್ತೇಜನ ನೀಡುತ್ತಿದ್ದರು. ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಡಳಿತಾತ್ಮಕವಾಗಿಯೇ ಸೈನಿಕ ಶಿಕ್ಷಣವನ್ನು ಕಡ್ಡಾಯ ಮಾಡಬೇಕೆಂದು ಅವರು ಪ್ರತಿಪಾದಿಸಿದ್ದನ್ನು ಕೂಡ ನಾವು ಗಮನಿಸಿದ್ದೇವೆ. ಅವರ ಪತ್ನಿ ಕೂಡ ಅವರ ಜೊತೆಯಲ್ಲಿಯೇ ಪಯಣಿಕರಾಗಿದ್ದು, ಅವರ ಜೊತೆಯಲ್ಲಿ ಅನೇಕ ಹಿರಿಯ ಅಧಿಕಾರಿಗಳು, ಕುನೂರು ಕಾನನದಲ್ಲಿ ಘಟಿಸಿದ ಸೇನಾ ಹೆಲಿಕಾಪ್ಟರ್ ದುರಂತದಲ್ಲಿ ಶ್ರೀಯುತರ ಪತ್ನಿ ಸೇರಿದಂತೆ ಸೇನೆಯ ಹಲವು ಅಧಿಕಾರಿಗಳಾದ ಬ್ರಿಗೇಡಿಯರ್ ಎಲ್.ಎಸ್.ಲಿಡ್ಡರ್, ಲೆಫ್ಟಿನೆಂಟ್ ಕರ್ನಲ್ ಹರ್ಜಿಂದರ್ ಸಿಂಗ್, ವಿಂಗ್ ಕಮಾಂಡರ್, ಪಿ.ಎಸ್.ಚೌಹಾಣ್, ಸ್ಕ್ವಾಡ್ರನ್ ಲೀಡರ್ ಕೆ.ಸಿಂಗ್ ಜೆಡಬ್ಲ್ಯೂಓ ದಾಸ್, ಜೆಡಬ್ಲ್ಯೂಓ ಪ್ರದೀಪ್, ನಾಯಕ್ ಜಿತೇಂದ್ ಕುಮಾರ್, ನಾಯಕ್ ವಿವೇಕ್ ಕುಮಾರ್, ನಾಯಕ್ ಬಿ.ಸಾಯಿತೇಜ, ನಾಯಕ್ ಗುರುಸೇವಕ್ ಸಿಂಗ್ ಹಾಗೂ ಸತ್ಪಾಲ್ ಅವರುಗಳು ಸಹ ಹುತಾತ್ಮರಾಗಿದ್ದಾರೆ. ಇದು ಬಹಳ ನೋವಿನ ಸಂಗತಿ ಇಡೀ ರಾಷ್ಟ್ರ ತುಂಬಾ ಕಳವಳ ಹಾಗೂ ಸಂಕಟವನ್ನು ಇವರನ್ನು ಕಳೆದುಕೊಂಡಿದ್ದರಿಂದ ಅನುಭವಿಸಿದೆ. ಇಡೀ ರಾಷ್ಟ್ರ ಒಂದಾಗಿ ಈ ನೋವನ್ನು ಅನುಭವಿಸಿದೆ.

ಮಾನ್ಯ ಸಭಾಪತಿಯವರೆ, ಈ ದೇಶದ ರಕ್ಷಣೆಗೋಸ್ಕರ ತಮ್ಮ ಬದುಕನ್ನು ಪಣವಾಗಿಟ್ಟ ಇವರುಗಳ ಮತ್ತು ಮೇಲೆ ಉಲ್ಲೇಖಿಸಿದವರೆಲ್ಲರ ಆತ್ಮಕ್ಕೆ

ಚಿರಶಾಂತಿಯನ್ನು ಕರುಣಿಸಲಿ, ಅವರನ್ನು ಕಳೆದುಕೊಂಡಂತಹ ನೋವನ್ನು ಭರಿಸುವ ಶಕ್ತಿಯನ್ನು ಈ ರಾಷ್ಟ್ರದ ಜನತೆಗೆ ಮತ್ತು ಅವರ ಕುಟುಂಬದವರಿಗೆ ಪರಮಾತ್ಮ ಕರುಣಿಸಲಿ ಎಂದು ಪ್ರಾರ್ಥಿಸಿ, ತಮ್ಮ ಸಂತಾಪ ಸೂಚನೆಯ ಪ್ರಸ್ತಾಪಕ್ಕೆ ನನ್ನ ಸಹಮತಿಯನ್ನು ಸೂಚಿಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ತಾವು ಸೂಚಿಸಿರುವ ಸಂತಾಪ ಸೂಚನೆಯ ಗೊತ್ತುವಳಿಯನ್ನು ಬೆಂಬಲಿಸಿ, ನಾನು ನಮ್ಮನ್ನಗಲಿದ ಮಹಾ ಚೇತನಗಳ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಅವಕಾಶ ನೀಡಿದ್ದಕ್ಕಾಗಿ ತಮಗೆ ವಂದಿಸುತ್ತೇನೆ. ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿಗಳು ನಮ್ಮ ರಾಜ್ಯದ ಮಾಜಿ ರಾಜ್ಯಪಾಲರು, ಹಾಗೂ ತಮಿಳುನಾಡಿಲ್ಲಿಯೂ ರಾಜ್ಯಪಾಲರಾಗಿ ಕೆಲಸ ಮಾಡಿದಂತಹ ರಾಷ್ಟ್ರದ ಅತ್ಯಂತ ಹಿರಿಯ ನಾಯಕರಾದ ಕೋಣಿಜೇತಿ ರೋಸಯ್ಯ ಅವರ ನಿಧನದಿಂದ ಇಡೀ ರಾಷ್ಟ್ರದ ಜೊತೆಗೆ ಆಂಧ್ರಪ್ರದೇಶ ಮತ್ತು ಕರ್ನಾಟಕ ಜನತೆಯ ಬದುಕಿನಲ್ಲಿ ಬಹಳಷ್ಟು ವ್ಯಾಕ್ಯೂಮ್ ಕ್ರಿಯೇಟ್ ಆಗಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಶ್ರೀಯುತರು ವಿದ್ಯಾರ್ಥಿ ಜೀವನದಲ್ಲಿಯೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಂಡು ಬಂದು, 17 ವರ್ಷಗಳ ಕಾಲ ಆಂಧ್ರಪ್ರದೇಶದ ಮೇಲ್ಮನೆ ಸದಸ್ಯರಾಗಿ ಅತ್ಯುತ್ತಮ ರೀತಿಯಲ್ಲಿ ಕೆಲಸ ಮಾಡುವುದರ ಜೊತೆಗೆ ಒಂದು ಬಾರಿ ಲೋಕಸಭೆಗೆ ಆಯ್ಕೆಯಾಗುವ ಮೂಲಕ ಒಳ್ಳೆಯ parliamentarian ಆಗಿ ಕೆಲಸ ಮಾಡಿದ್ದು ನಮಗೆಲ್ಲರಿಗೂ ಸಹ ನೆನಪಿದೆ. ಅದರ ಜೊತೆಗೆ ಆಂಧ್ರಪ್ರದೇಶದಲ್ಲಿ ಅನೇಕ ಖಾತೆಗಳನ್ನು ನಿಭಾಯಿಸಿದಂತಹ ಖ್ಯಾತಿಗೆ ಭಾಜನರಾದವರು.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1030)/11-40-2021/13-12-2021/ಎಲ್ಎಂ/ಜಿಆರ್

**ಶ್ರೀ ಎಸ್.ಆರ್.ಪಾಟೀಲ್(ಮುಂದು)**

ಆಂಧ್ರಪ್ರದೇಶದ ಆರ್ಥಿಕ ಸಚಿವರಾಗಿ ಆರ್ಥಿಕ ನೀತಿ ನಿರೂಪಣೆ ಮಾಡಿದಂತಹ ಕೀರ್ತಿ ಇವರಿಗೆ ಸಲ್ಲುತ್ತದೆ. ೧೬ ಬಾರಿ ಆಯವ್ಯಯವನ್ನು ಮಂಡಿಸಿದ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ಬಹುಷಃ ದೇಶದಲ್ಲಿಯೇ ಇದೊಂದು ದಾಖಲೆ ಎಂದು ನನ್ನಗನ್ನಿಸುತ್ತದೆ. ಇಂತಹ ಒಬ್ಬ ಆರ್ಥಿಕ ಚಿಂತಕ, ರಾಜಕೀಯ ಮುತ್ಸದ್ದಿಯನ್ನು ದೇಶ ಕಳೆದುಕೊಂಡಿದೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ವಿರೂಪಾಕ್ಷಪ್ಪ ಸಂಗಣ್ಣ ಅಗಡಿಯವರು ನಮ್ಮನ್ನು ಅಗಲಿದ್ದಾರೆ. ಇವರು ಕೊಪ್ಪಳ ಜಿಲ್ಲೆಯಲ್ಲಿ ಹೆಸರುವಾಸಿಯಾದ ರಾಜಕಾರಣಿಗಳಾಗಿದ್ದರು. ಇವರು ಸಂಸದರಾಗಿ, ವಿಧಾನಸಭಾ ಸದಸ್ಯರಾಗಿ ಮತ್ತು ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ. ಇವರು ಶಿಕ್ಷಣ ಪ್ರೇಮಿಗಳಾಗಿದ್ದರು. ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ, ಶೈಕ್ಷಣಿಕ ಪ್ರಸಾರದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ತಾಲ್ಲೂಕಾ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ನಾಡಿನ ಸಹಕಾರಿ ಧುರೀಣರಲ್ಲಿ ಇವರು ಒಬ್ಬರು ಎಂದು ಹೇಳಬಯಸುತ್ತೇನೆ. ಕೊಪ್ಪಳ ಪಟ್ಟಣದಲ್ಲಿ ಜನಪ್ರಿಯರಾದ ನಾಯಕರಾಗಿದ್ದರು. ಇವರ ನಿಧನದಿಂದ ಕಲ್ಯಾಣ ಕರ್ನಾಟಕಕ್ಕೆ ಬಹಳಷ್ಟು ಹಾನಿಯಾಗಿದೆ ಎಂದು ಹೇಳಬಯಸುತ್ತೇನೆ.

ಶ್ರೀ ಪುನೀತ್ ರಾಜಕುಮಾರ್‌ರವರು ನಮ್ಮನ್ನು ಅಗಲಿದ್ದಾರೆ. ಇವರ ವಿಚಾರವಾಗಿ ಮಾನ್ಯ ಸಭಾಪತಿಗಳು ಎಲ್ಲವನ್ನು ಹೇಳಿದ್ದಾರೆ. ಅವರು ಹೇಳಿರುವುದನ್ನು ಮತ್ತೆ ನಾನು ಹೇಳಲು ಹೋಗುವುದಿಲ್ಲ. ಅವರು ಎಷ್ಟು ಜನಪ್ರಿಯರಾಗಿದ್ದರು ಎನ್ನುವುದು ಅವರ ನಿಧನದ ನಂತರ ತಿಳಿಯುತ್ತಾ ಬಂತು. ಇವರು ಎಷ್ಟು ಸಾಧನೆಯನ್ನು ಮಾಡಿದ್ದಾರೆ ಎನ್ನುವುದು ಈಗ ಎಲ್ಲರಿಗೂ ತಿಳಿದಿದೆ. ಇವರು ಚಲನಚಿತ್ರ ರಂಗದಲ್ಲಿ ಮಾತ್ರವಲ್ಲ, ಸಾಮಾಜಿಕ ಚಿಂತಕರಾಗಿದ್ದರು. ಅವರ ನಿಧನದ ನಂತರ ಬಹಳಷ್ಟು ವಿಚಾರಗಳು ಬೆಳಕಿಗೆ ಬಂದಿವೆ. ಅವರು ಯುವಜನಾಂಗದ ಕಣ್ಮಣೀಯಾಗಿದ್ದರು, youth icon

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗಿದ್ದರು ಎನ್ನುವುದು ಬಹಳ ಸತ್ಯವಾದ ಮಾತಾಗಿದೆ. ಇವರು ಸಾಮಾಜಿಕವಾಗಿ ತುಂಬಾ ಸಾಧನೆಯನ್ನು ಮಾಡಿದ್ದಾರೆ. ವಿಶೇಷವಾಗಿ ವೃದ್ಧರ ಬಗ್ಗೆ, ಅನಾಥ ಬಡ ಮಕ್ಕಳ ಬಗ್ಗೆ ಬಹಳಷ್ಟು ಕಾಳಜಿಯನ್ನು ಹೊಂದಿದ್ದರು. ಅವರ ಆದಾಯದ ಬಹುಪಾಲು ಹಣ ವನ್ನು ಇಂತವರ ಏಳ್ಗೆಗಾಗಿ ಮೀಸಲಿಟ್ಟಿದರು. ವೃದ್ಧರು ತಮ್ಮ ಸಂಧ್ಯಾಕಾಲದಲ್ಲಾದರೂ ಚೆನ್ನಾಗಿ ಇರಬೇಕೆಂದು ಅವರಿಗಾಗಿ ಒಳ್ಳೆಯ ವ್ಯವಸ್ಥೆಯನ್ನು ಒದಗಿಸಿಕೊಟ್ಟಿದ್ದರು. ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಇರುತ್ತಾರೆ. ಆದರೆ ಸಾಮಾಜಿಕ ಕಾಳಜಿಯನ್ನು ಹೊಂದಿದವರು ಬಹಳ ಕಡಿಮೆ. ಆ ಕಡಿಮೆ ಜನರಲ್ಲಿ ಇವರು ಒಬ್ಬರಾಗಿದ್ದರು. ನಾನು ಇವರ ಅಂತಿಮ ದರ್ಶನಕ್ಕೆ ಹೋಗಿದ್ದೆ. ಅಲ್ಲಿಯ ಜನಸಾಗರವನ್ನು ನೋಡಿ ನನಗೆ ಬಹಳ ಆಶ್ಚರ್ಯ ಉಂಟಾಯಿತು. ಲಕ್ಷಾಂತರ ಜನ ಅವರ ಅಂತಿಮ ದರ್ಶನವನ್ನು ಮಾಡಲು ಬಂದಿದ್ದರು. ಇವರ ತಂದೆ ಡಾ:ರಾಜಕುಮಾರ್‌ರವರಿಗಿಂತ ಹೆಚ್ಚು ಜನಾಕರ್ಷಣೆಯನ್ನು ಹೊಂದಿರುವ ಮೇರು ನಟ ಎನ್ನುವುದನ್ನು ಎಲ್ಲರೂ ಒಪ್ಪಲೇ ಬೇಕಾಗುತ್ತದೆ. ನಾಡಿನ ಉದ್ದಗಲಕ್ಕೂ ಅವರು ಜನಪ್ರಿಯತೆಯನ್ನು ಹೊಂದಿದ್ದರು. ಯಾವುದೇ ಒಂದು ಸಣ್ಣ ಗ್ರಾಮಕ್ಕೂ ಹೋದರೂ ಪುನೀತ್ ರಾಜಕುಮಾರ್‌ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಎನ್ನುವಂತ ಫಲಕಗಳನ್ನು ನಾನು ನೋಡಿದ್ದೇನೆ. ನಗರ, ಪಟ್ಟಣಗಳ ಪ್ರತಿ ವಾರ್ಡನಲ್ಲಿಯೂ ಅವರ ಭಾವಚಿತ್ರವನ್ನು ಹಾಕಲಾಗಿದೆ. ಅತಿ ಕುಗ್ರಾಮದಲ್ಲಿಯು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಭಾವಚಿತ್ರವನ್ನು ಹಾಕಿರುವುದನ್ನು ನೋಡಿದರೆ ಅವರ ಜನಪ್ರಿಯತೆ ಉತ್ತುಂಗಕ್ಕೆ ಏರಿದೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ೨೫ ಲಕ್ಷಕ್ಕಿಂತ ಹೆಚ್ಚಿನ ಜನರು ಅವರ ಅಂತಿಮ ದರ್ಶನವನ್ನು ಪಡೆದಿರುವುದು ದಾಖಲೆಯಾಗಿದೆ ಎಂದು ಹೇಳುತ್ತಾರೆ. ರಾಷ್ಟ್ರಪಿತ ಮಹಾತ್ಮಾ ಗಾಂಧಿಜೀಯವರ ನಂತರ ಅತಿ ಹೆಚ್ಚಿನ ಜನರು ಇವರ ಅಂತಿಮ ದರ್ಶನವನ್ನು ಪಡೆದಿದ್ದಾರೆ ಎಂದು ಅನೇಕ ಜನರು ಮಾತನಾಡುತ್ತಿದ್ದಾರೆ. ಇದರ ಬಗ್ಗೆ ನಾನು ವಿಮರ್ಶೆ ಮಾಡಲು ಹೋಗುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಹೊನ್ಯಾಳ ಎನ್ನುವ ಗ್ರಾಮವಿದೆ. ಅಲ್ಲಿಯ ಬಸವರಾಜ ನಾಯಕ್ ಎನ್ನುವ ಹುಡುಗ ಪಾದಯಾತ್ರೆ ಮಾಡಿಕೊಂಡು ಬೆಂಗಳೂರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗಿ ಅವರ ಸಮಾಧಿಗೆ ನಮಸ್ಕಾರ ಮಾಡಿಕೊಂಡು ಬಂದಿದ್ದಾನೆ. ಇನ್ನೊಬ್ಬ ಯುವಕ ಸೈಕಲ್ ಓಡಿಸಿಕೊಂಡು ಹೋಗಿ ಅಂತಿಮ ದರ್ಶನ ಪಡೆದುಕೊಂಡು ಬಂದಿದ್ದಾರೆ, ಪಾದಯಾತ್ರೆ ಮಾಡಿಕೊಂಡು ಹೋದವನ ಬಗ್ಗೆ ನನಗೆ ಬಹಳ ಆಶ್ಚರ್ಯವಾಗಿ ಆ ಯುವಕನನ್ನು ಕರೆಯಿಸಿ ನಾನು ಮಾತನಾಡಿದೆ. ಆ ಯುವಕ ಹೌದು ಸಾರ್ ನಾನು ನಡೆದುಕೊಂಡು ಹೋಗಿ ಬಂದಿದ್ದೇನೆ ಎಂದ ಹೇಳಿದನು. ಇದರಿಂದಲೇ ಶ್ರೀ ಪುನೀತ್ ರಾಜಕುಮಾರ್‌ರವರು ಎಷ್ಟೊಂದು ಜನಪ್ರಿಯತೆಯನ್ನು ಹೊಂದಿದ್ದರು ಎನ್ನುವುದನ್ನು ತಿಳಿಯಬಹುದಾಗಿದೆ. ಈ ವಿಚಾರದಲ್ಲಿ ನಾನು ಸರ್ಕಾರವನ್ನು ಅಭಿನಂದಿಸಲೇ ಬೇಕಾಗುತ್ತದೆ. ಏಕೆಂದರೆ ಡಾ: ರಾಜಕುಮಾರ್‌ರವರು ನಿಧನ ಹೊಂದಿದ ಸಮಯದಲ್ಲಿ untoward incidents, unpleasant incidents ಬಹಳ ನಡೆದವು. ಅವರ ಅಂತಿಮ ಯಾತ್ರೆಯ ಸಮಯದಲ್ಲಿ mischievous elements ಅಂತಹವರಿಂದ ಬಹಳಷ್ಟು ಆಸ್ತಿ-ಪಾಸ್ತಿಗಳು ಹಾಳಾದವು. ಆದರೆ ಈ ಸಾರಿ ಅಷ್ಟೊಂದು ಜನಸಂಖ್ಯೆ ಇದ್ದರೂ ಕೂಡಾ ಯಾವುದೇ ತೊಂದರೆಯಾಗದಂತೆ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ ನಿರ್ವಹಿಸಿರುವ ಕೀರ್ತಿಗೆ ಈ ಸರ್ಕಾರ ಭಾಜನವಾಗುತ್ತದೆ. ಯಾವ ಕೆಟ್ಟ ಘಟನೆಗಳು ನಡೆಯದಂತೆ ನೋಡಿಕೊಂಡಿದ್ದಾರೆ. ಏಕೆಂದರೆ ನಾನು ಅವರ ಅಂತಿಮ ದರ್ಶನಕ್ಕೆ ಹೋದಾಗ ಬಹಳಷ್ಟು ಜನರನ್ನು ನೋಡಿ, ಅಂತಿಮ ಶವ ಸಂಸ್ಕಾರ ಸುಲಲಿತವಾಗುತ್ತದೆಯೇ ಇಲ್ಲವೇ ಎನ್ನುವ ಆಂತಕವಿತ್ತು. ಆದರೆ ಈ ಸರ್ಕಾರ ಅತ್ಯಂತ ಉತ್ತಮ ರೀತಿಯಿಂದ ಚಾಕಚಕ್ಯತೆಯಿಂದ ಕಾರ್ಯನಿರ್ವಹಿಸಿರುವುದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯ ಮಾತುಗಳನ್ನು ಹೇಳಬಯಸುತ್ತೇನೆ. ಇವರ ನಿಧನದಿಂದ ಚಲನಚಿತ್ರ ರಂಗಕ್ಕೆ ಮತ್ತು ಸಾಮಾಜಿಕ ರಂಗಕ್ಕೆ ತುಂಬಲಾರದ ದೊಡ್ಡ ಹಾನಿಯನ್ನು ಉಂಟುಮಾಡಿದೆ ಎನ್ನುವಂತಹ ತಮ್ಮ ವಿಚಾರಕ್ಕೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಪಿ. ಭೋಜರಾಜ ಹೆಗಡೆಯವರು, ಇವರು ದೊಡ್ಡ ಸ್ವಾತಂತ್ರ್ಯ ಹೋರಾಟಗಾರರು. ಇವರ ನಿಧನದಿಂದ ಪಿತಾಮಹ ಮಹತ್ಮಾ ಗಾಂಧೀಜಿಯವರ ಕೊನೆ ಕೊಂಡಿ ಕಳಿಚಿ ಹೋಯಿತು ಎಂದು ಹೇಳಬಹುದಾಗಿದೆ. ಸೂರ್ಯ ಮುಳಗದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸಾಮ್ರಾಜ್ಯ ಎನ್ನಿಸಿಕೊಂಡಿರುವ ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಸಾಕಷ್ಟು ತ್ಯಾಗ ಬಲಿದಾನವನ್ನು ಕೊಟ್ಟು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರಲ್ಲಿ ಇವರು ಒಬ್ಬರು. ಮಹಾತ್ಮರ ಸಾಲಿನಲ್ಲಿ ಇವರು ನಿಲ್ಲುವಂತವರು. ಮಹಾತ್ಮ ಗಾಂಧೀಜಿಯವರು ೧೯೪೨ರಲ್ಲಿ "ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ" ಎನ್ನುವ 'Quit India Movement' ಗೆ ಕರೆ ಕೊಟ್ಟಾಗ ಅದರಲ್ಲಿ ಇವರು ಭಾಗಿಗಳಾಗಿದ್ದರು. ಇಂತಹ ಹೋರಾಟಗಾರರನ್ನು ನಾವು ಕಳೆದುಕೊಂಡಿದ್ದೇವೆ. ಇಂತಹ ಹೋರಾಟಗಾರರು ಇನ್ನು ಸ್ವಲ್ಪ ಜನ ಉಳಿದಿದ್ದಾರೆ ಅಷ್ಟೇ. ನಾವು ಇಂದು ಸದನದಲ್ಲಿ ಬಂತು ನಿಂತಿದ್ದೇವೆ ಎಂದರೆ ಅಂದಿನ ಅವರ ಹೋರಾಟವೇ ಕಾರಣ ಎಂದು ಹೇಳಬಯಸುತ್ತೇನೆ.

ಶ್ರೀ ಕೆ.ಎಸ್.ನಾರಾಯಣಾಚಾರ್ಯರರು, ಇವರು ಒಳ್ಳೆಯ ಮೇಧಾವಿಗಳು, ದೊಡ್ಡ ಬರಹಗಾರರು. ಅದರಲ್ಲೂ ಒಳ್ಳೆಯ ವಾಗ್ಮಿಗಳು, ಚಿಂತನಕಾರರು. ಇವರು ರಾಮಾಯಣ, ಮಹಾಭಾರತ, ಶ್ರೀಮದ್ ಭಾಗವತ, ವೇದ, ಉಪನಿಷತ್ತುಗಳನ್ನು ಎಲ್ಲಾ ಭಾಷೆಗಳಲ್ಲಿಯು ರಾಷ್ಟ್ರದ ಉದ್ದಗಲಕ್ಕೂ ಪ್ರವಚನ ನೀಡಿದಂತಹ ಕೀರ್ತಿಗೆ ಇವರು ಭಾಜನರಾಗಿದ್ದಾರೆ. ಇಂತಹ ಹಿರಿಯರನ್ನು ನಮ್ಮ ರಾಜ್ಯ ಕಳೆದುಕೊಂಡಿದೆ ಎಂದು ಹೇಳಬಯಸುತ್ತೇನೆ.

ನಾಡೋಜ ಪದ್ಮಮ್ಮನವರು ರಂಗ ಭೂಮಿಯ ಅತ್ಯಂತ ಹಿರಿಯ ಕಲಾವಿದೆ ಇವರು. ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶೋಷಿತ ವರ್ಗದ ಒಬ್ಬ ಹೆಣ್ಣುಮಗಳು ಈ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ ಎಂದರೆ, ಪ್ರತಿಭೆ ಕೇವಲ ಕೆಲವೇ ವರ್ಗಕ್ಕೆ, ಕೆಲವು ಜನರಿಗೆ ಸಿಮೀತವಲ್ಲ ಎನ್ನುವುದನ್ನು ಹರಿಜನ ನಾಡೋಜ ಪದ್ಮಮ್ಮನವರ ಸಾಧನೆಯಿಂದ ನಾವು ತಿಳಿದುಕೊಳ್ಳಬಹುದು.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
--------------------------------------------------------------------------------

(1031)13-12-2021(11-50)bsd-gr

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಬಯಲಾಟ ಮತ್ತು ಪೌರಾಣಿಕ ನಾಟಕಗಳಲ್ಲಿ ದ್ರೌಪದಿ, ಸೀತೆ, ಕುಂತಿಯಂತಹ ಪಾತ್ರಗಳನ್ನು ಮಾಡಿ ಅತ್ಯುತ್ತಮ ಅಭಿನಯಗಳನ್ನು ನೀಡಿದ್ದು, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪ್ರತಿಷ್ಠಿತ ನಾಡೋಜ ಪ್ರಶಸ್ತಿಗೆ ಭಾಜನರಾಗಿದ್ದ ದೊಡ್ಡ ಕಲಾವಿದರನ್ನು ಕಳೆದುಕೊಂಡಿದ್ದು, ಹಿರಿಯ ಕಲಾವಿದರೊಬ್ಬರು ಮರೆಯಾಗಿದ್ದಾರೆ ಎಂದು ವ್ಯಕ್ತ ಮಾಡಬಯಸುತ್ತೇನೆ.

ಶ್ರೀ ಎಸ್. ಶಿವರಾಂ ರವರು ಕನ್ನಡ ನಾಡಿನ ಚಿತ್ರರಂಗದ ಅತ್ಯಂತ ಹಿರಿಯ ಕಲಾವಿದರಾಗಿದ್ದು, ಪ್ರಾರಂಭದಲ್ಲಿ ನಾಟಕದಲ್ಲಿ ಬಹಳಷ್ಟು ಪಾತ್ರಗಳನ್ನು ಮಾಡಿದ್ದು, ಶಾರದ ನಾಟಕ ಮಂಡಳಿಯನ್ನು ಸ್ಥಾಪನೆ ಮಾಡಿ ನೂರಾರು ಸಾವಿರಕ್ಕಿಂತ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ ಎಂದರೆ ನಂಬಲು ಆಗದ ಮಾತಾಗಿದೆ. ಇವರು ೬೦೦ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿ, ಶ್ರೇಷ್ಠ ನಟ, ನಿರ್ದೇಶಕ ಮತ್ತು ನಿರ್ಮಾಪಕರಾಗಿ ಕನ್ನಡಿಗರ ಹೃದಯದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ ಎಂದು ಹೇಳಬಯಸುತ್ತೇನೆ. ಇವರು ರಾಜ್ಯೋತ್ಸವ ಪ್ರಶಸ್ತಿ ಜೊತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅವರ ನಿಧನನಿಂದ ಕನ್ನಡ ಚಿತ್ರರಂಗದ ಅತ್ಯಂತ ಹಿರಿಯರೊಬ್ಬರನ್ನು ಕಳೆದುಕೊಂಡಂತಾಗಿದೆ ಎನ್ನುವ ಮಾತನ್ನು ವ್ಯಕ್ತ ಮಾಡುತ್ತೇನೆ.

ಇನ್ನು ಶ್ರೀ ಬಿಪಿನ್ ಲಕ್ಷ್ಮಣ್‌ಸಿಂಗ್ ರಾವತ್ ರವರು ಭಾರತ ಶಸ್ತ್ರಪಡೆಯ ಮೊದಲನೆಯ ಮುಖ್ಯಸ್ಥರಾಗಿದ್ದು, ಇವರ ನಿಧನ ಭಾರತ ಮಾತೆಯ ರತ್ನಕಚಿತ ಕಿರೀಟದಿಂದ ಒಂದು ಅನರ್ಘ್ಯ ರತ್ನ ಕಳಚಿಬಿದ್ದ ಭಾವನೆಯು ಉಂಟಾಗಿದ್ದು, ನಮ್ಮ ದೇಶಕ್ಕೆ ಮಾತ್ರವಲ್ಲದೇ ಇಡೀ ರಾಷ್ಟ್ರದ ೧೩೦ ಕೋಟಿ ಜನತೆಗೆ ಅಘಾತ ಉಂಟಾಗಿದೆ ಎಂದು ಹೇಳಬಯಸುತ್ತೇನೆ. ಅವರ ಸಾಧನೆಗಳ ಬಗ್ಗೆ ಹಾಗೂ ಯಾವ್ಯಾವ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಮತ್ತು ರಾಷ್ಟ್ರಕ್ಕಾಗಿ ಮಾಡಿದ ಸೇವೆಯ ಬಗ್ಗೆ ತಾವು ಹೇಳಿದ್ದೀರಿ, ಅದಕ್ಕೆ ನಾನೂ ಸಹಮತ ವ್ಯಕ್ತ ಮಾಡುತ್ತೇನೆ. ಸಂವಿಧಾನದ ಪ್ರಕಾರ the President of

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

India is the Supreme Commander of three forces – Army, Navy and Airforce. ೩ ಸೇನಾಪಡೆಗಳಿಗೆ ಸಂವಿಧಾನದ ಪ್ರಕಾರ ರಾಷ್ಟ್ರಪತಿಯವರು ಆಗಿದ್ದು, ಇಂತಹ ಅಧಿಕಾರವನ್ನು ಸ್ವಾತಂತ್ರ್ಯ ಭಾರತದ ಇತಿಹಾಸದಲ್ಲಿ ಮೊಟ್ಟಮೊದಲಿಗೆ ಆ ಅಧಿಕಾರವನ್ನು ಇವರು ಹೊಂದಿದ್ದರು. ಮೂರು ಪಡೆಗಳಿಗೆ ಸುಪ್ರೀಂ ಕಮಾಂಡರ್ ಆಗಿದ್ದರು ಎಂಬುದು ನಮ್ಮೆಲ್ಲರಿಗೂ ಗೌರವ ಹಾಗೂ ಹೆಮ್ಮೆಯ ವಿಷಯವಾಗಿದೆ. ತಮಿಳುನಾಡಿನ ಕುನೂರು ಬಳಿಯ ಹೆಲಿಕಾಫ್ಟರ್ ದುರಂತದಲ್ಲಿ ಪತ್ನಿ ಜೊತೆಗೆ ದೇಶದ ಅತ್ಯಂತ ಶ್ರೇಷ್ಠ ಅಧಿಕಾರಿಗಳಾದ ಬ್ರಿಗೇಡಿಯರ್ ಎಲ್.ಎಸ್. ಲಿಡ್ಡರ್, ಲೆಫ್ಟಿನೆಂಟ್ ಕರ್ನಲ್ ಹರ್ಜಿಂದರ್ ಸಿಂಗ್, ವಿಂಗ್ ಕಮಾಂಡರ್ ಪಿ.ಎಸ್. ಚೌಹಾಣ್, ಸ್ಕ್ವಾಡ್ರನ್ ಲೀಡರ್ ಕೆ. ಸಿಂಗ್, ಜೆ.ಡಬ್ಲ್ಯೂ.ಒ., ದಾಸ್, ಜೆ.ಡಬ್ಲ್ಯೂ.ಒ. ಪ್ರದೀಪ್, ನಾಯಕ್ ಜಿತೇಂದ್ರ ಕುಮಾರ್, ನಾಯಕ್ ವಿವೇಕ್ ಕುಮಾರ್, ನಾಯಕ್ ಬಿ. ಸಾಯತೇಜ, ನಾಯಕ್ ಗುರುಸೇವಕ್ ಸಿಂಗ್ ಹಾಗೂ ಸತ್ಪಾಲ್ ಅವರುಗಳನ್ನು ನಾವು ಕಳೆದುಕೊಂಡಿದ್ದೇವೆ. We have lost finest military officers. ೧೩ ಜನ ಹುತಾತ್ಮರಾಗಿದ್ದಾರೆ. ಮತ್ತೊಬ್ಬರಾದ ಶ್ರೀ ಹನುಮಸಿಂಗ್ ಎಂಬುವವರು ಗಾಯಾಳುಗಳಾಗಿ ಬೆಂಗಳೂರಿನ ಕಮಾಂಡರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಅವರಿಗೆ ಗಂಭೀರ ಸ್ವರೂಪದ ಗಾಯಗಳಾಗಿವೆ. ಈ ಸಂದರ್ಭದಲ್ಲಿ ಸದನದ ಮೂಲಕ ಅವರು ಬೇಗನೆ ಗುಣಮುಖರಾಗಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈ ಹೆಲಿಕಾಫ್ಟರ್ ದುರಂತದ ಬಗ್ಗೆ ಕೇಂದ್ರ ಸರ್ಕಾರದವರು ೩ ಫೋರ್ಸ್‌ಗಳ ಮೂಲಕ ವಾಯುಪಡೆ ಚೀಫ್ ಮಾರ್ಷಲ್ ಅಧ್ಯಕ್ಷತೆಯಲ್ಲಿ ವಿಚಾರಣೆ ಸಮಿತಿ ನೇಮಿಸಿ, ವಿಚಾರಣೆ ನಡೆಯುತ್ತಿದೆ. ನನಗೆ ಅನಿಸಿದಂತೆ, ಇಂತಹ ಒಬ್ಬ ಹಿರಿಯ ಅಧಿಕಾರಿಗಳಿರುವ ಹೆಲಿಕಾಫ್ಟರ್‌ನಲ್ಲಿ ಪೈಲೆಟ್ ೨೦ ವರ್ಷಗಳ ಅನುಭವ ಹೊಂದಿರುವವರಾಗಿದ್ದರು. ಜನ ಹಾಗೂ ಮಾಧ್ಯಮಗಳಲ್ಲಿ ನೋಡಿದಂತೆ it was the safest Helicopter. ಬಹಳಷ್ಟು ಸುರಕ್ಷತೆ ಇರುವ ಹಾಗೂ ಹಿರಿಯ ಅಧಿಕಾರಗಳು ತೆರಳುವ ಹೆಲಿಕಾಫ್ಟರ್ ಬಹಳ ಸುರಕ್ಷತೆಯನ್ನು ಹೊಂದಿರುತ್ತದೆ. ಹಿಂದೆ ಶ್ರೀ ಮೊರಾರ್ಜಿ ದೇಸಾಯಿಯವರು ಒಮ್ಮೆ ಆಘಾತಕ್ಕೆ ಸಿಲುಕಿಕೊಂಡಿದ್ದರು. ಪೈಲೆಟ್ nose landing ಮಾಡುತ್ತಾರೆ. VIP ಗಳ ಸಂಚಾರದ ವೇಳೆ Highest flying hours experience

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೇಮಿಸಿರುತ್ತಾರೆ. ಇಲ್ಲಿಯು ಕೂಡ ಬಹಳಷ್ಟು ಅನುಭವ ಇರುವವರನ್ನು ನೇಮಿಸಿದ್ದರೂ ಈ ಅವಘಡ ಏಕೆ ಆಯಿತು ಎಂಬುದರ ಆಳಕ್ಕೆ ಹೋಗಬೇಕಾಗುತ್ತದೆ. ನಿನ್ನೆ ನಾನು ದೂರದರ್ಶನದಲ್ಲಿ ಭಾರತ ದೇಶದ ಪರಮಾಣು ಪಿತಾಮಹ ಶ್ರೀ ಹೋಮಿ ಜಹಾಂಗೀರ್ ಬಾಬಾ ರವರ ಫ್ಲೈಟ್ ವಿಧ್ವಂಸಕ ಕೃತ್ಯಕ್ಕೆ ಒಳಗಾಗಿತ್ತು ಎಂದು ಪ್ರಸಾರವಾಯಿತು. ಇದು ಏನಾಗಲು ಸಾಧ್ಯವಿದೆ. ಅದರಲ್ಲಿ ವಿಧ್ವಂಸಕ ಕೃತ್ಯ ಇದೆಯೋ ಇಲ್ಲವೋ? ಬೆಂಕಿ ಹತ್ತಿಕೊಂಡಾಗ ಅಂತರವೇ ಇಲ್ಲ. ಆ ದೃಶ್ಯವನ್ನು ನೋಡಿದರೆ ಕರುಳು ಕಿತ್ತು ಬರುತದೆ. ಈ ದೇಶದ ಭದ್ರತೆ, ಅಖಂಡತೆ ಹಾಗೂ ಸಾರ್ವಭೌಮತ್ವಕ್ಕೆ ಸವಾಲಾಗುವ ಘಟನೆಗಳ ಬಗ್ಗೆ ಸರ್ಕಾರ ನಿರ್ದಾಕ್ಷಿಣ್ಯವಾಗಿ ಅತ್ಯಂತ ಮುತುವರ್ಜಿ ವಹಿಸಿ, ಆಳಕ್ಕೆ ಇಳಿದು ಪರಿಶೀಲನೆ ಮಾಡುವುದು ಅವಶ್ಯಕವಿದೆ ಎಂದು ಕೇಂದ್ರ ಸರ್ಕಾರಕ್ಕೂ ಹೇಳಬಯಸುತ್ತೇನೆ. ಏಕೆಂದರೆ ಅವರು he is a very very important person. He was a Commander General of three forces. ಅದರ ಜೊತೆಗೆ ಹಿರಿಯ ಅಧಿಕಾರಿಗಳನ್ನು ಕಳೆದುಕೊಂಡು ನಮ್ಮ ದೇಶದ ೧೩೦ ಕೋಟಿ ಜನರು ದುಃಖದಲ್ಲಿ ಭಾಗಿಯಾಗಿದ್ದಾರೆ ಎನ್ನುವ ಮಾತನ್ನು ವ್ಯಕ್ತ ಮಾಡುತ್ತೇನೆ. ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಸೂಕ್ತ ಕ್ರಮ ವಹಿಸಬೇಕು. We have lost so many soldiers. Failure of intelligence ಇತ್ಯಾದಿ ಆಗಬಾರದು, ಎಂತಹವರನ್ನು ನಾನು ಬಲಿ ಕೊಡುತ್ತಿದ್ದೇವೆ. ಲಕ್ಷಾಂತರ ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ನಂತರ, ಸ್ವಾತಂತ್ರ್ಯ ಪಡೆದ ನಂತರವೂ ಬಹಳಷ್ಟು ಜನರು ಜೀವತ್ಯಾಗ ಮಾಡಿದ್ದಾರೆ. ಶ್ರೀ ಮಹಾತ್ಮ ಗಾಂಧಿಯವರು, ಶ್ರೀಮತಿ ಇಂದಿರಾ ಗಾಂಧಿಯವರು, ಶ್ರೀ ರಾಜೀವ್ ಗಾಂದಿಯವರು ಬಲಿಯಾಗಿದ್ದು, ಇಂತಹ ಘಟನೆಗಳಲ್ಲಿ ಏನಾದರೂ ವಿಧ್ವಂಸಕ ಕೃತ್ಯಗಳಿದ್ದರೆ ಬಯಲಿಗೆ ಎಳೆದು ತಪ್ಪಿಸಬೇಕು ಮತ್ತು ಹಿಂದೆ ಮುಂದೆ ನೋಡದೇ ಸರಿಯಾದ ಶಿಕ್ಷೆ ವಿಧಿಸಬೇಕು ಎನ್ನುವ ಮಾತನ್ನು ವ್ಯಕ್ತ ಮಾಡುತ್ತೇನೆ. ಇವರುಗಳ ಬಗ್ಗೆ ನಾನು ನಮ್ಮ ರಾಷ್ಟ್ರವು ಕಣ್ಣೀರನ್ನು ಹರಿಸುತ್ತಿದೆ. ಇವತ್ತು ನಮ್ಮನ್ನಗಲಿರುವ ಮಹಾಚೇತಗಳ ಆತ್ಮಕ್ಕೆ ಭಗವಂತನು ಸದ್ಗತಿಯನ್ನು ದಯಪಾಲಿಸಲಿ, ಅವರ ಅಗಲಿಕೆ ನೋವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗದವರಿಗೆ ಮತ್ತು ರಾಷ್ಟ್ರದ ಜನತೆಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀಡಲಿ, ಈ ನೋವನ್ನು ಭರಿಸುವ ಶಕ್ತಿಯನ್ನು ಎಲ್ಲರಿಗೂ ಭಗವಂತನು ಕರುಣಿಸಲು ಎಂದು ಪ್ರಾರ್ಥಿಸುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನಾಚರಣೆಯನ್ನು ಆಚರಿಸಬೇಕು.

**(ಮೃತರ ಗೌರವಾರ್ಥ ಸದನದಲ್ಲಿ ಉಪಸ್ಥಿತರಿದ್ದವರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು)**

(ಮುಂದು)

(1032)/ 13.12.2021/12.00/ಹೆಚ್‌ವಿ:ಎಂಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಆ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ನೀಡಬೇಕೆನ್ನುವುದು ನನ್ನ ವಿನಂತಿಯಾಗಿದೆ.

**ಸಭಾಪತಿಯವರು:-** ಪ್ರಶ್ನೋತ್ತರ ಅವಧಿ ಮುಗಿದ ಮೇಲೆ ತಮಗೆ ಅವಕಾಶವನ್ನು ನೀಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2. ಪ್ರಶ್ನೋತ್ತರಗಳು

## ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ:256**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ||ತೇಜಸ್ವಿನಿಗೌಡ:-** ಸನ್ಮಾನ್ಯ ಸಭಾಪತಿಯವರೇ, ಇಂದು ಸದನದ ಕಲಾಪವನ್ನು 11 ಗಂಟೆಗೆ ಪ್ರಾರಂಭಿಸುವಂತಹ ಸಂದರ್ಭದಲ್ಲಿ ಇತ್ತ ಹಿಂದುಗಳ ಶ್ರದ್ಧಾ ಕೇಂದ್ರ ಮತ್ತು ಹಿಂದುಗಳ ಮೋಕ್ಷಧಾಮವೆಂದು ಕರೆಯಲ್ಪಡುವ ವಾರಣಾಸಿಯ ಕಾಶಿಯಲ್ಲಿ ಭಾರತದ ಹೆಮ್ಮೆಯ ಪ್ರಧಾನ ಮಂತ್ರಿಗಳಾಗಿರುವ ಮಾನ್ಯ ನರೇಂದ್ರ ಮೋದಿಯವರು ಈ ದಿನ 'ಭವ್ಯ ಕಾಶಿ; ದಿವ್ಯ ಕಾಶಿ' ಎನ್ನುವ ಕಾರ್ಯಕ್ರಮದ ಮೂಲಕ ಕಾಶಿಯಲ್ಲಿರುವ ಸ್ಮಾರಕಗಳನ್ನು ಮತ್ತು ದೇವಾಲಯಗಳನ್ನು ಪುನರ್ ಜೀರ್ಣೋದ್ಧಾರಗೊಳಿಸಿ ದೇಶಕ್ಕೆ ಸಮರ್ಪಿಸಿದ್ದಾರೆ, ಬೆಳಗಾವಿಯ ಕಿತ್ತೂರು ಚೆನ್ನಮ್ಮನ ಮತ್ತು ಸಂಗೊಳ್ಳಿ ರಾಯಣ್ಣನ ಬಲಿದಾನದ ನೆನಪಿನಲ್ಲಿ ನಾವು ಇವತ್ತು ಈ ಸದನದಲ್ಲಿ ಸೇರಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಇತಿಹಾಸ ಮತ್ತು ಸಂಸ್ಕೃತಿಯನ್ನು ಸಾರುವಂತಹ ಪುರಾತತ್ವ ಇಲಾಖೆಯಡಿಯಲ್ಲಿ ಬರುವಂತಹ ಸ್ಮಾರಕಗಳ ಸಂರಕ್ಷಣೆಯ ಬಗ್ಗೆ ಅತ್ಯಂತ ನೋವಿನಿಂದ ಮತ್ತು ಕಾಳಜಿಯಿಂದ ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಕರ್ನಾಟಕ ರಾಜ್ಯದ ಪುರಾತತ್ವ ಇಲಾಖೆಗೆ ಕೇಂದ್ರ ಸರ್ಕಾರದ ಸಂಸ್ಕೃತಿ ಮಂತ್ರಾಲಯದಿಂದ ಕಳೆದ 20 ವರ್ಷಗಳಲ್ಲಿ ಎಷ್ಟು ಅನುದಾನ ಬಿಡುಗಡೆಯಾಗಿದೆ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ರಾಜ್ಯ ಪುರಾತತ್ವ ಇಲಾಖೆಗೆ ಕಳೆದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

20 ವರ್ಷಗಳಲ್ಲಿ 12ನೇ ಹಣಕಾಸಿನ ಯೋಜನೆಯಡಿ 2006 ರಿಂದ 2010ರವರೆಗೆ 22.50 ಕೋಟಿ ರೂಪಾಯಿಗಳನ್ನು ಮತ್ತು 13ನೇ ಹಣಕಾಸು ಯೋಜನೆಯಡಿ ಅಂದರೆ, 2012 ರಿಂದ 2015ರವರೆಗೆ 100 ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ ಎನ್ನುವ ಉತ್ತರವನ್ನು ಸರ್ಕಾರ ನೀಡಿದೆ. ಇದು ಅತ್ಯಂತ ನಿರಾಶಾದಾಯಕ ಮತ್ತು ನೋವಿನ ಸಂಗತಿಯಾಗಿದೆ. ಕೇವಲ 122 ಕೋಟಿ ರೂಪಾಯಿಗಳಲ್ಲಿ ಕರ್ನಾಟಕದ ಗ್ರಾಮಗ್ರಾಮಗಳಲ್ಲಿ ಇರುವಂತಹ ಸ್ಮಾರಕಗಳನ್ನು ರಕ್ಷಣೆ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆನ್ನುವುದು ನನ್ನ ಪ್ರಶ್ನೆಯಾಗಿದೆ. ಬೆಳಗಾವಿಯಿಂದ ಕೇವಲ ನಾಲ್ಕು ಕಿಲೋಮೀಟರ್ ದೂರದಲ್ಲಿ ದೇಗಾವ್ ಅಥವಾ ದೇವ ಗ್ರಾಮವೆಂದು ಒಂದು ಪುಟ್ಟ ಗ್ರಾಮವಿದೆ. ಅಲ್ಲಿ ಅತ್ಯಂತ ಅದ್ಭುತ ಕೆತ್ತನೆಯ ದೇವಾಲಯ ಇದೆ.

ಸನ್ಮಾನ್ಯ ಸಭಾಪತಿಯವರೇ, 12ನೇ ಹಣಕಾಸು ಯೋಜನೆಯಡಿಯಲ್ಲಿ ಬಿಡುಗಡೆಯಾದ ಹಣದಲ್ಲಿ 63 ಸ್ಮಾರಕಗಳನ್ನು ಮತ್ತು ಒಂದು ಪುರಾತತ್ವ ನೆಲೆಯ ಅಭಿವೃದ್ಧಿ ಮತ್ತು 13 ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲಾಗಿದೆ ಎನ್ನುವ ಉತ್ತರವನ್ನು ಸರ್ಕಾರ ನೀಡಿದೆ. ಆ 13 ವಸ್ತು ಸಂಗ್ರಹಾಲಯಗಳ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಹಣದಲ್ಲಿ ಬೆಂಗಳೂರಿನಲ್ಲಿರುವ ವೆಂಕಟಪ್ಪ ಆರ್ಟ್ ಗ್ಯಾಲರಿ ಒಂದಕ್ಕೇ ಸುಮಾರು 2.51 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, 1499ರಲ್ಲಿ ಚೌಡಪ್ಪ ಗೌಡ ಮತ್ತು ಭದ್ರಪ್ಪ ಗೌಡ ನಾಯಕರಿಂದ ಪ್ರಾರಂಭವಾಗಿ 1763ರಲ್ಲಿ ಹೈದರಾಲಿಯ ದಾಳಿಗೆ ತುತ್ತಾಗುವವರೆಗೆ ಸುಮಾರು 263 ವರ್ಷಗಳ ಕಾಲ ಕೆಳದಿಯ ನಾಲ್ಕು ಸಂಸ್ಥಾನದ ನಾಲ್ಕು ರಾಜಧಾನಿಗಳಲ್ಲಿ 18 ಜನ ಅರಸರು ಆಳ್ವಿಕೆ ಮಾಡಿ, ಬೆಲೆ ಕಟ್ಟಲಾಗದಂತಹ ಕೋಟೆ-ಕೊತ್ತಲೆ, ದೇವಸ್ಥಾನ, ಅರಮನೆ ಮತ್ತು ಪುಷ್ಕರಣಿಗಳನ್ನು ಕಟ್ಟಿದ್ದರು. ಕೆಳದಿಯ ಈ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಮಾರಕಗಳ ಪರಿಸ್ಥಿತಿ ಯಾವ ರೀತಿಯಾಗಿದೆ ಎನ್ನುವುದನ್ನು ನೋಡಿದರೆ ಕಣ್ಣೀರು ಬರುತ್ತಿದೆ. ನಾನು ಇತ್ತೀಚಿನ ಮಳೆಗಾಲದಲ್ಲಿ ಅಲ್ಲಿನ ಪ್ರತಿಯೊಂದು ಸ್ಮಾರಕಗಳು ವೀಕ್ಷಣೆ ಮಾಡಿದ್ದೇನೆ ಮತ್ತು ಕೋಟೆ-ಕೊತ್ತಲಗಳನ್ನು ತಿರುಗಿ ಬಂದು ಈ ಪ್ರಶ್ನೆಯನ್ನು ನಾನು ಕೇಳಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ಇಕ್ಕೇರಿಯ ಅಘೋರೇಶ್ವರ ದೇವಾಲಯವು ದ್ರಾವಿಡ, ಹೊಯ್ಸಳ ಮತ್ತು ಇಸ್ಲಾಂ ವಾಸ್ತುಶಿಲ್ಪಶಾಸ್ತ್ರದ ಪ್ರಕಾರ ನಿರ್ಮಾಣ ಮಾಡಲಾಗಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ನೀರು ಸುರಿಯುತ್ತಿದೆ. ಅರ್ಚಕರು ಮಂಗಳಾರತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಅದರ ವಿಡಿಯೋ ರೆಕಾರ್ಡಿಂಗ್ ಮಾಡಿದ್ದೇನೆ. ಅದನ್ನು ತಮ್ಮ ಅವಗಾಹನೆಗಾಗಿ ಕಳುಹಿಸಿಕೊಡುತ್ತಿದ್ದೇನೆ. ಸ್ಮಾರಕಗಳ ಸಂರಕ್ಷಣೆಯೆಂದರೆ, ಬರೀ ಹುಲ್ಲನ್ನು ಕಿತ್ತು ಸ್ವಚ್ಛಗೊಳಿಸುವುದೇ ಸಂರಕ್ಷಣೆಯೆಂದು ಇವರು ತಿಳಿದುಕೊಂಡಿದ್ದಾರೆ. ಕೆಳದಿ ಮತ್ತು ಇಕ್ಕೇರಿ ಎರಡೂ ಕಡೆಗಳಲ್ಲಿ ಮೊಗಲರ ದಾಳಿಗೆ ಸಿಲುಕಿ 32 ಕೈಗಳು ಇದ್ದ ಅಘೋರೇಶ್ವರ ದೇವರ ಮೂರ್ತಿ ಹಾಳಾದ ಮೇಲೆ, ಸುಮಾರು ಆರೂವರೆ ಅಡಿಗಳಷ್ಟು ಎತ್ತರದ ಮೂರ್ತಿ ಇದ್ದ ಮೂಲ ಪೀಠವನ್ನು ಹೊರಗಡೆ ಎಸೆದಿದ್ದಾರೆ. ಬಿದನೂರಿನ ಕೋಟೆಯಲ್ಲಿರುವ ಯಾವ ಬತ್ತೇರಿಗಳನ್ನೂ ಸಂರಕ್ಷಣೆ ಮಾಡಿಲ್ಲ. ವೀರ ಮಾತೆ ಚೆನ್ನಮ್ಮಾಜೀ ಸುಮಾರು 25 ವರ್ಷಗಳ ಕಾಲ ರಾಣಿಯಾಗಿ ಆಳ್ವಿಕೆ ಮಾಡಿದಂತಹ ಕವಲೇದುರ್ಗದ ಅರಮನೆಯನ್ನು ಸಹ ಸರಿಯಾದ ರೀತಿಯಲ್ಲಿ ಪುನರ್ ನಿರ್ಮಾಣ ಮಾಡಿಲ್ಲ. ಅಲ್ಲಿ ಒಂದು ಬಸ್ ಸಹ ಹೋಗುವುದಕ್ಕೆ ಯಾವುದೇ ರೀತಿಯ ಅನುಕೂಲವನ್ನು ಮಾಡಿಕೊಟ್ಟಿಲ್ಲ. ಇದು ಯಾವ ರೀತಿಯ ಸಂರಕ್ಷಣೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದೇ ರೀತಿಯಾದರೆ, ಪ್ರವಾಸೋದ್ಯಮವನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಿದೆ? ನಾನು ಸ್ಮಾರಕಗಳ ಸಂರಕ್ಷಣೆಯನ್ನು ಸರ್ಕಾರ ಯಾವ ರೀತಿಯಲ್ಲಿ ಮಾಡಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆಯೇ ಹೊರತು, ರಸ್ತೆ ಮತ್ತು ಚರಂಡಿ ಮಾಡಿರುವುದರ ಬಗ್ಗೆ ಮಾಹಿತಿಯನ್ನು ಕೇಳಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸನ್ಮಾನ್ಯ ಸಭಾಪತಿಯವರೇ, ದಯಮಾಡಿ ಸರ್ಕಾರ ಕೋಟೆ-ಕೊತ್ತಲಗಳನ್ನು ಮತ್ತು ಸ್ಮಾರಕಗಳನ್ನು ರಕ್ಷಣೆ ಮಾಡಬೇಕಾಗಿದೆ. ಕಾಶಿಯಲ್ಲಿನ ಸ್ಮಾರಕಗಳನ್ನು ರಕ್ಷಣೆ ಮಾಡುವುದಕ್ಕೆ ಮಾನ್ಯ ನರೇಂದ್ರ ಮೋದಿಯವರು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆನ್ನುವುದು ಇದಕ್ಕೆ ಉದಾಹರಣೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಕವಲೇದುರ್ಗದಲ್ಲಿ 'ಕಾಶಿ ವಿಶ್ವನಾಥನ' ದೇವಸ್ಥಾನವನ್ನು ನಿರ್ಮಾಣ ಮಾಡಲಾಗಿದೆ. ಫೆಬ್ರುವರಿ 27ನೇ ತಾರೀಖಿಗೆ ರಾಣಿ ಚೆನ್ನಮ್ಮನವರ ಜನನವಾಗಿ ಸುಮಾರು 350 ವರ್ಷಗಳಾಗುತ್ತಿವೆ. ಆಕೆಯ ಹೆಸರಿನಲ್ಲಿ ಯಾವುದೇ ಜಯಂತಿಯನ್ನು ಆಚರಣೆ ಮಾಡುತ್ತಿಲ್ಲ. ಆಕೆಯ ಜಯಂತಿಯ ಬಗ್ಗೆ ಘೋಷಣೆ ಮಾಡುವುದನ್ನು ಹಿರಿಯರು ಮರೆತಿರಬಹುದು ತಾವು ಆ ಪೀಠದಿಂದ ಕವಲೇದುರ್ಗವನ್ನು ಆಳ್ವಿಕೆ ಮಾಡಿದಂತಹ ಕೆಳದಿಯ ಚೆನ್ನಮ್ಮಾಜೀಯ ಹೆಸರಿನಲ್ಲಿ ಒಂದು ಜಯಂತಿಯನ್ನು ಆಚರಣೆ ಮಾಡುವುದರ ಬಗ್ಗೆ ತಾವು ನಿರ್ದೇಶನವನ್ನು ನೀಡುವುದರ ಜೊತೆಗೆ, ಕೋಟೆ-ಕೊತ್ತಲೆಗಳ ಮತ್ತು ಪ್ರತಿ ಸ್ಮಾರಕಗಳ ಸಂರಕ್ಷಣೆಯಾಗುವುದರ ಜೊತೆಗೆ ಸಂಪೂರ್ಣ ಪುನರ್ ನಿರ್ಮಾಣ ಮಾಡುವುದಕ್ಕೆ ಅವಶ್ಯಕವಿರುವ ಹಣವನ್ನು ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರವೇ ಭರಿಸುವುದರ ಮೂಲಕ ಅವುಗಳ ಸಂರಕ್ಷಣೆಯ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯ ಪುರಾತತ್ವ ಇಲಾಖೆಗೆ ಆ ವಿಷಯದಲ್ಲಿ ಆಸಕ್ತಿ ಇಲ್ಲದೇ ಇರುವಂತಹ ಅಧಿಕಾರಿಗಳನ್ನು ಅಲ್ಲಿಗೆ ಹಾಕುವುದರ ಬದಲಿಗೆ ಇತಿಹಾಸದ ಪ್ರಜ್ಞೆ ಮತ್ತು ಧಾರ್ಮಿಕ ಶ್ರದ್ಧೆ ಹಾಗೂ ಸಾಂಸ್ಕೃತಿಕ ಬದ್ಧತೆ ಇರುವಂತಹ, ಸಮರ್ಪಣಾ ಮಾನೋಭಾವ ಇರುವಂತಹ ಅಧಿಕಾರಿಗಳನ್ನು ಆ ಇಲಾಖೆಗೆ ನೇಮಕ ಮಾಡಿ ಸ್ಮಾರಕಗಳನ್ನು ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಕನ್ನಡ ಸಂಸ್ಕೃತಿ ಇಲಾಖೆ,

---

ಪುರಾತತ್ವ ಇಲಾಖೆ, ಮುಜರಾಯಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಗಳು ಒಟ್ಟುಗೂಡಿ ಕೆಲಸ ಮಾಡಿದಾಗ ಮಾತ್ರ ಈ ಸ್ಮಾರಕಗಳ ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಒಂದು ಗಟ್ಟಿಯಾಗಿರುವ ಭರವಸೆಯನ್ನು ಸರ್ಕಾರದಿಂದ ತಾವು ಕೊಡಿಸಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾ ನಾಯಕರು, ಪ್ರವಾಸೋದ್ಯಮ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ತೇಜಸ್ವಿನಿಗೌಡರು ಲಿಖಿತ ರೂಪದಲ್ಲಿ ಕೇಳಿರುವಂತಹ ನಾಲ್ಕು ಪ್ರಶ್ನೆಗಳಿಗೆ ಸರ್ಕಾರ ಉತ್ತರವನ್ನು ಕೊಟ್ಟಿದೆ. ಅವರು ಒತ್ತಾಯ ಮಾಡುತ್ತಿರುವ ಎಲ್ಲ ವಿಚಾರಗಳಿಗೂ ನಮ್ಮ  ಸಹಮತವಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಅವರು ಇಕ್ಕೇರಿಯ ಅಘೋರೇಶ್ವರ ದೇವಾಲಯದ ಗರ್ಭಗುಡಿಯಲ್ಲಿ ನೀರು ಸೋರುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. 2020-21ನೇ ಆರ್ಥಿಕ ವರ್ಷದಲ್ಲಿ ಆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ ಎನ್ನುವ ಉತ್ತರವನ್ನು ನೀಡಲಾಗಿದೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಸುಮಾರು 265 ಸ್ಮಾರಕಗಳನ್ನು ನಾನು ಸಹ ನೋಡಿದ್ದೇನೆ. ಅವರು ಹೇಳಿರುವುದು ಬಿಟ್ಟು ಇನ್ನೂ ಅನೇಕ ಸ್ಮಾರಕಗಳಿವೆ, ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿರುವ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಏಕೆಂದರೆ, ಒಮ್ಮೆ ಸ್ಮಾರಕಗಳು ಹಾಳಾಗಿ ಹೋದರೆ ಪುನಃ ಅವು ಸಿಗುವುದಿಲ್ಲ. ಅವರು ಹೇಳುತ್ತಿರುವ ಮಾತನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ಮೂರು ಸಮಸ್ಯೆಗಳಿವೆ. ಸ್ಮಾರಕಗಳ ಸಂರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಣವನ್ನು ವಿನಿಯೋಗ ಮಾಡುವುದಕ್ಕೆ ಸಿದ್ಧವಾಗಿವೆ. ಹಣದ

ಕೊರತೆಯೇನೂ ಇಲ್ಲ. ಈಗಿನ ಸ್ಥಿತಿಯಲ್ಲಿ ಸ್ವಲ್ಪ ಮಟ್ಟಿಗೆ ಆರ್ಥಿಕ ಸಮಸ್ಯೆ ಇರಬಹುದು. ಆದರೆ, ಪುರಾತತ್ವ ಇಲಾಖೆಯಲ್ಲಿ ಸಂರಕ್ಷಿತ ಪ್ರದೇಶದಿಂದ 100 ಮೀಟರ್ ಒಳಗೆ ಕಡ್ಡಾಯವಾಗಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಈಗಿರುವಂತಹ ನಿಯಮಗಳಲ್ಲಿ ಅವಕಾಶಗಳಿಲ್ಲ. ನಂತರ 100 ರಿಂದ 200 ಮೀಟರ್‌ಗಳವರೆಗೆ ಕನಿಷ್ಠ ಯಾವುದಾದರು ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಕ್ಕೆ ಸಣ್ಣಪುಟ್ಟ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಮಾತ್ರ ನಿಯಮಗಳಲ್ಲಿ ಅವಕಾಶವಿದೆ. ಇದರಿಂದಾಗಿ ವರ್ಷಗಟ್ಟಲೆ ಅನುಮತಿಗಾಗಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ನಡುವೆ ನಮ್ಮ ರಾಜ್ಯದ ಪ್ರವಾಸೋದ್ಯಮ ಮಂತ್ರಿಗಳು ಮತ್ತು ಕೇಂದ್ರದ ಪ್ರವಾಸೋದ್ಯಮ ಮಂತ್ರಿಗಳ ನಡುವೆ ಮೂರು ಸುತ್ತಿನ ಮಾತುಕತೆಗಳಾಗಿ ಒಂದು ಒಡಂಬಡಿಕೆಗೆ ಬಂದು ಅನುಮತಿಯನ್ನು ಅತೀ ಶೀಘ್ರವಾಗಿ ಕೊಡಬೇಕೆನ್ನುವ ಪ್ರಸ್ತಾಪಗಳು ನಮ್ಮ ಮುಂದಿದೆ. ಮುಂದೆ ನಡೆಯುವಂತಹ ಚರ್ಚೆಯಲ್ಲಿ ಕಾಯ್ದಿರಿಸಿರುವ ಅಥವಾ ಸಂರಕ್ಷಣಾ ಸ್ಥಳಗಳಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಬಾರದು ಎನ್ನುವುದಕ್ಕೆ ಮಾತ್ರ ಸೀಮಿತವಾಗಿ ಅನುಮತಿಯನ್ನು ಪಡೆದು ನಿರ್ವಹಣೆ ಮಾಡುವುದಕ್ಕೆ ಅನುಕೂಲವಾಗುವಂತಹ ವಾತಾವರಣ ನಿರ್ಮಾಣವಾದರೆ, ಹಣವನ್ನು ವಿನಿಯೋಗ ಮಾಡುವುದಕ್ಕೆ ಅವಕಾಶಗಳಿವೆ. ಹಿಂದೆ ಸ್ಮಾರಕಗಳನ್ನು ಸಂರಕ್ಷಣೆ ಮತ್ತು ನಿರ್ವಹಣೆ ಮಾಡುವ ಕೆಲಸವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ವಹಿಸುತ್ತಿತ್ತು. ಈಗ ಅದನ್ನು ಪ್ರವಾಸೋದ್ಯಮ ಇಲಾಖೆಗೆ ವರ್ಗಾಯಿಸಲಾಗಿದೆ. ಹಣದ ಕೊರತೆಗೂ ಹೆಚ್ಚಾಗಿ ನಿಯಮಗಳ ತೊಂದರೆ ಇದೆ ಎನ್ನುವ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಮುಂದಿನ ಒಂದು ತಿಂಗಳೊಳಗಾಗಿ ಮತ್ತೊಂದು ಸುತ್ತಿನ ಚರ್ಚೆಗಳು ನಡೆದು ಈ ನಿಯಮಗಳನ್ನು ಸರಳೀಕರಣ ಮಾಡಿ, ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ. ಆಗ ಖಚಿತವಾಗಿಯೂ ಮಾನ್ಯ ತೇಜಸ್ವಿನಿಗೌಡರು ಉಲ್ಲೇಖ ಮಾಡಿದಂತಹ ಕಾಮಗಾರಿಗಳಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಈ ಸಮಸ್ಯೆಗಳನ್ನು ಪರಿಹರಿಸಲಾಗುತ್ತದೆ. ಈ ರಾಜ್ಯದಲ್ಲಿರುವಂತಹ ಎಲ್ಲ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧಾರ್ಮಿಕ ಮತ್ತು ಐತಿಹಾಸಿಕ ಕೇಂದ್ರಗಳು ಪುರಾತತ್ವ ಇಲಾಖೆಯ ಮೂಲಕ ರಕ್ಷಣೆ ಮಾಡುವುದಕ್ಕೆ ಸರ್ಕಾರ ಬದ್ಧವಾಗಿರುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ.

(ಮುಂದುವರಿದಿದೆ)

(1033) 13.12.2021 12.10 ಪಿಕೆ:ಎಂಡಿ

**ಡಾ: ತೇಜಸ್ವಿನಿ ಗೌಡ**:- ಮಾನ್ಯ ಸಭಾನಾಯಕರು ಇದರಲ್ಲಿರುವ ತೊಡಕುಗಳೇನು ಎನ್ನುವ ಅಂಶಗಳನ್ನು ಸದನದ ಗಮನಕ್ಕೆ ತಂದಿದ್ದಾರೆ. ನಮ್ಮ ಸಂಸ್ಕೃತಿ ಮತ್ತು ನಮ್ಮ ಸ್ಮಾರಕಗಳ ರಕ್ಷಣೆಗೆ ಬೇಕಾದಂತಹ ಕಾನೂನುಗಳನ್ನು ಮಾಡುವುದಕ್ಕೆ ನಾವಿಲ್ಲಿದ್ದೇವೆ. ಇವತ್ತು ಕಾಶಿ, ಅಯೋಧ್ಯೆಯಲ್ಲಿ ಸ್ಮಾರಕಗಳನ್ನು ಉಳಿಸಿಕೊಳ್ಳುವಂತಹ ಕೆಲಸಗಳು ಆಗುತ್ತಿವೆ. ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳು; ಇಡೀ ದಕ್ಷಿಣ ಭಾರತ ಜಗತ್ತಿಗೆ ಅತ್ಯಂತ ಒಳ್ಳೆಯ ಸ್ಮಾರಕಗಳನ್ನು ಕೊಟ್ಟಿವೆ. ನಾವೆಲ್ಲರೂ ಪುಣ್ಯವಂತರು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ-ಮಹಾರಾಜರುಗಳು ತಮ್ಮ ಅರಮನೆಗಳನ್ನು ಸುರಕ್ಷಿತವಾಗಿ ಕಟ್ಟಲಿಲ್ಲ. ಆದರೆ ಅವರು ನಿರ್ಮಾಣ ಮಾಡಿದಂತಹ ದೇವಾಲಯಗಳು, ಕೋಟೆ-ಕೊತ್ತಲುಗಳು ಮತ್ತು ಪುಷ್ಕರಣಿಗಳು ಉಳಿದಿವೆ. ಇವುಗಳ ರಕ್ಷಣೆಗೆ ನಾವು ಕಾನೂನು ರಚನೆ ಮಾಡೋಣ. ನಮ್ಮ ಸ್ಮಾರಕಗಳ ಅಭಿವೃದ್ಧಿಗೆ, ರಕ್ಷಣೆಗೆ ಸಂಬಂಧಪಟ್ಟಂತೆ ನಮ್ಮ ಕಾನೂನುಗಳಲ್ಲಿ ಏನಾದರೂ ಅಡೆತಡೆ ಇದ್ದರೆ ಅವುಗಳನ್ನು ತಿದ್ದುಪಡಿ ಮಾಡೋಣ. ಈ ಕುರಿತು ಸದನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ನಾನು ಹೇಳುತ್ತಿರುವ ಒಟ್ಟು ಕಂಟೆಂಟನ್ನು ಮಾನ್ಯ ಸಭಾನಾಯಕರು ಅರ್ಥ ಮಾಡಿಕೊಳ್ಳಲಿಲ್ಲ ಎಂದು ಭಾವಿಸುತ್ತೇನೆ. ಇಡೀ ಸ್ಮಾರಕಗಳ ಫೋಟೋಗ್ರಫಿಗೆ ಎಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು.

ಕರ್ನಾಟಕ ರಾಜ್ಯದ ಮೂಲೆಗಳಲ್ಲಿ, ಗ್ರಾಮಗಳಲ್ಲಿರುವ ಬೆಲೆ ಕಟ್ಟಲಾಗದಂತಹ ಕಲಾತ್ಮಕ ಸ್ಮಾರಕಗಳ ಫೋಟೋಗ್ರಫಿ ಮಾಡಿ ಅವುಗಳನ್ನು ಡಾಕ್ಯುಮೆಂಟೇಷನ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು. ಅವುಗಳ ನಿರ್ವಹಣೆಗೆ ಮತ್ತು ಪುನರ್ಜೀರ್ಣೋದ್ಧಾರಕ್ಕೆ ಎಷ್ಟು ಹಣ ಬೇಕು ಎಂಬುದನ್ನು ಅಂದಾಜು ಮಾಡಬೇಕಾಗುತ್ತದೆ. 400-500 ವರ್ಷಗಳ ಹಿಂದೆ ನಿರ್ಮಾಣ ಮಾಡಿದಂತಹ ಈ ಸ್ಮಾರಕಗಳನ್ನು ನಿರ್ವಹಣೆ ಮಾಡಲು ಈಗಿಟ್ಟಿರುವ ನಿಧಿ ಸಾಕಾಗುವುದಿಲ್ಲ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನ ನೀಡುವಂತಹ ವ್ಯವಸ್ಥೆ ಆಗಬೇಕು. ಈ ನಿಧಿಯನ್ನು ಇನ್ನಷ್ಟು ಹೆಚ್ಚಿಸಬೇಕು. ಈ ಸ್ಮಾರಕಗಳನ್ನು ಅಭಿವೃದ್ಧಿ ಮಾಡಿದರೆ ಪ್ರವಾಸಿಗರು ಅಲ್ಲಿ ಹೋಗುವುದರಿಂದ ಉತ್ತಮ ರಿಟರ್ನ್ ಕೂಡ ಬರುತ್ತದೆ. ಕೆಳದಿ ಒಂದಕ್ಕೆಯೇ ಮಕ್ಕಳೂ ಸೇರಿದಂತೆ ದಿನಕ್ಕೆ 500 ಕ್ಕೂ ಹೆಚ್ಚು ಜನ ಪ್ರವಾಸಿಗರು ಬರುತ್ತಿದ್ದಾರೆ. ಹಾಗಾಗಿ ಅದರ ನಿರ್ವಹಣೆ ಪ್ರವಾಸಿಗರಿಂದ ಬರುವ ಹಣದಿಂದಲೇ ನಡೆಯುತ್ತದೆ; ಯಾರ ಮೇಲೂ ಅವಲಂಬಿಸುವ ಅವಶ್ಯಕತೆ ಇರುವುದಿಲ್ಲ. ಆ ಹಣದಿಂದಲೇ ಸ್ವಾವಲಂಬಿಯಾಗಿ ನಿರ್ವಹಣೆ ಮಾಡಬಹುದಾಗಿದೆ. ಸ್ಮಾರಕಗಳ ರಕ್ಷಣೆಗೆ ನಿಧಿ ಬೇಕಾಗಿರುವುದರಿಂದ ಸರ್ಕಾರ ಅದನ್ನು ಕೊಡಮಾಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಮೂಲ ಆಶಯ, ಪುರಾತತ್ವದ ನೆಲೆಗಳನ್ನು ರಕ್ಷಣೆ ಮಾಡಬೇಕು; ಅದಕ್ಕೆ ಬೇಕಾದಂತಹ ಅನುದಾನಗಳನ್ನು ವಿನಿಯೋಗಿಸಬೇಕು, ನಿಯಮಗಳನ್ನು ಸಡಿಲಗೊಳಿಸಬೇಕು; ಅಗತ್ಯವಿದ್ದರೆ ಈ ದಿಸೆಯಲ್ಲಿ ಕಾನೂನುಗಳನ್ನೂ ತಿದ್ದುಪಡಿ ಮಾಡಬೇಕು ಎನ್ನುವುದಾಗಿದೆ. ಅವರ ಎಲ್ಲಾ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಮುಂದಿನ ಕ್ರಮಗಳನ್ನು ಕೈಗೊಳ್ಳುತ್ತದೆ.

**<u>ಪ್ರಶ್ನೆ ಸಂಖ್ಯೆ: 61</u>**

**ಸಭಾಪತಿಯವರು**:-, ಮಾನ್ಯ ನಿರಾಣಿ ಹಣಮಂತ ರುದ್ರಪ್ಪ ಅವರ ಪರವಾಗಿ ಮಾನ್ಯ ಅರುಣ ಷಹಾಪುರರವರು ಪ್ರಶ್ನೆಯನ್ನು ಕೇಳಬೇಕಾಗಿತ್ತು. ಆದರೆ ಅವರು ಸಹ ಅನುಪಸ್ಥಿತರಾಗಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## <u>ಪ್ರಶ್ನೆ ಸಂಖ್ಯೆ: 129</u>
## (ಉತ್ತರದ ಪ್ರತಿ ಲಗತ್ತಿಸಲಾಗಿದೆ)

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಗಳೆ, ಪರ್ವ ಕಾದಂಬರಿ ಆಧಾರಿತವಾಗಿ ರಾಜ್ಯದ ಉದ್ದಕ್ಕೂ ನಾಟಕ ಪ್ರದರ್ಶನಕ್ಕೆಂದು ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಹಿಂದೆ ಮಾನ್ಯ ಸಚಿವರು, ಪರ್ವ ಕಾದಂಬರಿಯ ಆಶಯಕ್ಕೆ ಧಕ್ಕೆ ಬರದಂತೆ ಕಾದಂಬರಿಯ ಎಲ್ಲಾ ಅಂಶಗಳನ್ನು, ಕಾದಂಬರಿಕಾರರೊಂದಿಗೆ ಚರ್ಚಿಸಿ, ಕಾದಂಬರಿನಿಷ್ಠವಾಗಿ ನಾಟಕೀಯ ಅಂಶಗಳಿಗೆ ಒತ್ತು ನೀಡಿ ಸುಮಾರು ಎಂಟೂವರೆ ತಾಸುಗಳ ನಾಟಕವಾಗಿ ಪ್ರದರ್ಶನ ಮಾಡಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ.

ಸರಸ್ವತಿ ಸಮ್ಮಾನ ಪುರಸ್ಕೃತರಾದ ಒಬ್ಬ ಸಾಹಿತಿಯ ಪುಸ್ತಕವನ್ನು ನಾಟಕ ರೂಪದಲ್ಲಿ ತಂದಿರುವುದು ಸರ್ಕಾರದ ಅಧಿಕಾರದಲ್ಲಿರುವಂಥದ್ದಾಗಿದ್ದು, ಸರ್ಕಾರ ಆ ಕೆಲಸ ಮಾಡಿದೆ. ಪರ್ವ ಕಾದಂಬರಿ ಇತಿಹಾಸದ ಅಂಶಗಳನ್ನು ಒಳಗೊಂಡಂಥ ಪುಸ್ತಕವಾಗಿದೆ ಎಂದು ನಾನು ಭಾವಿಸಿದ್ದೇನೆ. ಈ ಪುಸ್ತಕದ ಹತ್ತಾರು ಕಡೆ ಬಹಳ ಪ್ರಮುಖವಾದಂತಹ ವಿಷಯಗಳು ಬರುತ್ತವೆ. ಸನಾತನ ಧರ್ಮ ಎಂದರೇನು; ನಿರಂತರವಾಗಿರುವಂತಹ ಈ ಸನಾತನ ಧರ್ಮದಲ್ಲಿ ಆಹಾರ ಪದ್ಧತಿಗಳು ಹೇಗಿತ್ತು ಎನ್ನುವುದು ಮುಖ್ಯವಾಗಿ ಬರುತ್ತದೆ. ಮನುಷ್ಯನಿಗೆ ಗಾಳಿ, ಆಹಾರ ಮತ್ತು ನೀರು ಬಹಳ ಮುಖ್ಯವಾದುದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಪ್ರಶ್ನೆಯನ್ನು ಕೇಳಿ. ಭಾಷಣ ಮಾಡಬೇಡಿ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ನಾವು ಸಮಾಜಕ್ಕೆ ಒಂದು ಮೆಸೇಜ್ ಕೊಡುವುದು ಬಹಳ ಮುಖ್ಯವಾಗುತ್ತದೆ. ಈ ಪುಸ್ತಕದ ಹಲವಾರು ಕಡೆಗಳಲ್ಲಿ ಬಂದಿರುವ ಕೆಲವು ಸಾಲುಗಳನ್ನು ಓದುತ್ತೇನೆ. ಇಲ್ಲೊಂದು ಪ್ರಸಂಗ ಬರುತ್ತದೆ. ಕಾದಂಬರಿಯ ಪುಟ ಸಂಖ್ಯೆ 401ರಲ್ಲಿ ಈ ಸಾಲುಗಳು ಬರುತ್ತವೆ.

*'ಅಡುಗೆಯವನಿಗೂ ಒಂದು ಬಹುಮಾನ ಕೊಡೋಣ' ಶಲ್ಯ ಒಪ್ಪಿಕೊಂಡ.*

*'ಎತ್ತು, ಮೇಕೆ ಎರಡರ ಮಾಂಸವನ್ನು ಮಾಡಿದರಲ್ಲ ಏನು ವಿಶೇಷ?' ಅಜಯ ಕೇಳಿದ.*

*'ವಿಶೇಷ ದಿನ ಅಂತ ಇರಬಹುದು' ಬ್ರಾಹ್ಮಣ ಊಹೆ ಮಾಡಿದ.*

*ಊಟವಾದ ಮೇಲೆ ಶಲ್ಯ ರಾಜ ಸರಬರಾಜಿನ ಪಾರುಪತ್ಯೇಗಾರರನ್ನು ಕರೆಸಿದ. ಶಿಬಿರ ವ್ಯವಸ್ಥೆ, ಅಡುಗೆ ರುಚಿ ಎಲ್ಲವನ್ನೂ ಮೆಚ್ಚಿ ಹೇಳಿದ: 'ದಾಸಿಯರಿರುವಲ್ಲಿಗೆ ಹೋಗು, ಅವರಲ್ಲಿ ನೀನು ಮೆಚ್ಚಿದವಳನ್ನು ಬಹುಮಾನವಾಗಿ ತೆಗೆದುಕೊ. ಇನ್ನು ಮುಂದೆ ಯುದ್ಧಕಾಲದಲ್ಲೂ ಊರು ಮುಟ್ಟುವವರೆಗೂ ವ್ಯವಸ್ಥೆ ಇಷ್ಟೇ ಚೆನ್ನಾಗಿರಬೇಕು. ನೀನು ಆರಿಸುವ ಸುಂದರಿ ಪೂರ್ತಿ ನಿನ್ನ ಹಕ್ಕಿಗೆ ಸೇರುತ್ತಾಳೆ'* ಎನ್ನುವ ಮಾತುಗಳು ಬರುತ್ತವೆ.

**ಸಭಾಪತಿಯವರು**:- ಪ್ರಶ್ನೆಯನ್ನು ಕೇಳಿ ಸಾಕು.

**ಶ್ರೀ ಪಿ.ಆರ್.ರಮೇಶ್**:- ಇಂತಹ ಪ್ರಸಂಗಗಳನ್ನು ಹೇಳಿ ಸಮಾಜಕ್ಕೆ ನೀವು ಉತ್ತಮವಾದ ಮೆಸೇಜ್ ಕೊಡಬಹುದು.

**ಸಭಾಪತಿಯವರು**:- ಸಾಕು ಬಿಡಿ, ನಿಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ಈಗ ಒಂದು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಟ್ಟಿದೆ. ಇನ್ನೂ ಎರಡು ಕೋಟಿ ರೂಪಾಯಿಗಳನ್ನು ಕೊಡಲಿ, ನಾವು ಬೇಡ ಎಂದು ಹೇಳುವುದಿಲ್ಲ. ಇಂತಹ ಸಂಭಾಷಣೆಗಳನ್ನು ಜನಕ್ಕೆ ತಿಳಿಸುವಂಥದ್ದು ಆಗಬೇಕು. ಆವತ್ತು ಬ್ರಾಹ್ಮಣರು ತಿನ್ನುತ್ತಿದ್ದರು ಎಂದು ಇದರಲ್ಲಿ ಹೇಳಿದ್ದಾರೆ. ಅದನ್ನು ನೀವು ಸಮಾಜಕ್ಕೂ ಹೇಳಬೇಕು. ಸನಾತನ ಧರ್ಮದಲ್ಲಿ ಇಂತಹ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ಮುಂದುವರೆಸುವಂಥದ್ದು ಬಹಳ ಮುಖ್ಯ. ಇದರ ಬಗ್ಗೆ ಸಮಾಜದಲ್ಲಿ ಬೆಳಕು ಚೆಲ್ಲುವಂತಹ ಕೆಲಸ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ. ಸುನಿಲ್ ಕುಮಾರ್**:- ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗಿದೆ. ಪರ್ವ ನಾಟಕವನ್ನು ನಿರ್ದೇಶನ ಮಾಡುತ್ತಿರುವುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಅಲ್ಲ; ಸರ್ಕಾರ ಕೂಡ ಅಲ್ಲ. ಇದನ್ನು ಮಾನ್ಯ ಪ್ರಕಾಶ್ ಬೆಳವಾಡಿಯವರು ನಿರ್ದೇಶಿಸುತ್ತಿದ್ದಾರೆ. ಅವರು ನಿರ್ದೇಶನ ಮಾಡಬೇಕೆಂದಾಗ ಅದಕ್ಕೆ ಸಂಬಂಧಪಟ್ಟಂತೆ ಯೋಜನೆ ಮಾಡಲಾಗಿ, ಅದಕ್ಕೆ ಮಾನ್ಯ ಭೈರಪ್ಪನವರಿಂದ ಒಪ್ಪಿಗೆ ತೆಗೆದುಕೊಂಡು ಮಾಡಿದ್ದಾರೆ. ಅದನ್ನು ಹೇಗೆ ನಿರ್ದೇಶನ ಮಾಡಬೇಕು ಅಥವಾ ಅದು ಹೀಗೆಯೇ ಇರಬೇಕು ಎಂದು ಸರ್ಕಾರದ ಸೂಚನೆಗಳೇನು ಇಲ್ಲ. ಅನುದಾನವನ್ನು ರಂಗಾಯಣ ಸಂಸ್ಥೆ ಕೊಟ್ಟಿದೆ. ಇದು ನಮ್ಮದೇ ಸಂಸ್ಥೆಯಾಗಿದೆ. ರಂಗಾಯಣದ ಮುಖಾಂತರ ಪ್ರದರ್ಶನಗಳು ನಡೆಯುತ್ತಿವೆ. ಅದಕ್ಕೆ ತಗಲುವ ವೆಚ್ಚಕ್ಕೆಂದು ಈಗ ರೂ. 50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕಳೆದ ನವೆಂಬರ್ ತಿಂಗಳಿನಿಂದ ಈ ನವೆಂಬರ್‌ವರೆಗೆ ರೂ. 70 ಲಕ್ಷ ಖರ್ಚಾಗಿದ್ದು, ನಾವು ರೂ. 50ಲಕ್ಷಗಳನ್ನು ಬಿಡುಗಡೆ ಮಾಡಿದ್ದೇವೆ. ಉಳಿದದ್ದನ್ನು ರಂಗಾಯಣ ಅಕಾಡೆಮಿಗೆ ಏನು ಅನುದಾನ ಬಂತೋ ಆ ದುಡ್ಡನ್ನು ಬಳಸಿಕೊಂಡಿದ್ದಾರೆ. ನಿರ್ದೇಶನ ಹೇಗಿರಬೇಕು; ಇದು ಹೀಗೆಯೇ ಇರಬೇಕು, ಹಾಗೆಯೇ ಇರಬೇಕು ಎನ್ನುವುದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಅದು ಮಾನ್ಯ ಪ್ರಕಾಶ್ ಬೆಳವಾಡಿಯವರ ನಿರ್ದೇಶನದಲ್ಲಿ ನಡೆಯುತ್ತಿರುವ ನಾಟಕವಾಗಿದೆ.

**ಶ್ರೀ ಪಿ.ಆರ್.ರಮೇಶ್**:- ಮಾನ್ಯ ಸಭಾಪತಿಗಳೆ, ಸರ್ಕಾರ ಹಣ ಕೊಡುತ್ತಿದೆ. ಹಾಗಾಗಿ ಅವರಿಗೆ ಸಲಹೆ ಕೊಡಬಹುದಾಗಿದೆ. ಇಂತಹ ಪುಸ್ತಕವನ್ನು ಶ್ರೀ ಚಂದ್ರಶೇಖರ ಕಂಬಾರರು, ಶ್ರೀ ಗಿರೀಶ್ ಕಾರ್ನಡ್, ಶ್ರೀ ಅನಂತ ಮೂರ್ತಿ ಅಥವಾ ಶ್ರೀ ಸಿದ್ದಲಿಂಗಯ್ಯನವರು ಒಂದು ವೇಳೆ ಬರೆದಿದ್ದರೆ ಅದರ ಸ್ಥಿತಿ-ಗತಿಗಳು ಏನಾಗುತ್ತಿತ್ತು? ಇಂತಹ ನಾಟಕ ಪ್ರಸಂಗಗಳನ್ನು ಸಮಾಜದ ಮುಂದೆ ತರುವುದಕ್ಕೆ ಸರ್ಕಾರ ನಿರ್ದೇಶನ ಕೊಡಿ, ಈ ಸಭೆಗೂ ಒಂದು ಒಪ್ಪಿಗೆ ಕೊಡಿ.

**ಸಭಾಪತಿಯವರು:-** ಮಾನ್ಯ ಸಚಿವರೇ ತಾವು ಈ ಕುರಿತು ಮಾನ್ಯ ಸದಸ್ಯರ ಬಳಿ ಮಾತನಾಡಿ ಅವರ ಅಭಿಪ್ರಾಯವನ್ನು ನಿರ್ದೇಶಕರ ಗಮನಕ್ಕೆ ತರುವ ಕೆಲಸ ಮಾಡಿ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ನಿರ್ದೇಶಕರ ಗಮನಕ್ಕೆ ತರುವ ಕೆಲಸ ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## ಪ್ರಶ್ನೆ ಸಂಖ್ಯೆ: 96
## (ಉತ್ತರ ಲಗತ್ತಿಸಲಾಗಿದೆ

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೋ ಅದರ ಪ್ರಕಾರ ಈ ಯೋಜನೆಗಳು ಸರ್ಕಾರದ ನಿಯಂತ್ರಣದಲ್ಲಿಲ್ಲ ಎನ್ನುವುದು ಗೊತ್ತಾಗುತ್ತದೆ. ಈ ಯೋಜನೆಗಳನ್ನು ಟೆಂಡರ್ ಮೂಲಕ ಮಾಡಲಾಗಿದೆಯೋ, ಎಂಟ್ರುಸ್ಟ್ ಮಾಡಲಾಗಿದೆಯೋ ಅಥವಾ ಇಲಾಖೆಯಿಂದಲೇ ಮಾಡುತ್ತಿದ್ದೀರಾ ಎನ್ನುವುದನ್ನು ತಿಳಿಸಬೇಕು.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಗಳೆ, 33 ಕೆ.ವಿ. ಸ್ಟೇಷನ್‌ಗಳನ್ನೇನು ಕೈಗೆತ್ತಿಕೊಳ್ಳುತ್ತಿದ್ದೇವೆಯೋ ಅವು ಟೆಂಡರ್ ಮೂಲಕ ನಡೆಯುವಂಥದ್ದಾಗಿದೆ. ಮಾನ್ಯ ಸದಸ್ಯರು ಹೇಳಿರುವಂತಹ ಭಾವನೆಗಳಿಗೆ ನನ್ನದು ಸಹಮತ ಇದೆ. ಅದೇನೆಂದರೆ, 2019-20ರಲ್ಲಿ ಆಗಬೇಕಾದ ಕೆಲಸ ಕಾರ್ಯಗಳನ್ನು ಸಹ ಮುಗಿಸುವುದಕ್ಕೆ ಆಗಲಿಲ್ಲ. ಇದಕ್ಕೆ ಭೂಸ್ವಾಧೀನ ಪ್ರಕ್ರಿಯೆಯ ಸಮಸ್ಯೆ ಇತ್ತು. ಅರಣ್ಯ ಇಲಾಖೆಯ ಸಮಸ್ಯೆಗಳು ಇತ್ತು. ಆ ವಿಷಯದಲ್ಲಿ ಒಂದೊಂದೇ ಸಮಸ್ಯೆಗಳ ನಿವಾರಣೆ ಮಾಡಿಕೊಳ್ಳುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ಕೆಲವೊಂದನ್ನು ಅಂದರೆ, ಕೋಟ ಸ್ಟೇಷನ್‌ನ ಕಾರ್ಯವನ್ನು ಈ ವರ್ಷದ ಡಿಸೆಂಬರ್‌ನಲ್ಲಿ ಮುಗಿಸುತ್ತೇವೆ. ಹೆಬ್ರಿಗೆ ಸಂಬಂಧಪಟ್ಟಂತೆ ಮುಂದಿನ ವರ್ಷ ಮಾರ್ಚ್ ತಿಂಗಳಲ್ಲಿ ಅವಾರ್ಡ್ ಮಾಡಬೇಕು ಎಂದು ಯೋಚನೆ ಮಾಡಿದ್ದೇವೆ. ಭೂಸ್ವಾಧೀನ ಪ್ರಕ್ರಿಯೆಗಳು ತಡ ಆಗಿದ್ದರಿಂದ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಕೆಲವು ಸಮಸ್ಯೆಗಳು ಇದ್ದುದರಿಂದ ಇದನ್ನು ಕೈಗೆತ್ತಿಕೊಳ್ಳುವುದಕ್ಕೆ ತಡವಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1034) 13-12-2021 12.20 DS-AK

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಟೆಂಡರ್ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಟೆಂಡರ್ ಮಾಡುವ ಉದ್ದೇಶ ಏನಿದೆ, ಮಾನ್ಯ ಸಚಿವರ ನಿಯಂತ್ರಣದಲ್ಲಿ ಇಲ್ಲದಿರುವಂತಹ ಕಾಮಗಾರಿಗಳನ್ನು ಟೆಂಡರ್ ಯಾವ ಆಧಾರದ ಮೇಲೆ ಮಾಡುತ್ತಾರೆ? ಇಂತಿಷ್ಟು ಸಮಯದಲ್ಲಿ ಕಾಮಗಾರಿಗಳನ್ನು ಮುಗಿಸುತ್ತೇವೆಂದು ಹೇಳುತ್ತಾರೆ. ಆದರೆ ಭೂಸ್ವಾಧೀನ ಆಗಿಲ್ಲ, ಅರಣ್ಯ ಇಲಾಖೆಯ ಅನುಮತಿ ಸಿಕ್ಕಿಲ್ಲ ಎಂದ ಮೇಲೆ ಟೆಂಡರ್‌ನ್ನು ಏಕೆ ಕರೆಯುತ್ತಾರೆ?

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಯಾವ ಭೂಸ್ವಾಧೀನ ಪ್ರಕ್ರಿಯೆಗಳಿಗೆ ತಡವಾಗಿದೆ ಅದಕ್ಕೆ ನಾವು ಟೆಂಡರ್ ಮಾಡಿಲ್ಲ. ಈಗ ಕೊಲ್ಲೂರು ವಿದ್ಯುತ್ ಉಪಕೇಂದ್ರಕ್ಕೆ ಸಂಬಂಧಪಟ್ಟ ಹಾಗೆ ನಾವು ಟೆಂಡರ್ ಪ್ರಕ್ರಿಯೆಯನ್ನು ಮಾಡಿ ಶೇಕಡ ೮೦ ರಷ್ಟು ಕೆಲಸ ಕಾರ್ಯಗಳು ಮುಗಿದಿವೆ. ಅದರಲ್ಲಿ ಒಂದು reach ಮಾತ್ರ ಲೈನ್ ಎಳೆಯುವುದಕ್ಕೆ ನಮಗೆ ಸಮಸ್ಯೆಯಾಗಿದೆ. ಈಗ ಅರಣ್ಯ ಇಲಾಖೆಯ ಸಮಸ್ಯೆ ಇದೆ. ಅದರ ಬಗ್ಗೆ ನಾವು ಕೇಂದ್ರಕ್ಕೂ ಪತ್ರ ಬರೆದಿದ್ದೇವೆ. ನಾಳಿದ್ದು Eco-Sensitive Zone meeting ಕರೆಯಬೇಕೆಂದು ಆಗಿದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ತರಲಾಗಿದೆ. ಆ ಸಭೆಯಲ್ಲಿ ಈ ವಿಷಯವನ್ನು ಇಟ್ಟು ಕೊಲ್ಲೂರು ವಿದ್ಯುತ್ ಉಪಕೇಂದ್ರಕ್ಕೆ ಸಂಬಂಧಪಟ್ಟಂಥ ಒಂದು reach ಲೈನ್ ಅನ್ನು ಎಳೆಯುವುದಕ್ಕೆ ನಾವು ಬೇಕಾದ ಅನುಮತಿಯನ್ನು ತೆಗೆದುಕೊಳ್ಳುತ್ತೇವೆ. ಉಳಿದ ಪ್ರಕ್ರಿಯೆಗಳಿಗೆ ಟೆಂಡರ್ ಆಗಿಲ್ಲ. ಭೂಸ್ವಾಧೀನ ಪ್ರಕ್ರಿಯೆಗಳು ತಡವಾಗುತ್ತಿರುವುದರಿಂದ ನಮಗೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಸ್ವಲ್ಪ ತಡವಾಗಿದೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಕೊಲ್ಲೂರು ವಿದ್ಯುತ್ ಉಪಕೇಂದ್ರಕ್ಕೆ ಸಂಬಂಧಪಟ್ಟ ಹಾಗೆ ಟೆಂಡರ್ ಮಾಡಿ ಐದು ವರ್ಷವಾದರೂ ಕೂಡ ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಇನ್ನು ಯಾವಾಗ ಕಾಮಗಾರಿ ಪೂರ್ಣಗೊಳ್ಳುತ್ತದೆ ಎನ್ನುವುದು ಮಾನ್ಯ ಸಚಿವರಿಗೆ ಅನಿಶ್ಚಿತತೆ ಇದೆ. ಇದರಲ್ಲಿ user agency ಯಾವುದು? ಮಾನ್ಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಚಿವರು ಅರಣ್ಯ ಇಲಾಖೆಗೆ ಬರೆಯಬಹುದು. ಟೆಂಡರ್‌ದಾರರಿಗೂ ಇದಕ್ಕೂ ಸಂಬಂಧವಿಲ್ಲ. ಸರ್ಕಾರವೇ ಅನುಮತಿ ಕೊಡುವುದಕ್ಕೆ ಐದು ವರ್ಷವಾದರೆ ಇದರಲ್ಲಿ ಏನು ಸಾಧನೆ ಮಾಡಿದ ಹಾಗೆ ಆಗುತ್ತದೆ? ಮಾನ್ಯ ಸಚಿವರು Eco-Sensitive Zone ಎಂದು ಹೇಳುತ್ತಿದ್ದಾರೆ. Eco-Sensitive Zone ನಲ್ಲಿ ಮಾಡುವುದಕ್ಕಾಗುವುದಿಲ್ಲ ಎನ್ನುವುದು ಇದೆ. ಹಾಗಾದರೆ ಹೇಗೆ ಮಾಡುತ್ತಾರೆ? ಇದು ಮಾನ್ಯ ಸಚಿವರ ಜಿಲ್ಲೆಯಾಗಿದೆ. ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಕಾಮಗಾರಿ ಯಾವುದು ಪೂರ್ಣಗೊಂಡಿರುವುದಿಲ್ಲ.

**ಶ್ರೀ ವಿ.ಸುನಿಲ್ ಕುಮಾರ್:-** ಪೂರ್ಣ ಆಗದಿದ್ದರೂ ಪೂರ್ಣ ಆಗಿದೆ ಎಂದು ಉತ್ತರ ಕೊಡುವುದಕ್ಕಾಗುವುದಿಲ್ಲ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ನಾನು ಕೇಳಿರುವ ಪ್ರಶ್ನೆಗಳಲ್ಲಿ ಮೂರು ವರ್ಷಗಳಲ್ಲಿ ಯಾವುದೇ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಎರಡನೆಯದು, ಕೊಲ್ಲೂರು ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾಮಗಾರಿಯನ್ನು ಐದು ವರ್ಷವಾದರೂ ಪೂರ್ಣಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ಇನ್ನು ಅದು ಅನಿಶ್ಚಿತೆಯಲ್ಲಿದೆ. ಆದ್ದರಿಂದ ಆ ಕಾಮಗಾರಿಯನ್ನು ನಿಖರವಾಗಿ ಯಾವಾಗ ಪೂರ್ಣಗೊಳಿಸುತ್ತಾರೆ? ನಾನು ಅಲ್ಲಿ ಕೇಳುತ್ತೇನೆ, ಇಲ್ಲಿ ಕೇಳುತ್ತೇನೆ ಎಂಬುದು ಉತ್ತರವಲ್ಲ. ಅರಣ್ಯ ಇಲಾಖೆಯವರ ಹತ್ತಿರ ಕೇಳಿ ಉತ್ತರ ತೆಗೆದುಕೊಂಡು ಬರಬೇಕಾಗಿತ್ತು.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ೩೩ ಕೆವಿ ಕೊಲ್ಲೂರು ವಿದ್ಯುತ್ ಉಪಕೇಂದ್ರ ನಿರ್ಮಾಣ ಕಾಮಗಾರಿಗೆ ೨೦೧೬ ರಲ್ಲಿ ಕಾರ್ಯಾದೇಶ ನೀಡಿದೆ. ಕೊಲ್ಲೂರು ವಿದ್ಯುತ್ ಉಪಕೇಂದ್ರದ ಕಾಮಗಾರಿಯ ಕೆಲಸವನ್ನು ನಾವು ಬಹುತೇಕವಾಗಿ ಮುಗಿಸಿದ್ದೇವೆ. ನಾನು ಈಗಾಗಲೇ ಹೇಳಿದಂತೆ ಲೈನ್ ಎಳೆಯುವುದರಲ್ಲಿ ಸ್ವಲ್ಪ ಅರಣ್ಯ ಇಲಾಖೆಯಲ್ಲಿ ಸಮಸ್ಯೆಯಾಗಿದೆ. ಅವತ್ತಿನಿಂದ ಪತ್ರ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವ್ಯವಹಾರಗಳನ್ನು ಅರಣ್ಯ ಇಲಾಖೆಯ ಜೊತೆಯಲ್ಲಿ ನಾವು ಮಾಡುತ್ತಿದ್ದೇವೆ. ನಾನು ಮೊನ್ನೆ ನಡೆದಂತಹ ಉನ್ನತ ಮಟ್ಟದ ಅಧಿಕಾರಿಗಳ ಸಭೆಯಲ್ಲೂ ಹೇಳಿದ್ದೇನೆ. ಕೊಲ್ಲೂರು ಸೇರಿಸಿಕೊಂಡಂತೆ ಇಡೀ ರಾಜ್ಯದಲ್ಲಿ ನಮ್ಮ ಇಂಧನ ಇಲಾಖೆಯ ಅಭಿವೃದ್ಧಿಯ ದೃಷ್ಟಿಯಿಂದ, ಅರಣ್ಯ ಇಲಾಖೆಯಿಂದ ಎಲ್ಲೆಲ್ಲಿ ಸಮಸ್ಯೆಗಳಾಗಿದೆಯೋ ಆ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಸಭೆಯನ್ನು ನಡೆಸಿ ಅದಕ್ಕೆ ಬೇಕಾಗಿರುವಂತಹ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರ ಜೊತೆಯಲ್ಲೂ ನಾನು ಮಾತನಾಡಿದ್ದೇನೆ, ನಮ್ಮ ಹಿರಿಯ ಅಧಿಕಾರಿಗಳು ಯೋಚನೆ ಮಾಡಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಶೀಘ್ರವಾಗಿ ಸಭೆಯನ್ನು ನಡೆಸಿ ನಮ್ಮ ಇಂಧನ ಇಲಾಖೆಯ ಅಭಿವೃದ್ಧಿ ಚಟುವಟಿಕೆಗಳಿಗೆ ಅರಣ್ಯ ಇಲಾಖೆಯಿಂದ ಯಾವ್ಯಾವುದಕ್ಕೆ ಒಪ್ಪಿಗೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೋ ಅವೆಲ್ಲದರ ಬಗ್ಗೆ ರಾಜ್ಯದಲ್ಲಿ ಸಭೆಯನ್ನು ನಡೆಸಿ ಒಪ್ಪಿಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಹೇಳಿರುವ ಸಂಗತಿಗಳು ಸರಿಯಾಗಿದೆ. ಈ ರೀತಿಯ ಸಮಸ್ಯೆಗಳು ಬಂದಾಗ ನಮ್ಮ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯದ್ದು ಬಹಳ ಸಮಸ್ಯೆ ಇದೆ. ಕೊಲ್ಲೂರಿಗೆ ಸಂಬಂಧಪಟ್ಟ ಹಾಗೆ ೩-೪ ಪತ್ರ ವ್ಯವಹಾರಗಳನ್ನು ಅರಣ್ಯ ಇಲಾಖೆಯ ಜೊತೆಯಲ್ಲಿ ಮಾಡಿದ್ದೇವೆ. ಮೊನ್ನೆ ನವೆಂಬರ್ ೧೧ನೇ ತಾರೀಖಿನಂದು ಮತ್ತೊಂದು ಪತ್ರವನ್ನು ಬರೆದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗಬೇಕು. ಆ ಸಮಿತಿ ರಚನೆ ಪ್ರಕ್ರಿಯೆಯಲ್ಲಿದೆ. ಅದಾದ ತಕ್ಷಣವೇ ನಾವು ಕೊಲ್ಲೂರಿನ ಪ್ರಕ್ರಿಯೆಗಳನ್ನು ಮುಗಿಸಿ ಕೊಡುತ್ತೇವೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ರೀತಿಯ ಉತ್ತರ ಕೊಡುವುದಕ್ಕೆ ನಾವು ಪ್ರಶ್ನೆ ಕೇಳುವುದಲ್ಲ. ಮಾನ್ಯ ಸಚಿವರ ಪಕ್ಕದಲ್ಲಿ ಮಂತ್ರಿಗಳಿದ್ದಾರೆ. ಮಾನ್ಯ ಸಚಿವರು ಕೆಡಿಪಿ ಸಭೆಯನ್ನು ಮಾಡಿ ಹೇಳುವುದಕ್ಕಿಂತ ಒಂದೆರಡು ತಿಂಗಳೋ, ಮೂರು ತಿಂಗಳೋ ಅಥವಾ ಆರು ತಿಂಗಳಲ್ಲಿ ಮಾಡುತ್ತಾರೆಯೋ ಎಂಬುದನ್ನು ಹೇಳಲಿ. ಅನಿಶ್ಚಿತೆಯಾಗಿ ಐದು ವರ್ಷವಾಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನೇ ಈ ಇಲಾಖೆಯ ಸಚಿವನಾಗಿದ್ದೇನೆ. ಇದು ನಮ್ಮ ಜಿಲ್ಲೆಯ ಸಮಸ್ಯೆಯಾಗಿದೆ. ನನಗೆ ಆ ಬದ್ಧತೆ ಇದೆ. ನಾನು ಖಂಡಿತ ಮಾಡುತ್ತೇನೆ.

**ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ:-** ಮಾನ್ಯ ಸಚಿವರೇ, ನೀವು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯ ಸಹಾಯವನ್ನು ತೆಗೆದುಕೊಳ್ಳಿ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರ ಸಹಾಯ ತೆಗೆದುಕೊಳ್ಳುತ್ತೇನೆ. ಆ ಬದ್ಧತೆ ನನಗೆ ಇದ್ದೇ ಇದೆ. ಈಗಾಗಲೇ ಅದಕ್ಕೆ ಸಂಬಂಧಪಟ್ಟಂತೆ ಎಲ್ಲಾ ಪ್ರಕ್ರಿಯೆಗಳನ್ನು ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಬೇಕು. ಇವತ್ತು ನಾನು ಅವರ ಹತ್ತಿರ ಮಾತನಾಡುತ್ತೇನೆ. ಅವರ ಹತ್ತಿರ ಮಾತನಾಡಿದ ತಕ್ಷಣ ಅದನ್ನು ಪೂರ್ಣಗೊಳಿಸಿ ಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ:06**

(ಮಾನ್ಯ ಎಂ.ಪಿ ಸುನೀಲ್ ಸುಬ್ರಮಣಿಯವರು ಸದನದಲ್ಲಿ ಉಪಸ್ಥಿತರಿರಲಿಲ್ಲ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಕೇಳುವ ಪ್ರಶ್ನೆಗೆ ಸಂಬಂಧಪಟ್ಟ ಸಚಿವರಿಲ್ಲ.

**ಸಭಾಪತಿಯವರು:-** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಮಹತ್ವದ ವಿಷಯ. ನಾವು ಐದು ಜನ ಪ್ರಶ್ನೆಯನ್ನು ಕೇಳಿದ್ದೇವೆ.

**ಸಭಾಪತಿಯವರು:-** ಈಗ ಪ್ರಶ್ನೆ ಕೇಳಿ, ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುವುದಕ್ಕಾಗುವುದಿಲ್ಲ. ಈಗಾಗಲೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಳಾಗಿ ಹೋಗಿದೆ. ಈ ಪ್ರಶ್ನೆಗೆ ಅವರು ಉತ್ತರ ಕೊಡುವುದಕ್ಕಾಗುವುದಿಲ್ಲ.

**ಸಭಾಪತಿಯವರು:-** ನಿಯಮದ ಪ್ರಕಾರ ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರ ಕೊಡುತ್ತಾರೆ. ಈಗ ಪ್ರಶ್ನೆಯನ್ನು ಕೇಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಚುಕ್ಕೆ ಪ್ರಶ್ನೆ ಸಂಖ್ಯೆ: ೧೩೬+೬೬+೧೪೦+೦೮+೧೧೭**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಶ್ರೀ ಶಶಿಲ್ ಜಿ.ನಮೋಶಿ, ಶ್ರೀ ಎಸ್.ವ್ಹಿ.ಸಂಕನೂರ, ಶ್ರೀ ಪುಟ್ಟಣ್ಣ, ಶ್ರೀ ಅರುಣ ಶಹಾಪುರ ಇವರೆಲ್ಲರ ಪರವಾಗಿ ನಾನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ಪ್ರಶ್ನೆ ಕೇಳಬಯಸುತ್ತೇನೆ. ಈಗಾಗಲೇ ಮಾನ್ಯ ಪುಟ್ಟಣ್ಣನವರು ಸೂಕ್ಷ್ಮವಾಗಿ ಹೇಳಿದ್ದಾರೆ. ಅನುದಾನಿತ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜುಗಳ ಪರಿಸ್ಥಿತಿ ಅತ್ಯಂತ ದಯನೀಯ ಪರಿಸ್ಥಿತಿಗೆ ಹೊರಟು ಹೋಗಿದೆ. ಅದರ ಆಳವಾದ ಅನುಭವ ತಮಗೂ ಇದೆ. ದಿನಾಂಕ:೩೧.೧೨.೨೦೧೫ ರವರೆಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸರ್ಕಾರ ಅನುಮತಿಯನ್ನು ನೀಡಿತ್ತು. ಸುತ್ತೋಲೆ ಸಂಖ್ಯೆ:ಆಇ ೧೫೭ ವೆಚ್ಚ-೮ ೨೦೨೦ ದಿನಾಂಕ:೧೦.೦೬.೨೦೨೦ ರಲ್ಲಿ ಆದೇಶ ನೀಡಿತ್ತು. ಕೊರೋನಾ ಬಂದಂತಹ ಕಾರಣದಿಂದಾಗಿ ಆ ಆದೇಶವನ್ನು ತಡೆಹಿಡಿಯಲಾಗಿತ್ತು. ಮತ್ತೆ ಕೊರೋನಾ ಕಡಿಮೆಯಾದ ಮೇಲೆ ಅನುಮತಿ ನೀಡುತ್ತೇವೆಂದು ಭಾಗಶಃ ಬೆರಳಣಿಕೆಯಷ್ಟು ಹುದ್ದೆಗಳಿಗೆ ಮಾತ್ರ ಅನುಮತಿಯನ್ನು ನೀಡಿದ್ದಾರೆ. ಈಗ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕೇವಲ ೨೫೦ ಹುದ್ದೆಗಳಿಗೆ, ಪದವಿ ಪೂರ್ವ ಕಾಲೇಜುಗಳಿಗೆ ಕೇವಲ ೧೭೩ ಹುದ್ದೆಗಳಿಗೆ ಅನುಮತಿ ನೀಡಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇಲ್ಲಿಯವರೆಗೆ ಪದವಿ ಪೂರ್ವ ಕಾಲೇಜುಗಳಿಗೆ ಹುದ್ದೆಗಳನ್ನು ಅನುಮೋದನೆ ಮಾಡಿರುವುದು ೪೪ ಹುದ್ದೆಗಳಿಗೆ ಮಾತ್ರ. ೧೭೩ ಹುದ್ದೆಗಳಲ್ಲ. ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಪರಿಸ್ಥಿತಿ ಎಲ್ಲಿಯವರೆಗೆ ಹೋಗಿದೆ ಎಂದರೆ ಈ ರಾಜ್ಯದಲ್ಲಿ ಒಟ್ಟು ಪ್ರಾಥಮಿಕ ಶಾಲೆಗಳು ೨೯೮೪ ಇವೆ. ಕೇವಲ ೧೭೩ ಹುದ್ದೆಗಳಿಗೆ ಅನುಮತಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರನ್ನು ಹಾಕುತ್ತೇವೆಂದು ಹೇಳುತ್ತಾರೆ. ಆದರೆ ಈಗ ಹೆಚ್ಚುವರಿ ಶಿಕ್ಷಕರು ಇಲ್ಲ. ಸಾವಿರಾರು ಹುದ್ದೆಗಳು ದಿನಾಂಕ:೩೧.೧೨.೨೦೧೫ ಕ್ಕಿಂತ ಮುಂಚೆ ಖಾಲಿ ಇವೆ. ಆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಹುದ್ದೆಗಳಿಗೆ ಅನುಮತಿ ನೀಡುವುದಕ್ಕೆ ಏನು ಮಾಡುತ್ತಾರೆ? ಮಿತವ್ಯಯ ಆದೇಶ ಜಾರಿ ಮಾಡಿದ್ದು ಸದರಿ ಆದೇಶವು ಪ್ರಸ್ತುತವು ಜಾರಿಯಲ್ಲಿರುತ್ತದೆ ಎಂದು ಮಾನ್ಯ ಸಚಿವರು ಉತ್ತರದಲ್ಲಿ ಕೊಟ್ಟಿದ್ದಾರೆ. ಈಗಾಗಲೇ ಎರಡು ತಿಂಗಳು ಕಳೆದರೆ ೨೦೧೫ ರ ಆನಂತರ ೭ ವರ್ಷಗಳ ಅವಧಿಗೆ ಏನು ಮಾಡಿದ್ದಾರೆ ಎಂಬುದನ್ನು ನಾವು ಕೇಳುತ್ತಿದ್ದೇವೆ. ೨೦೧೫ ರ ಹಿಂದಿನ ಹುದ್ದೆಗಳನ್ನೇ ಪೂರ್ಣವಾಗಿ ಭರ್ತಿ ಮಾಡಿಕೊಳ್ಳುವುದಕ್ಕೆ ಪ್ರಾಥಮಿಕ ಶಾಲೆಗಳಿಗೆ ಇನ್ನು ಅನುಮತಿಯನ್ನು ನೀಡಿಲ್ಲ. ಅದಕ್ಕೆ ಏನು ಮಾಡುತ್ತಾರೆ? ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಪೂರ್ಣ ಹುದ್ದೆಗಳಿಗೆ ಅನುಮತಿಯನ್ನು ನೀಡಿಲ್ಲ, ಬೆರಳಣಿಕೆಯಷ್ಟು ಹುದ್ದೆಗಳಿಗೆ ಮಾತ್ರ ಅನುಮತಿಯನ್ನು ನೀಡಿದ್ದಾರೆ. ಜೊತೆಗೆ ಏನಾಗಿದೆ ಎಂದರೆ, ನೇಮಕಾತಿ ಮಾಡಿಕೊಳ್ಳುವುದಕ್ಕೆ ಪ್ರಸ್ತಾವನೆ ಕಳುಹಿಸಿದರೆ ಇಲ್ಲದ ಸಬೂಬು ಹೇಳಿ ತಿರಸ್ಕಾರ ಮಾಡುತ್ತಿದ್ದಾರೆ. ಇನ್ನು ಮೀರಿ ೨೦೧೫ ರ ಆನಂತರ ೨೦೨೨ ರವರೆಗೆ ಇರತಕ್ಕಂಥ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಏನು ಮಾಡುತ್ತಾರೆ? ಹೊಸ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಇರತಕ್ಕಂಥ ಬಜೆಟ್ ಬಹಳ ಕಡಿಮೆ ಇದೆ. ಯಾರು ಸೇವೆಯಲ್ಲಿದ್ದಾರೆ ಅವರ ಪಡೆಯುವ ಸಂಬಳ ಎಷ್ಟು ಇರುತ್ತದೆ? ಆದ್ದರಿಂದ ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆಯುವಂತಹ ಕೆಲಸ ಯಾವಾಗ ಮಾಡುತ್ತಾರೆ? ಮಿತವ್ಯಯ ಆದೇಶವನ್ನು ಯಾವಾಗ ಪೂರ್ಣವಾಗಿ ವಾಪಸ್ ತೆಗೆದುಕೊಳ್ಳುತ್ತಾರೆ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ದಿನಾಂಕ:೩೧.೧೨.೨೦೧೫ ರವರೆಗೆ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಏನು ಅನುಮತಿಯನ್ನು ಕೊಟ್ಟಿದ್ದಾರೆ ಅದು ನಮಗೆ ಗೊತ್ತಿರುವ ಹಾಗೆ ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಟ್ಟಿದ್ದಾರೆ. ನಮಗೆ ಕಂಟಕರಾಗಿರುವವರೇ ಈ ಆಯುಕ್ತರುಗಳು. ಪಿ.ಯು. ಬೋರ್ಡ್‌ನಲ್ಲಿ ನಿರ್ದೇಶಕರು, ಇಲ್ಲಿ ಸಿಪಿಐ. ಇವರಿಬ್ಬರು ಬಂದು ಸೇರಿಕೊಂಡು ಶಿಕ್ಷಣ ಇಲಾಖೆಯನ್ನು ಹಾಳು ಮಾಡುತ್ತಿದ್ದಾರೆ. ಯಾವ ರೀತಿ ಹಾಳು ಮಾಡುತಿದ್ದಾರೆಂದರೆ, ತಮ್ಮ ಗಮನದಲ್ಲೂ ಇದೆ, ಸ್ವಾತಂತ್ರ್ಯ ಬಂದಾಗಿನಿಂದಲೂ ಇಲ್ಲದಿರುವುದು ಇವರಿಬ್ಬರು ನಿರ್ದೇಶಕರು ಬಂದ ಮೇಲೆ ಬಂದಿದೆಯೇ? ಈ ಸಚಿವರಿಗೆ ಅವರನ್ನು ಇಟ್ಟುಕೊಂಡು

**"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

---

ಕೆಲಸ ಮಾಡಿಸುವುದಕ್ಕೆ ಆಗುತ್ತದೆಯೋ ಅಥವಾ ಆಗುವುದಿಲ್ಲವೋ? ಎಷ್ಟು ದಿವಸ ಈ ರೀತಿಯಾದಂತಹ ಅನ್ಯಾಯ ನಡೆಯಬೇಕು? ಸರ್ಕಾರ ಏನಾದರೂ ಎಲ್ಲಾ ಖಾಸಗಿ ಅನುದಾನಿತ ಶಾಲೆಗಳನ್ನು ಮುಚ್ಚಿ ಇವರೇ ಶಾಲೆಗಳನ್ನು ನಡೆಸುವಂತಹ ಆಲೋಚನೆ ಏನಾದರೂ ಮಾಡಿದ್ದಾರೆಯೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು.

(ಮುಂದು)

**1035/13-12-2021/ 12-30/bkp-ak**

## ಶ್ರೀ ಪುಟ್ಟಣ್ಣ(ಮುಂದು)

ಏಕೆಂದರೆ, ಆಯುಕ್ತರುಗಳು ಹಾಕುವಂತಹ query ಗಳು ಏನಿವೆ, ಇವುಗಳಿಂದ ವಿಳಂಬವಾಗುತ್ತಿದೆ. ಸರ್ಕಾರ ಈ ಸಂಬಂಧ ಅನುಮೋದನೆ ಮಾಡಿ ಆದೇಶ ಮಾಡಿರುತ್ತದೆ. ಅದಕ್ಕೆ ಮತ್ತೆ ನಿರ್ದೇಶಕರು query ಹಾಕುತ್ತಾರೆ. ಪಿ.ಯು. ಮಂಡಳಿಯ ನಿರ್ದೇಶಕರಿಂದಲೇ ಕಡತ ಹೋಗಿರುತ್ತದೆ. ಅದಕ್ಕೆ ಸರ್ಕಾರದ ಆದೇಶವಾಗಿರುತ್ತದೆ. ಮತ್ತೆ ಅವರಿಂದ query ಹಾಕಲಾಗುತ್ತದೆ. ಆಗ ಆ ಕಡತವನ್ನು ಅಲ್ಲಿಯೇ ಕೆಳಗಡೆ ಇಟ್ಟುಕೊಳ್ಳುತ್ತಾರೆ. ಸರ್ಕಾರ ಮತ್ತು ಆರ್ಥಿಕ ಇಲಾಖೆ ಆದೇಶವಾಗಿರುತ್ತದೆ. ಸಿ.ಪಿ.ಐ ಇವರು ಪ್ರತಿಯೊಂದಕ್ಕೂ ಕೊಕ್ಕೆ ಹಾಕುತ್ತಾರೆ. ಒಂದು ಕೆಲಸ ಮಾಡಲಿಕ್ಕೂ ಅವರು ಬಿಡುತ್ತಿಲ್ಲ. ಕೋವಿಡ್-19 ಬಂದಿರುವ ಇಂತಹ ಸನ್ನಿವೇಶದಲ್ಲಿ ಮಕ್ಕಳಿಗೆ ಪಾಠ ಮಾಡುವವರು ಯಾರು? ಈ ವಿಚಾರ ಸರ್ಕಾರಕ್ಕೆ ಗೊತ್ತಿಲ್ಲವೇ? ಗೊತ್ತಿದ್ದರೂ ಸಹ ಸರ್ಕಾರ ಏಕೆ ಸುಮ್ಮನೆ ಇದೆ? ಸರ್ಕಾರಕ್ಕೆ ಇವರನ್ನು ನಿಯಂತ್ರಣ ಮಾಡಲಿಕ್ಕೆ ಅಗುತ್ತಿಲ್ಲವೇ? ಆದ್ದರಿಂದ, ಇದಕ್ಕೆ ಬಹಳ ಸ್ಪಷ್ಟವಾಗಿ ಉತ್ತರ ಬೇಕು. ಇವತ್ತು ಏನು ಕಡತಗಳು ಬಂದಿವೆ. ಏನು ಹುದ್ದೆಗಳನ್ನು ತುಂಬಲಿಕ್ಕೆ ಆರ್ಥಿಕ ಇಲಾಖೆ ಅವಕಾಶವನ್ನು ಕೊಟ್ಟಿದೆ, ಆ ಎಲ್ಲಾ ಹುದ್ದೆಗಳನ್ನು ಈ ಕೂಡಲೇ ತುಂಬಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಈ ಬಗ್ಗೆ ಸಚಿವರು ಉತ್ತರ ಹೇಳಿದ ನಂತರ ಉಳಿದವರು ಮಾತನಾಡಬಹುದಾಗಿದೆ.

**ಡಾ||ಸಿ.ಎನ್.ಅಶ್ವಥ ನಾರಾಯಣ(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು)(ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಈಗ ಏನು 2015ರವರೆಗೂ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಈಗಾಗಲೇ ಅನುಮತಿ ಕೊಡುವಂತಹದ್ದು ಆಗಿದೆ. ಅನುಮತಿ ಕೊಟ್ಟಿರುವುದರಲ್ಲಿ ಕೆಲವರು ಮಾತ್ರ ಭರ್ತಿ ಮಾಡಿಕೊಳ್ಳುವಂತಹ ಕೆಲಸ ಅಗಿದೆ. ಕೆಲವು ಸಂಖ್ಯೆಯಲ್ಲಿ ಭರ್ತಿ ಮಾಡಿಕೊಂಡಿದ್ದಾರೆ. ಭರ್ತಿ ಮಾಡಿಕೊಳ್ಳಲಿಕ್ಕೆ ಅವರಿಗೆ ಅವಕಾಶವನ್ನು ಕೊಟ್ಟಿದ್ದೇವೆ. ಎಲ್ಲೋ ಒಂದು ಕಡೆ ಕೆಲವು ಸಂಸ್ಥೆಗಳು ಕೆಲವೊಂದು procedure ಗಳನ್ನು ಅನುಸರಿಸದೇ ಇರುವ ಕಾರಣ ಮತ್ತು ಯಾವ ರೀತಿಯಲ್ಲಿ ಹುದ್ದೆಗಳಿಗೆ ಜಾಹೀರಾತು ಕೊಡಬೇಕಾಗಿತ್ತೋ ಆ ರೀತಿಯಲ್ಲಿ ಕೊಡಲಿಕ್ಕೆ ಆಗದ ಕಾರಣ ಒಂದು ಸಣ್ಣ ಸಮಸ್ಯೆ ಉದ್ಭವವಾಗಿರುವುದರಿಂದ, ಈ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆಹರಿಸಬೇಕೆಂದು ನೋಡುತ್ತೇವೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು ತಮ್ಮ ಉನ್ನತ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಿರುವುದನ್ನು ಮಾಡಿಕೊಟ್ಟಿದ್ದಾರೆ. ಆದರೆ, ನಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಸಮಸ್ಯೆಯಾಗಿದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ ಇಲ್ಲದ ಸಮಸ್ಯೆ ಇಲ್ಲಿಗೆ ಹೇಗೆ ಬಂತು? ಇದರಲ್ಲಿ ವ್ಯತ್ಯಾಸ ಏನಿದೆ? ಅಲ್ಲಿಗೆ ಬೇರೆ ಕಾನೂನು ಇಲ್ಲಿಗೆ ಬೇರೆ ಕಾನೂನು ಇದೆಯೇ?

---

**ಶ್ರೀ ಶಶಿಲ್ ಜಿ. ನಮೋಶಿ:-** ಮಾನ್ಯ ಸಭಾಪತಿಯವರೆ, ಈ ಎಲ್ಲಾ ಖಾಲಿಯಿರುವ ಹುದ್ದೆಗಳು 2012ಕ್ಕಿಂತ ಮೊದಲು ಖಾಲಿ ಇದ್ದು, ಇವುಗಳನ್ನೆಲ್ಲಾ regularize ಮಾಡಲಾಗಿದೆ. ತದನಂತರ 10 ವರ್ಷಗಳಾದರೂ ಖಾಲಿಯಿರುವ ಹುದ್ದೆಗಳನ್ನು ತುಂಬಿಲ್ಲ. 2015ಕ್ಕೆ ಖಾಲಿಯಿರುವ ಹುದ್ದೆಗಳನ್ನೆಲ್ಲಾ ತುಂಬಬಹುದು ಎಂದು ಹೇಳಿ ಅನುಮತಿ ಕೊಟ್ಟಾಗ ಕೋವಿಡ್-19 ಬಂದಿದ್ದರಿಂದ ಇದನ್ನು ತಡೆಹಿಡಿದರು. 257 ಕಡತಗಳು ಅಲ್ಲ, 257 ಹುದ್ದೆಗಳು ಎಂದು ಹೇಳಿ ತಡೆಹಿಡಿದರು. ಈ ವಿಚಾರವಾಗಿ ಆರ್ಥಿಕ ಇಲಾಖೆಯವರು ಮೊದಲನೇ ಹಂತದಲ್ಲಿ ಕೊಕ್ಕೆ ಹಾಕಿದರು. ಹೀಗಾಗಿ ಒಂದು ವರ್ಷ ಅದರಲ್ಲಿಯೇ ಹೋಯಿತು. ಎಷ್ಟು ಹುದ್ದೆಗಳನ್ನು regularize ಮಾಡಿದ್ದೀರಿ ಎನ್ನುವುದಕ್ಕೆ ಅವರು ಏನು ಕಾರಣ ಕೊಡುತ್ತಾರೆಂದರೆ, ನೀವು State Newspaper ನಲ್ಲಿ ಕೊಟ್ಟಿಲ್ಲ, ಎಂದು ಅವರು ಹೇಳುತ್ತಾರೆ. ಈ ವಿಚಾರವಾಗಿ ಏನು ಕಾಯಿದೆ ಇತ್ತು, ಅದನ್ನು ಜಾರಿ ಮಾಡಿ. ಈ ಬಗ್ಗೆ ಹಿಂದಿನಿಂದಲೂ ಸಂಪ್ರದಾಯ ಇತ್ತು ಎಂದರೆ ಯಾವದೇ State Newspaper ನಲ್ಲಿ ಹುದ್ದೆ ಜಾಹಿರಾತು ಕೊಟ್ಟರೆ ಮುಗಿಯಿತು. ಅದರಲ್ಲಿ ಏನು ಮಾಡಿದರು ಎಂದರೆ, ಆ State Newspaper ನಲ್ಲಿ ಹಾಕುವುದಕ್ಕೆ ಯಾವ ಅಡಳಿತ ಮಂಡಳಿಗೆ ಗೊತ್ತು, ಈ ಬಗ್ಗೆ ನಮಗೆ ಗೊತ್ತಾಗುವುದಿಲ್ಲ. ಈ ನಡುವಿನ ಪುಟ national news ಅಥವಾ ಮೊದಲನೆ ಪುಟ state news, ಜಿಲ್ಲಾ news ಎಂದು ಗೊತ್ತಾಗುವುದಿಲ್ಲ. ಹೀಗಿದ್ದಾಗ ಅದು State Newspaper ನಲ್ಲಿ ಇದ್ದರೂ ಕೂಡ ಈ ಪೇಪರ್ ಎಲ್ಲಾ ಕಡೆ circulate ಆಗುವಂತಹ ಪೇಪರ್ ಅಲ್ಲವೆಂದು ಹೇಳಿ, ಅಲ್ಲಿಯವರಿಗೆ ನಿಮ್ಮ ಬಿಇಓ ಮತ್ತು ಡಿಡಿಪಿಐ ನಿಯಮಾವಳಿಗಳ ಪ್ರಕಾರ ಕಡತಗಳನ್ನು ಕಳುಹಿಸಿದ್ದಾರೆ. ಅದು ತಪ್ಪು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅವರ ಮೇಲೆ ಕ್ರಮವನ್ನು ಏತಕ್ಕೆ ತೆಗೆದುಕೊಳ್ಳುವುದಿಲ್ಲ? ಇದರ ಬಗ್ಗೆ ಏನೇನೋ ನಿಯಮಗಳನ್ನು ಹೇಳುತ್ತೀರಿ. ಅದ್ದರಿಂದ ನನ್ನ ವಿನಂತಿ ಏನೆಂದರೆ, ಈಗ ಇರುವಂತಹ ಎಲ್ಲಾ ಕಡತಗಳನ್ನು ಕ್ಲಿಯರ್ ಮಾಡಿ. ಯಾವ ಪೇಪರ್‌ನಲ್ಲಿ ಹೇಗೆ ಹಾಕಬೇಕೆಂದು ತದನಂತರ ಇದರ ಬಗ್ಗೆ ಚರ್ಚೆಯಾಗಲಿ. ತಿಳಿಸಿಕೊಡಿ,

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಸ್ಪಷ್ಟೀಕರಣ ಕೊಡಿ. ಮುಂದಿನ ಹುದ್ದೆಗಳು ಇದರ ಆಧಾರದ ಮೇಲೆ ನೀವು ಭರ್ತಿ ಮಾಡಿಕೊಳ್ಳಿ ಎಂದು ಹೇಳಿ ಅನುಮತಿ ಕೊಡಿ. ಇದು ಬಹಳ ವರ್ಷವಾಯಿತು.

**ಸಭಾಪತಿಯವರು:-** ಈ ಬಗ್ಗೆ ನನಗೆ ಗೊತ್ತಿದೆ. ನಾನು ಈ ಬಗ್ಗೆ ಹೇಳುತ್ತೇನೆ.

**ಶ್ರೀ ಶಶಿಲ್ ಜಿ. ನಮೋಶಿ:-** ಇನ್ನು ಒಂದು ವಿಷಯದ ಬಗ್ಗೆ ಸಚಿವರು ಏನು ಹೇಳಬೇಕೆಂದರೆ 2015 ರವರೆಗೆ ಅಷ್ಟೇ ಅಲ್ಲ, 2020ರವರೆಗೆ ಖಾಲಿ ಇದ್ದಂತಹ ಹುದ್ದೆಗಳನ್ನು ತುಂಬಿಕೊಳ್ಳುವುದಕ್ಕೆ ಅನುಮತಿ ಕೊಡಬೇಕು ಮತ್ತು ಯಾವ ರೀತಿಯಲ್ಲಿ ಇದನ್ನು ತಡೆ ಹಿಡಿಯಲಿಕ್ಕೆ ಹೋಗಬಾರದು ಎಂದು ನನ್ನ ವಿನಂತಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನನ್ನ 4 ಮುಖ್ಯವಾದ ಪ್ರಶ್ನೆಗಳು. ಸರ್ಕಾರ ಬಹಳಷ್ಟು ವರ್ಷಗಳ ಹೋರಾಟದ ನಂತರ 2015 ರವರೆಗೆ ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ತುಂಬಲಿಕ್ಕೆ ಅನುಮತಿಯನ್ನು ಕೊಟ್ಟಿತ್ತು. ಇದಕ್ಕೆ ಕೋವಿಡ್--19 ನೆಪ ಹೇಳಿ ಇದಕ್ಕೆ ತಡೆಯಾಜ್ಞೆಯನ್ನು ಕೊಟ್ಟರು. ಆರ್ಥಿಕ ಮಿತವ್ಯಯದ ಆದೇಶವನ್ನು ತಂದರು. ಇದು ಯಾವರೀತಿ ಆಗಿದೆ ಎಂದರೆ ಹಸಿದಂತಹ ನಿರುದ್ಯೋಗಿ ಪದವೀಧರರಿಗೆ ಊಟಕ್ಕೆ ತಾಟು ಅಂದರೆ ಪ್ಲೇಟ್ ಕೊಟ್ಟು, ಅದನ್ನು ವಾಪಸ್ಸು ಕಸಿದುಕೊಂಡಂತಾಗಿದೆ. ಈ ರೀತಿ ಸರ್ಕಾರ ಮಾಡುವುದು ಸರಿಯೇ ಎಂದು ಕೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:-** ಏನು ಮಾಡಬೇಕೆಂದು ಹೇಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ನನ್ನ ಎರಡನೆಯ ಮುಖ್ಯವಾದ ಪ್ರಶ್ನೆ ಏನೆಂದರೆ, ನಾವು ಏನು ಕೇಳಿದ್ದೆವು ಎಂದರೆ, ಆರ್ಥಿಕ ಮಿತವ್ಯಯ ಆದೇಶವನ್ನು ವಾಪಸ್ಸು ತೆಗೆದುಕೊಂಡಿರಲಿಲ್ಲ, ಯಾವಾಗ ತೆಗೆದುಕೊಳ್ಳುತ್ತೀರಿ ಎಂದು ಕೇಳಿದ್ದಕ್ಕೆ ಆರ್ಥಿಕ ಮಿತವ್ಯಯ ಆದೇಶ ಇನ್ನು ಮುಂದುವರಿದಿದೆ ಎಂದು ಉತ್ತರದಲ್ಲಿ ಹೇಳುತ್ತಾರೆ. ನನ್ನ ಪ್ರಶ್ನೆ ಏನೆಂದರೆ ಇದು ಶಿಕ್ಷಕರ ಸಮಸ್ಯೆಯಾಗಿದ್ದು, ಶಿಕ್ಷಣ ಇಲಾಖೆ ವಿಷಯದಲ್ಲಿ ಆರ್ಥಿಕ ಇಲಾಖೆಗೆ ಗೊತ್ತಾಗುವುದಿಲ್ಲ. ಆದ್ದರಿಂದ ಈ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆರ್ಥಿಕ ಮಿತ ವ್ಯಯ ಆದೇಶವನ್ನು ಸಡಿಸಲಿಕ್ಕೆ ಸಚಿವರು ತಮ್ಮ ಕಚೇರಿಗೆ ಕರೆದು ಒಂದೆರಡು ಸಭೆಗಳನ್ನು ಮಾಡಿದ್ದಾರೆ. ಶಿಕ್ಷಣ ಇಲಾಖೆ ಸಚಿವರ ಒತ್ತಡ ಇಲ್ಲದೆ ಈ ಆರ್ಥಿಕ ಮಿತವ್ಯಯ ಆದೇಶವನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ. ಆ ಒಂದು ಪ್ರಯತ್ನ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸದೇ ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಸಚಿವರಾದವರು ಮುಖ್ಯಮಂತ್ರಿಗಳ ಹತ್ತಿರ ಹೋಗಬೇಕು, ಗಟ್ಟಿಯಾಗಿ ಒತ್ತಡ ಹೇರಬೇಕು. ಪ್ರತಿನಿಧಿಗಳಾದ ನಾವು ಈ ವಿಚಾರವಾಗಿ ಹೇಗೆ ಪ್ರತಿಭಟನೆ ಮಾಡುತ್ತೇವೆ, ಅದೇ ರೀತಿಯಲ್ಲಿ ಒತ್ತಡ ಹಾಕಬೇಕು. ಒತ್ತಡ ಮಾಡದೇ ಯಾವುದೇ ಕೆಲಸ ಆಗುವುದಿಲ್ಲ. ಆರ್ಥಿಕ ಇಲಾಖೆಗೆ ಈ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸದೇ ಇದ್ದರೆ ಆಗುವುದಿಲ್ಲ. ಮಿತವ್ಯಯ ಆದೇಶ ವಾಪಸ್ಸು ಪಡೆಯುವಲ್ಲಿ ಶಿಕ್ಷಣ ಸಚಿವರು ಏನು ಪ್ರಯತ್ನ ಮಾಡಿದ್ದಾರೆ ಎನ್ನುವ ಬಗ್ಗೆ ನಮಗೆ ಉತ್ತರ ಕೊಡಬೇಕು.

ಮತ್ತೆ, ನನ್ನ ಮೂರನೆಯ ಪ್ರಶ್ನೆ ಬಹಳ ಮುಖ್ಯ ಇದೆ. ಈಗಾಗಲೇ 7-8 ವರ್ಷಗಳಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಖಾಲಿಯಾದ ಹುದ್ದೆಗಳಿಗೆ ನೇಮಕಾತಿ ಆದೇಶವನ್ನು ಕೊಟ್ಟಿರುವುದಿಲ್ಲ. ವಯೋಮಿತಿ ಮೀರುತ್ತಿದೆ. ಬಹಳ ಜನ ಪದವೀಧರರು rank ತೆಗೆದುಕೊಂಡಿದ್ದಾರೆ, ಗೋಲ್ಡ್ ಮೆಡಲ್ ತೆಗೆದುಕೊಂಡಿದ್ದಾರೆ. ನೇಮಕಾತಿ ಇಲ್ಲದೇ, ಅವರು ವಯೋಮಿತಿ ಮೀರಿದರೆ ಗೋಲ್ಡ್ ಮೆಡಲಿಸ್ಟ್, rank holders ಬೀದಿಗೆ ಹೋಗಬೇಕೇ? ಪೊಲೀಸ್ ಇಲಾಖೆಯಲ್ಲಿ ವಯೋಮಿತಿ ಮೀರತಕ್ಕವರಿಗೆ ಎರಡು ವರ್ಷಗಳ ಕಾಲ relaxation ನ್ನು ಕೊಟ್ಟಿದ್ದಾರೆಂದು ಕೇಳಿದ್ದೇವೆ. 7-8 ವರ್ಷಗಳ ಕಾಲ ನೇಮಕಾತಿಯನ್ನು ಮಾಡಿರುವುದಿಲ್ಲ. ಇದಕ್ಕೆ ವಯೋಮಿತಿಯಲ್ಲಿ ಸಡಿಲಿಕೆ ಕೊಡುತ್ತೀರಾ ಎಂದು ನಾವು ಸಹ ಪ್ರಶ್ನೆಯನ್ನು ಕೇಳಿರುವುದಕ್ಕೆ ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲವೆಂದು ಹೇಳುತ್ತಾರೆ. ಎಷ್ಟು ಜನ ಪದವೀಧರರು ಮನವಿಯನ್ನು ಕೊಟ್ಟಿದ್ದಾರೆ? ಪೊಲೀಸ್ ಇಲಾಖೆಯಲ್ಲಿ ವಯೋಮಿತಿ ಸಡಿಲಿಕೆ ಕೊಟ್ಟಿರುವಾಗ ಶಿಕ್ಷಣ ಇಲಾಖೆಗೆ ಏತಕ್ಕೆ ಕೊಟ್ಟಿರುವುದಿಲ್ಲ?

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೆ, ಹೋರಾಟ ಮಾಡಿ 2015ನೆ ಇಸವಿಯವರೆಗೆ ಖಾಲಿ ಇದ್ದಂತಹ ಹುದ್ದೆಗಳನ್ನು ನೇಮಕ ಮಾಡಲಿಕ್ಕೆ ಅನುಮತಿಯನ್ನು ತೆಗೆದುಕೊಂಡಿದ್ದೆವು. 2015ನೇ ಇಸವಿಯಿಂದ 2021 ರವರೆಗೆ ಮತ್ತೆ 6 ವರ್ಷಗಳಾಯಿತು. 2015ರ ನಂತರ ಖಾಲಿಯಾದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿಕ್ಕೆ ಅನುಮತಿಯನ್ನು ಕೊಡುತ್ತೀರಾ ಎಂದು ಕೇಳಿದರೆ ಸರ್ಕಾರದಲ್ಲಿ ಇದರ ಬಗ್ಗೆ ಚಿಂತನೆ ಇಲ್ಲವೆಂದು ಹೇಳುತ್ತಾರೆ. ಹೀಗಾದರೆ ಸರ್ಕಾರದ ಉದ್ದೇಶ ಏನಾಗುತ್ತದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಶಾಲಾ ಕಾಲೇಜುಗಳನ್ನು ಮುಚ್ಚುವಂತಾಗುತ್ತದೆ. ನೇಮಕಾತಿಗೆ ಅನುಮತಿ ಕೊಡುವುದಿಲ್ಲ. ಶಿಕ್ಷಕರ ನೇಮಕಾತಿ ಆಗುವುದಿಲ್ಲ. ಮಕ್ಕಳಿಗೆ ಶಿಕ್ಷಣವನ್ನು ಕಲಿಸುವವರು ಯಾರು, ಪಾಲಕರು ಕಲಿಸುವುದಕ್ಕಾಗುತ್ತದೆಯೇ? ಈ ರೀತಿಯಾದರೆ ಆದ ಶಿಕ್ಷಣ ಇಲಾಖೆ ಹದಗೆಡುತ್ತದೆ. 2015 ನಂತರ ಅಂದರೆ ಈಗ 2021 ಆಗಿದೆ. ಆದ್ದರಿಂದ ಖಾಲಿಯಿರುವ ಹುದ್ದೆಗಳನ್ನು ತುಂಬಲಿಕ್ಕೆ ಗಂಭೀರವಾದ ಚಿಂತನೆ ಮಾಡಬೇಕು. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಈಗ 2015ರ ಮೊದಲಿನ ಹುದ್ದೆಗಳಿಗೆ ಅನುಮತಿ ಸಿಕ್ಕಿದೆ ಎಂದರೆ 2012 ರಲ್ಲಿ ಇದಕ್ಕಿಂತ ಮೊದಲು ನಮಗೆ ಅನುಮತಿಯನ್ನು ಕೊಟ್ಟರು. ಅದರಲ್ಲೂ ಉಳಿದಿರುವ ಹುದ್ದೆಗಳಿಗೆ 2015 ರ ಡಿಸೆಂಬರ್‌ವರೆಗೆ ಹೊಂದಾಣಿಕೆ ಮಾಡಿಕೊಂಡು ಕೊಟ್ಟಿರುವುದಾಗಿದೆ. ಇಂತಹ ಸಂದರ್ಭದಲ್ಲಿ 10 ವರ್ಷಗಳ ಕಾಲ ಈ ಶಾಲೆಗಳಲ್ಲಿ ಶಿಕ್ಷಕರುಗಳು ಇಲ್ಲದೆ ಶಾಲೆಗಳನ್ನು ನಡೆಸುತ್ತಿರುವಾಗ ಅದರ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೋ ಇಲ್ಲವೋ ಎನ್ನುವುದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇ ಕು.

ಎರಡನೆಯದಾಗಿ, 2015 ಡಿಸೆಂಬರ್ ರವರೆಗಿನ ಖಾಲಿ ಹುದ್ದೆಗಳಿಗೆ ನೀವು ಅನುಮತಿಯನ್ನು ಕೊಟ್ಟಾದ ಮೇಲೆ ಮತ್ತೆ ಆರ್ಥಿಕ ಇಲಾಖೆಯ ಮಿತವ್ಯಯ ಎನ್ನುವಂತಹ ಕಳ್ಳಾಟ ಏನು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಈ 257

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಹುದ್ದೆಗಳಿಗೆ ಯಾರು ದುಡ್ಡು ಕೊಟ್ಟರೊ ಅವರ ಕಡತಗಳು ಆರ್ಥಿಕ ಇಲಾಖೆಯಲ್ಲಿ ಕ್ಲಿಯರ್ ಆಗಿವೆ ಎನ್ನುವುದರ ಬಗ್ಗೆ ನೇರವಾದ ಆರೋಪವನ್ನು ಮಾಡುತ್ತೇನೆ. ಆದ್ದರಿಂದ, ಈ ಬಗ್ಗೆ ತನಿಖೆ ಮಾಡಿ ಶಿಕ್ಷಣ ಇಲಾಖೆಯ ಪಿ.ಯು. ವಿಭಾಗದ ಈ 257 ಹುದ್ದೆಗಳಿಗೆ ಮಾತ್ರ ಆರ್ಥಿಕ ಇಲಾಖೆ ಒಪ್ಪಿಕೊಳ್ಳುತ್ತದೆ, ಉಳಿದವರಿಗೆ ಒಪ್ಪಿಕೊಳ್ಳುವುದಿಲ್ಲ ಎಂದರೆ ಇದರ ಹಿಂದಿನ ಕಳ್ಳಾಟ ಏನು? ಈ ರೀತಿಯಲ್ಲಿ ಇಲಾಖೆಯಲ್ಲಿ ಆಗುತ್ತಿರುವ ಕೆಟ್ಟ ಸಂಗತಿಗಳು ನಿಲ್ಲಬೇಕು. ಯಾರ ಯಾರ ಪ್ರಸ್ತಾವನೆಗಳು ಬಂದಿವೆ , ಅವುಗಳಲ್ಲಿ 257 ಹುದ್ದೆಗಳಿಗೆ ಮಾತ್ರ ಕಳುಹಿಸಲಿಕ್ಕೆ ಯಾರು ಅಧಿಕಾರವನ್ನು ಕೊಟ್ಟರು?

ಆದ್ದರಿಂದ ಈ ಸಂಗತಿಯನ್ನು ಸರಿಪಡಿಸಬೇಕು. 2015 ರ ಡಿಸೆಂಬರ್‌ವರೆಗೆ ಸರ್ಕಾರದ ಆರ್ಥಿಕ ಇಲಾಖೆ ಅನುಮತಿ ಕೊಟ್ಟಿರುವುದನ್ನು ಅನುದಾನಕ್ಕೆ ಒಳಪಡಿಸಬೇಕೆನ್ನುವುದು ಒಂದನೆಯ ಸಂಗತಿ. ಎರಡನೆಯ ಸಂಗತಿ ಏನೆಂದರೆ 2015 ರಿಂದ 2021 ಎರಡು ತಿಂಗಳಲ್ಲಿ ಮುಗಿಯುತ್ತದೆ. ಅಂದರೆ 7 ವರ್ಷಗಳ ಕಾಲ ಶಿಕ್ಷಕರಿಲ್ಲದೆ ಶಾಲೆಗಳನ್ನು ನಡೆಸುತ್ತಿರುವುದಾಗಿದೆ. ಇದರ ಜವಾಬ್ದಾರಿ ಯಾರದ್ದು, ಸರ್ಕಾರದ್ದು ಅಲ್ಲವೇ?

(ಮುಂದು)

**(1036) 13.12.2021 12.40 ಎಸ್‌ವಿ-ಆರ್‌ಎನ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಅರುಣ ಶಹಾಪುರ (ಮುಂದು)**

ಒಟ್ಟು 11 ವರ್ಷಗಳಿಂದ ಶಿಕ್ಷಕರಿಲ್ಲ. 2015ರ ನಂತರದ್ದು ಯಾವಾಗ ಮಾಡಲಾಗುತ್ತದೆ ಎಂಬುದು ನನ್ನ ಎರಡನೆಯ ಪ್ರಶ್ನೆ. ಮೂರನೆಯದಾಗಿ ಬೇರೆ ಎಲ್ಲಾ ಇಲಾಖೆಗಳಲ್ಲಿಯೂ age relaxation ಕೊಟ್ಟಿದ್ದು, ಶಿಕ್ಷಣ ಇಲಾಖೆಯಲ್ಲಿ ಮಾತ್ರ ಏಕೆ ಆ ಕಳಕಳಿ ಇಲ್ಲ ಎನ್ನುವುದು ನನ್ನ ಪ್ರಶ್ನೆ. ಅದನ್ನು ಕೂಡ ಮಾಡಿಕೊಡಬೇಕೆಂಬ ವಿನಂತಿಯನ್ನು ನಾನು ಸಚಿವರಲ್ಲಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು**:- ಈಗ ಸಚಿವರು ಉತ್ತರವನ್ನು ನೀಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ...

**ಸಭಾಪತಿಯವರು**:- ಮಾನ್ಯ ಶ್ರೀಕಂಠೇಗೌಡರೇ, ದಯಮಾಡಿ ಕುಳಿತುಕೊಳ್ಳಿ. ಎಷ್ಟು ಬಾರಿ ಪ್ರಶ್ನೆಯನ್ನು ಕೇಳುತ್ತೀರಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ನಾನು ಉಪ ಪ್ರಶ್ನೆಯನ್ನು ಕೇಳಲೇ ಇಲ್ಲ.

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೋಸ್ಕರ ಎಷ್ಟು ಸಮಯ ವ್ಯರ್ಥ ಮಾಡುವುದು?

**ಸಭಾಪತಿಯವರು**:- ಐದು ಜನ ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಇದನ್ನು ಅರ್ಧ ಗಂಟೆಯ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು**:- ಈಗ ಸಚಿವರು ಉತ್ತರವನ್ನು ಹೇಳಲಿ. ನಂತರ ನೋಡೋಣ.

**ಡಾ: ಸಿ.ಎನ್.ಅಶ್ವತ್ಥನಾರಾಯಣ**:- ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾಗಿರುವಂತಹದ್ದು, 2015ರವರೆಗೆ ತೋರಿಸಲಾಗಿರುವ vacancies ಗಳನ್ನು ಭರ್ತಿ ಮಾಡುವುದಕ್ಕಾಗಿ ಅವಕಾಶವನ್ನು ಕೊಡಲಾಗಿದೆ.

**ಸಭಾಪತಿಯವರು**:- ಮಾನ್ಯ ಸಚಿವರೇ, ಒಂದು ನಿಮಿಷ. ದಿನಾಂಕ 31.12.2015ರವರೆಗೆ ನೀಡಲಾಗಿದೆ. ಅದರಲ್ಲಿ ಎಷ್ಟು vacancy ಇದೆಯೋ ಅವುಗಳನ್ನು ತುಂಬುವುದಕ್ಕೆ ಅನುಮತಿಯನ್ನು ಕೊಡಬೇಕು.

**ಶ್ರೀ ಅರುಣ ಶಹಾಪುರ**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಗೊಂದಲ ಇದೆ. ಉನ್ನತ ಶಿಕ್ಷಣ ಇಲಾಖೆಯಲ್ಲಿ 2015ರವರೆಗಿನ ಖಾಲಿ ಹುದ್ದೆಗಳನ್ನು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಭರ್ತಿ ಮಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಆದರೆ ನಮ್ಮ ಶಾಲಾ ಶಿಕ್ಷಣದಲ್ಲಿ ಇದು ಜಾರಿಗೆ ಬಂದಿರುವುದಿಲ್ಲ.

**ಡಾ: ಸಿ.ಎನ್.ಅಶ್ವತ್ಥನಾರಾಯಣ:-** ಮಾನ್ಯ ಸಭಾಪತಿಯವರೇ, 2081 ಹುದ್ದೆಗಳಲ್ಲಿ 257 ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಅವಕಾಶವನ್ನು ನೀಡಲಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಇದು ತಪ್ಪು ಮಾಹಿತಿ.

**ಡಾ: ಸಿ.ಎನ್.ಅಶ್ವತ್ಥನಾರಾಯಣ:-** ಈಗ ಕೇವಲ 12 ಅರ್ಜಿಗಳು ಬಂದಿವೆ. ಇದರಲ್ಲಿ ಕೆಲವು procedural lapse ಆಗಿದ್ದು, ಜಾಹೀರಾತು ನೀಡುವ ಸಮಯದಲ್ಲಿ ರಾಜ್ಯ ವ್ಯಾಪ್ತಿಯಲ್ಲಿ ಕೊಡಬೇಕು. ಅದನ್ನು ಬಿಟ್ಟು ಕೇವಲ ಒಂದು newspaper edition ನಲ್ಲಿ ಕೊಡಲಾಗಿದೆ. ಇದರಿಂದಾಗಿ ಒಂದು technical problem ಉಂಟಾಗಿದ್ದು, ಇದನ್ನು ಯಾವ ರೀತಿ ಬಗೆಹರಿಸಲಿಕ್ಕೆ ಆಗುತ್ತದೆ ಎಂಬುದನ್ನು ನೋಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ನಾನು ಇಲ್ಲಿ ಕುಳಿತು ಹೇಳಬಾರದು. ಆದರೂ ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಇಲಾಖೆಯವರು ಅನುಮತಿಯನ್ನು ಕೋರಿ ಕಳುಹಿಸಿದಾಗ ಇದನ್ನು ಬರೆದು ಕಳುಹಿಸಬೇಕಲ್ಲವೆ? ಇಡೀ ಶಿಕ್ಷಣ ಪದ್ಧತಿಯಲ್ಲಿ Grant-in-Aid ಹುಟ್ಟಿದಾಗಿನಿಂದಲೂ ಬಂದಂತಹ ಪದ್ಧತಿ ಒಂದೇ ಸಲದಲ್ಲಿ ಬದಲಾಗಲು ಕಾರಣವೇನು? ಇದು ಕೆಲವು ಅಧಿಕಾರಿಗಳು ಮಾಡುವ ಮೂರ್ಖತನದಿಂದಾಗಿ ಆಗಿರುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನೂ 2080 ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾವು ಇದನ್ನು ಒಪ್ಪುವುದಿಲ್ಲ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು**:- ಒಬ್ಬರು ಮಾತನಾಡಿ. ಎಲ್ಲರೂ ಒಟ್ಟಾಗಿ ನಿಂತು ಮಾತನಾಡಿದರೆ ಯಾವುದೂ ಕಡತಕ್ಕೆ ಹೋಗಬಾರದು. ನಾನು ಅನುಮತಿ ಕೊಟ್ಟಾಗ ಮಾತ್ರ ಮಾತನಾಡಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ**:- ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ನೇರವಾಗಿ ಪ್ರಶ್ನೆಯನ್ನು ಕೇಳುತ್ತೇನೆ. ದಿನಾಂಕ 31.12.2015ರವರೆಗೆ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಉನ್ನತ ಶಿಕ್ಷಣ ಇಲಾಖೆಯಲ್ಲಿ ಭರ್ತಿ ಮಾಡಿಕೊಳ್ಳಲಾಗಿದೆ. ಈಗ ಸಚಿವರೇ ಹೇಳಿದಂತೆ 2181 ಹುದ್ದೆಗಳಲ್ಲಿ 257 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳಲು ಅನುಮತಿಯನ್ನು ನೀಡಲಾಗುತ್ತಿದೆ. ಇಲ್ಲಿ ಏಕೆ ಕೊಡುತ್ತಿಲ್ಲ? ಉಳಿದ ಸಾವಿರಾರು ಹುದ್ದೆಗಳಿಗೆ ಏನು ಮಾಡುವುದು. 2015ರವರೆಗೆ ಖಾಲಿ ಇರುವ ಎಲ್ಲಾ ಹುದ್ದೆಗಳು ಅಂದರೆ ರಾಜೀನಾಮೆಯಿಂದ ತೆರವಾದವು, ನಿವೃತ್ತಿಯಿಂದ ತೆರವಾದವು, ನಿಧನದಿಂದ ತೆರವಾದವು ಇಷ್ಟೂ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡಿದ್ದೇವೆ ಎಂದು ಮಾನ್ಯ ಸಚಿವರು ಈಗ ಘೋಷಣೆಯನ್ನು ಮಾಡಬೇಕು. ಏಕೆಂದರೆ ನೀವು ಈಗ ಆದೇಶವನ್ನು ಹೊರಡಿಸಿ ಮೂರು-ನಾಲ್ಕು ವರ್ಷಗಳಾಯಿತು.

**ಡಾ: ಸಿ.ಎನ್.ಅಶ್ವತ್ಥನಾರಾಯಣ**:- ಮಾನ್ಯ ಸಭಾಪತಿಯವರೇ, 2015ರವರೆವಿಗೂ ಖಾಲಿ ಇದ್ದಂತಹ 2181 ಹುದ್ದೆಗಳಲ್ಲಿ 251 ಹುದ್ದೆಗಳನ್ನು ಭರ್ತಿ ಮಾಡುವ ಅವಕಾಶ ಮಾಡಲಾಗಿದೆ. ಮೊದಲು ಇದನ್ನು ಭರ್ತಿ ಮಾಡುವ ಕೆಲಸ ಆಗಲಿ. ನಂತರ ಇದರ ಬಗ್ಗೆ ಆರ್ಥಿಕ ಇಲಾಖೆಯ ಜೊತೆಯಲ್ಲಿ ಮಾತನಾಡಿ ತಕ್ಷಣ ಅನುಮತಿಯನ್ನು ಕೊಡಿಸುವ ಕೆಲಸವನ್ನು ಮಾಡಲಾಗುವುದು.

**ಸಭಾಪತಿಯವರು**:- ಮಾನ್ಯ ಸಚಿವರೇ, ಗುರುವಾರದ ಒಳಗಾಗಿ ಇಬ್ಬರೂ ಶಿಕ್ಷಣ ಸಚಿವರು, ಆರ್ಥಿಕ ಇಲಾಖೆ, ಶಿಕ್ಷಣ ಇಲಾಖೆ, ಶಿಕ್ಷಕರ ಹಾಗೂ ಪದವೀಧರರ ಕ್ಷೇತ್ರದ ಮಾನ್ಯ ಸದಸ್ಯರನ್ನು ಕರೆದು ಇಲ್ಲಿ ಸಭೆಯನ್ನು ಮಾಡಿ ಒಂದು ತೀರ್ಮಾನವನ್ನು

ತೆಗೆದುಕೊಂಡು ಅದನ್ನು ಸದನಕ್ಕೆ ತಿಳಿಸಿ. ನಂತರ ಈ ವಿಷಯವನ್ನು ತೀರ್ಮಾನ ಮಾಡೋಣ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇದನ್ನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಮ್ಮ ಆದೇಶವನ್ನು ನಾವು ಪಾಲಿಸುತ್ತೇವೆ.

**ಸಭಾಪತಿಯವರು:-** ನಾನು ಮಾನ್ಯ ಸಭಾನಾಯಕರಿಗೆ ಹೇಳಿದ್ದೇನೆ. ಇಲ್ಲಿ ಅಧಿಕಾರಿಗಳು ತಪ್ಪು ಮಾಹಿತಿಯನ್ನು ನೀಡಿದ್ದಾರೆ. ಇನ್ನೂ ವರ್ಷ ತುಂಬಿಲ್ಲ. ಅಧಿಕಾರಿಗಳಿಂದ ಸಮಸ್ಯೆ ಉದ್ಭವ ಆಗಿದೆ. ಇದರ ಬಗ್ಗೆ ಗುರುವಾರದ ಒಳಗಾಗಿ ಸಂಬಂಧಪಟ್ಟ ಸಚಿವರು, ಸಭಾನಾಯಕರು ಹಾಗೂ ಇಲಾಖೆಯವರು ಸಭೆ ನಡೆಸಿ ಸದನಕ್ಕೆ ಬಂದು ಹೇಳಲಿ. ನಂತರ ಮುಂದಿನದನ್ನು ತೀರ್ಮಾನಿಸೋಣ. ಅಲ್ಲಿಯವರೆವಿಗೂ ಈ ಪ್ರಶ್ನೆಯನ್ನು ಬಾಕಿ ಇಡಲಾಗುವುದು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

## ಪ್ರಶ್ನೆ ಸಂಖ್ಯೆ 11
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂತಹ ಪ್ರಶ್ನೆ ರಾಜ್ಯದಲ್ಲಿ ಗ್ರಾಮೀಣ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ, ಅಗತ್ಯ ನುರಿತ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದೆ ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಗ್ರಾಮೀಣ ಮಟ್ಟದ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮೂಲಭೂತ ಸೌಕರ್ಯಗಳು ಮತ್ತು ಅಗತ್ಯ ನುರಿತ ಸಿಬ್ಬಂದಿಗಳನ್ನು ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ಎಂದು ಕೇಳಿದ್ದು, ಅದಕ್ಕೂ ಸಹಿತ ಉತ್ತರವನ್ನು ಕೊಟ್ಟಿದ್ದಾರೆ. ಮುಂದುವರೆದು ಬೆಳಗಾವಿ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಉಪ ಕೇಂದ್ರಗಳು ವರ್ಷಾನುಗಟ್ಟಲೇ ಮುಚ್ಚಿರಲು ಕಾರಣಗಳೇನು ಎಂದು ಕೇಳಿದ್ದೇನೆ. ಅದಕ್ಕೆ ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 616 ಉಪ ಕೇಂದ್ರಗಳಿದ್ದು, ಅದರಲ್ಲಿ 404 ಉಪ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿದ್ದು, ಅವುಗಳಲ್ಲಿ ಚಿಕ್ಕೋಡಿ ವಿಭಾಗದ 107 ಹಾಗೂ ಬೆಳಗಾವಿ ವಿಭಾಗದ 95 ಕಟ್ಟಡಗಳು ವಾಸಿಸಲು ಯೋಗ್ಯವಾಗಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳುವುದು ಇಷ್ಟೇ. ಕೋವಿಡ್ ಸಂದರ್ಭದಲ್ಲಿ ಇಡೀ ರಾಜ್ಯ ಮತ್ತು ದೇಶದ ಜನತೆ ತೊಂದರೆಯನ್ನು ಅನುಭವಿಸಿರುವ ಹಿನ್ನೆಲೆಯಲ್ಲಿ ಸರ್ಕಾರಿ ಸೌಲಭ್ಯಗಳು ಲಭ್ಯವಿಲ್ಲದ ಕಾರಣ ಬಡವರು, ಸಾರ್ವಜನಿಕರು ನರ್ಸಿಂಗ್ ಹೋಮ್‌ಗಳ ಬಳಿ ಹೋಗುವಂತಹ ಸಂದರ್ಭ ಬಂದಿದೆ. ಇದರಿಂದಾಗಿ ಆರ್ಥಿಕವಾಗಿ ಹಿಂದುಳಿದವರು, ಕಡುಬಡವರು, ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುವವರು ಅವರಿಗೆ Primary Health Centres ಗಳಲ್ಲಿ basic amenities ಇಲ್ಲ. Vaccination ಹಾಕಲಿಕ್ಕೆ ಅನುಕೂಲ ಇಲ್ಲ. ಅಲ್ಲಿರುವಂತಹ ದಾದಿಯರಿಗೆ ವಾಸಸ್ಥಾನ ಇಲ್ಲ. ನೀರು ಸೋರುತ್ತದೆ. ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ತೋರಿಸಬಯಸುತ್ತೇನೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ನಂದಗಾವ್ ಆರೋಗ್ಯ ಕೇಂದ್ರದ ಪರಿಸ್ಥಿತಿ ಸಂಪೂರ್ಣ ಶಿಥಿಲಾವಸ್ಥೆಯಲ್ಲಿದೆ. ಅದು Primary Health Centres

ಇರಬಹುದು ಅಥವಾ ANM Centres ಇರಬಹುದು. ನೀರು ಸೋರುತ್ತದೆ. ಚಿಕ್ಕೋಡಿ ವಿಭಾಗದ 107 ಹಾಗೂ ಬೆಳಗಾವಿ ವಿಭಾಗದ 95 ಕಟ್ಟಡಗಳು ವಾಸಿಸಲು ಯೋಗ್ಯವಾಗಿಲ್ಲ ಎಂದು ಹೇಳಿದ್ದಾರೆ. ನರ್ಸಿಂಗ್ ಸ್ಟಾಫ್‌ಗಳೇ ಅಲ್ಲಿ ಉಳಿದುಕೊಂಡಿರಲಿಲ್ಲ ಎಂದರೆ ರಾತ್ರಿ ಹೊತ್ತಿನಲ್ಲಿ ಯಾವುದಾದರೊಂದು ತೊಂದರೆಯಾದರೂ ವೈದ್ಯಕೀಯ ಚಿಕಿತ್ಸೆ ದೊರೆಯುವುದಿಲ್ಲ. Primary Health Centre ಪ್ರಶ್ನೆ ಇರಲಿ, ನರ್ಸಿಂಗ್ ಸ್ಟಾಫ್ ದೊರೆಯದಿದ್ದರೆ ಏನು ಮಾಡಬೇಕು.

**(ಮುಂದು)**

**(1037) 13-12-2021 (12.50) ಕೆಜಿ -ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಮುಂದು):-**

ಅವರಿಗೆ ಬಾಡಿಗೆ ಮನೆಯಲ್ಲಿ ಇರಿ ಎಂದರೆ, ಅವರು ಯಾರೂ ಸಹ ಬಾಡಿಗೆ ಮನೆಯಲ್ಲಿರುವುದಿಲ್ಲ. ಇದು COVID-19 pandemic ನಲ್ಲಿ ಬಹಳ ತೊಂದರೆಯಾಗಿದೆ. ಕಟ್ಟಡವನ್ನು ಕಟ್ಟುವುದರ ಬಗ್ಗೆ ಹಾಗೂ ಶಿಥಿಲಗೊಂಡಿರುವಂತಹ ಕಟ್ಟಡಗಳನ್ನು ಪುನರ್ ನಿರ್ಮಾಣ ಮಾಡುತ್ತಾರೆಯೇ ಎಂಬುದನ್ನು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ. ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಟ್ಟ ನಂತರ ಸಿಬ್ಬಂದಿ ಕೊರತೆಯ ಬಗ್ಗೆ ಪ್ರಶ್ನೆ ಕೇಳುತ್ತೇನೆ.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮತ್ತು ಉಪ ಕೇಂದ್ರಗಳ ಮೂಲಭೂತ ಸೌಕರ್ಯಗಳ ಕೊರತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರು ವಿಶೇಷವಾಗಿ ಬೆಳಗಾವಿ ಜಿಲ್ಲೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ರಾಜ್ಯದಲ್ಲಿ ಸುಮಾರು 9600 ಪ್ರಾಥಮಿಕ ಆರೋಗ್ಯ ಉಪ ಕೇಂದ್ರಗಳಿವೆ. ಸುಮಾರು 2500 ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಿವೆ. ಇಡೀ ಬೆಳಗಾವಿ ಜಿಲ್ಲೆಯಲ್ಲಿ 139 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 616 ಉಪ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 616 ಉಪ ಕೇಂದ್ರಗಳಿದ್ದು, ಅದರಲ್ಲಿ 404 ಉಪ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ. ಬೆಳಗಾವಿ ವಿಭಾಗದ 95 ಮತ್ತು ಚಿಕ್ಕೋಡಿ ವಿಭಾಗದ 107 ಕಟ್ಟಡಗಳು ವಾಸಿಸಲು ಯೋಗ್ಯವಾಗಿರುವುದಿಲ್ಲ. ಹಾಗಾಗಿ, ಸಂಬಂಧಪಟ್ಟ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಸ್ಥಳೀಯವಾಗಿ ಲಭ್ಯವಿರುವ ಬಾಡಿಗೆ ಕಟ್ಟಡಗಳಲ್ಲಿ ವಾಸಿಸುತ್ತಿದ್ದು ಆರೋಗ್ಯ ಸೇವೆಯನ್ನು ನೀಡುತ್ತಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮತ್ತು ಉಪ ಕೇಂದ್ರಗಳ ಮೂಲಭೂತ ಸೌಕರ್ಯಗಳನ್ನು ಖಂಡಿತವಾಗಿ ಉನ್ನತೀಕರಣ ಮಾಡಬೇಕಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಬದ್ಧತೆ ಇದೆ. ಆ ಕಾರಣದಿಂದಲೇ ಮಾನ್ಯ ಮುಖ್ಯ ಮಂತ್ರಿಯವರು ನಮ್ಮ ಭಾರತ ದೇಶದ 75ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಅಮೃತ ಆರೋಗ್ಯ ಮೂಲ ಸೌಕರ್ಯಗಳ ಉನ್ನತೀಕರಣ ಯೋಜನೆಯಡಿಯಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರೂ.20.00 ಲಕ್ಷ ರೂಪಾಯಿಗಳಂತೆ ಪ್ರತಿ ಜಿಲ್ಲೆಯಲ್ಲಿ 25 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅದರಲ್ಲೂ ವಿಶೇಷವಾಗಿ ಶಿಥಿಲವಾಗಿರುವಂತಹ ಕಟ್ಟಡಗಳನ್ನು ಮೇಲ್ದರ್ಜೆಗೆ ಎರಿಸಲು ಸುಮಾರು 150 ಕೋಟಿ ರೂಪಾಯಿಗಳ ಅನುದಾನವನ್ನು ಕೊಟ್ಟಿದ್ದಾರೆ. ಈಗಾಗಲೇ ಆ ಕ್ರಮಗಳನ್ನು ಜಾರಿಗೊಳಿಸುತ್ತಿದ್ದೇವೆ. ಇದಲ್ಲದೇ 2021-22ನೇ ಸಾಲಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಬಲಪಡಿಸಲು, ಕೇಂದ್ರ ಸರ್ಕಾರ 15ನೇ ಹಣಕಾಸು ಆಯೋಗದ ಲೆಕ್ಕ ಶೀರ್ಷಿಕೆಯಲ್ಲಿ ಮತ್ತು ಆಯೋಗದ ಅಭಿಪ್ರಾಯದಂತೆ ಮುಂದಿನ 5 ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳನ್ನು ಮತ್ತು ಎಲ್ಲಾ ಉಪ ಕೇಂದ್ರಗಳನ್ನು Health and Wellness Centres ಗಳನ್ನಾಗಿ ಮಾಡಬೇಕೆಂದು ಉದ್ದೇಶ ಹೊಂದಿದೆ. ಹಾಗಾಗಿ, ಅದಕ್ಕೆ ಪ್ರತಿ ವರ್ಷ 552 ಕೋಟಿ ರೂಪಾಯಿಗಳ ಅನುದಾನವನ್ನು ಕೊಡುವುದಕ್ಕೆ ಕಳೆದ ತಿಂಗಳು ಒಪ್ಪಿದ್ದಾರೆ. ಈ ವರ್ಷದಿಂದಲೇ ಪ್ರತಿ ವರ್ಷ ನಮ್ಮ ರಾಜ್ಯಕ್ಕೆ 552 ಕೋಟಿ ರೂಪಾಯಿಗಳ ಅನುದಾನ ಬರುತ್ತದೆ. ಅದು ಮೂಲಭೂತ ಸೌಕರ್ಯಗಳನ್ನು ಒಳಗೊಂಡು laboratory setup ಅನ್ನು ಮತ್ತು ಎಲ್ಲಾ ರೀತಿಯ ತಪಾಸಣೆಯನ್ನು ಮಾಡುವುದಕ್ಕೆ ಯೋಗ್ಯವಾಗಿ ಬೇಕಾದಂತಹ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

ಉಪಕರಣಗಳನ್ನು ಖರೀದಿ ಮಾಡಿ ಸ್ಥಾಪನೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ಪಾಲು ಸಹ ದೊಡ್ಡ ಮಟ್ಟದಲ್ಲಿ ಆಗುತ್ತದೆ. ಮುಂದಿನ 5 ವರ್ಷಗಳಲ್ಲಿ ನಮ್ಮ ರಾಜ್ಯಕ್ಕೆ ಸುಮಾರು 2900 ಕೋಟಿ ರೂಪಾಯಿಗಳು ಲಭ್ಯವಾಗುತ್ತದೆ. ನನಗೆ ನಂಬಿಕೆ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಎಲ್ಲಾ ಉಪ ಕೇಂದ್ರಗಳು ಎಲ್ಲಾ ರೀತಿಯಲ್ಲಿಲಿಯೂ ಸಹ ಸಶಕ್ತವಾಗುತ್ತವೆ ಮತ್ತು ಮೇಲ್ದರ್ಜೆಗೆ ಎರುತ್ತವೆ ಎನ್ನುವಂತಹ ಅಭಿಪ್ರಾಯವನ್ನು ಹೊಂದಿದ್ದೇನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ನಂದಗಾವ್, ಅಥಣಿ ಮತ್ತು ಮೂಡಲಗಿ ತಾಲ್ಲೂಕ್‌ಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಡ್ಯಾಮೇಜ್ ಆಗಿವೆ. ಮಾನ್ಯ ಸಚಿವರು ಬೆಳಗಾವಿ ಅಧಿವೇಶನಕ್ಕೆ ಬಂದಿದ್ದಾರೆ. ಹಾಗಾಗಿ, ಸದರಿ ಸ್ಥಳಗಳಿಗೆ ಮಾನ್ಯ ಸಚಿವರು ಭೇಟಿ ಮಾಡಬೇಕೆಂದು ನನ್ನ ಮನವಿ. ಮಾನ್ಯ ಸಚಿವರು ಭೇಟಿ ಕೊಟ್ಟು ಪರಿಶೀಲಿಸಿದರೆ ಅಲ್ಲಿ basically ಏನೇನು ತೊಂದರೆಗಳಿವೆ ಎಂದು ಗೊತ್ತಾಗುತ್ತದೆ. ಮಾನ್ಯ ಸಚಿವರು ANM Centres ಸ್ವಂತಹ ಕಟ್ಟಡಗಳು ಇಲ್ಲವೆಂದು ಹೇಳಿದ್ದಾರೆ. ಕಟ್ಟಡ ಇದೆ. ಆದರೆ. ಅದು ವಾಸಿಸುವುದಕ್ಕೆ ಯೋಗ್ಯವಾಗಿಲ್ಲ. They are defunct. ಹಾಗಾಗಿ, ಮಾನ್ಯ ಸಚಿವರು ಅದನ್ನು ನೋಡಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರನ್ನು ಕರೆದುಕೊಂಡು ಹೋಗಿ ತೋರಿಸಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, 2020-2021ನೇ ಸಾಲಿನ ವಿಶೇಷ ನೇರ ನೇಮಕಾತಿ ಸಮಿತಿ ಮೂಲಕ 1048 ವೈದ್ಯರನ್ನು ಮತ್ತು 692 ತಜ್ಞ ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ. ನೇಮಕ ಮಾಡಿಕೊಂಡವರಲ್ಲಿ 855 ವೈದ್ಯರು ಮತ್ತು 343 ತಜ್ಞ ವೈದ್ಯರು ಕರ್ತವ್ಯಗಳಿಗೆ ಹಾಜರಾಗಿದ್ದಾರೆಂದು ಉತ್ತರದಲ್ಲಿ ಮಾನ್ಯ ಸಚಿವರು ತಿಳಿಸಿದ್ದಾರೆ. ಹಾಗಾಗಿ, ಹಾಜರಾಗದಿರುವ ವೈದ್ಯರ ಬಗ್ಗೆ ಹಾಗೂ ಇಲ್ಲಿನ ಕೊರತೆಯನ್ನು ಯಾವ ರೀತಿ

---

ನೀಗಿಸುತ್ತಾರೆಂಬ ಬಗ್ಗೆ ಮಾನ್ಯ ಸಚಿವರು clarification ಕೊಡಬೇಕು. ಇದರ ಜೊತೆಗೆ ಚಿಕ್ಕೋಡಿಯಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ 2018 ರಲ್ಲಿ ಪ್ರಾರಂಭವಾಗಿದೆ. Still, it is incomplete. ಅದು ಕೇಂದ್ರ ಸರ್ಕಾರದ NHM (National Health Mission) ಯೋಜನೆಯಲ್ಲಿ ಆಗಿದೆ. Still, it is not functioning. ಅದಕ್ಕೆ 2018 ರಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ. Now we are in 2021. ಇದರ ಬಗ್ಗೆಯೂ ಸಹ ಮಾನ್ಯ ಸಚಿವರು clarification ಕೊಡಬೇಕು ಮತ್ತು ವೈದ್ಯರ ಕೊರತೆಯನ್ನು ಯಾವ ಕಾಲಮಿತಿಯೊಳಗೆ ನೀಗಿಸುತ್ತಾರೆ ಎನ್ನುವುದನ್ನು ಹೇಳಬೇಕು.

**ಡಾ||ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ವೈದ್ಯರ ಕೊರತೆ ಬಹಳಷ್ಟು ವರ್ಷಗಳಿಂದ ಇದೆ. ಇದನ್ನು ನಮ್ಮ ಸರ್ಕಾರ ಗಮನಿಸಿ ಮೊದಲನೇ ಬಾರಿ ವಿಶೇಷವಾಗಿರುವಂತಹ ಒಂದು ನೇಮಕಾತಿ ನಿಯಮಗಳ ಅಧಿಸೂಚನೆಯನ್ನು ಹೊರಡಿಸಿ 1048 ಸಾಮಾನ್ಯ ವೈದ್ಯರುಗಳ ನೇಮಕಾತಿಗೆ ಸುಮಾರು 895 ವೈದ್ಯರು ಹಾಜರಾಗಿದ್ದಾರೆ. ಅಂದರೆ, ಈಗ 85% ಹೆಚ್ಚು ವೈದ್ಯರು ಕೆಲಸ ಮಾಡುತ್ತಿದ್ದಾರೆ. ಉಳಿದ 150 ವೈದ್ಯರಿಗೆ 2ನೇ ಪಟ್ಟಿ ಸಹ ರೆಡಿಯಾಗಿದೆ. ಈಗ ಚುನಾವಣೆಯ ನೀತಿ ಸಂಹಿತೆ ಇದ್ದ ಕಾರಣದಿಂದ ಅದನ್ನು ಮಾಡಲು ಆಗಿರಲಿಲ್ಲ. ಹಾಗಾಗಿ, 2ನೇ ಪಟ್ಟಿ 14ನೇ ದಿನಾಂಕದಿಂದ ಆಗುತ್ತದೆ. 692 ತಜ್ಞ ವೈದ್ಯರ ನೇಮಕಾತಿಗೆ 343 ತಜ್ಞ ವೈದ್ಯರು ಹಾಜರಾಗಿದ್ದಾರೆ. ಬಾಕಿ ಉಳಿದಿರುವ ಸಾಮಾನ್ಯ ವೈದ್ಯರು ಮತ್ತು ಸ್ನಾತಕೋತ್ತರ ಪದವಿ ಮಾಡಿರುವಂತಹ ವೈದ್ಯರು ಸಹ ಕಡ್ಡಾಯವಾಗಿ ಒಂದು ವರ್ಷ ಗ್ರಾಮೀಣಾ ಭಾಗದಲ್ಲಿ ಕೆಲಸ ಮಾಡಬೇಕೆಂದು ಕಾನೂನನ್ನು ಈಗ ಅನುಷ್ಠಾನಕ್ಕೆ ತಂದಿದ್ದೇವೆ. ಇದೇ ಮೊದಲನೇ ವರ್ಷ ಸುಮಾರು 2300 ವೈದ್ಯರನ್ನು ವಿವಿಧ ಕಾಲೇಜುಗಳಿಂದ ತೆಗೆದುಕೊಂಡಿದ್ದೇವೆ. ಈಗ ಅವರು ಕೆಲಸ ಮಾಡುತ್ತಿದ್ದಾರೆ. ಎಲ್ಲೆಲ್ಲಿ ಖಾಲಿ ಇತ್ತು, ಅಂತಹ ಕಡೆಗಳಿಗೆ ಅವರನ್ನು post ಮಾಡಿದ್ದೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಚಿಕ್ಕೋಡಿಯಲ್ಲಿರುವಂತಹ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಬಗ್ಗೆ ಹೇಳಿದ್ದಾರೆ. ಈ ಹಿಂದೆ ಆದಂತಹ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳ ಕಟ್ಟಡಗಳ ಕೆಲಸ ಮುಗಿದಿವೆ, ಅಂತಹ ಕಡೆಗಳಲ್ಲಿ ಸಿಬ್ಬಂದಿಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊರತೆ ಇದೆ. ಇನ್ನೂ ಸಿಬ್ಬಂದಿಯ ನೇಮಕ ಆಗಿರಲಿಲ್ಲ. ಏಕೆಂದರೆ, ಆರ್ಥಿಕ ಇಲಾಖೆಯಲ್ಲಿ ಅದರ ಅನುಮೋದನೆ ಪಡೆದುಕೊಂಡಿರಲಿಲ್ಲ. ಈಗ ಅದಕ್ಕೆ ಒಂದು ವಿಶೇಷವಾದಂತಹ ಕಾನೂನನ್ನು ಮಾಡಿ ಅನುದಾನವನ್ನು ಸಹ ಪಡೆದುಕೊಳ್ಳಲಾಗಿದೆ. ಟೆಂಡರ್‌ನ್ನು ಮಾಡಿ ಅದಷ್ಟು ಬೇಗ ಉಪಕರಣಗಳನ್ನು ಮತ್ತು ನೇಮಕಾತಿಯನ್ನು ಮಾಡಿಕೊಳ್ಳಲಾಗುವುದು.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ನಸೀರ್ ಅಹ್ಮದ್‌ರವರೇ, ತಾವೀಗ ಮಾತನಾಡಿ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ವಿಷಯ ಬಹಳ ಗಂಭೀರವಾಗಿದೆ.,

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ ಅಲ್ಲವೇ;

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದಲ್ಲಿ ಏನಾಗುತ್ತಿದೆ ಎಂದು ತಾವೇ ಗಮನಹರಿಸಿಲ್ಲವೆಂದರೆ, ಇದರ ಬಗ್ಗೆ ಗಮನಹರಿಸುವವರು ಯಾರು? ನಾವು ಯಾರ ಕಡೆಗೆ ಹೋಗಬೇಕು? ಅದಕ್ಕೆ ದಯವಿಟ್ಟು ಒಂದು ನಿಮಿಷ ಮಾತನಾಡುವುದಕ್ಕೆ ಸಮಯ ಕೊಡಿ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನಿಯಮಗಳಿವೆ. ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ, ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಬೆಳಗಾವಿಯ ಅಧಿವೇಶನದಲ್ಲಿ ಒಂದು ತಾಸು ಹೆಚ್ಚಿಗೆ ಮಾಡಿ. ರಾತ್ರಿ 10.00 ಗಂಟೆಯವರೆಗೆ ಸದನವನ್ನು ನಡೆಸಿ. ತೊಂದರೆ ಏನು ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದಕ್ಕೆ ನನ್ನ ತಕರಾರು ಇಲ್ಲ. ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಲಕ್ಷಣ ಸಂಗಪ್ಪ ಸವದಿ:-** ಮಾನ್ಯ ಸಭಾಪತಿಯವರೇ, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಬಹಳ ಬದ್ಧತೆಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೆ ಹಣಕಾಸಿನ ತೊಂದರೆ ಇತ್ತು, ಈಗ ಅದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ, ಮುಂದಿನ ದಿನಗಳಲ್ಲಿ ಈ ಎಲ್ಲಾ ಕೊರತೆಯನ್ನು ನೀಗಿಸುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ನಾವು ಅದನ್ನು ಸ್ವಾಗತ ಮಾಡುತ್ತೇವೆ. ಇಲ್ಲಿ ಒಂದು ವಿಷಯವನ್ನು ಬಹಳ ಗಂಭೀರವಾಗಿ ಅವಲೋಕನೆ ಮಾಡಬೇಕಾಗಿದೆ. ಸುಮಾರು ದಿವಸಗಳಿಂದ ಅನೇಕ ಜನರಿಗೆ ಸಂಬಳ ಆಗಿಲ್ಲ. ಮೊದಲಿಗೆ ಸಂಬಳ ಕೊಡಿಸುವಂಥದ್ದು ಆಗಬೇಕು. ಇದರ ಜೊತೆಗೆ ಸರ್ಕಾರ ಎಷ್ಟೇ ವೈದ್ಯರನ್ನು ನೇಮಕ ಮಾಡಿದರೂ ಸಹ, ಅವರು ಎಷ್ಟು ಗಂಟೆಗಳ ಕಾಲ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರೆ ಎನ್ನುವುದನ್ನು ಅವಲೋಕನ ಮಾಡಬೇಕಾಗುತ್ತದೆ. ವೈದ್ಯರು ಬೆಳಗ್ಗೆ ಆಸ್ಪತ್ರೆಗೆ ಬಂದು ಸಹಿ ಮಾಡಿ ಒಂದು ಗಂಟೆಯ ಕಾಲ ಕುಳಿತುಕೊಂಡು ನಂತರ ಎದ್ದು ಹೋಗಿ ಸ್ವಂತ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಾರೆ. 100 ಕ್ಕೆ ಸುಮಾರು 60% ವೈದ್ಯರು ಖಾಸಗಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದ್ದಾರೆ. ಅವರ ಹೆಂಡತಿಯ ಹೆಸರಿನಲ್ಲಿ ಅಥವಾ ಅವರ ಚಿಕ್ಕಪ್ಪನಲ್ಲಿ ಹೆಸರಿನಲ್ಲಿ, ಬೇರೆ ಯಾರೋ ಹೆಸರಿನಲ್ಲಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದ್ದಾರೆ. ಅವರು ಸರ್ಕಾರದ ಸಂಬಳವನ್ನು ಪಡೆದುಕೊಳ್ಳುತ್ತಾರೆ.

**(ಮುಂದು)**

**(1038) 13-12-2021 (1.00) ಎಂವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು)**

ಆದರೆ ಅವರು practice ಮಾಡುವುದು ತಮ್ಮ ಸ್ವಂತ ಆಸ್ಪತ್ರೆಯಲ್ಲಿ. ಈಗ ಸರ್ಕಾರಿ ಆಸ್ಪತ್ರೆಗಳಿಗೆ ಯಾವ ರೋಗಿಗಳು ಬರುತ್ತಾರೆ, ಅಂತಹ ರೋಗಿಗಳಿಗೆ ನೀವು ಇಂತಹ ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಎಂದು ವೈದ್ಯರೇ ಹೇಳುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಉಚಿತವಿರುತ್ತದೆ. ಅವರು ಸರ್ಕಾರಿ ಆಸ್ಪತ್ರೆಯಲ್ಲಿ ಸಂಬಳ ತೆಗೆದುಕೊಂಡು, ಖಾಸಗಿ ಆಸ್ಪತ್ರೆಯಲ್ಲಿ ರೋಗಿಗಳ ಕಡೆಯಿಂದ ಶುಲ್ಕ ವಸೂಲು ಮಾಡುವಂಥದ್ದು

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನಡೆಯುತ್ತಿದೆ. ಅದಕ್ಕೆ ದಯಮಾಡಿ, ಇದರ ಬಗ್ಗೆ ಗಂಭೀರವಾದಂತಹ ಚಿಂತನೆಯನ್ನು ಮಾಡುತ್ತಿದ್ದಾರೆಯೇ? ಆ ರೀತಿ ಮಾಡುವಂತಹವರ ಮೇಲೆ ಯಾವ ರೀತಿಯ ಕ್ರಮ ಕೈಗೊಳ್ಳುತ್ತಾರೆ? ಮತ್ತು ಅಂತಹವರಿಗೆ ಏನಾದರೂ ಶಿಕ್ಷೆಗೆ ಗುರಿ ಪಡಿಸುವಂತಹ ವ್ಯವಸ್ಥೆಯನ್ನು ಜಾರಿಗೆ ತರುತ್ತಾರೆಯೇ? ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಡಾ.ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಹಿರಿಯ ನಾಯಕರು ಗಮನಿಸಿರುವ ಹಾಗೆ, ಅದರಲ್ಲಿ ಸತ್ಯ ಕೂಡ ಇದೆ. ಆದರೆ, ಅನೇಕ ವೈದ್ಯರು ಗ್ರಾಮೀಣ ಪ್ರದೇಶದ ಪ್ರಾಥಮಿಕ ಚಿಕಿತ್ಸಾ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೆಲ್ಲರೂ ಕೂಡ ಹೆಚ್ಚು ಕಡಿಮೆ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ಆದರೆ, ಬೆಳಗ್ಗೆ 9.30 ರಿಂದ ಸಂಜೆ 4.30ರವರೆಗೆ ಅವರು ಅಲ್ಲೇ ಇರಬೇಕು. ಈಗ ಎಲ್ಲಿ ವಸತಿ ನಿಲಯಗಳ ವ್ಯವಸ್ಥೆ ಇಲ್ಲ. ಅಂತಹ ಸ್ಥಳಗಳಲ್ಲಿ ಅನೇಕ ವೈದ್ಯರುಗಳು ಉಳಿಯುತ್ತಿಲ್ಲ. ಆದರೆ, ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವಂತಹ, ವೈದ್ಯಕೀಯ ಕಾಲೇಜುಗಳಲ್ಲಿ ಬಹುಶಃ ಶೇಕಡಾ 50 ರಿಂದ 60ರಷ್ಟು ಈ ರೀತಿ ಇರಬಹುದು. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ, ಅನೇಕ ಕಡೆಗಳಲ್ಲಿ ಅವರುಗಳು ಬೇರೆ ಕಡೆಗಳಲ್ಲಿ ಕೂಡ, ವೈಯಕ್ತಿಕವಾಗಿ ಮತ್ತು ಖಾಸಗಿಯಾಗಿ ಅವರದೇ ಆದಂತಹ ಕೆಲವು ಆಸ್ಪತ್ರೆಗಳನ್ನು ಸ್ಥಾಪನೆ ಮಾಡಿರಬಹುದು ಅಥವಾ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿರಬಹುದು. ಆದರೆ, ಅವರು ನಿಗದಿತ ಸಮಯದಲ್ಲಿ ಸರ್ಕಾರಿ ಸಮಯದಲ್ಲಿ ಕೆಲಸ ಮಾಡಬೇಕು. ಇದೆಲ್ಲಾ ಸರ್ಕಾರದ ಗಮನಕ್ಕೆ ಬಂದ ಮೇಲೆ ಆ ಸಮಯದಲ್ಲಿ ಕಡ್ಡಾಯವಾಗಿ ಅಲ್ಲಿ ಇರುವುದಕ್ಕೆ ಸರ್ಕಾರ ತಂತ್ರಾಜ್ಞಾನವನ್ನು ಅಳವಡಿಸಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈಗ ಎಲ್ಲಾ ಕಾಲೇಜುಗಳಲ್ಲಿ CCTV camera surveillance ಗಳನ್ನು establish ಮಾಡಿದ್ದೇವೆ. ಅದರ ಜೊತೆಗೆ ಅವರ ಫೋನ್‌ಗಳಿಗೆ geotagging ಅನ್ನು ಅಳವಡಿಸಿದ್ದೇವೆ. ಇನ್ನು ಅನೇಕ ರೀತಿಯಲ್ಲೂ ಕೂಡ ನಾವು ಈಗಾಗಲೇ ವಿಚಾರ ಮಾಡಿ, ಪ್ರತಿಯೊಬ್ಬ ವೈದ್ಯರೂ ಕೂಡ ಕಡ್ಡಾಯವಾಗಿ ಹಾಜರಾಗಿ, ಸರ್ಕಾರ ಅವರಿಂದ ಯಾವ ರೀತಿಯ ಕೆಲಸ ಬಯಸಿದೆ, ಆ ರೀತಿ ಅವರು ಕೆಲಸ ಮಾಡಬೇಕು ಎಂದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದೆ. ಆದರೆ, ಇನ್ನೂ ಕೂಡ ನಿರೀಕ್ಷಿತವಾದಂತಹ ಫಲಿತಾಂಶ ಸಿಕ್ಕಿಲ್ಲ. ಇವತ್ತು ನಮಗೆ ವೈದ್ಯ ವೃತ್ತಿಯ ಬಗ್ಗೆ ಗೊತ್ತಿದೆ. ಆದರೆ, ಆ ರೀತಿಯಲ್ಲಿ ಮೌಲ್ಯಾಧಾರಿತವಾದಂತಹ ಚಿಂತನೆಗಳು ಬರದೇ ಇದ್ದರೆ, ನಾವು ಕೇವಲ ನಿಯಮಗಳನ್ನು ತಂದು ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಬಹಳ ಕಷ್ಟವಾಗುತ್ತದೆ. ಈ ಹಿಂದೆ ವೈದ್ಯರ ಸರಬರಾಜು ಕಡಿಮೆ ಇತ್ತು. ಹಾಗಾಗಿ ವೈದ್ಯರನ್ನು ತೆಗೆಯುವುದಕ್ಕೆ ಆಗುತ್ತಿರಲಿಲ್ಲ ಮತ್ತು ಅವರನು ಅಮಾನತು ಮಾಡಿದರೆ, ಮತ್ತೆ ಬೇರೆ ವೈದ್ಯರು ಬರುವಂತಹ ಪರಿಸ್ಥಿತಿ ಇರಲಿಲ್ಲ. ಆದರೆ, ಇವತ್ತಿನ ದಿವಸ ಪರಿಸ್ಥಿತಿ ಬದಲಾಗಿದೆ. ಅಂದರೆ, ಇವತ್ತಿನ ದಿವಸ ವೈದ್ಯರ ಸರಬರಾಜು ಹೆಚ್ಚಾಗಿದೆ. ಹಾಗಾಗಿ, ಇವತ್ತು ಸರ್ಕಾರಕ್ಕೆ ಅವರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅವಕಾಶವಿದೆ. ಮಾನ್ಯ ಸದಸ್ಯರಾದ ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಿದ್ದಾಗ ಅವರು ಬೆಳಗಾವಿ ಜಿಲ್ಲೆಯಲ್ಲಿ ಒಳ್ಳೆಯ ಕ್ರಮಗಳನ್ನು ಕೈಗೊಂಡಾಗ, ಈಗ ಬೆಳಗಾವಿ ವೈದ್ಯಕೀಯ ಕಾಲೇಜು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಹಾಗಾಗಿ, ಅಲ್ಲಿ ನಮ್ಮ ಜನಪ್ರತಿನಿಧಿಗಳು ಕೂಡ ಸ್ವಲ್ಪ proactive ಆಗಿ, ಆಯಾಯ ಜಿಲ್ಲೆಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದಕ್ಕೆ ನಾವು ಸರ್ಕಾರದ ವತಿಯಿಂದ ಇನ್ನಷ್ಟು ಬಿಗಿಯಾದಂತಹ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಉದ್ದೇಶಿಸಿದ್ದೇವೆ. ಈ ರೀತಿ ಬೇರೆ ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರಿ ಕರ್ತವ್ಯದ ಸಮಯದಲ್ಲಿ ಹೋದರೆ, ಮುಂದಿನ ದಿನಗಳಲ್ಲಿ ಖಂಡಿತವಾಗಿ ಅವರ ಮೇಲೆ ಕ್ರಮ ಕೈಗೊಳ್ಳುವಂತಹ ಸ್ಪಷ್ಟವಾದಂತಹ ನೀತಿಯನ್ನು ರೂಪಿಸುತ್ತೇವೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## ಪ್ರಶ್ನೆ ಸಂಖ್ಯೆ: 101
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ವಿವರವಾದ ಉತ್ತರವನ್ನು ಒದಗಿಸಿದ್ದಾರೆ. ಆದರೆ, ಇದಕ್ಕೆ ಏಕೆ ಈ ರೀತಿಯ ತಾರತಮ್ಯವಾಯಿತು ಎಂದು ಮಾನ್ಯ ಸಚಿವರು ಮಾಹಿತಿಯನ್ನು ನೀಡಲಿ.

**ಡಾ:ಸಿ.ಎನ್.ಅಶ್ವತ್ಥ ನಾರಾಯಣ, ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸಚಿವರು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗಾಗಲೇ ಬಹಳ ಸ್ಪಷ್ಟವಾಗಿ ಉತ್ತರವನ್ನು ನೀಡಲಾಗಿದೆ. ಮುಖ್ಯವಾಗಿ ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯ ಲೆಕ್ಕಾಧಿಕಾರಿಗಳು ಮತ್ತು ರಾಜ್ಯ ಲೆಕ್ಕಪತ್ರ ಇಲಾಖೆಯ ಲೆಕ್ಕ ಅಧೀಕ್ಷಕರ ಹುದ್ದೆಗಳು ಭಿನ್ನ ವೇತನ ಶ್ರೇಣಿ ಹೊಂದಿದ್ದು. ಇದಕ್ಕೆ ಸಂಬಂಧಪಟ್ಟಂತೆ 2015ರಲ್ಲಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಲಾಗಿದೆ. ಈ ಲೆಕ್ಕಪತ್ರ ಇಲಾಖೆಯ ಅಧೀಕ್ಷಕರ, ವೇತನ ಶ್ರೇಣಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀಕ್ಷಕರ ವೇತನ ಶ್ರೇಣಿಗಳು ಭಿನ್ನವಾಗಿರುವಂಥದ್ದು ಇದೆ. 2015ರಲ್ಲಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಿ, ಅದಕ್ಕೆ ಆಕ್ಷೇಪಣೆಯನ್ನು ಕರೆಯಲಾಗಿರುತ್ತದೆ. ಅದಕ್ಕೆ ಒಂದೂ ಆಕ್ಷೇಪಣೆ ಬಂದಿಲ್ಲ. ಹಾಗಾಗಿ ಇದನ್ನು ಭಿನ್ನವಾಗಿ ಮಾಡಿರುವಂಥದ್ದು ಇದೆ. ಅದರ ಆಧಾರ ಮೇಲೆ ಎಲ್ಲೋ ಒಂದು ಕಡೆ ಗೊತ್ತಿಲ್ಲದೆ ಒಂದು ಭಾಗದಲ್ಲಿ ಆರ್ಥಿಕ ಇಲಾಖೆಯ ಲೆಕ್ಕ ಅಧೀಕ್ಷಕರ ಸಂಬಳವನ್ನೇ ಕೊಟ್ಟು ಬಿಟ್ಟಿದಾರೆ. ಅದನ್ನು ಸರಿಪಡಿಸುವಂಥದ್ದು ಆಗಿದೆ. ಬಹಳ ಸ್ಪಷ್ಟವಾಗಿ ಇದನ್ನು ಎಲ್ಲರಿಗೂ ಕೂಡ ಕೊಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ, ಸಾರ್ವಜನಿಕ ಶಿಕ್ಷಣ ಇಲಾಖೆಗೆ ಏನು ಕೊಡಬೇಕಾಗಿದೆಯೋ ಆ ವೇತನ ಶ್ರೇಣಿಯನ್ನು ಕೊಡುವಂಥದ್ದು ಮತ್ತು ಲೆಕ್ಕಪತ್ರ ಇಲಾಖೆಗೆ ಏನು ವೇತನ ಶ್ರೇಣಿ ಇದೆಯೋ ಅದನ್ನು ಕೊಡುವಂಥದ್ದು ಆಗುತ್ತದೆ. ಎಲ್ಲೋ ಒಂದು ಕಡೆ ಒಂದು ಸಣ್ಣ ಲೋಪವಾಗಿರುವುದರಿಂದ ಅದನ್ನು ಸರಿಪಡಿಸುವಂತಹ ಕೆಲಸ ಆಗಿದೆ. ಅದನ್ನು ಸರಿಪಡಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಈ ರೀತಿ ಎಷ್ಟು ವರ್ಷಗಳು ಆಗಿದೆ ಎಂದು ಮಾನ್ಯ ಸಚಿವರ ಬಳಿ ಮಾಹಿತಿ ಇದೆಯೇ?

**ಡಾ:ಸಿ.ಎನ್.ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಧಾರವಾಡ ಭಾಗದ ಕಮೀಷನರೇಟ್‌ನಲ್ಲಿ ಒಂದಕ್ಕೆ ಕೊಟ್ಟಿರುವಂಥದ್ದು ಇದೆ. ಆ ರೀತಿ ಕೊಟ್ಟಿರುವುದನ್ನು ಸರಿಪಡಿಸಿ, ಬಹಳ ಸ್ಪಷ್ಟಪಡಿಸುವಂಥದ್ದು ಆಗಿದೆ. ಅದನ್ನು ಸರಿಪಡಿಸುವಂತಹ ಪ್ರಯತ್ನ ಆಗಿತ್ತು. ಅದನ್ನು ಸರಿಪಡಿಸುವುದು ಎಂದರೆ, ಸಾರ್ವಜನಿಕ ಶಿಕ್ಷಣ ಇಲಾಖೆಯವರಿಗೂ ಸಹ ಇದನ್ನೇ ಪರಿಗಣಿಸಬಹುದೇ ಎಂದು. ಆದರೆ, ಇದನ್ನು ಪರಿಗಣಿಸುವುದಕ್ಕೆ ಆಗುವುದಿಲ್ಲವೆಂದು, ಬಹಳ ಸ್ಪಷ್ಟವಾಗಿ ಉತ್ತರ ಬಂದಿರುವುದು ಇದೆ. ಆ ರೀತಿ ಬಂದಿರುವ ಕಾರಣ, ಈಗ ಅವರಿಗೆ ಏನು ವೇತನ ಶ್ರೇಣಿ ನಿಗದಿಯಾಗಿದೆ ಆ ಪ್ರಕಾರ ನೀಡುವಂಥದ್ದು ಆಗಿದೆ.

**ಶ್ರೀ ನಸೀರ್ ಅಹ್ಮದ್:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರಿಗೆ Principle of Natural Justice ಬಗ್ಗೆ ಏನಾದರೂ ಯೋಚನೆ ಇದೆಯೇ? ಅಂದರೆ, ತಪ್ಪು ಮಾಡಿದ್ದೇವೆ. ಇದನ್ನು ಅವರಿಗೆ ನೀಡಿದ್ದೇವೆ. ಆದರೆ, ಇವರಿಗೆ ನೀಡಿಲ್ಲ. ಅದಕ್ಕೆ ಇವರಿಗೂ ಸಹ ಕೊಡಬೇಕು. ಇವರಿಗೆ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಬೇಕು ಎಂದು.

**ಸಭಾಪತಿಯವರು:-** ಅಂದರೆ, ಅನ್ಯಾಯವಾಗಿದ್ದರೆ ಸರಿಪಡಿಸುತ್ತೇವೆಂದು.

**ಡಾ:ಸಿ.ಎನ್.ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂತೆ ಬಹಳ ಸ್ಪಷ್ಟವಾಗಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಲಾಗಿದೆ. ಆ ಪ್ರಕಾರ ಅದನ್ನು ನೀಡಲಾಗಿದೆ. ಎಲ್ಲೋ ಒಂದು ಕಡೆ Principle of Natural Justice ಪ್ರಶ್ನೆಯೇ ಉದ್ಭವಾಗುವುದಿಲ್ಲ. ಇಲಾಖೆಯಲ್ಲಿ ಆಯಾಯ ಹುದ್ದೆಗಳಿಗೆ ಪ್ರತ್ಯೇಕವಾಗಿ ವೇತನ ಶ್ರೇಣಿಯನ್ನು ಕೊಡಬೇಕೆಂದು ನಿಗದಿಯಾಗಿದೆ. ನಿಗದಿಯಾಗಿರುವಂತಹ ಪ್ರಕಾರವೇ ಕೊಡುವಂಥದ್ದು ಆಗುತ್ತಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

## ಪ್ರಶ್ನೆ ಸಂಖ್ಯೆ: 146
## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಪ್ರತಾಪ ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈ ಪ್ರಶ್ನೆಯ ಹಿಂದೆ ಇರುವ ಆಶಯ ಮತ್ತು ಆಗ್ರಹ ಕೇವಲ ಅಂಕಿ ಸಂಖ್ಯೆಗಳನ್ನು ಪಡೆದುಕೊಳ್ಳುವಂಥದ್ದು ಅಲ್ಲ. ಅದರ ಬದಲಾಗಿ, ಈಗ ನಾವು ಕಾಲದ ಅಗತ್ಯಕ್ಕೆ ಸರಿಯಾಗಿ ಉನ್ನತೀಕರಿಸುವಂತಹ ಹೊಸ ಶಿಕ್ಷಣ ನೀತಿಯ ಒಂದು ಕಾಲಘಟ್ಟದಲ್ಲಿದ್ದೇವೆ. ಅದಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳ ಉತ್ಸಾಹದಿಂದ, ಈ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತರುವ ಹಿನ್ನೆಲೆಯಲ್ಲಿ ನೇರವಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯಕ್ಕೆ ಸಂಬಂಧಪಟ್ಟಂತಹ ಈ ಐಟಿಐ ಕಾಲೇಜುಗಳ ಬಗ್ಗೆ, ಸರ್ಕಾರ ಯಾವ ರೀತಿಯಲ್ಲಿ ಈಗಿನ ಕಾಲದ ಅಗತ್ಯಕ್ಕೆ ತಕ್ಕಂತೆ ಸರಿಯಾಗಿ, ಇದನ್ನು ಮತ್ತೊಮ್ಮೆ ಪುನರ್ ಪರಿಶೀಲಿಸಿ, ಅನುದಾನ ಕೊಡುವಂತಹ ದೃಷ್ಠಿಯಲ್ಲಿ, ಜನರ ನಿತ್ಯ ಜೀವನಕ್ಕೆ ಅವಶ್ಯಕತೆರಿರಬಹುದು ಮತ್ತು ಜನರಿರಬಹುದು, ಕೌಶಲ್ಯಾಭಿವೃದ್ಧಿಯನ್ನು ನೇರವಾಗಿ ಬಡ ಮಕ್ಕಳು ಕಲಿಯುವಂತಹ ಈ ಐಟಿಐ ಕಾಲೇಜುಗಳಿಗೆ ಅನುದಾನವನ್ನು ಹೆಚ್ಚು ಕೊಡುವ ದೃಷ್ಠಿಯಲ್ಲಿ. ಪ್ರಶ್ನೆಗೆ ಕೇವಲ ಉದ್ಭವಿಸುವುದಿಲ್ಲ ಎನ್ನುವಂತಹ ಉತ್ತರವನ್ನು ನೀಡಿದರೆ ಸಾಕಾಗುವುದಿಲ್ಲ. ಈ ಶಿಕ್ಷಣ ನೀತಿಯನ್ನು ಪುನರ್ ಪರಿಶೀಲಿಸುವಂತಹ ಈ ಸಂದರ್ಭದಲ್ಲಿ ಈ ಐಟಿಐ ಕಾಲೇಜುಗಳಿಗೆ ಅನುದಾನವನ್ನು ಕೊಡುವಂತಹ ದೃಷ್ಠಿಯಲ್ಲಿ ಸರ್ಕಾರದ ಮುಂದೆ ಯಾವ ರೀತಿಯ ಯೋಚನೆ ಇದೆ? ಮತ್ತು ಮಾನ್ಯ ಸಚಿವರು ಇದನ್ನು ಪುನರ್ ಪರಿಶೀಲಿಸಬೇಕು ಮತ್ತು ಪರಿಗಣಿಸಬೇಕು ಎನ್ನುವಂತಹ ಆಗ್ರಹ ಈ ಪ್ರಶ್ನೆಯ ಹಿಂದೆ ಇದೆ.

**ಡಾ:ಸಿ.ಎನ್.ಅಶ್ವತ್ಥ ನಾರಾಯಣ:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ 275 ಸರ್ಕಾರಿ ಐಟಿಐ ಕಾಲೇಜುಗಳು ಮತ್ತು 196 ಅನುದಾನಕ್ಕೆ ಒಳಪಟ್ಟಿರುವ ಐಟಿಐ ಕಾಲೇಜುಳಿವೆ. ಈಗ ಐಟಿಐ ಸಂಸ್ಥೆಗಳಲ್ಲಿ ಇರುವಂತಹ ಸೀಟುಗಳ ಪ್ರಮಾಣದಷ್ಟು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸೀಟುಗಳು ಪೂರ್ಣಪ್ರಮಾಣದಲ್ಲಿ ಭರ್ತಿಯಾಗುತ್ತಿಲ್ಲ. ಆದುದರಿಂದ, ಈಗಾಗಲೇ ಇದಕ್ಕೆ ಸಾಕಷ್ಟು ಒತ್ತು ಕೊಟ್ಟು ಕೆಲಸ ಮಾಡುವಂಥದ್ದು ಆಗುತ್ತಿದೆ.

**(ಮುಂದು)**

(1039) 13.12.2021 01.10 LL-VK

**(ಸಭಾಪತಿಯವರ ಉಪಸ್ಥಿತಿ)**

**ಡಾ: ಸಿ.ಎನ್. ಅಶ್ವತ್ಥನಾರಾಯಣ (ಮುಂದು)**

ಸರ್ಕಾರದಲ್ಲಿ ಇನ್ನೂ ಹೆಚ್ಚಿನ capacity ಯಲ್ಲಿ ಕಲಿಸುವುದಕ್ಕೆ ಅವಕಾಶ ಇದೆ. ಹಾಗಾಗಿ, ಅನುದಾನ ಕೊಡುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಇದು ಈಗಿರುವಂತಹ ಸಂಸ್ಥೆಗಳನ್ನು ಉನ್ನತೀಕರಣ ಮಾಡುವಂಥದ್ದು ಮತ್ತು ಈಗಿರುವಂತಹ ಸೀಟುಗಳನ್ನು ಭರ್ತಿ ಮಾಡುವಂತಹ ಪೂರ್ಣ ಪ್ರಯತ್ನಗಳನ್ನು ಮಾಡುವಂಥದ್ದು ಆಗುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಕೆ.ಪ್ರತಾಪ ಸಿಂಹ ನಾಯಕ್:-** ಮಾನ್ಯ ಸಭಾಪತಿಯವರೇ, ನಾನು ಪುನಃ ಅದನ್ನೇ ಪುನರಾವರ್ತನೆ ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಪ್ರತಾಪ ಸಿಂಹ ನಾಯಕ್‌ರವರು ಏನು ಹೇಳುತ್ತಿದ್ದಾರೆಂದರೆ, ಅನುಮತಿ ಕೊಡುವಾಗ ಈ ಬಗ್ಗೆ ಸರ್ಕಾರ ವಿಚಾರ ಮಾಡಬೇಕು. ಬದಲಾಗಿ, ಅನುಮತಿ ಕೊಟ್ಟ ನಂತರ ಅವುಗಳಿಗೆ ಗ್ರ್ಯಾಂಟ್ ಕೊಡಬೇಕು ಎನ್ನುವುದಾಗಿದೆ. ಅನುಮತಿಯನ್ನು ಕೊಡುವಾಗ ಸರ್ಕಾರದಿಂದ ಅನುಮತಿ ನೀಡಬಾರದು. ಒಂದು ವೇಳೆ ಅನುಮತಿ ಕೊಟ್ಟ ನಂತರ ಗ್ರ್ಯಾಂಟ್ ಕೊಡುತ್ತೀರೋ ಅಥವಾ ಇಲ್ಲವೋ ಎಂಬ ಬಗ್ಗೆ ಅವರು ಕೇಳುತ್ತಿದ್ದು, ಅದರ ಬಗ್ಗೆ ತಮ್ಮ ಉತ್ತರವನ್ನು ನೀಡಿ.

**ಡಾ: ಸಿ.ಎನ್.ಅಶ್ವತ್ಥನಾರಾಯಣ:-** ಮಾನ್ಯ ಸಭಾಪತಿಯವರೇ, ಇದನ್ನು ಪರಿಗಣನೆ ಮಾಡುವಂತಹ ಯೋಚನೆಯಲ್ಲಿ ಸರ್ಕಾರ ಇನ್ನು ಇರುವುದಿಲ್ಲ. ಅದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ, ಪುನಃ ಅದನ್ನು ಪರಿಶೀಲನೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇವೆಂದು ಹೇಳುವುದು ಅಷ್ಟು ಸೂಕ್ತವಲ್ಲ. ಅದಕ್ಕೆ ಸರ್ಕಾರದಲ್ಲಿ ಅವಕಾಶ ಇರುವುದಿಲ್ಲ. ಹಾಗಾಗಿ, ಕೊಡುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:128**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಗಂಭೀರವಾದಂತಹ ವಿಚಾರ. ಹಲವಾರು ಪತ್ರಿಕಾ ಮಾಧ್ಯಮಗಳಾದ The Hindu, Deccan Herald, The Economic Times, Times of India, Asianet ಮತ್ತು ಇತರ ಎಲ್ಲಾ ಮಾಧ್ಯಮಗಳಲ್ಲಿಯೂ ಸಹ ಫೇಕ್ ಮಾರ್ಕ್ಸ್‌ಕಾರ್ಡ್(ನಕಲಿ ಅಂಕಪಟ್ಟಿ) ವಿಚಾರದಲ್ಲಿ ಬಹಳಷ್ಟು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾಗಿರುತ್ತದೆ. ನಾನು ಬಹಳ ಗಂಭೀರವಾದ ಪ್ರಶ್ನೆ ಕೇಳಿದ್ದೇನೆ. ಅದರಲ್ಲಿಯೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಯಾವರೀತಿ ನಕಲಿ ಅಂಕಪಟ್ಟಿ ಉದ್ಭವವಾಯಿತು? ಇದು ಹೊಸದೇನಲ್ಲ.ನಾನು ಕೂಡ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಬಂದವನು. ನಾನು ಬೆಂಗಳೂರು ವಿಶ್ವವಿದ್ಯಾನಿಲಯ ಬಿಟ್ಟು ಸುಮಾರು 50 ವರ್ಷ ಆಯಿತು. ಆ ಸಂದರ್ಭದಲ್ಲಿ ಒಂದು ಅಥವಾ ಎರಡು ಪ್ರಕರಣಗಳು ಇದ್ದವು. ಈಗ ಎಷ್ಟು ಇವೆ ಎಂಬ ಬಗ್ಗೆ ತಮಗೂ ಸಹ ಗೊತ್ತಿದೆ. ಈ ಪ್ರಶ್ನೆ ಏತಕ್ಕೆ ಗಂಭೀರವಾಗಿದೆ ಎಂದು ನಾನು ಹೇಳುತ್ತಿದ್ದೇನೆಂದರೆ, ಈ ದೇಶದಲ್ಲಿ ನಕಲಿ ಅಂಕಪಟ್ಟಿ ಪಡೆದು ಬಂದಂತವರು ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ.ಗಳು ಮತ್ತು ಕೇಂದ್ರದಲ್ಲಿ ಮಂತ್ರಿಗಳೆಲ್ಲಾ ಆಗಿರುತ್ತಾರೆ.

Vyapam Ghotala ಎಂದು ಅಂದರೆ, ವ್ಯವಸಾಯಿಕ್ ಪರೀಕ್ಷಾ ಮಂಡಲ್ ಎಂದು ಮಧ್ಯಪ್ರದೇಶದಲ್ಲಿ ಇದೆ. ಅದರಲ್ಲಿ Professional Examination Board ಎಂದು ಇಂಗ್ಲಿಷ್‌ನಲ್ಲಿ ಹೇಳುತ್ತಾರೆ. ಈ ರೀತಿಯ ಘಟನೆಗಳು ನಡೆದು ಅದರ ಬಗ್ಗೆ ವಿಚಾರಣೆ ನಡೆದ ನಂತರ ಇದರಲ್ಲಿ ಸುಮಾರು 1 ಲಕ್ಷಕ್ಕಿಂತಲೂ ಹೆಚ್ಚು ಪ್ರಕರಣಗಳು ಇರುವಂಥದ್ದಾಗಿದೆ. ಈಗಾಗಲೇ 45 ಲಕ್ಷ ಜನ ಸಾವನ್ನಪ್ಪಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ನವರು, "ಈ ರೀತಿ ಆಗಿದೆ, ಇದರ ಬಗ್ಗೆ ತಾವು ಸಿ.ಐ.ಡಿ. ತನಿಖೆ ಮಾಡಿಸುತ್ತೀರಾ" ಎಂದು ಬಹಳ ಗಂಭೀರವಾದ ಸಲಹೆಯನ್ನು ಕೊಟ್ಟಿದ್ದಾರೆ. ಆಗಲೇ ಮಾನ್ಯ ಮಂತ್ರಿಗಳು ಮಾತನಾಡುತ್ತಾ, "ಇದು ಕೋರ್ಟ್‌ನಲ್ಲಿ ಇದೆ, ಕಂಪ್ಲೆಂಟ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ನೋಡುತ್ತಿದ್ದೇವೆ" ಎಂದು ಹೇಳಿದರು. ಆದರೆ, ಕಳೆದ ವರ್ಷದ ಜನವರಿ 6ನೇ ವಿಚಾರದ ಬಗ್ಗೆ ಹೇಳುವುದಾದರೆ, ಸಿಂಡಿಕೇಟ್ ಶಿಫಾರಸ್ಸು ಆದ ನಂತರ ಏನು ಆಯಿತು ಎಂಬ ಬಗ್ಗೆ ಏನೂ ಹೇಳಿರುವುದಿಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್‌ರಾದಂತಹ ಶ್ರೀಮತಿ ಜ್ಯೋತಿ ಎನ್ನುವವರು ಸಹ ಒಂದು complaint lodge ಮಾಡುತ್ತಾರೆ. ಅದರ ಬಗ್ಗೆಯೂ ಸಹ ಏನು ಗೊತ್ತಿರುವುದಿಲ್ಲ. ಅಲ್ಲದೇ, ಪೊಲೀಸ್ ಕಂಪ್ಲೆಂಟ್ ಏನು ಆಯಿತು ಎಂದು ಇನ್ನೂ ಗೊತ್ತಿರುವುದಿಲ್ಲ. ಈ ಬಗ್ಗೆ ಇದರಲ್ಲಿ ಏನನ್ನು ಸಹ ಹೇಳಿರುವುದಿಲ್ಲ. ಇದರಲ್ಲಿ ಖಾಸಗಿ ಕಂಪನಿಯವರು ನಕಲಿ ಅಂಕ ಪಟ್ಟಿಗಳನ್ನು ಮಾಡುತ್ತಾರೆ, ಅವರು ಈ ವಿಚಾರದಲ್ಲಿ ಸಂಪೂರ್ಣವಾಗಿ ತೊಡಗಿದ್ದಾರೆ ಎನ್ನುವುದು ಗಮನಕ್ಕೆ ಬಂದಿರುತ್ತದೆ. ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂಬ ಬಗ್ಗೆ ಸಹ ಹೇಳಿರುವುದಿಲ್ಲ. ಹಾಗಾಗಿ, ಈ ಬಗ್ಗೆ ಮಾನ್ಯ ಮಂತ್ರಿಗಳು ಸದನಕ್ಕೆ ಹೇಳಿದರೆ ಉತ್ತಮವಾಗುತ್ತದೆಂದು ತಮ್ಮ ಮೂಲಕ ಕೇಳುತ್ತೇನೆ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮೂರು ಪ್ರಕರಣಗಳು ವರದಿಯಾಗಿರುವಂಥದ್ದು ಇದೆ. ಈ ಮೂರು ಪ್ರಕರಣಗಳು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿರುವುದಿಲ್ಲ. ಎಲ್ಲಿಯೋ ಒಂದು ಕಡೆ ಪ್ರತ್ಯೇಕವಾಗಿ ಖಾಸಗಿಯಲ್ಲಿ ಈ ನಕಲಿ ಅಂಕಪಟ್ಟಿಗಳನ್ನು ಮಾಡಿರುವಂಥದ್ದು ಇದು. ಇದು ಸರ್ಕಾರದ ಯಾವುದೋ ಒಂದು ಹುದ್ದೆಗೆ ನೇಮಕವಾಗಿರುವಂತಹವರ ಸರ್ಟಿಫಿಕೇಟ್‌ಗಳನ್ನು ವೆರಿಫಿಕೇಷನ್‌ಗಾಗಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿದಾಗ, ಅವರು ಆ ಅಂಕಪಟ್ಟಿಗಳನ್ನು ಪರಿಶೀಲನೆ ಮಾಡಿ ಇದು ನಕಲಿ ಅಂಕಪಟ್ಟಿ ಎನ್ನುವಂತಹ ವಿಚಾರವನ್ನು ಬೆಳಕಿಗೆ ತರುವಂಥದ್ದನ್ನು ಮಾಡಿರುತ್ತಾರೆ. ಆ ನಕಲಿ ಅಂಕಪಟ್ಟಿ ಪತ್ತೆಯಾದ ತಕ್ಷಣವೇ ಸಂಬಂಧಿಸಿದವರ ವಿರುದ್ಧ ಪ್ರಕರಣ ದಾಖಲು ಮಾಡಿದ್ದು, ತನಿಖೆ ನಡೆಯುತ್ತಿದೆ. ಸದರಿ ತನಿಖೆಯಲ್ಲಿ ಎಲ್ಲಾ ಕ್ರಮಗಳನ್ನು ಬಹಳ ಪರಿಣಾಮಕಾರಿಯಾಗಿ ವಹಿಸುವಂಥದ್ದು ಮತ್ತು ತನಿಖೆಯ ಮೂಲಕ ಸಂಬಂಧಪಟ್ಟ ವ್ಯಕ್ತಿಗಳನ್ನು ಪತ್ತೆ ಹಚ್ಚಿ ಕ್ರಮ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಹಿಸುವಂಥದ್ದು ಆಗುತ್ತದೆ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಮುಂದಿನ ದಿನಗಳಲ್ಲಿ ಇಂತಹ ಎಲ್ಲಾ ಸಮಸ್ಯೆಗಳು ಉದ್ಭವ ಆಗದ ರೀತಿ ಮಾಡುವುದಕ್ಕೆ *National Academic Depository* ಎನ್ನುವಂತಹ ಒಂದು *digitalization of all the documents* ಮಾಡುತ್ತಿದ್ದೇವೆ. ಇಡೀ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ನಂಬರ್ ಒನ್ ಸ್ಥಾನದಲ್ಲಿ ನಮ್ಮ ಕರ್ನಾಟಕ ರಾಜ್ಯ ಇದೆ. ಹಾಗಾಗಿ, ಸಂಪೂರ್ಣವಾಗಿ ಇದರಲ್ಲಿ ಯಾವುದೇ ದುರ್ಬಳಕೆಗಳನ್ನು ಮಾಡುವುದಕ್ಕೆ ಅಥವಾ ನಕಲಿ ಅಂಕಪಟ್ಟಿಗಳನ್ನು ಮಾಡುವುದಕ್ಕೆ ಯಾವುದೇ ಅವಕಾಶವನ್ನು ನಾವು ಕೊಡದೇ *digitize* ಆಗುತ್ತದೆ. ಆ ನಂತರ *digilocker* ಮೂಲಕ ಪ್ರತಿಯೊಬ್ಬ ವ್ಯಕ್ತಿಯ ಯಾವುದೇ *academic credentials* ಇದ್ದರೆ ಅದನ್ನು ತಕ್ಷಣ *verify* ಮಾಡುವುದಕ್ಕೆ ಅದರಲ್ಲಿ ಅವಕಾಶ ಇರುತ್ತದೆ. ಇದರಿಂದಾಗಿ, ಯಾವುದೇ ರೀತಿಯ ನಕಲಿ ಅಂಕಪಟ್ಟಿಗಳು ಬರುವುದಕ್ಕೆ ಅವಕಾಶ ಇರುವುದಿಲ್ಲ.

ಇದರ ಜೊತೆಗೆ, ಯಾವುದೇ ವಿಶ್ವವಿದ್ಯಾನಿಲಯದಲ್ಲಿ ತೇರ್ಗಡೆ ಹೊಂದುವಂತಹವರಿಗೆ *complete academic documents* ಮಾಡುವಂಥದ್ದನ್ನು ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದವರು ಕಳೆದ 43 ವರ್ಷದ ಅಕಾಡೆಮಿಕ್ ಡಾಕ್ಯುಮೆಂಟ್ಸ್ ಅನ್ನು ಸಂಪೂರ್ಣವಾಗಿ *digitize* ಮಾಡಿದ್ದಾರೆ. ಅದರಲ್ಲಿ ಪ್ರತಿಯೊಬ್ಬ ವ್ಯಕ್ತಿಯ *documentation* ಯಾವ ವಿಶ್ವವಿದ್ಯಾನಿಲಯದಿಂದ *issue* ಆಗಿರುತ್ತದೆ, ಆ ಎಲ್ಲಾ *document* ಸಂಪೂರ್ಣ ಇರುವಂಥದ್ದು ಆಗುತ್ತಿದೆ. ಇದರ ಜೊತೆಗೆ, ಪ್ರತ್ಯೇಕವಾಗಿ ಇಂತಹ ಬೇರೆ ಬೇರೆ *isolated incidents* ಗಳಲ್ಲಿ ನಡೆದಿರುವಂಥದ್ದನ್ನು ಇನ್ನೂ ವೇಗದಲ್ಲಿ ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, *it is not an isolated incident.* ಬೆಂಗಳೂರು ವಿಶ್ವವಿದ್ಯಾನಿಲಯ ಅಥವಾ ಕರ್ನಾಟಕ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿರತಕ್ಕಂತಹ ಶಿಕ್ಷಣ ವ್ಯವಸ್ಥೆ ಇಡೀ ರಾಷ್ಟ್ರದಲ್ಲಿಯೇ ಬಹಳ ಪ್ರಸಿದ್ಧವಾಗಿರುತ್ತದೆ. ಆದರೆ, *The Economic Times* ದಿನಪತ್ರಿಕೆಯಲ್ಲಿ, *"Fake degree scam: No sweat, you can get a varsity degree in 10 days". "Two teams to probe 30 lakh Bangalore University* answerscripts". ಎಂದು ಬರೆಯುತ್ತಾರೆ. ಮಾನ್ಯ ಮಂತ್ರಿಗಳು ಆಗಲೇ ಮಾತನಾಡುತ್ತಾ, "ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿರುವುದಿಲ್ಲ" ಎಂದು ಹೇಳಿರುತ್ತಾರೆ. ಆದರೆ, ಇದು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿರುವಂಥದ್ದಾಗಿದೆ. ಆ ಅಧಿಕಾರಿಗಳ ವಿರುದ್ಧ ಯಾವ ರೀತಿಯ ಕ್ರಮ ತೆಗೆದುಕೊಂಡಿರುತ್ತಾರೆಂದು ಸಹ ಹೇಳಿರುವುದಿಲ್ಲ. ನನ್ನ ಪ್ರಶ್ನೆ ಬಹಳ ಸ್ಪಷ್ಟವಾಗಿ ಇದೆ. ಅದರಲ್ಲಿ ನಾನು, "ಬೆಂಗಳೂರು ವಿಶ್ವವಿದ್ಯಾನಿಲಯದ ಅಂಕಪಟ್ಟಿ ಹಗರಣಕ್ಕೆ ಸಂಬಂಧಪಟ್ಟಂತೆ ಆರೋಪಿತ ಅಧಿಕಾರಿ/ನೌಕರರ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆಯೇ; ಜರುಗಿಸಿದ್ದಲ್ಲಿ ಈ ಕುರಿತಂತೆ ಸಂಪೂರ್ಣ ಮಾಹಿತಿ ಒದಗಿಸುವುದು" ಎಂದು ಕೇಳಿರುತ್ತೇನೆ. ಇದರಲ್ಲಿ ಎಷ್ಟು ಜನರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ? ಇದರಲ್ಲಿ 30 ಲಕ್ಷ transcript ನೋಡಬೇಕಾದರೆ ಎರಡು ತಂಡಗಳಾಗಿ ಮಾಡಿರುತ್ತಾರೆ. ಅದಕ್ಕಾಗಿಯೇ ನಾನು ಮಧ್ಯಪ್ರದೇಶದ Vyapam Ghotala ಎನ್ನುವ ಪ್ರಕರಣ ಉದಾಹರಣೆ ನೀಡಿರುತ್ತೇನೆ. 30 ಲಕ್ಷ ಪ್ರಕರಣಗಳನ್ನು ತನಿಖೆ ಮಾಡುವಷ್ಟರಲ್ಲಿ ಸುಮಾರು 50 ವರ್ಷ ಆಗುತ್ತದೆ. ಅಂದರೆ, ಕಷ್ಟಪಟ್ಟು ಓದುವಂತಹ ವಿದ್ಯಾರ್ಥಿಗಳಿಗೆ ಉತ್ತಮವಾದ ಅಂಕ ಸಿಗುವುದಿಲ್ಲ. ಆದರೆ, ನಕಲಿ ಅಂಕಪಟ್ಟಿ ಪಡೆದವರು ಉನ್ನತ ಹುದ್ದೆಗಳಿಗೆ ಹೋಗುತ್ತಾರೆ.

ಆಗಲೇ ಮಾನ್ಯ ಸದಸ್ಯರಾದ ಲಕ್ಷ್ಮಣ ಸವದಿಯವರು ಮಾತನಾಡುತ್ತಾ, "ಡಾಕ್ಟರ್‌ಗಳು ಗವರ್ನಮೆಂಟ್ ಕೆಲಸಕ್ಕೆ ಸೇರಿಕೊಂಡು ಪ್ರೈವೇಟ್ ಹಾಸ್ಪಿಟಲ್ ಓಪನ್ ಮಾಡುತ್ತಾರೆ" ಎಂದು ಹೇಳಿದರು. ಆ ಡಾಕ್ಟರ್‌ಗಳೆಲ್ಲಾ ಡೊನೇಷನ್ ಕೊಟ್ಟು ವೈದ್ಯಕೀಯ ಶಿಕ್ಷಣ ಪಡೆದಿರುತ್ತಾರೆ. ಅದರಿಂದಾಗಿ, ಅವರು ಸರ್ಕಾರಿ ಸಂಬಳ ತೆಗೆದುಕೊಂಡು ಆ ಡೊನೇಷನ್‌ಗಾಗಿ ಮಾಡಿದಂತಹ ಸಾಲಕ್ಕೆ ಬಡ್ಡಿ ಕೊಡುವುದಕ್ಕೆ ಆಗುವುದಿಲ್ಲ. ಇದಕ್ಕೆ ನಾವೆಲ್ಲರೂ ಸಹ ಒಂದು ರೀತಿಯ ಕಾರಣವಾಗಿರುತ್ತೇವೆ. ಮಾನ್ಯ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
---

ಮಂತ್ರಿಗಳು ಸಹ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಓದಿದ್ದಾರೆಂದು ಅಂದುಕೊಂಡಿದ್ದೇನೆ. ಹಾಗಾಗಿ, ಈ ನಕಲಿ ಅಂಕಪಟ್ಟಿಯಲ್ಲಿ ಯಾವುದಾದರೂ ದೊಡ್ಡ ಕೈವಾಡ ಇಲ್ಲದೇ ಇದ್ದರೆ ಇಷ್ಟೆಲ್ಲಾ ಹಗರಣ ಆಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, ಈ ಬಗ್ಗೆ ಕೂಲಂಕಷವಾದ ತನಿಖೆ ಮಾಡುತ್ತಾರೆಯೇ; ಒಂದು ವೇಳೆ ಆ ತನಿಖೆ ಮಾಡುವುದಿಲ್ಲ ಎಂದಾದರೆ, ತನಿಖೆ ಮಾಡಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಹರಿಪ್ರಸಾದ್‌ರವರು ಸಹ ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದು, ಅಲ್ಲಿಂದ ಅವರು ಗ್ರಾಜ್ಯುಯೇಟ್ ಆಗಿರುತ್ತಾರೆ. ಹಾಗಾಗಿ, ಅವರು ಸದರಿ ವಿಶ್ವವಿದ್ಯಾನಿಲಯದ ಬಗ್ಗೆ ಕಳಂಕವನ್ನು ಹಚ್ಚಿಸುವ ಬದಲಾಗಿ, ಆ ವಿಶ್ವವಿದ್ಯಾನಿಲಯದ ಗೌರವವನ್ನು ಹೆಚ್ಚಿಸುವುದಕ್ಕೆ ಯಾವ ರೀತಿ ಪ್ರಯತ್ನ ಪಡಬೇಕು ಎನ್ನುವಂಥದ್ದಾಗಬೇಕು. ನಿರ್ದಿಷ್ಟವಾಗಿ ಹೇಳಬೇಕಾದರೆ ಈ episode ಆಗಿರುವಂಥದ್ದು, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಏನು ನಡೆದಿರುವುದಿಲ್ಲ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಕಳಂಕ ತರುವಂತಹ ಪ್ರಶ್ನೆ ಇರುವುದಿಲ್ಲ. I am proud of my university. ಅದನ್ನು ಡ್ಯಾಮೇಜ್ ಮಾಡಬೇಡಿ ಎಂದು ನಾನು ಹೇಳುತ್ತಿದ್ದೇನೆ. ಅಲ್ಲದೇ, ದಿನಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ನಾನು ಹೇಳಿ ಬರೆಯಿಸಿರುವುದಿಲ್ಲ. ಇದರ ಜೊತೆಗೆ ಏಷ್ಯಾನೆಟ್ ಸುದ್ದಿವಾಹಿನಿಯು ಆಡಳಿತ ಪಕ್ಷಕ್ಕೆ ಸೇರಿದವರದ್ದೇ ಆಗಿರುತ್ತದೆ. ಅವರು, "Vyapam Ghotala" ಪ್ರಕರಣ ದೊಡ್ಡದು" ಎಂದು ಹೇಳುತ್ತಿದ್ದರು. ದಯಮಾಡಿ ಆ ರೀತಿ ನೇರವಾಗಿ ಆಪಾದನೆ ಮಾಡಬೇಡಿ. ಒಂದು ವೇಳೆ ಆ ರೀತಿ ಏನಾದರೂ ಇದ್ದರೆ ಆ ಕಳಂಕ ಯಾವುದೆಂದು ನೇರವಾಗಿ ಹೇಳಲಿ. ಇಲ್ಲವಾದರೆ, ಯಾವ್ಯಾವ ಮಂತ್ರಿಗಳು, ಎಂ.ಎಲ್.ಸಿ.ಗಳು, ಎಂ.ಪಿ.ಗಳು ಅಥವಾ ಯಾವ್ಯಾವ ಮಂತ್ರಿಗಳು ನಕಲಿ ಅಂಕಪಟ್ಟಿಗಳನ್ನು ಪಡೆದು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾರೆಂದು ನಾನು ಹೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಆ ಬಗ್ಗೆ ಮಾನ್ಯ ಸದಸ್ಯರು ಹೇಳಬಹುದು. ಈ ಒಂದು ನಕಲಿ ಅಂಕಪಟ್ಟಿ ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ...

**ಸಭಾಪತಿಯವರು:-** ಇಷ್ಟು ದಿವಸ ಆ ವಿಷಯ ಸದನದ ಹೊರಗಡೆ ಇತ್ತು. ಆದರೆ, ಈಗ ಸದನದ ಒಳಗಡೆ ಮಂತ್ರಿಗಳು, ಶಾಸಕರು ಎಂದು ಬರುತ್ತಿದೆ.

(ಮುಂದು)

(1040) 13.12.2021 1.20 YL-BNS

(ಸಭಾಪತಿಯವರ ಉಪಸ್ಥಿತಿ)

**ಡಾ:ಸಿ.ಎನ್.ಅಶ್ವಥ್‌ನಾರಾಯಣ**:- ಮಾನ್ಯ ಸಭಾಪತಿಯವರೇ, ಈ 3 ನಕಲಿ ಪ್ರಮಾಣಪತ್ರಗಳ ವಿಚಾರ ಏನಿದೆ, ಆ ಪ್ರಮಾಣಪತ್ರಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ನೀಡಿರುವುದಿಲ್ಲ. ಇದು ಹೊರಗಡೆ ನಡೆದಿರುವಂಥ ಘಟನೆಯಾಗಿದೆ. ಈ 3 ವ್ಯಕ್ತಿಗಳು ಇವತ್ತಿನ ದಿವಸ ಸರ್ಕಾರಿ ಸೇವೆಯಲ್ಲಿದ್ದು, ಇವರುಗಳ document verification ಗಾಗಿ ದಾಖಲೆಗಳನ್ನು ಈಗಾಗಲೇ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗಿದ್ದು, ಅಲ್ಲಿ ಆ ದಾಖಲೆಗಳನ್ನು ಪರಿಶೀಲಿಸಿದಾಗ ಅಲ್ಲಿ ಆ 3 ವ್ಯಕ್ತಿಗಳ ಪ್ರಮಾಣಪತ್ರಗಳು ನಕಲಿ ಎಂಬುವ ವಿಚಾರ ಗೊತ್ತಾಯಿತು. ಹಾಗಾಗಿ ಆ ಪ್ರಮಾಣಪತ್ರಗಳನ್ನು ಬೆಂಗಳೂರು ವಿಶ್ವವಿದ್ಯಾಲಯದಿಂದ ನೀಡಿರುವುದಿಲ್ಲ. ಬೇರೆ ಎಲ್ಲಿಯೋ ಖಾಸಗಿ ವ್ಯಕ್ತಿಗಳಿಂದ ಪಡೆದುಕೊಂಡಿರುವುದಾಗಿದೆ. ಬೆಂಗಳೂರು ವಿಶ್ವವಿದ್ಯಾಲಯವೇ ಆ ಪ್ರಮಾಣಪತ್ರಗಳನ್ನು ನಕಲಿ ಎಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಅಲ್ಲಿನ ವ್ಯಕ್ತಿಗಳ ಮೇಲೆ ಕ್ರಮವಹಿಸುವುದಲ್ಲ, ಆ ಅಧಿಕಾರಿಗಳಿಗೆ ಹೆಚ್ಚಿನ ಮಾನ್ಯತೆ ನೀಡಬೇಕು, ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಅಭಿನಂದನೆ ಸಲ್ಲಿಸುವಂಥ ಕೆಲಸವಾಗಬೇಕೇ ಹೊರತು, ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳ ಮೇಲೆ ಕ್ರಮವಹಿಸುವುದಲ್ಲ. ನಕಲಿ ದಾಖಲೆಗಳನ್ನು ಸಲ್ಲಿಸಿ, ಯಾರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ಯೋಗವನ್ನು ಪಡೆದುಕೊಂಡಿದ್ದಾರೆ ಅಂಥವರ ಮೇಲೆ ಕ್ರಮ ವಹಿಸುವಂಥ ಕೆಲಸವಾಗಬೇಕು. Investigation ಆದ ಬಳಿಕ ಮಾತ್ರವೇ ಅವರ ಮೇಲೆ ಕ್ರಮವಹಿಸಲಾಗುವುದು. ಸರ್ಕಾರದ ಮಟ್ಟದಿಂದಲೂ ಯಾರು ಸಂಬಂಧಪಟ್ಟ ಅಧಿಕಾರಿಗಳು, ನೌಕರರು ಇದ್ದಾರೆ ಅಂಥವರ ಮೇಲೆ ಕ್ರಮ ವಹಿಸುವಂಥ ಕೆಲಸ ಮಾಡಲಾಗುವುದು. ಬೆಂಗಳೂರು ವಿಶ್ವವಿದ್ಯಾಲಯದವರು ಬಹಳ ಉತ್ತಮವಾಗಿ ಕೆಲಸವನ್ನು ಮಾಡಿದ್ದಾರೆ ಮತ್ತು ಇಡೀ ದೇಶದಲ್ಲಿಯೇ digitalization ನಲ್ಲಿ No.1 ಸ್ಥಾನದಲ್ಲಿದ್ದು, ಅತೀ ಹೆಚ್ಚಿನ ಸಂಖ್ಯೆಯಲ್ಲಿ digitalization ಮಾಡಲಾಗಿದೆ. Polytechnics, Degree colleges, SSLC, PUC ಗಳಲ್ಲೆಲ್ಲಾ ಎಲ್ಲಾ ದಾಖಲೆಗಳನ್ನು digitalization ಮಾಡಲು ಕ್ರಮವಹಿಸಲಾಗಿದೆ. ಹಾಗಾಗಿ ಬಹಳ ಉತ್ತಮವಾಗಿ ಬೆಳವಣಿಗೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಯಾವುದೇ ನಕಲಿ ಪ್ರಮಾಣಪತ್ರಗಳನ್ನು ನೀಡಲು ಯಾವುದೇ ರೀತಿಯಲ್ಲಿ ಅವಕಾಶ ಇರುವುದಿಲ್ಲ ಎಂದು ಬಹಳ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆ ದಾಖಲೆಗಳು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿಲ್ಲ ಎನ್ನುವಂಥ ಮಾತನ್ನು ಹೇಳಿದರು. ಆದರೆ, ನಾನು ಆ ಕಾಲೇಜಿನ ಹೆಸರನ್ನು ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುವುದಿಲ್ಲ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ affiliate ಆಗಿರುವಂಥ ಕಾಲೇಜಿನ ಒಬ್ಬ ಮುಖ್ಯೋಪಾಧ್ಯಾಯರು, 8 ಜನ ವಿದ್ಯಾರ್ಥಿಗಳು ಒಳಗೊಂಡಂತಹ ಆ ಪದವಿ ಕಾಲೇಜು ಬನಶಂಕರಿಯಲ್ಲಿದ್ದು, ಅವರುಗಳ ವಿರುದ್ಧ ಪೊಲೀಸ್ ಕೇಸ್ ದಾಖಲಾಗಿದೆ. ಹೀಗಿರುವಾಗ ಅದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ affiliate ಆಗಿಲ್ಲವೇ? ಒಂದು ವೇಳೆ ಬೆಂಗಳೂರು ವಿಶ್ವವಿದ್ಯಾಲಯಕ್ಕೆ affiliate ಆಗಿಲ್ಲವೆಂದರೆ, ಮಾನ್ಯ ಸಚಿವರು ಹೇಳಿದ ಹಾಗೆ ಖಾಸಗಿಯವರು ಮಾಡಿರಬಹುದೆಂದು ನಾನು ಒಪ್ಪಿಕೊಳ್ಳುತ್ತೇನೆ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ affiliate ಆಗಿರುವುದರಿಂದಲೇ ಅಂತಹ ಪರಿಸ್ಥಿತಿ ಬಂದಿರುವುದು. ಆದ್ದರಿಂದ ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ ನೀಡದೇ ಇರುವುದು ಬಹಳ ಉತ್ತಮ ಎಂದು ಅನಿಸುತ್ತದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಡಾ:ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 2020-21ನೇ ಸಾಲಿನ ವಿಚಾರಕ್ಕೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಕೇಳಿದ್ದಾರೆ. ಅದರಂತೆ ಅವರು ಕೇಳಿರುವ ಪ್ರಶ್ನೆಗೆ ಬಹಳ ಸ್ಪಷ್ಟವಾಗಿ ಉತ್ತರ ನೀಡಿದ್ದೇವೆ. ಎಲ್ಲಿಯೋ ಒಂದು ಕಡೆ ನೋಡುವುದಾದರೆ, ಬೆಂಗಳೂರು ವಿಶ್ವವಿದ್ಯಾಲಯದ ಅಧಿಕಾರಿಗಳಿಂದ ಇಂತಹ ಘಟನೆ ನಡೆಯುವುದಕ್ಕೆ ಹೇಗೆ ಸಾಧ್ಯ? Bengaluru University ಯಲ್ಲಿ ನಡೆದಿದೆಯೇ ಎಂಬುದು ಬಹಳ ಸ್ಪಷ್ಟವಾಗಿ ಬೇಕಾದ ಉತ್ತರವಾಗಿದ್ದು, ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಇದು ಬೆಂಗಳೂರು ವಿಶ್ವವಿದ್ಯಾಲಯದಿಂದ ನಡೆದಿಲ್ಲ. ಬೆಂಗಳೂರು ವಿಶ್ವವಿದ್ಯಾಲಯದಿಂದ ಯಾವುದಾದರೂ ನಕಲಿ ಪ್ರಮಾಣಪತ್ರವನ್ನು ನೀಡಿದರೆ ಮಾನ್ಯ ಸದಸ್ಯರು ಹೇಳಿದ ಮಾತನ್ನು ಕೇಳಬಹುದು. ಆದರೆ, ಬೆಂಗಳೂರು ವಿಶ್ವವಿದ್ಯಾಲಯದಿಂದ ನೀಡದೇ ಇರುವ ನಕಲಿ ಪ್ರಮಾಣಪತ್ರಕ್ಕೆ ಏತಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಮೇಲೆ ಆಪಾದನೆ ಮಾಡಬೇಕು. ಹಾಗಾಗಿ ಬಹಳ ಸ್ಪಷ್ಟವಾಗಿ ಹೇಳುವುದಾದರೆ, ನಮ್ಮ ಬೆಂಗಳೂರು ವಿಶ್ವವಿದ್ಯಾಲಯದಿಂದ ಯಾವುದೇ ರೀತಿಯ fake marks cards, fake degree ಕೊಡುವಂಥದ್ದು ಇಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 86**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉತ್ತರವನ್ನು ಸಲ್ಲಿಸಿದ್ದು, ಬಹಳ ಸ್ಪಷ್ಟವಾಗಿ ಮಾಹಿತಿಯನ್ನು ನೀಡಿಲ್ಲ. ಜಿಲ್ಲಾವಾರು, ಪ್ರಾರ್ಥನಾಲಯಗಳು ಬಾಕಿ ಉಳಿಸಿಕೊಂಡಿರುವ ಬಿಲ್ಲಿನ ಮೊತ್ತದ ವಿವರವನ್ನು ಕೇಳಿದ್ದು, ಜಿಲ್ಲಾವಾರು ವಿವರವನ್ನು ನೀಡಿದ್ದಾರೆ. ಆದರೆ, ನಾನು ಕಳೆದ ಎರಡು ವರ್ಷಗಳಿಂದ ಬಿಲ್ ಮೊತ್ತ ಪಾವತಿಯಾಗದೇ ಬಾಕಿ ಉಳಿದಿರುವ ಪಟ್ಟಿಯನ್ನು ಕೇಳಿದ್ದೆನು. ಅದರಂತೆ ಮಾನ್ಯ ಸಚಿವರು ಪಟ್ಟಿ ಸಲ್ಲಿಸಿದ್ದಾರೆ. ಕಳೆದ ಎರಡು ವರ್ಷಗಳಿಂದ ಇಡೀ ದೇಶವೇ ಕೋವಿಡ್-19 ಮಹಾಮಾರಿಯಿಂದ ಸಂದರ್ಭದಲ್ಲಿ ಹಲವಾರು ಕಾರ್ಖಾನೆಗಳಿಗೆ ಇಂಧನ ಇಲಾಖೆಯಿಂದ ವಿದ್ಯುತ್ ಬಿಲ್ ಮೊತ್ತವನ್ನು ಮನ್ನಾ ಮಾಡುವಂಥ ಹಲವಾರು ಪ್ರಕರಣಗಳನ್ನು ಕಂಡಿದ್ದೇವೆ. ಆದರೆ, ದೇವಾಲಯಗಳಿಂದ ಸುಮಾರು ರೂ.2.00 ಕೋಟಿಗಳು, ಮಸೀದಿಗಳಿಂದ ಸುಮಾರು 34 ಲಕ್ಷಗಳಷ್ಟು, ಚರ್ಚ್‌ಗಳಿಂದ ಸುಮಾರು ರೂ.15.00 ಲಕ್ಷಗಳಷ್ಟು ಹಣ ಬಾಕಿ ಬರಬೇಕಾಗಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಲವಾರು ರೀತಿಯಲ್ಲಿ ಭಾಗ್ಯಗಳನ್ನು ಕೊಟ್ಟಿರುವಂಥ ಸರ್ಕಾರವಾಗಿದೆ. ಹಾಗಾಗಿ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಯಾವ ರೀತಿಯಲ್ಲಿ ಕಾರ್ಖಾನೆಗಳಿಗೆ ವಿದ್ಯುತ್ ಬಿಲ್ ಮೊತ್ತವನ್ನು ಮನ್ನಾ ಮಾಡಲಾಗಿದೆಯೋ ಅದೇ ರೀತಿ ದೇವಸ್ಥಾನಗಳಿಗೂ ಸಹ ವಿದ್ಯುತ್ ಬಿಲ್ ಮೊತ್ತವನ್ನು ಮನ್ನಾ ಮಾಡುವಂಥ ಕೆಲಸ ಮಾಡಿದರೆ ಇಲಾಖೆಯಿಂದ ಅನುಕೂಲವಾಗುತ್ತದೆ ಎಂದು ಮನವಿ ಮಾಡುತ್ತೇನೆ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಕಳೆದ ಒಂದೂವರೆ ವರ್ಷದಿಂದ 684 ಚರ್ಚ್‌ಗಳಿಂದ ರೂ.15.27 ಲಕ್ಷಗಳು, 10846 ದೇವಸ್ಥಾನಗಳಿಂದ ರೂ.215.00 ಲಕ್ಷ, 2139 ಮಸೀದಿಗಳಿಂದ ರೂ. 34.21 ಲಕ್ಷ ವಿದ್ಯುತ್ ಬಾಕಿ ಹಣ ಬರಬೇಕಾಗಿದೆ. ಕೋವಿಡ್-19 ನಿಂದಾಗಿ ಸ್ವಲ್ಪ ರಿಯಾಯಿತಿಯನ್ನು ಸಹ ನೀಡಿದ್ದು, ಹಣ ವಸೂಲು ಮಾಡಲು ನಾವು ಹೋಗಿರಲಿಲ್ಲ. ಆದರೆ, ನಮ್ಮ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲಾಖೆಯು ನಡೆಯಬೇಕಾದ ಕಾರಣ ಇಡೀ ರಾಜ್ಯದಲ್ಲಿ ಒಳ್ಳೆಯ ವಿದ್ಯುತ್ ನೀಡಬೇಕಾದ ಕಾರಣ ಈ ರೀತಿಯ ಹಣವನ್ನು ಬಾಕಿ ಉಳಿಸಿಕೊಂಡರೆ ಇಲಾಖೆ ನಡೆಯುವುದು ಕಷ್ಟವಾಗುತ್ತದೆ. ಈಗಾಗಲೇ ಸರ್ಕಾರಿ ಕಛೇರಿಗಳಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ಸಹ ಇದೇ ರೀತಿಯ ಪರಿಸ್ಥಿತಿ ಇದೆ. ಇದರಿಂದಾಗಿ ಮನ್ನಾ ಮಾಡುವಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. ಮುಂದೆ ಇದ್ದರೆ ಅದಕ್ಕೆ ಸಂಬಂಧಿಸಿದಂತೆ ಪರಿಶೀಲನೆ ಮಾಡುತ್ತೇನೆ.

**ಶ್ರೀ ಮುನಿರಾಜು ಗೌಡ ಪಿ.ಎಂ.:-** ಮಾನ್ಯ ಸಭಾಪತಿಯವರೇ, ನನಗೆ ಸುಮಾರು ದೇವಾಲಯಗಳಲ್ಲಿ, ಪ್ರಾರ್ಥನಾ ಮಂದಿರಗಳಲ್ಲಿ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿರುವಂಥ ಮಾಹಿತಿ ಬಂದಿದೆ. ದಯವಿಟ್ಟು ಆ ರೀತಿಯಾಗಿ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದಿರುವುದನ್ನು ಕಡಿತಗೊಳಿಸುವ ಕೆಲಸವನ್ನು ಕೂಡಲೇ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಯಾರಾದರೂ ಆ ರೀತಿಯಾಗಿ ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ಪಡೆದಿದ್ದರೆ ತಕ್ಷಣ ಕ್ರಮ ತೆಗೆದುಕೊಂಡು, ಕೂಡಲೇ ಕಡಿತಗೊಳಿಸುವಂಥ ಕೆಲಸ ಮಾಡುತ್ತೇವೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

## ಪ್ರಶ್ನೆ ಸಂಖ್ಯೆ: 84

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಾರಿಕೆ ಉತ್ತರ, ದಾರಿ ತಪ್ಪಿಸುವಂಥ ಉತ್ತರ ಹಾಗೂ ಬೇಜವಾಬ್ದಾರಿಯುತ ಉತ್ತರವನ್ನು ಸಲ್ಲಿಸಿದ್ದಾರೆ. ನನ್ನ ಮೂಲತಃ ಪ್ರಶ್ನೆ ಏನೆಂದರೆ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಇದೆ, ಅದನ್ನು ಜಾರಿಗೊಳಿಸಬೇಕಾದರೆ, ಅಗತ್ಯ ಇರುವ ಸ್ಪಷ್ಟವಾದಂತಹ ರಾಜ್ಯನೀತಿ ಏನು? ಕಾರ್ಯಪಡೆ ಮಾಡಿರುವಂಥ ಶಿಫಾರಸ್ಸುಗಳನ್ನು ಕಾರ್ಯಾಚರಣೆ ಅನುಷ್ಠಾನ ಮಾಡಬೇಕಾದರೆ, ಸರ್ಕಾರ ಅದಕ್ಕೆ ಏನಾದರೂ ಕ್ರಿಯಾ ಯೋಜನೆ ತಯಾರು ಮಾಡಿದೆಯೇ? ಎಷ್ಟು ವರ್ಷಗಳಲ್ಲಿ ಅನುಷ್ಠಾನಗೊಳಿಸುತ್ತಾರೆ? ಶಾಲಾ-ಕಾಲೇಜುಗಳಿಗೆ ಅಗತ್ಯ ಇರುವ ಮೂಲಸೌಕರ್ಯಗಳಾದ ಶಾಲಾ/ಕಾಲೇಜು ಕಟ್ಟಡ, ತರಬೇತಿ ಹೊಂದಿರುವಂಥ ಶಿಕ್ಷಕರ ನೇಮಕಾತಿ ಮತ್ತು ಆಯವ್ಯಯದಲ್ಲಿ ಅಗತ್ಯ ಇರುವ ಅನುದಾನ ಒದಗಿಸುವಂಥ ವ್ಯವಸ್ಥೆ ಏನಾದರೂ ಇದೆಯೇ? ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ Gross Enrolment Ratio ನ್ನು ಹೆಚ್ಚಿಸಬೇಕಾದರೆ, ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ? ಇದೆಲ್ಲವನ್ನೂ ಒಳಗೊಂಡಿರುವಂಥ ನೀಲಿ ನಕ್ಷೆ (road map) ಇದೆಯೇ? ಎಂಬುದರ ಯಾವುದೇ ಮಾಹಿತಿ ನೀಡದೇ ಕೇವಲ ದಾರಿ ತಪ್ಪಿಸುವಂಥ ಮಾಹಿತಿಯನ್ನು ಸಲ್ಲಿಸಿದ್ದಾರೆ. ಮೂಲತಃವಾಗಿ ತಮಗೆ ತಿಳಿದಿರುವ ಹಾಗೆ ಈ ಸರ್ವ ಶಿಕ್ಷಣ ಅಭಿಯಾನ ಅಂತ್ಯವಾದ ನಂತರ ಯಾವುದೇ ಶಾಲಾ-ಕಾಲೇಜುಗಳಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣವಾಗಿಲ್ಲ. ಎಲ್ಲಿಯೋ ಕೆಲವು ಕಡೆ ಮಾತ್ರ ನಿರ್ಮಾಣ ಆಗಿರಬಹುದು ಅಷ್ಟೇ. ಹಳೆಯ ಶಾಲಾ-ಕಾಲೇಜುಗಳ ಕಟ್ಟಡಗಳಿದ್ದರೆ ಅವುಗಳನ್ನು ಕೆಡವಿ ಹೊಸ ಕಟ್ಟಡ ನಿರ್ಮಾಣ ಮಾಡಬೇಕಾಗಿತ್ತು, ಅದು ಸಹ ಆಗಿಲ್ಲ. ಜೊತೆಗೆ ಹೆಚ್ಚುವರಿ ಕಟ್ಟಡಗಳು ನಿರ್ಮಾಣವಾಗಿಲ್ಲ. ಕಳೆದ ಎರಡು ವರ್ಷಗಳಿಂದ ಕೊರೋನಾ ಸೋಂಕು ಉದ್ಭವಿಸಿ, ಯಾವುದೇ ಶಾಲಾ ಕಟ್ಟಡವನ್ನು ರಿಪೇರಿ ಮಾಡಿಲ್ಲ, ಜೊತೆಗೆ ಈಗ ಅವು ಹೇಗೆ ಇವೆ ಎಂಬುದು ಸಹ ಯಾರಿಗೂ ಗೊತ್ತಿಲ್ಲ. ಇದರಿಂದಾಗಿ ಮಕ್ಕಳು ಶಾಲೆಗೆ ಹೋಗಲು ಸುರಕ್ಷಿತವಾಗಿದೆಯೇ ಅಥವಾ ಕಷ್ಟದಾಯಕವಾಗಿದೆಯೇ ಎನ್ನುವ ಪರಿಸ್ಥಿತಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇದೆ. ಅದೇ ರೀತಿ ನಾಲ್ಕು ವರ್ಷಗಳಿಂದ ಕಿತ್ತೂರು ಕರ್ನಾಟಕದಲ್ಲಿ; ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡಗಳಲ್ಲಿ ನೆರೆ ಹಾವಳಿ, ಅಧಿಕ ಮಳೆಯಿಂದಾಗಿ ಶಾಲಾ ಕಟ್ಟಡಗಳು ಬಿದ್ದು ಹೋಗಿದ್ದು, ಅವುಗಳ ರಿಪೇರಿ ಸಹ ಮಾಡಿಲ್ಲ. ಅದಕ್ಕೆ ಸಂಬಂಧಿಸಿದಂತೆ ಮಾಹಿತಿ ಕೇಳಿದ್ದೆವು. ಹಾಗೆಯೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಯೋಜನೆಯನ್ನು ಸರ್ಕಾರದಿಂದ ಯಾವ ರೀತಿಯಲ್ಲಿ ಮಾಡಲಾಗುತ್ತಿದೆ ಎಂದು ಕೇಳಿದ್ದು, ಅದರ ನೀಲಿ ನಕ್ಷೆ ಇಲ್ಲವೆಂದು ಹೇಳಿದೆ. ಅದೇ ರೀತಿ ಉನ್ನತ ಶಿಕ್ಷಣ ಸಚಿವರು biased ಆಗಿದ್ದಾರೆ. ಅವರು ಉನ್ನತ ಶಿಕ್ಷಣಕ್ಕೆ ಹೆಚ್ಚು ಗಮನವನ್ನು ನೀಡುತ್ತಿದ್ದಾರೆ. ಶಾಲಾ ಶಿಕ್ಷಣಕ್ಕೆ ಜಾಸ್ತಿ ಗಮನವನ್ನು ನೀಡುತ್ತಿಲ್ಲ. ಅದಕ್ಕೆ ಕಾರಣವೇನೆಂದರೆ, ಶಾಲಾ ಪೂರ್ವ ಶಿಕ್ಷಣವಾದ ಅಂಗನವಾಡಿ, ಬಾಲ ಮಂದಿರಗಳಲ್ಲಿ ಸ್ವಂತ ಕಟ್ಟಡಗಳು ಇಲ್ಲ, ಶೌಚಾಲಯಗಳು ಇಲ್ಲ, ಕುಡಿಯುವ ನೀರಿನ ಪೂರೈಕೆ ಇಲ್ಲ ಮತ್ತು ತರಬೇತಿ ಪಡೆದಿರುವಂಥ ಅಂಗನವಾಡಿ ಶಿಕ್ಷಕರು ಇಲ್ಲದೇ ಇರುವಂಥದ್ದಾಗಿದೆ. ಇದೆಲ್ಲವೂ ಪ್ರಾಥಮಿಕ ಶಿಕ್ಷಣದ ವಿಷಯಕ್ಕೆ ಸಂಬಂಧಿಸಿರುವುದಾಗಿದೆ.

(ಮುಂದು)

(1041) 13-12-2021 1.30 SK-BNS

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ಮುಂದು)**

ಪಟ್ಟಣ ಪ್ರದೇಶಗಳಲ್ಲಿ ಎಲ್.ಕೆ.ಜಿ., ಯು.ಕೆ.ಜಿ., ಪ್ಲೆ ಗ್ರೂಪ್-1 ಮತ್ತು ಪ್ಲೆ ಗ್ರೂಪ್-2 ಹಾಗೂ ಪ್ಲೆ ಗ್ರೂಪ್-3 ನಲ್ಲಿ ಓದುವಂತಹ ಮಕ್ಕಳಿಗೆ ಪಠ್ಯ ಪುಸ್ತಕದ ಕ್ರಮವೇನಿದೆಯೋ, ಅದು ಅಂಗನವಾಡಿಯಲ್ಲಿರುವಂತಹ ಮಕ್ಕಳಿಗೆ ತಲುಪುತ್ತದೆಯೇ, ಅದು ತಲುಪುತ್ತಿಲ್ಲ. ಸ್ವಚ್ಛತೆ ಮತ್ತು ನೈರ್ಮಲ್ಯದ ಬಗ್ಗೆ ಇರಬಹುದು. ಇದಕ್ಕೆ ಸಂಬಂಧಪಟ್ಟಂತೆಯೂ ಕೂಡ ಆ ಮಕ್ಕಳೊಂದಿಗೆ ನಮ್ಮ ಗ್ರಾಮಾಂತರದಲ್ಲಿರುವ ಮಕ್ಕಳು compete ಮಾಡಬಹುದೇ? ಇದಕ್ಕೆ ಸಂಬಂಧಪಟ್ಟಂತೆ ಅದೇ ರೀತಿಯಲ್ಲಿಯೂ ಕೂಡ ಉನ್ನತ ಶಿಕ್ಷಣ ಇರುವುದಾದರೆ, ಅಗತ್ಯ ಇರುವಂತಹ ಮತ್ತು ತರಬೇತಿ ಹೊಂದಿರುವಂತಹ ಬಿ.ಎ., ಎಂ.ಎ., ಬಿ.ಎಡ್., ಎಂ.ಫಿಲ್., ಪಿಹೆಚ್.ಡಿ., ಮಾಡಿಕೊಂಡಿತಕ್ಕಂತಹವರನ್ನು ನೇಮಕ ಮಾಡಿಕೊಂಡಿದ್ದೀರಾ ಎಂದು ನಾನು

ಕೇಳಿದೆ. ಇದರ ಬಗ್ಗೆ ಯಾವುದೇ ರೀತಿಯಾದ ಮಾಹಿತಿಯನ್ನು ನೀಡಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ದಯವಿಟ್ಟು, ನನಗೆ ಕೊಡಿ. ಇದನ್ನು ಸದನಕ್ಕೆ ಮಾನ್ಯ ಸಚಿವರು ತಿಳಿಸಲಿ.

**ಡಾ. ಸಿ.ಎಸ್. ಅಶ್ವಥ ನಾರಾಯಣ (ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ, ಹೆಚ್ಚುವರಿಯಾಗಿ ಕೌಶಲ್ಯಾಭಿವೃದ್ಧಿ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಬರುವಂತಹ ವರ್ಷದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡುವಂತಹದ್ದಾಗಿದೆ. ಈ ವಿಚಾರದಲ್ಲಿ ಬಹಳ ಸ್ಪಷ್ಟವಾಗಿ ನೀಲಿ ನಕ್ಷೆಯನ್ನು ತಯಾರು ಮಾಡುವಂತಹದ್ದಾಗಿದೆ. ಮೂರನೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹದಿನೈದು ವರ್ಷಗಳ ಕಾಲದಲ್ಲಿ ಅನುಷ್ಠಾನವನ್ನು ಮಾಡುವುದಕ್ಕೆ ಅವಕಾಶವಿದೆ. ಆದರೆ ರಾಜ್ಯದಲ್ಲಿ ಹತ್ತು ವರ್ಷ ಕಾಲದಲ್ಲಿಯೇ ಅನುಷ್ಠಾನವನ್ನು ಮಾಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೇವೆ. ಈ ಗುರಿಯ ಪ್ರಕಾರದಲ್ಲಿ ಬಹಳ ಸ್ಪಷ್ಟವಾಗಿ ಕೆಲಸವನ್ನು ಮಾಡುವಂತಹದ್ದಾಗುತ್ತಿದೆ. ಮುಂದಿನ ಹತ್ತು ವರ್ಷಗಳ ಕಾಲದಲ್ಲಿ ಶೇಕಡ ನೂರರಷ್ಟು gross enrolment ಪ್ರಾಥಮಿಕ ಶಾಲೆಗಳಲ್ಲಿ ಆಗಬೇಕು ಎನ್ನುವಂತಹ ಗುರಿಯನ್ನಿಟ್ಟುಕೊಂಡು ಕೆಲಸ ಮಾಡುವಂತಹದ್ದಾಗುತ್ತಿದೆ. ಕಲಿಕೆಯಲ್ಲಿ ಗುಣಮಟ್ಟ ಅಕ್ಷರ ಮತ್ತು ಗಣಿತವನ್ನು ಇವತ್ತು ಏನೊಂದು ಗುಣಮಟ್ಟವಿದೆಯೋ, ಇವತ್ತಿನ ಕಲಿಕೆಯಲ್ಲಿ ಅಷ್ಟು ಸುಧಾರಣೆಯಾಗಿಲ್ಲ. ಇವತ್ತಿನ ಕಲಿಕೆಯಲ್ಲಿ, Annual Status of Education Report ಪ್ರಕಾರ ಇವತ್ತು ಶೇಕಡ 30 ರಷ್ಟು ಶಾಲೆಗೆ ಹೋಗುತ್ತಿರುವಂತಹ ಮಕ್ಕಳು ಕಲಿಕೆಯಲ್ಲಿ ಅಷ್ಟೊಂದು ಸುಧಾರಣೆಗಳಿಲ್ಲ ಮತ್ತು ಉತ್ತಮವಾಗಿ ಕಲಿಕೆ ಆಗುತ್ತಿಲ್ಲ. ಈ ಕಲಿಕೆಯಲ್ಲಿ ಬಹಳ ದೊಡ್ಡ ಸುಧಾರಣೆಯನ್ನು ತರಬೇಕು ಎನ್ನುವಂತಹ ದೃಷ್ಟಿಯಲ್ಲಿಯೇ ಬಹಳ ವರ್ಷದ ಬೇಡಿಕೆ. ಇವತ್ತು ಮಕ್ಕಳು formally ಆರನೇ ವಯಸ್ಸಿನಲ್ಲಿ ಶಾಲೆಗೆ ಸೇರುತ್ತಿದ್ದರು. ಇವತ್ತು ಆರನೇ ವಯಸ್ಸಿನಲ್ಲಿ ಸೇರುವುದು ಬೇಡ ಎಂದು ಮೂರನೇ ವಯಸ್ಸಿನಿಂದಲೇ formal ಆಗಿ ಶಾಲೆಗೆ ಸೇರುವಂತಹದ್ದಾಗಬೇಕು. ಮಕ್ಕಳ ಮೆದುಳಿನ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಬೆಳವಣಿಗೆ ಶೇಕಡ 85 ರಷ್ಟು ಮೂರರಿಂದ ಆರನೇ ವಯಸ್ಸಿನವರೆಗೂ ಆಗುವಂತಹದ್ದು ಇದೆ. ಹಾಗಾಗಿ ಆ ವಯಸ್ಸಿನ ಮಕ್ಕಳಿಗೆ ಶಾಲೆಯಲ್ಲಿ formal ಶಿಕ್ಷಣವನ್ನು ಕೊಡುತ್ತಿರಲಿಲ್ಲ. ಇದು ಕೊಡುವಂತಹದ್ದಾಗಬೇಕೆಂದು early childhood education ಅನ್ನು ಪ್ರಾರಂಭ ಮಾಡಿ, ಇದು ಬಹಳ ದೊಡ್ಡ ಬೇಡಿಕೆಯಾಗಿತ್ತು. ಇದು ಬಹಳ ದೊಡ್ಡ ಸುಧಾರಣೆ. ಈ ಸುಧಾರಣೆ ನಮ್ಮ ಮಕ್ಕಳಿಗೆ ಎಲ್ಲೋ ಒಂದು ಕಡೆ ಖಾಸಗಿ ಶಾಲೆಗಳಲ್ಲಿ pre-nursery, nursery education ಸಿಗುವಂತಹದ್ದಾಗುತ್ತಿದ್ದು ಮಕ್ಕಳು ಇಂತಹ ಒಂದು ಅವಕಾಶದಿಂದ ಸರ್ಕಾರಿ ಶಾಲೆಗಳಲ್ಲಿ ವಂಚಿತರಾಗಿದ್ದರು. ಇವತ್ತು ಇದನ್ನು ಒದಗಿಸುವಂತಹ ದೃಷ್ಟಿಯಲ್ಲಿ ಮಾಡುವಂತಹದ್ದಾಗುತ್ತಿದೆ. ನಮ್ಮ implementation ಗೋಸ್ಕರ recommendation task force ಅನ್ನು ಮಾಡದ್ದೆವು. ಈ recommendation task force ಕೊಟ್ಟಂತಹ ವರದಿಯ ಆಧಾರದ ಮೇಲೆ ಈಗ implementation task force ಅನ್ನು ಮಾಡಿದ್ದೇವೆ. ನಿವೃತ್ತ ಐ.ಎ.ಎಸ್., ಅಧಿಕಾರಿಯಾಗಿರುವಂತಹ ಶ್ರೀ ಮದನ್ ಗೋಪಾಲ್‌ರವರ ಅಧ್ಯಕ್ಷತೆಯಲ್ಲಿ implementation task force ಅನ್ನು ಮಾಡುವಂತಹದ್ದಾಗುತ್ತಿದೆ. ನಮ್ಮ ಸರ್ಕಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹದ್ದಾಗುತ್ತಿದೆ. ಬಹು ದೊಡ್ಡ ಸಂಖ್ಯೆಯಲ್ಲಿ ಮಕ್ಕಳ ಸಂಖ್ಯೆ ಇರುವಂತಹದ್ದು ಇದೆ. ವ್ಯವಸ್ಥೆಗಳು ಕೂಡ ಬಹಳ ದೊಡ್ಡದು ಇದೆ. ಇದೆನ್ನೆಲ್ಲಾ ಗಮನದಲ್ಲಿಟ್ಟುಕೊಂಡು, ಬೇಕಾದಂತಹ ತಯಾರಿಗಳನ್ನು ಮಾಡುತ್ತಿದ್ದೇವೆ. ಬಾಲವಾಡಿಗಳು, ಅಂಗನವಾಡಿಗಳು ಇವುಗಳಿಗೆ ಹೆಚ್ಚಿನ ರೀತಿಯಲ್ಲಿ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೋಸ್ಕರ ನರೇಗಾ ಯೋಜನೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳು ಒಟ್ಟಿಗೆ ಸೇರಿಕೊಂಡು convergence scheme ನಲ್ಲಿ ಇನ್ನು ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಬಹಳಷ್ಟು ಎಲ್ಲಾ ವಿಚಾರದಲ್ಲಿಯೂ ಇವತ್ತು ಆರ್ಥಿಕವಾಗಿಯೂ ಅಷ್ಟೆ, ಬರುವಂತಹ ಆರ್ಥಿಕ ಆಯವ್ಯಯದಲ್ಲಿ ಅತಿ ಹೆಚ್ಚಿನ ಬಜೆಟ್‌ನ್ನು ಇದಕ್ಕೆ ಕೊಡುವಂತಹದ್ದರ ಬಗ್ಗೆ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೊಮ್ಮಾಯಿಯವರು ಬಹಳ ಸ್ಪಷ್ಟವಾಗಿ ತಿಳಿಸಿರುವಂತಹದ್ದು ಇದೆ. ಇದಕ್ಕೆ ಹೆಚ್ಚಿನ ಆದ್ಯತೆ ಮತ್ತು ಬಜೆಟ್ ಹಂಚಿಕೆಯನ್ನು ಮಾಡುತ್ತೇನೆಂದು ಬಹಳ ಸ್ಪಷ್ಟವಾಗಿ ತಿಳಿಸಿರುವಂತಹದ್ದು ಇದೆ. Nutrition ಬಗ್ಗೆ ಬಹಳ ಎಚ್ಚರಿಕೆಯನ್ನು ವಹಿಸಿ ಇವತ್ತು ಭಾರತ ಸರ್ಕಾರವೂ ಕೂಡ nutrition ಗೆ ಬಹಳಷ್ಟು ಆದ್ಯತೆಯನ್ನು ಕೊಡುವಂತದ್ದು ಇದೆ. Malnutrition ಎಲ್ಲಿಯೂ ಇರಬಾರದೆಂಬ ದೃಷ್ಟಿಯಿಂದಲೇ ಇವತ್ತು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡೂ ಸರ್ಕಾರಗಳು ಕೈಜೋಡಿಸಿ nutrition ಗೆ ಬಹಳ ಆದ್ಯತೆಯನ್ನು ಕೊಡುವಂತಹದ್ದು ಇದೆ. ಅಂಗನವಾಡಿಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸುವಂತಹದ್ದು ಇದೆ. Early childhood education ಅನ್ನು ಕೊಡುವಂತಹದಾಗುತ್ತಿದೆ. ಒಟ್ಟಾರೆ ಎಲ್ಲಾ ರೀತಿಯಲ್ಲಿ ಆದ್ಯತೆಯನ್ನು ಕೊಟ್ಟು, ಯಾವ ಮಕ್ಕಳಿಗೆ ಶಿಕ್ಷಣ ಸಿಕ್ಕಿಲ್ಲವೋ, ಆ ಮಕ್ಕಳಿಗೆ ಶಿಕ್ಷಣವನ್ನು ಸಿಗುವುದೊಂದು. ಕೇವಲ ಶಿಕ್ಷಣವೊಂದೇ ಅಲ್ಲ, ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಎಲ್ಲಾ ರೀತಿಯಾದಂತಹ ಪ್ರಯತ್ನಗಳು ಆಗಿವೆ. ಶಿಕ್ಷಕರ ನೇಮಕಾತಿಯನ್ನು ಮಾಡುವಂತಹದ್ದರ ಬಗ್ಗೆ ತಮಗೂ ಗೊತ್ತಿದೆ. ಈಗ call for ಮಾಡಿರುವಂತದ್ದು ಇದೆ. ಸರ್ಕಾರದಿಂದ ಎಲ್ಲಾ vacancy ಗಳನ್ನು ಭರ್ತಿ ಮಾಡುವುದಕ್ಕೋಸ್ಕರ call for ಮಾಡಿರುವಂತದ್ದು ಇದೆ. ಈ ದಿಕ್ಕಿನಲ್ಲಿಯೂ ಒಂದಿಷ್ಟು ಗುಣಮಟ್ಟದ ವಿಚಾರಗಳು ಸ್ವಲ್ಪ restriction ಗಳು ಏನೆಂದರೆ ಹೆಚ್ಚಿಗೆ ಕಂಡಿಷನ್‌ಗಳು ಇವೆ. ಆ ಕಂಡಿಷನ್‌ಗಳನ್ನು ಸ್ವಲ್ಪ ಸಡಿಲಿಕೆ ಮಾಡಿ, ತಕ್ಷಣ ಇವುಗಳನ್ನು ಭರಿಸುವಂತಹದ್ದನ್ನು ಈಗಾಗಲೇ ಮಾಡಿದ್ದೇವೆ. ಈಗಾಗಲೇ ತಾವು ಸಾಕಷ್ಟು ಸಲಹೆ ಸೂಚನೆಗಳನ್ನು ಕೊಟ್ಟಿದ್ದೀರಾ. ಆ ಸಲಹೆ ಸೂಚನೆಗಳನ್ನು ಪಡೆದುಕೊಂಡು ಎಲ್ಲಾ ರೀತಿಯಾದಂತಹ ಪ್ರಯತ್ನಗಳನ್ನು ಮಾಡಿ, ಏನೊಂದು ಶಿಕ್ಷಣಕ್ಕೆ ನಮ್ಮ ಸಮಾಜಕ್ಕೆ ಶಕ್ತಿ ಮತ್ತು ನಿಜಕ್ಕೂ ಸಮಾನತೆ, equity, inclusion, ಏನಾದರೂ ಕೊಡುವುದಕ್ಕೆ ಸಾಧ್ಯವಿದ್ದರೆ, ಅದು ಶಿಕ್ಷಣದ ಮೂಲಕ ಮಾತ್ರ ಕೊಡುವುದಕ್ಕೆ ಸಾಧ್ಯವಿದೆ. ನಮ್ಮ ಸರ್ಕಾರ ಆದ್ಯತೆ ಮತ್ತು ನ್ಯೂನತೆಗಳು ಏನಿತ್ತೋ, ಇವೆಲ್ಲಾ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಎಲ್ಲಾ ಕ್ರಮಗಳನ್ನು ವಹಿಸುವಂತಹದ್ದು ಆಗುತ್ತಿದೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ತಮ್ಮ action plan ಏನು? ತಮ್ಮ ಅನುದಾನ ಏನು? ಈಗ ಐದಾರು ಪರ್ಸೆಂಟ್ ಜಿ.ಡಿ.ಪಿನಲ್ಲಿ ಖರ್ಚು ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಶೇಕಡ 8 ರಿಂದ 10 ಪರ್ಸೆಂಟ್‌ರಷ್ಟು ಬೇಕು. ಹತ್ತು ವರ್ಷಗಳಲ್ಲಿ ಮಾಡುತ್ತೇವೆಂದು ಹೇಳಿದ್ದೀರಿ. ಎಷ್ಟೆಷ್ಟು ಇದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಎಷ್ಟು ಕೊಟ್ಟಿದ್ದೀರಿ ಮತ್ತು ಮುಂದಿನ ವರ್ಷ ಉನ್ನತ ಶಿಕ್ಷಣದಲ್ಲಿ ಎಷ್ಟು allocation ಕೇಳುತ್ತಿದ್ದೀರಿ? ತರಬೇತಿ ಹೊಂದಿರುವಂತಹ ಎಂ.ಎ., ಪಿಹೆಚ್.ಡಿ., ಮಾಡಿರುವಂತಹವರು ಶಿಕ್ಷಕರೇ ಸಿಗುವುದಿಲ್ಲವಲ್ಲ. ಇನ್ನು ಉನ್ನತ ಶಿಕ್ಷಣದ ಬಗ್ಗೆ ಮಾತಾಡುವುದಾದರೆ, ಈಗ Gross Enrolment Ratio ಇರುವಂತಹದ್ದು ರಾಜ್ಯ ಮಟ್ಟದಲ್ಲಿ ಶೇಕಡ 25 ರಿಂದ 26 ಮಾತ್ರ ಇದೆ. ರಾಷ್ಟ್ರೀಯ ಮಟ್ಟದಲ್ಲಿ ಶೇಕಡ 36 ರಿಂದ 40 ಮಾತ್ರವಿದೆ. ನಮ್ಮ ನೆರೆ ರಾಜ್ಯಗಳಾದಂತಹ ಕೇರಳ ಮತ್ತು ತಮಿಳುನಾಡಿನಲ್ಲಿ ಸುಮಾರು 32 ರಿಂದ 36 ಪರ್ಸೆಂಟ್ ಇದೆ. ನಾವು ಸುಮಾರು ಎಂಟರಿಂದ ಹತ್ತು ಪರ್ಸೆಂಟ್ ಹಿಂದೆ ಇದ್ದೇವೆ. ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ಆದ ನಂತರ enrolment ಆಗಿರುವಂತಹದ್ದು. ಅದನ್ನು ಮಾಡುವುದಕ್ಕೆ ತಾವು ಏನು ಮಾಡಿದ್ದೀರಿ? ಸುಮ್ಮನೆ ಕಾರ್ಯಪಡೆ ಮಾಡಿದ್ದೆ, ಆದರೆ ಅನುಷ್ಠಾನ ಮಾಡುವುದಕ್ಕೆ ಹಣ ಬೇಕು ಮತ್ತು ನೀಲಿ ನಕ್ಷೆ ಬೇಕು. ಯಾವುದಾದರೊಂದು ಕಾಲೇಜು ಮತ್ತು ಸ್ಕೂಲ್ ಅನ್ನು role model ಮಾಡಿ ಈ ರೀತಿ ಇರಬೇಕೆಂಬುದರ ಬಗ್ಗೆ ಮಾಡಿ ತೋರಿಸಿ. ಯಾರಾದರೂ ಬಂದು ನೋಡುತ್ತಾರೆ. ಈಗ actually ಏನಾಗಿದೆ ಎಂದು ಹೇಳಿದರೆ, ಜಿ.ಡಿ.ಪಿ.ನಲ್ಲಿ ಐದು ರಿಂದ ಆರು ಪರ್ಸೆಂಟ್ ಕೊಡುತ್ತೇವೆ.

**ಸಭಾಪತಿಯವರು:-** ಇದರ ಬಗ್ಗೆ ಏಳು ಗಂಟೆಗಳ ಬಗ್ಗೆ ಸದನದಲ್ಲಿ ಚರ್ಚೆಯಾಗಿದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಇದರಲ್ಲಿ ಅನುದಾನ ಯಾವ ರೀತಿ ಮಾಡುತ್ತೀರಿ? ತಮ್ಮ action plan ಏನು?

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ಸಿ.ಎನ್. ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಹದಿನೈದು ವರ್ಷ ಕಾಲದಲ್ಲಿ ಅವಕಾಶ ಇರುವಂತಹದ್ದು ಇದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಬರೀ ಹದಿನೈದು ವರ್ಷ ಕಾಲಧಲ್ಲಿ ಮಾಡುತ್ತೇವೆಂದರೆ, ಯಾರು ಇರುತ್ತಾರೆ? ನಾವಾದರೂ ಮಾಡಬೇಕು ಮತ್ತು ತಾವಾದರೂ ಮಾಡಬೇಕು. ಇದರಲ್ಲಿ action plan ಏನಿದೆ?

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಹತ್ತು ವರ್ಷಗಳ ಕಾಲದಲ್ಲಿ ಸರ್ಕಾರ ಇದನ್ನು ಅನುಷ್ಠಾನ ಮಾಡುವಂತಹದ್ದು ಆಗುತ್ತಿದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ರೋಡ್ ಮ್ಯಾಪ್ ಹೇಳಿ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ ಇವತ್ತು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬರುವಂತಹ ವರ್ಷಗಳ ಅಂದರೆ 2022 ರಿಂದ ಅನುಷ್ಠಾನವನ್ನು ಮಾಡುವಂತಹದ್ದು ಆಗುತ್ತಿದೆ. ಈ ವಿಚಾರದಲ್ಲಿ ಇವತ್ತು ಏನು implementation task force ನವರು ಪ್ರತಿಯೊಂದು ವಿಚಾರಗಳನ್ನು ಎಲ್ಲಾ ರೀತಿಯಾದಂತಹ ಆದ್ಯತೆಯನ್ನು ಕೊಟ್ಟು, ಯಾವ ರೀತಿ ಅನುಷ್ಠಾನ ಮಾಡುವುದಕ್ಕೆ ಏನೆಲ್ಲಾ ಕ್ರಮಗಳನ್ನು ವಹಿಸಬೇಕಾಗಿದೆಯೋ ಇನ್ನು ಹೆಚ್ಚಿನ ಸ್ಪಷ್ಟತೆಯನ್ನು ಕೊಡುವಂತಹದ್ದನ್ನು ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ಬರುವಂತಹ ಬಜೆಟ್‌ಗಳಲ್ಲಿ ವರ್ಷಾನು ವರ್ಷ ಹಂಚಿಕೆಗಳನ್ನು ಬಹಳಷ್ಟು ಹೆಚ್ಚಿಸುವುದಕ್ಕೆ ಬಹಳ ಸ್ಪಷ್ಟವಾದ ನಿಲುವನ್ನು ನಮ್ಮ ಸರ್ಕಾರದಲ್ಲಿ ತೆಗೆದುಕೊಳ್ಳುವಂತಹದ್ದಾಗಿದೆ. ಈಗ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ಅಪ್ರೂವಲ್ ಕೊಡುವುದಕ್ಕೆ ಆಗಿದೆ. 6% of GSDP ಅನ್ನು ಶಿಕ್ಷಣಕ್ಕೆ ಮೀಸಲಿಡಬೇಕು ಎನ್ನುವಂತಹದ್ದು. ಸ್ವಾತಂತ್ರ್ಯ ಬಂದ ಕಾಲದಿಂದಲೂ ಮೊದಲನೆಯ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಆರು ಪರ್ಸೆಂಟ್ ಕೊಡಬೇಕು ಎನ್ನುವುದರ ಬಗ್ಗೆ ನಿಗಧಿಯಾಗಿತ್ತು. ಆದರೆ ಇದುವರೆವಿಗೂ ಕೊಟ್ಟಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದರೆ ನಮ್ಮ ಸರ್ಕಾರದಲ್ಲಿ ಇದಕ್ಕೆ ಹಂತ ಹಂತವಾಗಿ ಹೆಚ್ಚಿಸಿಕೊಂಡು ಹೋಗುವುದಕ್ಕೆ ಸ್ಪಷ್ಟವಾದ ನಿಲುವು ತೆಗೆದುಕೊಂಡಿರುವಂತಹದ್ದು ಇದೆ. ಬರುವಂತಹ ಬಜೆಟ್‌ನಲ್ಲಿ ಹೆಚ್ಚಿನ ಹಂಚಿಕೆ ಕೊಡುವಂತಹದ್ದಾಗುತ್ತದೆ. ಮಾನ್ಯ ಸದಸ್ಯರು ಉನ್ನತ ಶಿಕ್ಷಣದ ಬಗ್ಗೆ ಕೇಳುತ್ತಿದ್ದಾರೆ. ಉನ್ನತ ಶಿಕ್ಷಣದಲ್ಲಿ National average of Gross Enrolment ratio is 26%. ನಮ್ಮ ರಾಜ್ಯ ಇವತ್ತು 32 ಪರ್ಸೆಂಟ್‌ನಲ್ಲಿದ್ದೇವೆ. 32 ಪರ್ಸೆಂಟ್‌ನಿಂದ ಬರುವಂತಹ 2030 ರೊಳಗೆ within 2030 ಕರ್ನಾಟಕ ರಾಜ್ಯ 50 ಪರ್ಸೆಂಟ್ Gross Enrolment ratio ಗೆ ತಲುಪುವಂತಹದ್ದಾಗುತ್ತದೆ ಎಂದು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈ ದಿಕ್ಕಿನಲ್ಲಿ ಇವತ್ತು ಎಲ್ಲಾ ಪ್ರಯತ್ನಗಳನ್ನು ಮಾಡುವಂತಹದ್ದಾಗುತ್ತಿದೆ.

(ಮುಂದು)

(1042)13.12.2021/1.40/ಎಂ.ಎಂ/ಜಿ.ಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಿ.ಎನ್. ಅಶ್ವಥ್ ನಾರಾಯಣ್ (ಮುಂದು)**

ಬಹಳ ಪ್ರಮುಖವಾಗಿ ಉನ್ನತ ಶಿಕ್ಷಣದಲ್ಲಿ enrolment ratio ಹೆಚ್ಚಾಗಬೇಕು ಎಂದರೂ ಸಹ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿಯೂ ತೇರ್ಗಡೆಯಾಗುವುದು ಹೆಚ್ಚಾಗಬೇಕು. ಕರ್ನಾಟಕ ರಾಜ್ಯದಲ್ಲಿ ಹುಟ್ಟಿದ ವಿದ್ಯಾವಂತರುಗಳು ಗುಣಮಟ್ಟದ ಶಿಕ್ಷಣ ಪಡೆದಂತಹ ಯಾವುದೇ ವಿದ್ಯಾರ್ಥಿ ಇದ್ದರೂ ಪ್ರತಿಯೊಬ್ಬರಿಗೂ ಉದ್ಯೋಗವಕಾಶ ಸಿಗುವಂತಹದ್ದಿದೆ, ಉತ್ತಮ ಭವಿಷ್ಯಕ್ಕೆ ಅವಕಾಶ ಇದೆ. ಗುಣಮಟ್ಟವನ್ನು ಬಹಳಷ್ಟು ಹೆಚ್ಚಿಸುವುದಕ್ಕೆ ಕರ್ನಾಟಕ ರಾಜ್ಯ ಅಗ್ರಮಾನ್ಯ ಸ್ಥಾನದಲ್ಲಿ ಕೆಲಸ ಮಾಡುತ್ತಿದೆ. ಎಲ್ಲರಿಗೂ ಮಾದರಿಯಾಗಿ ಕೆಲಸ ಮಾಡುತ್ತಿರುವುದು ಕರ್ನಾಟಕ ರಾಜ್ಯ ಎನ್ನುವ ಹೆಮ್ಮೆ ನಮಗಿದೆ. ಆ ದಿಕ್ಕಿನಲ್ಲಿ ಇಡೀ ದೇಶದಲ್ಲಿ ಶಿಕ್ಷಣದಲ್ಲಿ ನಾಯಕತ್ವವನ್ನು ಕೊಟ್ಟು ಯಾವ ರೀತಿ ಅನುಷ್ಠಾನ ಮಾಡಬೇಕು, ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಕರ್ನಾಟಕ ಮುಂಚೂಣಿಯಲ್ಲಿದೆ, ಕರ್ನಾಟಕವೇ ಮಾದರಿಯಾಗಿದೆ ಎಂದು ಹೇಳಲಿಚ್ಛಿಸುತ್ತೇನೆ.

**ಸಭಾಪತಿಯವರು**:- ಈಗ ಶ್ರೀ ಎನ್. ರವಿಕುಮಾರ್ ರವರ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿ**:- ಮಾನ್ಯ ಸಭಾಪತಿಯವರೇ, ನನ್ನ ಒಂದೇ ಒಂದು ಅಂಶವನ್ನು ಹೇಳಬಯಸುತ್ತೇನೆ.

**ಸಭಾಪತಿಯವರು**:- ಮಾನ್ಯ ತಿಪ್ಪೇಸ್ವಾಮಿಯವರೇ ಸಾಕು, ಸಮಯ ಆಗಲೇ 1 ಗಂಟೆ 40 ನಿಮಿಷವಾಯಿತು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ**:- ಮಾನ್ಯ ಸಭಾಪತಿಯವರೇ, ಬಿ.ಎ., ಬಿ.ಎಡ್ ತರಬೇತಿ ಹೊಂದಿದ ಶಿಕ್ಷಕರ ನೇಮಕಾತಿಗೆ ದಯಮಾಡಿ ಅಗತ್ಯವಾದ ಕ್ರಮವನ್ನು ತೆಗೆದುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಚುಕ್ಕೆ ಪ್ರಶ್ನೆ ಸಂಖ್ಯೆ: 05**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಅವರು ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವುದು ನನಗೆ ಸಮಾಧಾನವಾಗಿಲ್ಲ. ಏಕೆಂದರೆ, ನಮ್ಮ ರಾಜ್ಯದೊಳಗಡೆ ಮೆಡಿಕಲ್ ಸೀಟ್‌ಗೋಸ್ಕರ ಸುಮಾರು 01 ಲಕ್ಷದ 19 ಸಾವಿರ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುತ್ತಾರೆ. ಅದರಲ್ಲಿ 89,359 ಜನರು ಅರ್ಹತೆ ಪಡೆಯುತ್ತಾರೆ. ಸಂದರ್ಶನಕ್ಕೆ 33,650 ವಿದ್ಯಾರ್ಥಿಗಳು ಹಾಜರಾಗುತ್ತಾರೆ. ಆದರೆ ಸೀಟ್ ಸಿಗುವುದು 8535 ಜನರಿಗೆ ಮಾತ್ರ. ಎಷ್ಟು ಸೀಟ್ ಖಾಲಿ ಇದೆ ಅಷ್ಟು ಜನರಿಗೆ ಮಾತ್ರ ಸೀಟ್ ಸಿಗುತ್ತದೆ. ಎಲ್ಲರಿಗೂ ಸೀಟ್ ಸಿಗುವುದಕ್ಕಾಗುವುದಿಲ್ಲ. ಆದರೆ 01 ಲಕ್ಷದ 19 ಸಾವಿರ ಜನರಲ್ಲಿ 89,000 ಜನರು ಏನು ಅರ್ಹತೆ ಪಡೆಯುತ್ತಾರೆ ಆದರೂ ಕೂಡಾ 1227 ಸೀಟು ಉಳಿಯುತ್ತದೆ, ಅಂದರೆ ಮೆಡಿಕಲ್ ಸೀಟ್‌ಗಳಿಗೆ ಅಡ್ಮಿಷನ್ ಆಗಿರುವುದಿಲ್ಲ. ಸೀಟ್ ಸಿಗುವುದಕ್ಕೆ ಎಷ್ಟೊಂದು ಫೈಟ್ ಇದೆ ಎಂದರೆ ಜೀವನದಲ್ಲಿ ಮೆಡಿಕಲ್ ಸೀಟ್ ಸಿಕ್ಕಿದರೆ ತಾನು ಧನ್ಯನಾದೆ ಎಂದು ಹೇಳಿ ಹುಡುಗರು ಕಣ್ಣಿನಲ್ಲಿ ಎಣ್ಣೆ ಬಿಟ್ಟುಕೊಂಡು ಓದುತ್ತಾರೆ. ಆದರೂ 1227 ಸೀಟುಗಳಿಗೆ ಅಡ್ಮಿಷನ್ ಆಗಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಖಾಸಗಿ ಮ್ಯಾನೇಜ್‌ಮೆಂಟ್‌ನವರಿಗೆ ಬಿಟ್ಟುಕೊಡುತ್ತಾರೆ. ಇಷ್ಟೊಂದು ಸ್ಪರ್ಧೆ ಇರುವಾಗ ಅಡ್ಮಿಷನ್ ಆಗದೇ ಕಾಲೇಜುಗಳಲ್ಲಿ ಇಷ್ಟೊಂದು ಸೀಟುಗಳು ಹೇಗೆ ಉಳಿಯುತ್ತವೆ? ಅವರು ಜೀವನದಲ್ಲಿ intermiss ಮಾಡಿಕೊಳ್ಳುವುದಿಲ್ಲ. ಅವರು ಸೀಟ್ ಪಡೆಯಲೇಬೇಕು. ದುಡ್ಡಿಲ್ಲದಿದ್ದರೆ ಆ ಪ್ರಶ್ನೆಯೇ ಬೇಡ. ಆ ರೀತಿಯ ಸೀಟ್ ಬಹಳ ಕಡಿಮೆ ಇದೆ. 1227 ಸೀಟ್‌ಗಳಿಗೆ ಅಡ್ಮಿಷನ್ ಆಗಿಲ್ಲ, ಅದನ್ನು ಖಾಸಗಿಯವರಿಗೆ ಹೇಗೆ ಬಿಟ್ಟುಕೊಟ್ಟರು ಎನ್ನುವುದೇ ನನ್ನ ಪ್ರಶ್ನೆ.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ 2-3 ರೀತಿಯಲ್ಲಿ ಡೀಮ್ಡ್ ಯೂನಿವರ್ಸಿಟಿ ಇದೆ. ಖಾಸಗಿ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜು ಇದೆ. ಖಾಸಗಿ ಕಾಲೇಜುಗಳಲ್ಲಿ ಕೂಡ ಸರ್ಕಾರಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಕೋಟಾದ ಸೀಟುಗಳು ಇರುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಸರ್ಕಾರಿ ಸೀಟುಗಳನ್ನು ವಿದ್ಯಾರ್ಥಿಗಳಿಗೆ ಮೆರಿಟ್ ಮೇಲೆ ಮಾತ್ರ ಕೊಡುತ್ತೇವೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರದ ನಿರ್ದೇಶನದಂತೆ seat matrix ಮತ್ತು ಶುಲ್ಕಗಳನ್ನು ಏನು ನಿಗದಿ ಮಾಡಿದೆ, ಇದರ ಪ್ರಕಾರ ಯು.ಜಿ., ನೀಟ್ rank ಗಳನ್ನು ಕೌನ್ಸಿಲಿಂಗ್ ಮೂಲಕ ಕೊಡಲಾಗುತ್ತದೆ. ಅದು ಮೂರು ಹಂತದಲ್ಲಿ ಕೌನ್ಸಿಲಿಂಗ್ ಆಗುತ್ತದೆ. 1227 ಸೀಟ್ ಎನ್ನುವುದು ಒಂದು ವರ್ಷದ್ದಲ್ಲ. 2019-20 ಮತ್ತು 2020-21 ಈ ಎರಡು ಸಾಲಿನಲ್ಲಿ 1227 ಸರ್ಕಾರಿ ಕೋಟಾದ ಸೀಟುಗಳಲ್ಲ. ಇವೆಲ್ಲವೂ ಕೂಡ ಖಾಸಗಿ ಕಾಲೇಜಿನಲ್ಲಿ ಪೇಮೆಂಟ್ ಸೀಟ್ಸ್ ಮತ್ತು ಎನ್.ಆರ್.ಐ., ಕೋಟಾದಲ್ಲಿರುವಂತಹದ್ದು. ಮೂರು ಹಂತದ ಕೌನ್ಸಿಲಿಂಗ್ ಆದಮೇಲೆ ಮಾಪ್‌ಅಪ್ ರೌಂಡ್ ಎಂದು ಇರುತ್ತದೆ. ಆ ಮಾಪ್‌ಅಪ್ ರೌಂಡ್ ಆದ ಮೇಲೆ ಕೂಡ ಯಾವ ಸೀಟುಗಳು ಭರ್ತಿಯಾಗದೇ ಉಳಿದಿರುತ್ತದೆ ಅಂತಹದ್ದನ್ನು ಮೆರಿಟ್ ಆಧಾರಿತವಾಗಿ ಸರ್ವೋಚ್ಚ ನ್ಯಾಯಾಲಯವು ಒಂದು ರೂಲಿಂಗ್ ಕೊಟ್ಟಿದೆ [Writ Petition (Civil) No(s). 267/2017 and connected matters - DAR-US-SLAM EDUCATIONAL TRUST AND OTHERS Vs. MEDICAL COUNCIL OF INDIA AND OTHERS]. ಆ ಸೀಟುಗಳನ್ನು ನಾವು ಖಾಸಗಿ ಕಾಲೇಜುಗಳಿಗೆ ಹಸ್ತಾಂತರ ಮಾಡಬೇಕೆಂದು ಹೇಳಿದೆ. ಸ್ವಲ್ಪ ಸಮಯ ಕೊಟ್ಟರೆ 3-4 ಲೈನ್ ಇದೆ ಅದನ್ನು ಹೇಳುತ್ತೇನೆ. It reads thus:

> "After the completion counselling, the State Government shall determine the number of seats that are still vacant and thereafter shall forward a list of students in order of merit, equalling to ten times the number of vacant seats to the medical college so that in case of any stray vacancy arising in any college the said seat may be filled up from the said list."

ಹಾಗಾಗಿ ಈ ರೀತಿಯಲ್ಲಿ ಒಂದು ಸೀಟ್ ಅಲ್ಲಿ ಬಾಕಿ ಉಳಿದಿದ್ದರೆ ಅದಕ್ಕೆ ಮೆರಿಟ್ ಲಿಸ್ಟ್‌ನಲ್ಲಿ 10 ಜನರ ಲಿಸ್ಟನ್ನು ಆ ಕಾಲೇಜುಗಳಿಗೆ ಕಳುಹಿಸಿಕೊಡುತ್ತೇವೆ. ಆ ಲಿಸ್ಟ್‌ನಲ್ಲಿ ಮೆರಿಟ್ ಮೇಲೆ ಅವರು ಕೊಡಬೇಕಾಗಿದೆ. ನಾವು stray seat ಅನ್ನು ಹಾಗೆಯೇ ಉಳಿಸಿಕೊಂಡರೆ ಆ 500 ಸೀಟ್ ಕಡಿಮೆಯಾಗಿದೆ. ಸರ್ಕಾರ ಕೂಡ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಇಡೀ ದೇಶದಲ್ಲಿ ಹಂಚಿಕೆಯಾಗುವುದು ಮತ್ತು ಕ್ಯಾನ್ಸಲೇಷನ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗುವುದನ್ನು ಒಂದು Unified National Portal ಮಾಡಬೇಕೆಂದು ನಾನು ವೈದ್ಯಕೀಯ ಶಿಕ್ಷಣ ಸಚಿವನಾದ ತಕ್ಷಣವೇ ಮರು ತಿಂಗಳೇ ಈ ಪತ್ರವನ್ನು ಬರೆದಿದ್ದೆ. ಆದರೆ ಅದಕ್ಕೆ ಇನ್ನೂ ಕ್ರಮವನ್ನು ತೆಗೆದುಕೊಂಡಿಲ್ಲ. ಅದನ್ನು ತೆಗೆದುಕೊಂಡಾಗ ಯಾವುದೋ ಒಬ್ಬ ವಿದ್ಯಾರ್ಥಿಗೆ ಗುಜರಾತ್‌ನಲ್ಲಿ ವೈದ್ಯಕೀಯ ಕಾಲೇಜಿನಲ್ಲಿ ಸೀಟ್ ಸಿಕ್ಕಿದರೆ ಅದು ನಮ್ಮ ಎಲ್ಲಾ ರಾಜ್ಯಗಳಿಗೂ ಗೊತ್ತಾಗುತ್ತದೆ. ಆದರೆ ಇವತ್ತು ಆ ವ್ಯವಸ್ಥೆ ಇಲ್ಲದಿರುವುದರಿಂದ ಕೆಲವು ಖಾಸಗಿ ಕಾಲೇಜಿನವರು ಇದರ ಉಪಯೋಗವನ್ನು ಅವರ ಸ್ವಾರ್ಥಹಿತಕ್ಕಾಗಿ ಮಾಡಿಕೊಳ್ಳುತ್ತಿರುವುದು, ಕಾನೂನಿನಲ್ಲಿ ಸ್ವಲ್ಪ ಲೋಪದೋಷಗಳು ಇರುವುದರಿಂದ ಈ ರೀತಿಯಲ್ಲಿ ಕೆಲವು ಕಡೆ ಆಗುತ್ತಿದೆ. ಅದಕ್ಕೆ ಇನ್ನೂ ಕಠಿಣವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಸರ್ಕಾರ ಈ ವರ್ಷದಿಂದ ಯಾರು ಸೀಟನ್ನು ಸರೆಂಡರ್ ಮಾಡುವುದಕ್ಕೆ ಬರುತ್ತಾರೆ ಅವರಿಗೆ ಅತಿ ಹೆಚ್ಚು ಪೆನಾಲ್ಟಿಯನ್ನು ಹಾಕಿ ಯಾವುದೇ ಕಾರಣಕ್ಕೂ ಸೀಟ್ ಸರೆಂಡರ್ ಮಾಡದೇ ಇರುವ ಸ್ಥಿತಿಯಲ್ಲಿ ಸರ್ಕಾರ ಈ ವರ್ಷದಲ್ಲಿ ಕ್ರಮವನ್ನು ವಹಿಸುತ್ತದೆ. ನಾನು 100 ಕ್ಕೆ 100ರಷ್ಟು ಹೇಳುತ್ತೇನೆ, ಸರ್ಕಾರ ಈ ವರ್ಷದಿಂದ ಈ ರೀತಿಯ ಅವ್ಯವಸ್ಥೆಗೆ ಯಾವುದೇ ರೀತಿಯಲ್ಲಿ ಅವಕಾಶ ಕೊಡುವುದಿಲ್ಲ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಎರಡು ಅಂಶಗಳನ್ನು ಮಾನ್ಯ ಸಚಿವರೇ ಉಲ್ಲೇಖ ಮಾಡಿದರು. ಒಂದು ಕಾನೂನಿನ ಲೋಪ ಇದೆ ಎನ್ನುವುದು ಮತ್ತೊಂದು ಸೀಟ್ ಸರೆಂಡರ್ ಎನ್ನುವಂತಹ ಶಬ್ದವನ್ನು ಅವರು ಹೇಳಿದರು. ಈ ಸೀಟ್ ಸರೆಂಡರ್ ಎನ್ನುವಂತಹ ವಿಷಯವಿದೆಯಲ್ಲಾ, ಮ್ಯಾನೇಜ್‌ಮೆಂಟ್ ಮತ್ತು ಸ್ಟೂಡೆಂಟ್ ಇವರುಗಳನ್ನು ನಾನು ಸಾಕಷ್ಟು ವರ್ಷಗಳಿಂದ ನೋಡುತ್ತಿದ್ದೇನೆ. ಸೀಟ್ ಸರೆಂಡರ್ ಎನ್ನುವುದು ಒಂದು ಬಹಳ ದೊಡ್ಡ ಮಾಫಿಯಾ, ದಂಧೆಯಾಗಿದೆ. Rank ಬಂದಿರುವಂತಹ ವಿದ್ಯಾರ್ಥಿಗೆ ಎರಡು ಕಡೆ ಮೆಡಿಕಲ್ ಸೀಟ್ ಸಿಕ್ಕಿರುತ್ತದೆ. ಅವನು ಒಂದು ಕಾಲೇಜಿನಲ್ಲಿ ಬಿಡುತ್ತಾನೆ. ಕಾಲೇಜಿನವರು ಅವನಿಗೆ ಹಣ ಕೊಟ್ಟು ಸೀಟ್ ಬಿಡಲು ಹೇಳುತ್ತಾರೆ. ಆ ಸೀಟನ್ನು ಅವರು ಯಾವಾಗ ಸರೆಂಡರ್ ಮಾಡುತ್ತಾರೆ ಎಂದರೆ ಕೊನೆಯದಿನ, ಕೊನೆಯ ಗಂಟೆಯಲ್ಲಿ ಮಾಡುತ್ತಾರೆ. ಏತಕ್ಕೆ ಎರಡು ದಿನ, ಮೂರು ದಿನ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ನಾಲ್ಕು ದಿನಗಳಿಗೆ ಮುಂಚೆ ಸರೆಂಡರ್ ಮಾಡುವುದಿಲ್ಲ ಎಂದು ಹೇಳಿದರೆ, ಇದು ಮ್ಯಾನೇಜ್‌ಮೆಂಟ್ ಮತ್ತು ಸ್ಟೂಡೆಂಟ್ ಮಧ್ಯೆ ನಡೆದಿರುವಂತಹ ಒಂದು ದಂಧೆ ಮತ್ತು ವ್ಯವಹಾರವಾಗಿದೆ. ಈ ವಿಷಯದಲ್ಲಿ ಹೊಡೆತ ಬೀಳುವುದು ಯಾರಿಗೆಂದರೆ ಪ್ರತಿಭಾವಂತ ವಿದ್ಯಾರ್ಥಿಗೆ, ಬಡ ವಿದ್ಯಾರ್ಥಿಗೆ, ಹಣ ಇಲ್ಲದಂತಹ ವಿದ್ಯಾರ್ಥಿಗೆ ಆಗಿದೆ. ನಾನು ಮಾನ್ಯ ಸಚಿವರನ್ನು ಮೆಚ್ಚಿಕೊಳ್ಳುತ್ತೇನೆ. ಇಲ್ಲಿ ಕಾನೂನಿನ ಲೋಪ ಇದೆ. ಏತಕ್ಕೆ ಇದನ್ನು ಮಾನ್ಯ ಸಚಿವರು ಮತ್ತು ಸರ್ಕಾರ ಸರಿ ಮಾಡುವುದಿಲ್ಲ? ಇದು ಎಷ್ಟು ವರ್ಷಗಳಿಂದ ನಡೆಯುತ್ತಿದೆ? ಅಡ್ಮಿಷನ್ ಆಗಿರುವುದು 8535. ಪರೀಕ್ಷೆ ಬರೆದಿರುವುದು ಸುಮಾರು 01 ಲಕ್ಷದ 19 ಸಾವಿರ ವಿದ್ಯಾರ್ಥಿಗಳು. A very thick fight is there to get a medical seat. ಅದರಲ್ಲಿ 1227 ಸೀಟುಗಳು ಉಳಿಯುತ್ತವೆ. ನನಗೆ ಮ್ಯಾನೇಜ್‌ಮೆಂಟ್ ಕೋಟಾ ಗೊತ್ತು, ಶೇ.15 ರಷ್ಟು ಎನ್.ಆರ್.ಐ., ಕೋಟಾ ಗೊತ್ತು, ಶೇ. 35ರಷ್ಟು ಸರ್ಕಾರ ಮತ್ತು ಮ್ಯಾನೇಜ್‌ಮೆಂಟ್ ಮಧ್ಯದಲ್ಲಿ ಹೆಚ್ಚಿನ ಶುಲ್ಕಕ್ಕೋಸ್ಕರ ಒಡಂಬಡಿಕೆಯಾಗಿದೆ ಆ ವಿಷಯ ಗೊತ್ತು. ಶೇ. 40ರಷ್ಟು ಸರ್ಕಾರದ; ಶೂನ್ಯ ಸೀಟ್‌ವರೆಗೂ ಕೂಡ ಕೌನ್ಸಿಲಿಂಗ್ ಮಾಡಿಯೇ ಸೀಟ್ ಕೊಡಬೇಕೆಂದು ಸರ್ಕಾರದ ನಿಯಮವಿದೆ. ಈ 1227 ಸೀಟುಗಳನ್ನು ಏನು ಸರೆಂಡರ್ ಮಾಡಿದರು ಅದಕ್ಕೋಸ್ಕರ ಮತ್ತೊಂದು ಸಲ ಏತಕ್ಕೆ ಕೌನ್ಸಿಲಿಂಗ್ ಮಾಡಬಾರದು?

**ಸಭಾಪತಿಯವರು:-** ಆಯಿತು, ಸಾಕು. ಮಾನ್ಯ ಸಚಿವರೇ, ಮಾತನಾಡಿ.

**ಶ್ರೀ ಎನ್.ರವಿಕುಮಾರ್:-** ಅದಕ್ಕೆ ಒಂದು ದಿನವನ್ನು ಏತಕ್ಕೆ ಫಿಕ್ಸ್ ಮಾಡಬಾರದು? ಯಾರು ವಿದ್ಯಾರ್ಥಿಗಳು ಅಡ್ಮಿಷನ್ ಆಗುತ್ತಾರೋ ಅವರು ಬರಲಿ.

(ಮುಂದು)

(1043) 13-12-2021 KH/GR 1-50

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ ಆಯಿತು. ದಯಮಾಡಿ ಕುಳಿತುಕೊಳ್ಳಿ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಕೊನೆಯ ಝೀರೋ ಸೀಟ್‌ವರೆಗೂ ಕೂಡ ಕೌನ್ಸಿಲಿಂಗ್ ಮೂಲಕವೇ ಮಾಡಬೇಕು. ಇದು ಮ್ಯಾನೇಜ್‌ಮೆಂಟ್‌ಗೆ ಹೋಗಕೂಡದು.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇವತ್ತು ಕಾನೂನಿನಲ್ಲಿ ಏನು ಸಣ್ಣ ಲೋಪವನ್ನು ಉಪಯೋಗ ಮಾಡಿಕೊಂಡು, ಅದನ್ನು ಸರಿಪಡಿಸುವಂತಹ ಕೆಲಸ ಮಾಡುತ್ತೇವೆ. ಆದರೆ ಕೌನ್ಸಿಲಿಂಗ್ ಅನ್ನು 3 ಹಂತದಲ್ಲಿ ಮಾಡಬೇಕೆಂದು ಸುಪ್ರೀಂ ಕೋರ್ಟ್‌ನ ನಿರ್ದೇಶನ ಇದೆ. ಇದು ನಮ್ಮ ಸರ್ಕಾರದ ನಿರ್ದೇಶನವಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದನ್ನು ಸರಿಪಡಿಸಿ.

**ಡಾ|| ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಇದಾದ ಮೇಲೆ ಮಾಪ್‌ಅಪ್ ರೌಂಡ್ ಮಾಡಬೇಕೆಂದು ಹೇಳಿದ್ದಾರೆ. ಇದು ನನ್ನ ಗಮನದಲ್ಲಿ ಇದೆ. ಇದರ ಬಗ್ಗೆ ನಾವೆಲ್ಲಾ ಅನೇಕ ಸಭೆಗಳನ್ನು ಮಾಡಿದ್ದೇವೆ. ಇದನ್ನು ಹೇಗಾದರೂ ತಪ್ಪಿಸಬೇಕೆಂದು ಇವತ್ತು higher penalty clause ಅನ್ನು ಹಾಕಿದರೆ ಖಂಡಿತವಾಗಿಯೂ ಈ ರೀತಿ ಯಾರು ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಬಹಳ ದೊಡ್ಡ ಮೊತ್ತದ ದಂಡವನ್ನು ಹಾಕಬೇಕು ಮತ್ತು ವಿಧಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಯಾವುದೇ ಕಾರಣಕ್ಕೂ ಈ ವರ್ಷದಿಂದ ಈ ರೀತಿ ಆಗದಂತೆ ಎಚ್ಚರವನ್ನು ವಹಿಸುತ್ತೇವೆ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:-** ಮಾನ್ಯ ಎನ್. ರವಿಕುಮಾರ್‌ರವರೇ, ಸಾಕು. ಈಗಾಗಲೇ ಎರಡು ತಾಸು ಆಗಿದೆ. ಈ ರೀತಿ ಮಾಡಿದರೆ ನಾನು ಹೇಗೆ ಸದನವನ್ನು ನಡೆಸಬೇಕು? ಈಗಾಗಲೇ ಎಷ್ಟು ಸಮಯವಾಗಿದೆ ಎಂದು ನೋಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈ ಬೆಳಗಾವಿಯಲ್ಲಿ ಬಡ ವಿದ್ಯಾರ್ಥಿಗಳಿಗೋಸ್ಕರ ಈ ವಿಷಯ ಇದೆ. ತಾವು ಇದಕ್ಕೆ ಒಂದು ಅವಕಾಶವನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಿ. ಮಾನ್ಯ ಸಚಿವರು ವೈದ್ಯಕೀಯ ಕ್ಷೇತ್ರದಿಂದ ಬಂದಿರುವುದರಿಂದ ನಾನು ಈ ವಿಷಯವನ್ನು ಹೇಳುತ್ತಿದ್ದೇನೆ. ಅವರು ಈ ಒಂದು ತೊಂದರೆಯನ್ನು ಪರಿಹರಿಸಬೇಕೆಂದರೆ ಒಂದು ಸಭೆಯನ್ನು ಕರೆಯಲಿ. ಇದು ಹೇಗೆ ನಡೆಯುತ್ತಿದೆ ಎನ್ನುವುದರ ಬಗ್ಗೆ ನಾನು ಅನುಭವದ ಕಥನಗಳನ್ನು ಹೇಳುತ್ತೇನೆ. ಇದಕ್ಕೆ ಈ ಕಾನೂನನ್ನು ಹೇಗೆ ರಚನೆ ಮಾಡಬೇಕೆನ್ನುವುದರ ಬಗ್ಗೆಯೂ ಕೂಡ ಸಲಹೆ ಇದೆ. ಉದಾಹರಣೆಗೆ ಕೌನ್ಸಿಲಿಂಗ್ ಪ್ರತಿ ವರ್ಷ ನಡೆಯುತ್ತದೆಯಲ್ಲವೇ? ಸರೆಂಡರ್ ಮಾಡುವ ಸೀಟುಗಳಿಗೆ ಕೌನ್ಸಿಲಿಂಗ್ ಮಾಡಬಾರದು.

**ಸಭಾಪತಿಯವರು:-** ಮಾನ್ಯ ಎನ್.ರವಿಕುಮಾರ್‌ರವರೇ ತಾವು ಏನು ಭಾಷಣ ಮಾಡುತ್ತೀರಿ? ಮಾನ್ಯ ಸಚಿವರೇ ಮಾನ್ಯ ಸದಸ್ಯರು ಕೇಳಿರುವುದಕ್ಕೆ ಉತ್ತರವನ್ನು ಹೇಳಿ.

**ಶ್ರೀ ಎನ್.ರವಿಕುಮಾರ್:-** ಸರೆಂಡರ್ ಮಾಡುವ ಸೀಟುಗಳಿಗೆ ಇನ್ನೊಂದು ಕೌನ್ಸಿಲಿಂಗ್.

**ಡಾ: ಕೆ.ಸುಧಾಕರ್:-** ಮಾನ್ಯ ಸಭಾಪತಿಯವರೇ, ನಾನು ಸಭೆಯನ್ನು ಮಾಡುತ್ತೇನೆ.

**ಸಭಾಪತಿಯವರು:-** ಆಯಿತು. ಮಾನ್ಯ ಎನ್.ರವಿಕುಮಾರ್‌ರವರೇ ಮಾನ್ಯ ಸಚಿವರು ಸಭೆ ಮಾಡುತ್ತಾರೆ, ತಾವು ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಪ್ರಶ್ನೆ ಸಂಖ್ಯೆ: 76**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ) (ಮಾನ್ಯ ಕಾಂತರಾಜ್ (ಬಿಎಂಎಲ್)ರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ. ಆದರೆ, ಸಕಾರತ್ಮಾಕವಾದ ಉತ್ತರ ಇಲ್ಲ ಎನ್ನುವಂತಹ ನೋವು ನನಗೆ ಕಾಡುತ್ತಿದೆ. ಇದರಲ್ಲಿ ನೊಂದ ಅಭ್ಯರ್ಥಿಗಳಿಗೆ ನ್ಯಾಯ ಸಿಕ್ಕಿಲ್ಲ. ಇದರಲ್ಲಿ ಆಗಿರುವ ಅನ್ಯಾಯದ ಬಗ್ಗೆ ನಾನು ಏನಾದರೂ ಮಾಡಿ ವಿಚಾರಣೆ ಮಾಡಿ ಮಾಡಬೇಕೆಂದುಕೊಂಡಿದ್ದೇನೆ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಮೊದಲು ತಾವು ಪ್ರಶ್ನೆ ಕೇಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ವಿಚಾರಕ್ಕೆ ಬರುತ್ತೇನೆ. 2005ನೇ ಸಾಲಿನಲ್ಲಿ ಕೆಆರ್‌ಇಡಿಎಲ್ ಸಂಸ್ಥೆಯಲ್ಲಿ 34 ನೌಕರರು ಹೊರ ಗುತ್ತಿಗೆ ಆಧಾರದ ಮೇಲೆ ಹಾಗೂ 12 ನೌಕರರು ಗುತ್ತಿಗೆ ಆಧಾರದ ಮೇಲೆ ಒಟ್ಟು 46 ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸದಸ್ಯರೇ, ಆ ವಿಷಯವೆಲ್ಲಾ ನನಗೆ ಗೊತ್ತಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಗೊತ್ತಿದೆ. ಇವರು pick and choose ಮಾಡಿಕೊಂಡಿದ್ದಾರೆ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ವಿಚಾರಕ್ಕೆ ಬರುತ್ತೇನೆ. ಶ್ರೀಮತಿ ಗೀತಾ ಕೆ.ಚೌಗುಳೆ ರವರು ದಿನಾಂಕ:01-07-2005ಕ್ಕೆ

---

ಹೊರ ಗುತ್ತಿಗೆ ಆಧಾರದ ಮೇಲೆ ಸಂಸ್ಥೆಗೆ ಸೇರಿದ್ದಾರೆ. ಶ್ರೀ ಕೆ.ವಿ.ಶ್ರೀನಿವಾಸಮೂರ್ತಿ ರವರು ದಿನಾಂಕ:01-07-2005ಕ್ಕೆ ಹೊರ ಗುತ್ತಿಗೆ ಆಧಾರದ ಮೇಲೆ ಸಂಸ್ಥೆಗೆ ಸೇರಿದ್ದಾರೆ. ಇದರಲ್ಲಿ ಶ್ರೀಮತಿ ಗೀತಾ ಕೆ.ಚೌಗುಳೆರವರಿಗೆ ನ್ಯಾಯ ದೊರೆತು ಕೆಲಸ ಖಾಯಂ ಆಗಿದೆ. ಶ್ರೀ ಕೆ.ವಿ.ಶ್ರೀನಿವಾಸಮೂರ್ತಿರವರಿಗೆ ನ್ಯಾಯ ಸಿಗದೇ ಮನೆಯಲ್ಲಿ ಇದ್ದಾರೆ. ತಮಗೆ ದಿನಾಂಕ:16-07-2014ರಲ್ಲಿ ಹೈಕೋರ್ಟ್ ಕೂಡ ಇವರನ್ನು ಖಾಯಂ ಮಾಡಿ ಎಂದು ಹೇಳಿದೆ ಮತ್ತು ಕಾನೂನು ಇಲಾಖೆ ಅಭಿಪ್ರಾಯ ಕೂಡ ಕೊಟ್ಟಿದೆ. ಮಾನ್ಯ ಸಚಿವರು ಅನುಮತಿ ಪಡೆದು ಮುಖ್ಯ ಕಾರ್ಯದರ್ಶಿಯವರಾದ ಪಿ.ರವಿಕುಮಾರ್‌ರವರು ಇವರಿಗೆ ಅನ್ಯಾಯ ಮಾಡಿದ್ದೀರಿ. ಇವರಿಗೆ ನ್ಯಾಯ ಕೊಡಿ ಎಂದು ಹೇಳಿದ್ದಾರೆ. ಇದಕ್ಕೆ ಅರ್ಜಿ ಸಮಿತಿ ಕೂಡ ಶಿಫಾರಸ್ಸು ಮಾಡಿದೆ. ಇದಕ್ಕೂ ಮೀರಿ ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ಒಂದು ಸಭೆಯಾಗಿ ಒಪ್ಪಿಕೊಂಡು ಹೋಗಿದ್ದಾರೆ. ಇವತ್ತು ತಾವು ಉಮಾದೇವಿ ಪ್ರಕರಣದ ಬಗ್ಗೆ ಹೇಳುತ್ತಿದ್ದೀರಿ. 33 ನೌಕರರನ್ನು ಖಾಯಂ ಮಾಡುವುದಕ್ಕೆ ಈ ಉಮಾದೇವಿ ಪ್ರಕರಣ ಅನ್ವಯಿಸುವುದಿಲ್ಲ. ಈ ಬಡಪಾಯಿಗಳಿಗೆ ಉಮಾದೇವಿ ಪ್ರಕರಣ ಅನ್ವಯವಾಗುತ್ತದೆಯೇ? ಇವರಿಬ್ಬರು ಒಂದೇ ದಿನಾಂಕ ಮತ್ತು ಒಂದೇ ಸಮಯದಲ್ಲಿ ಕೆಲಸಕ್ಕೆ ಸೇರಿದ್ದಾರೆ. ಇವರಿಗೆ ಯಾರು ಅನ್ಯಾಯ ಮಾಡಿದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಶ್ರೀ ಸಿದ್ದಲಿಂಗ ಎನ್ನುವಂತಹ ಮನುಷ್ಯ Chief Accountant ಮತ್ತು Chief Administrative Officer 3 ಬಾರಿ ಅಮಾನತು ಆಗಿದ್ದಾನೆ ಮತ್ತೆ ಆತನನ್ನು ಅಲ್ಲಿಯೇ ತಂದು ಕೂರಿಸುತ್ತೀರಿ. ಈ ಎಲ್ಲಾ ತಪ್ಪುಗಳ ಉನ್ನಾರ ಅವನಿಂದಲೇ ಆಗುತ್ತಿದೆ. 3 ಬಾರಿ ಅಮಾನತು ಆದವನು ಏಕೆ ಆ ಹುದ್ದೆಯಲ್ಲಿಯೇ ಇರಬೇಕು? 35 ನೌಕರರಿಗೆ ನ್ಯಾಯ ಕೊಟ್ಟಿದ್ದೀರಿ. ಇನ್ನು 15 ನೌಕರರಿಗೆ ಮತ್ತು ಶ್ರೀ ಕೆ.ವಿ.ಶ್ರೀನಿವಾಸ ಮೂರ್ತಿಯವರಿಗೆ ಏಕೆ ನ್ಯಾಯ ಕೊಡುವುದಿಲ್ಲ. ಕೂಡಲೇ ವಿಚಾರಣೆ ಮಾಡಿ ಇವರನ್ನೆಲ್ಲಾ ಹುದ್ದೆಗೆ ತೆಗೆದುಕೊಂಡು ನ್ಯಾಯ ಕೊಡಬೇಕೆನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ನೀಡಬೇಕು.

**ಶ್ರೀ ವಿ.ಸುನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, 2005ನೇ ಸಾಲಿನಲ್ಲಿ ಆಗಿರುವಂತಹ ಪ್ರಕರಣ ಇದು. ಸುದೀರ್ಘವಾಗಿ ಇದರ ಕುರಿತಂತೆ ಕಾಲಕಾಲಕ್ಕೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಚರ್ಚೆಗಳಾಗುತ್ತಿದೆ. ವಾದ-ವಿವಾದಗಳು ನಡೆದಿದೆ. ತಾವು ಒಂದು ಸಭೆಯನ್ನು ನಡೆಸಿದ್ದೀರಿ ಎಂದು ನಾನು ಕೇಳಲ್ಪಟ್ಟಿದ್ದೇನೆ. ಅರ್ಜಿ ಸಮಿತಿಯಲ್ಲಿಯೂ ಕೂಡ ಇದರ ಬಗ್ಗೆ ಚರ್ಚೆಯಾಗಿದೆ. ನಮ್ಮ ಇಲಾಖೆಯ ಕಾನೂನು ಅಧಿಕಾರಿಗಳು ಇದಕ್ಕೆ ಅವಕಾಶ ಇಲ್ಲವೆನ್ನುವ ಮಾತನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಯಾರು ಅರ್ಜಿದಾರರು ಮೇಲ್ಮನೆ ಹೋಗಬೇಕಿತ್ತು ಎನ್ನುವಂತಹದ್ದು ಕೂಡ ನಮ್ಮ ಅಭಿಪ್ರಾಯವಾಗಿತ್ತು. ಆದರೂ ಕೂಡ ಮಾನ್ಯ ಸದಸ್ಯರು ಮತ್ತು ಹಿಂದಿನ ಎಲ್ಲಾ ನಡವಳಿಕೆಗಳನ್ನು ನೋಡಿದಾಗ ಅವರು ಏನು ಸಹಕಾರ ಮಾಡುವುದಕ್ಕೆ ಆಗುತ್ತದೆಯೇ, ಆ ಸಹಕಾರವನ್ನು ಮಾಡುವುದಕ್ಕೆ ಸರ್ಕಾರ ಸಿದ್ಧ ಇದೆ. ಇದನ್ನು ಬೋರ್ಡ್‌ಗೆ ತೆಗೆದುಕೊಂಡು ಬಂದು, ಹಾಗೆಯೇ ಕಾನೂನು ಅಭಿಪ್ರಾಯವನ್ನು ತೆಗೆದುಕೊಂಡು ಏನು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಅದನ್ನು ಮಾಡುತ್ತೇವೆ.

**ಸಭಾಪತಿಯವರು:-** ಬೋರ್ಡ್‌ಗೆ ತೆಗೆದುಕೊಂಡು ಇದನ್ನು ಸರಿ ಮಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಬೋರ್ಡ್‌ಗೆ ತೆಗೆದುಕೊಂಡು ಬಂದು ಹೈಕೋರ್ಟ್ ಆದೇಶಕ್ಕೆ ಅನುಷ್ಠಾನಕ್ಕೆ ಕೊಡಿ.

**ಸಭಾಪತಿಯವರು:-** ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರೇ, ತಾವು ಹೇಳಿದ್ದು ನಿಜ ಇದೆ. ಅವರಿಗೆ ಹೆಮ್ಮೆಯಾಗಿದೆ. ನಾನೇ ನೋಡಿದ್ದೇನೆ. ಮಾನ್ಯ ಸಚಿವರೇ, ಇದನ್ನು ಬೋರ್ಡ್‌ಗೆ ತೆಗೆದುಕೊಂಡು ಬಂದು ಸ್ವಲ್ಪ ಸರಿ ಮಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಧನ್ಯವಾದಗಳು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 37**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, it is a fundamental constitutional right. ಈ ದೇಶದ ಕಟ್ಟಕಡೆಯ ಮನುಷ್ಯನಿಗೂ ಆರೋಗ್ಯ ಮತ್ತು ಶಿಕ್ಷಣವನ್ನು ಕೊಡಬೇಕಾಗಿರುವಂತಹದ್ದು ಎಲ್ಲಾ ಸರ್ಕಾರಗಳ ಕರ್ತವ್ಯ. ಯಾವ ಕಾಲಮಿತಿಯೊಳಗೆ ಈ ಸೌಲಭ್ಯವನ್ನು ಒದಗಿಸಲಾಗುವುದು ಎಂದು ನಾನು ಕೇಳಿರುವಂತಹ ಪ್ರಶ್ನೆಗೆ ಮಾನ್ಯ ಸಚಿವರು 'ಉದ್ಭವಿಸುವುದಿಲ್ಲ' ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಇವರು ಈ ರೀತಿಯ ಉತ್ತರವನ್ನು ನೀಡಿದರೆ ನಾವು ಸಮಸ್ಯೆಗಳನ್ನು ಪರಿಹಾರ ಮಾಡಿದ ಹಾಗೆ ಆಗುತ್ತದೆಯೇ? ಮಾನ್ಯ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿಯವರು ಇಲ್ಲಿಯೇ ಕುಳಿತಿದ್ದಾರೆ. ಸರ್ಕಾರದಿಂದಲೇ ಶಿಕ್ಷಕಿಯ ಚಿಕಿತ್ಸೆ ವೆಚ್ಚ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಶಿಕ್ಷಣ ಸಚಿವರು ಹೇಳಿರುವಂತಹದ್ದು ದಿನಪತ್ರಿಕೆಯಲ್ಲಿ ಪ್ರಸಾರವಾಗಿದೆ. ಈ ಪರಿಸ್ಥಿತಿ rare and rarest case ನಲ್ಲಿ ಬರುವಂತಹ ಸಂದರ್ಭದಲ್ಲಿ ನಾನು 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ಏಕೆ ವಿಸ್ತರಣೆ ಮಾಡಬಾರದು ಎನ್ನುವ ಪ್ರಶ್ನೆಯನ್ನು ಕೇಳಿದ್ದೇನೆ. ಇದನ್ನು ವಿಸ್ತರಣೆ ಮಾಡಿದರೆ ಏನು ತಪ್ಪಾಗುತ್ತದೆ? ಇದಕ್ಕೆ ಮಾನ್ಯ ಸಚಿವರು 1983 ಮತ್ತು ಅದರಡಿ ರಚಿಸಲ್ಪಟ್ಟ ಕರ್ನಾಟಕ ಶಿಕ್ಷಣ ಸಂಸ್ಥೆಗಳ (Classification, Regulation and Prescription of Curricula) ನಿಯಮಗಳು, 1995ರ ವ್ಯಾಪ್ತಿಗೆ ಒಳಪಡುತ್ತಾರೆ. ನಿಯಮಗಳು-1963 ಮತ್ತು ನಿಯಮಗಳು-1999 ರಲ್ಲಿ ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚ ಹಾಕುವುದಕ್ಕೆ ಬರುವುದಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕೆ 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ವಿಸ್ತರಣೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಸರ್ಕಾರದ ಅಧಿಕಾರಿಗಳು ಉತ್ತರವನ್ನು ಕೊಡುತ್ತಾರೆಯಲ್ಲವೇ? ಇದನ್ನು ಇವರು ಏಕೆ ಮಾಡಿದ್ದಾರೆ. ಇದನ್ನು ಮಾಡಿರುವಂತಹದ್ದು ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣವನ್ನು ಕಾಪಾಡಬೇಕೆಂದು ಈ ನಿಯಮಗಳನ್ನು ಮಾಡಿದ್ದಾರೆ. ಆರೋಗ್ಯವನ್ನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬಾರದೆಂದು ಈ ನಿಯಮಗಳನ್ನು ಮಾಡಿರುವುದಲ್ಲ. ಇಂತಹ ಬೇಜವಾಬ್ದಾರಿ ಉತ್ತರವನ್ನು ನಮ್ಮ ಅಧಿಕಾರಿಗಳು ಕೊಡುತ್ತಾರೆ. ತಾವು ಈ ಉತ್ತರವನ್ನು ನಮಗೆ ಇಲ್ಲಿ ಕೊಡುತ್ತೀರಿ. ದಯಮಾಡಿ, 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ಏಕೆ ವಿಸ್ತರಣೆ ಮಾಡಬಾರದು? ಕಟ್ಟಕಡೆಯ ಮನುಷ್ಯನಿಗೂ ಕೊಡಬೇಕೆಂದು ನಮ್ಮ ಸಂವಿಧಾನ ಹೇಳಿಲ್ಲವೇ? ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರು ಮತ್ತು ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಶಿಕ್ಷಕರು ಶಿಕ್ಷಕರಲ್ಲವೇ? ಅವರು ಸರ್ಕಾರಿ ಕೆಲಸವನ್ನು ಮಾಡುತ್ತಿಲ್ಲವೇ? ಕಟ್ಟಕಡೆಯ ಮನುಷ್ಯನಿಗೂ ಕೊಡಬೇಕೆಂದು ಸಂವಿಧಾನ ಹಕ್ಕುಗಳು ಇರುವಂತಹ ಸಂದರ್ಭದಲ್ಲಿ ಸರ್ಕಾರ ಏಕೆ ಗಮನಕೊಡಬಾರದು? ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಕೆಲಸ ಮಾಡುವಂತಹ ಪ್ರತಿಯೊಬ್ಬ ಶಿಕ್ಷಕರಿಗೂ ಕೂಡ 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ಕೊಡಬೇಕೆಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇದನ್ನು ಏಕೆ ಕೊಡಬಾರದು?

**ಡಾ: ಸಿ.ಎನ್.ಅಶ್ವಥ್‌ನಾರಾಯಣ (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು)(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರ ಪರವಾಗಿ)**

ಮಾನ್ಯ ಸಭಾಪತಿಯವರೇ, 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ತಂದಿರುವಂತಹದ್ದು ಈಗಾಗಲೇ ಯಾರಿಗೆ ಆರೋಗ್ಯ ಸೇವೆಗಳನ್ನು ಕೊಟ್ಟಿದ್ದೇವೆಯೋ, ಈಗ ಕೊಟ್ಟಿರುವಂತಹ ಸರ್ಕಾರಿ ನೌಕರರಿಗೆ ಕ್ಯಾಶ್‌ಲೆಸ್ ಫೆಸಿಲಿಟಿಯನ್ನು ಕೊಡುವುದಕ್ಕೆ ಸರ್ಕಾರ ಕಾರ್ಯಕ್ರಮವನ್ನು ರೂಪಿಸಿರುವಂತಹದ್ದು. ಇವತ್ತು ಯಾರಿಗೆ ಆರೋಗ್ಯ ಸೇವೆಗಳನ್ನು ಕೊಡುತ್ತಿರಲಿಲ್ಲ. ಯಾರು ಒಳಪಟ್ಟಿರಲಿಲ್ಲ. ಆ ಒಳಪಡದೇ ಇರುವವರಿಗೆ ಈ ಕಾರ್ಯಕ್ರಮವನ್ನು ವಿಸ್ತರಣೆ ಮಾಡುವ ಪ್ರಶ್ನೆ ಇಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಬಹಳ ಮುಖ್ಯವಾಗಿ ತಮಗೆ ಗೊತ್ತಿರುವ ಹಾಗೆ ನಾವು ಅವರನ್ನು ಸರ್ಕಾರಿ ನೌಕರರು ಎಂದು ಪರಿಗಣನೆಗೆ ತೆಗೆದುಕೊಂಡಿಲ್ಲ. ಆದರೆ ಇವತ್ತು . . .

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಚಿವರೇ, ದಯಮಾಡಿ . . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಎಲ್ಲಾ ಖಾಸಗಿ ಅನುದಾನಿತ ಮತ್ತು ಅನುದಾನ ರಹಿತ ಶಿಕ್ಷಕರಿಗೂ ಈ 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ವಿಸ್ತರಣೆ ಮಾಡುತ್ತೇನೆ ಎಂದು ಈ ಹಿಂದೆ ಸಚಿವರಾಗಿದ್ದಂತಹ ಸುರೇಶ್‌ಕುಮಾರ್‌ರವರು ಸದನದಲ್ಲಿ ಮಾತು ಕೊಟ್ಟಿದ್ದಾರೆ. ಇದನ್ನು ಹೇಳಿ ಈಗಾಗಲೇ ಎರಡು ವರ್ಷಗಳಾಯಿತು. ಇದರ ಬಗ್ಗೆ ಆಡಳಿತ ಪಕ್ಷದವರನ್ನೇ ಕೇಳಿ. ಮಾನ್ಯ ಸದಸ್ಯರಾದ ವೈ.ಎ.ನಾರಾಯಣಸ್ವಾಮಿಯವರೇ ದಯಮಾಡಿ ಹೇಳಿ. ಇದರ ಬಗ್ಗೆ ತಪ್ಪು ಮಾಹಿತಿ ಹೋಗುವುದು ಬೇಡ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಹಾಗಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಚಿವರು ಏಕೆ ಈ ವಾಗ್ದಾನವನ್ನು ಹೇಳಿದ್ದಾರೆ? ಹಾಗಿದ್ದರೆ ಸರ್ಕಾರದಿಂದಲೇ ಶಿಕ್ಷಕರಿಗೆ ಈ ವ್ಯವಸ್ಥೆ ಎಂದು ಏಕೆ ಹೇಳಲಾಗಿದೆ? ತಾವು ಬಿಟ್ಟುಬಿಡಿ. ಏನು ಹೇಳಬೇಡಿ. ಇಲ್ಲಿ ತಾವು ಏನು ಹೇಳಿದ್ದೀರಿ ಎಂಬುದನ್ನು ನೋಡಿ.

**ಸಭಾಪತಿಯವರು:-** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಹೇಳುವುದು ನಿಜ. ಇದರ ಬಗ್ಗೆ ಹಿಂದಿನ ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಸಚಿವರಾದ ಸುರೇಶ್‌ಕುಮಾರ್‌ರವರು ಸಭೆಯಾದಾಗ ಹೇಳಿದ್ದರು. ಆರೋಗ್ಯ ಭಾಗ್ಯವನ್ನು ಕೊಡುವಂತಹ ಯೋಜನೆಯನ್ನು ಮಾಡಿದರೆ ತಪ್ಪೇನಿದೆ?

**ಶ್ರೀ ಎಸ್.ವಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ವಿ.ಸಂಕನೂರರವರೇ ಕುಳಿತುಕೊಳ್ಳಿ. ಮಾನ್ಯ ಸಚಿವರೇ ಉತ್ತರವನ್ನು ಹೇಳಲಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಚಿವರೇ, ಎಲ್ಲೇ ಮಾತು ಕೊಟ್ಟಿದ್ದರೂ, ಮಾತು ತಪ್ಪಬೇಡಿ. ಉತ್ತರವನ್ನು ಹೇಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

---

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು 'ಜ್ಯೋತಿ ಸಂಜೀವಿನಿ ಯೋಜನೆ'ಯನ್ನು ಇವರಿಗೆ ಏಕೆ ವಿಸ್ತರಣೆ ಮಾಡಿಲ್ಲ ಎಂದು ಕೇಳಿದ್ದಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಮಾನ್ಯ ಮುಖ್ಯಮಂತ್ರಿಯವರೇ ಇದನ್ನು ವಿಸ್ತರಣೆ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಈಗ ಪ್ರತ್ಯೇಕವಾಗಿ ಇವರಿಗೆ ಆರೋಗ್ಯ ಸೇವೆಗಳನ್ನು ಒದಗಿಸಿ ಎಂದು ಕೇಳುತ್ತಿರುವಂತಹದ್ದು ಇದೆ. ಇದನ್ನು ಸರ್ಕಾರದ ಹಂತದಲ್ಲಿ ಪರಿಶೀಲನೆ ಮಾಡುವಂತಹದ್ದು ಆಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ ಆಯಿತು ಪರಿಶೀಲನೆ ಮಾಡಿ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಸುಮಾರು ವರ್ಷಗಳಿಂದ ಚರ್ಚೆ ಮಾಡಿಕೊಂಡು ಬಂದಿದ್ದೇವೆಂದು ಹೇಳಿದ್ದಾರೆ. ನನ್ನದು ಕೂಡ ಅದೇ ಪ್ರಶ್ನೆ ಇದೆ. ಇವರು ಸರ್ಕಾರಿ ನೌಕರರು ಅಲ್ಲ ಎಂದು ಒಂದೇ ಒಂದು ಕಾರಣವನ್ನು ಇಟ್ಟುಕೊಂಡು ಹಾಗೂ 1963 ನಿಯಮವನ್ನು ಇಟ್ಟುಕೊಂಡು ಮೋಸ ಮಾಡುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಒಂದು ನಿಮಿಷ.

(ಮುಂದು)

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(1044) ಎಸ್‌ಪಿಆರ್/ಎಂಡಿ 2:00 13/12/2021

(ಸಭಾಪತಿಯವರ ಉಪಸ್ಥಿತಿ)

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಅನ್ಯಾಯ. ಈ ದೇಶದಲ್ಲಿ ಎಲ್ಲರಿಗೂ AB-ArK (Ayushman Bharat- Arogya Karnataka) Card ಇದೆ.

**ಸಭಾಪತಿಯವರು:-** ಇದು ಸರಿಯಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಗುಣಮಟ್ಟದ ಶಿಕ್ಷಣವನ್ನು ಕಾಪಾಡಬೇಕು. ಆರೋಗ್ಯಕ್ಕೆ ಸಂಬಂಧಪಟ್ಟಂತೆ,

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಂತ್ರಿಯವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

**ಸಭಾಪತಿಯವರು:-** ನಾನು ಹೇಳುವುದನ್ನು ಕೇಳಿ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆರೋಗ್ಯ ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯವಲ್ಲವೇ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ದೇಶದಲ್ಲಿ ಎಲ್ಲರಿಗೂ AB-ArK (Ayushman Bharat- Arogya Karnataka) Card ಇದೆ. ಸರ್ಕಾರಿ ನೌಕರರೆಲ್ಲರಿಗೂ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸಲಾಗುತ್ತದೆ. ಆದರೆ ಅನುದಾನಿತ ಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಯಾವ ರೀತಿಯಾದ ಪಾಪವನ್ನು ಮಾಡಿದ್ದಾರೆಂದು ನಾನು ಕೇಳಬಯಸುತ್ತೇನೆ.

**ಸಭಾಪತಿಯವರು:-** ಶ್ರೀ ಭೋಜೇಗೌಡರೇ ಕುಳಿತುಕೊಳ್ಳಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, 1963 ನೇ ಕಾನೂನನ್ನು ಉಪಯೋಗಿಸಿಕೊಂಡು ಸರ್ಕಾರವು ಅವರಿಗೆ ಮೋಸ ಮಾಡಲು ಹೊರಟಿದೆ. ಇದು ನ್ಯಾಯವೇ?

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಶ್ರೀ ಸಂಕನೂರರವರೇ, ಕುಳಿತುಕೊಳ್ಳಿ. ಎಲ್ಲರ ಅಭಿಪ್ರಾಯದಂತೆ, ಸರ್ಕಾರವು ದಯಮಾಡಿ ಇದನ್ನು ಪರಿಗಣಿಸಬೇಕು. ಈ ವಿಚಾರದಲ್ಲಿ ತಕ್ಷಣವೇ ಮಂತ್ರಿಗಳು ಸಭೆಯನ್ನು ಕರೆದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕು.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಂತ್ರಿಗಳು ಅತಿ ಶೀಘ್ರದಲ್ಲಿ ಸಭೆಯನ್ನು ಮಾಡಬೇಕು. ಹಾಗಾಗಿ ಯಾವಾಗ ಸಭೆಯನ್ನು ಮಾಡುತ್ತಾರೆಂದು ತಿಳಿಸಬೇಕು. ದಯಮಾಡಿ ಮಂತ್ರಿಗಳು ಪ್ರಸ್ತುತ ಅಧಿವೇಶನ ಪೂರ್ಣಗೊಳ್ಳುವುದರೊಳಗೆ ಸಭೆಯನ್ನು ಮಾಡಬೇಕು.

**ಸಭಾಪತಿಯವರು:-** ಮಂತ್ರಿಗಳು ಹೇಳುವವರೆಗೆ ಸದಸ್ಯರಿಗೆ ತಾಳ್ಮೆ ಇರಬೇಕು.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೆಳಗಾವಿಯಲ್ಲಿ ಎಲ್ಲರೂ ಬಿಡುವಾಗಿ ಇರುತ್ತಾರೆ. ಹೀಗಾಗಿ ಅವರಿಗೆ ಈಗಲೇ ಸಭೆಯನ್ನು ಮಾಡುವಂತೆ ಸಭಾಪತಿಯವರು ತಿಳಿಸಬೇಕು. ನಾವುಗಳು ನಮ್ಮ ಮನೆ-ಮಠಗಳನ್ನು ಬಿಟ್ಟು ಇಲ್ಲಿಗೆ ಬಂದಿದ್ದೇವೆ.

**ಸಭಾಪತಿಯವರು:-** ಸದಸ್ಯರೇ, ಮಂತ್ರಿಗಳು ಉತ್ತರಿಸಲಿ.

**ಡಾ: ಸಿ.ಎನ್.ಅಶ್ವಥ್‌ನಾರಾಯಣ:-** ಮಾನ್ಯ ಸಭಾಪತಿಯವರೇ, ಸಭೆಯ ದಿನಾಂಕವನ್ನು ನಿಗದಿಪಡಿಸಿ, ನಂತರದಲ್ಲಿ ತಿಳಿಸಲಾಗುವುದು.

**ಸಭಾಪತಿಯವರು:-** ಇಲ್ಲಿಗೆ ಪ್ರಶ್ನೋತ್ತರ ಅವಧಿಯು ಮುಕ್ತಾಯವಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ: 13 ನೇ ಡಿಸೆಂಬರ್ 2021, ಸಮೂಹ-1ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 139 ಪ್ರಶ್ನೆಗಳ ಪೈಕಿ 79 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

**ಸಭಾಪತಿಯವರು:-** ಮಂಡಿಸಲಾಯಿತು.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

### ಅ) ವಿಷಯ:- 19 ನೇ ಡಿಸೆಂಬರ್ 2021 ರಂದು ಕೆ.ಪಿ.ಎಸ್.ಸಿ. ಯಿಂದ ನಿಗದಿಯಾಗಿರುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಕೋವಿಡ್ ಕಾರಣದಿಂದ ಮುಂದೂಡುವ ಬಗ್ಗೆ.

- - - -

**ಶ್ರೀ ಯು.ಬಿ.ವೆಂಕಟೇಶ್(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಇನ್ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸನಲ್ ಸೆಲೆಕ್ಷನ್ (ಐ.ಬಿ.ಪಿ.ಎಸ್.) ಸಂಸ್ಥೆಯು ಬ್ಯಾಂಕ್ ಕ್ಲರ್ಕ್ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ 'ಸಿ' ದರ್ಜೆಯ ಹುದ್ದೆಗಳ ನೇಮಕಕ್ಕೆ ಡಿಸೆಂಬರ್ 19 ರಂದು ಏಕಕಾಲದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ನಿಗದಿಯಾಗಿರುವುದರಿಂದ ಪರೀಕ್ಷಾರ್ಥಿಗಳು ಸಂಕಷ್ಟಕ್ಕೆ ಸಿಲುಕಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಕಳೆದ ಎರಡು ವರ್ಷಗಳಿಂದ ಕೋವಿಡ್ ಪರಿಣಾಮ ನೇಮಕಾತಿ ಪ್ರಕ್ರಿಯೆಗಳು ಕುಂಠಿತವಾಗಿ ಸಾಗಿರುವ ಮಧ್ಯದಲ್ಲಿ ಈ ಘಟನೆ ನಿರುದ್ಯೋಗಿ ವಿದ್ಯಾವಂತರಿಗೆ ಅನಾನುಕೂಲವಾಗಿ ಪರಿಣಮಿಸಿದೆ. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 523 'ಸಿ' ದರ್ಜೆಯ ಹುದ್ದೆಗಳು ಹಾಗೂ ನಾನಾ ಬ್ಯಾಂಕ್‌ಗಳಲ್ಲಿ ಖಾಲಿಯಿರುವ 7,858 ಕ್ಲರ್ಕ್ ಹುದ್ದೆಗಳ ಪರೀಕ್ಷೆಗಳು ಡಿಸೆಂಬರ್ 19 ರ ಭಾನುವಾರ ಏಕಕಾಲದಲ್ಲಿ ನಡೆಯಲಿರುವುದರಿಂದ ಎರಡೂ ಕಡೆಗಳಲ್ಲಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಇದರಿಂದ ನಿರಾಶೆಯಾಗಿದ್ದು, ತತ್ಸಂಬಂಧ ಕೆ.ಪಿ.ಎಸ್.ಸಿ.ಗೆ ಪರೀಕ್ಷಾ ದಿನಾಂಕವನ್ನು ಮುಂದೂಡುವಂತೆ ಕೋರಿದ ಮನವಿಗೆ ಕೆ.ಪಿ.ಎಸ್.ಸಿ. ಸ್ಪಂದಿಸದಿರುವುದು ಸಹ ವರದಿಯಾಗಿದೆ. ಆ ಕಾರಣ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಕೂಡಲೇ ದಿನಾಂಕ 19/12/2021 ರಂದು ನಿಗದಿಯಾಗಿರುವ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪರೀಕ್ಷೆಗಳನ್ನು ಮುಂದೂಡುವಂತೆ ಕೆ.ಪಿ.ಎಸ್.ಸಿ.ಗೆ ಜರೂರು ನಿರ್ದೇಶನ ನೀಡಬೇಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದಸ್ಯರು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

**ಆ) ವಿಷಯ:- ಕಾನೂನು ವಿಶ್ವವಿದ್ಯಾಲಯದ ಪರೀಕ್ಷೆಗೆ ಸಂಬಂಧಪಟ್ಟಂತೆ.**

**- - - -**

**ಶ್ರೀ ಎಸ್.ವಿ.ಸಂಕನೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾನೂನು ವಿಶ್ವವಿದ್ಯಾಲಯದ ಪರೀಕ್ಷೆಗೆ ಸಂಬಂಧಿಸಿದಂತೆ, ಹುಬ್ಬಳ್ಳಿಯಲ್ಲಿರುವ ಕಾನೂನು ವಿಶ್ವವಿದ್ಯಾಲಯ ಆವರಣದಲ್ಲಿ ಎ.ಬಿ.ವಿ.ಪಿ. ಮತ್ತು ಮುಂತಾದ ವಿದ್ಯಾರ್ಥಿ ಸಂಘಟನೆಗಳು ನಡೆಸುತ್ತಿರುವ ವಿವಿಧ ರೀತಿಯ ಪ್ರತಿಭಟನೆಗಳ ಕುರಿತು ವಿಜಯವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದ ಗಂಭೀರವಾದ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಕಾನೂನು ಮಹಾವಿದ್ಯಾಲಯಗಳಲ್ಲಿ ಸದ್ಯ ದಿನಾಂಕ 15/12/2021 ರಂದು ಜರುಗಬೇಕಾಗಿರುವ 2ನೇ ಹಾಗೂ 4 ನೇ ಸೆಮಿಸ್ಟರ್ ಪರೀಕ್ಷೆಗಳನ್ನು ಭೌತಿಕವಾಗಿ ನಡೆಸದೇ, ಆಂತರಿಕ ಮೌಲ್ಯಮಾಪನ ಆಧಾರದ ಮೇಲೆ ಅಥವಾ ಆನ್‌ಲೈನ್ ಮೂಲಕ ಪರೀಕ್ಷೆಗಳನ್ನು ನಡೆಸಬೇಕೆಂಬ ಪ್ರಮುಖ ಬೇಡಿಕೆಯನ್ನು ಮುಂದೆ ಮಾಡಿ ವಿಶ್ವವಿದ್ಯಾಲಯ ಆವರಣ ಹುಬ್ಬಳ್ಳಿಯಲ್ಲಿ ಕಳೆದ 6-7 ದಿನಗಳಿಂದ ಎ.ಬಿ.ವಿ.ಪಿ. ಹಾಗೂ ಇತರೆ ವಿದ್ಯಾರ್ಥಿ ಸಂಘಟನೆಗಳಿಂದ ಪ್ರತಿಭಟನಾ ರ್‍ಯಾಲಿ ಧರಣಿ ಹಾಗೂ ಉಪವಾಸ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸತ್ಯಾಗ್ರಹದಂತಹ ವಿವಿಧ ರೀತಿಯ ಪ್ರತಿಭಟನೆಗಳು ನಡೆಯುತ್ತಿವೆ. ಈ ಕುರಿತು ಕೆಲವೊಂದು ವಿದ್ಯಾರ್ಥಿಗಳು ನ್ಯಾಯಾಲಯಕ್ಕೆ ಹೋಗಿದ್ದು, ದಿನಾಂಕ 15/12/2021 ರಂದು ಪ್ರಾರಂಭವಾಗುವ ಪರೀಕ್ಷೆಗೆ ತಡೆಯಾಜ್ಞೆ ತಂದಿರುತ್ತಾರೆ. ತದನಂತರ ನ್ಯಾಯಾಲಯವು ದಿನಾಂಕ 24/11/2021 ರಂದು ತಡೆಯಾಜ್ಞೆಯನ್ನು ತೆರವುಗೊಳಿಸಿ, ವಿಶ್ವವಿದ್ಯಾಲಯಕ್ಕೆ ಪರೀಕ್ಷೆ ನಡೆಸಲು ಅನುಮತಿ ನೀಡಿ, ಪರೀಕ್ಷಾ ಫಲಿತಾಂಶವನ್ನು ಮುಂದಿನ ಆದೇಶವರೆಗೆ ತಡೆಹಿಡಿಯಲು ಸೂಚನೆ ನೀಡಿರುತ್ತದೆ. ಈ ವಿಚಾರದ ಕುರಿತು ವಿದ್ಯಾರ್ಥಿಗಳ ಪರೀಕ್ಷೆಗಳು ಸೆಪ್ಟಂಬರ್ - ಅಕ್ಟೋಬರ್ 2021 ರಲ್ಲಿ ನಡೆಯಬೇಕಾಗಿತ್ತು. ಈಗಾಗಲೇ ಮೂರು ತಿಂಗಳು ವಿಳಂಬವಾಗಿದ್ದು, ಇಂತಹ ಸಂದರ್ಭದಲ್ಲಿ ಭೌತಿಕ ಪರೀಕ್ಷೆ ನಡೆಸಿದರೆ, ಮತ್ತೇ ಎರಡು ತಿಂಗಳು ವಿಳಂಬವಾಗಿ ಒಟ್ಟಾರೆ ಒಂದು ಸೆಮಿಸ್ಟರ್‌ನಷ್ಟು ಅವಧಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಈ ಹಿನ್ನಲೆಯಲ್ಲಿ ವಿದ್ಯಾರ್ಥಿ ಸಂಘಟನೆಗಳು ಬಾರ್ ಕೌನ್ಸಿಲ್ ಆಫ್ ಇಂಡಿಯಾ ನಿಯಮಾವಳಿಯಂತೆ ಆಂತರಿಕ ಪರೀಕ್ಷೆಯ ಆಧಾರದ ಮೇಲೆ ಪರೀಕ್ಷೆ ನಡೆಸಲು ಒತ್ತಾಯಿಸುತ್ತಿರುವರು. ಆದ್ದರಿಂದ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಕೋವಿಡ್-19 ರ ಹಿನ್ನಲೆಯಲ್ಲಿ ಬಾರ್ ಕೌನ್ಸಿಲ್ ಆಫ್ ಇಂಡಿಯಾದ ನಿಯಮಾವಳಿಯಂತೆ ಆಂತರಿಕ ಮೌಲ್ಯಮಾಪನ ಪರೀಕ್ಷಾ ಪದ್ಧತಿಯನ್ನನುಸರಿಸಿ, 2 ಹಾಗೂ 4 ನೇ ಸೆಮಿಸ್ಟರ್‌ಗಳ ಪರೀಕ್ಷೆ ನಡೆಸಲು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಕೂಡಲೇ ನಿರ್ದೇಶನ ನೀಡಲು ಒತ್ತಾಯಿಸುತ್ತೇನೆ. ಅದರಂತೆ 3 ಮತ್ತು 5 ನೇ ಸೆಮಿಸ್ಟರ್‌ನ ವರ್ಗಗಳು ಪ್ರಾರಂಭವಾಗುವಲ್ಲಿ ಸಾಕಷ್ಟು ವಿಳಂಬವಾದ ಹಿನ್ನಲೆಯಲ್ಲಿ ಕೂಡಲೇ ಅವುಗಳನ್ನು ಪ್ರಾರಂಭಿಸಲು ಕೂಡಾ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ವ್ಹಿ.ಸಂಕನೂರರವರು ಶೂನ್ಯ ವೇಳೆಯಲ್ಲಿ

ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡಲಾಗುವುದು.

## 4. ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ(ಕ.ವಿ.ಪ.):-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

| ಕ್ರಮ ಸಂಖ್ಯೆ | ವಿಧೇಯಕಗಳ ಪಟ್ಟಿ | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 1. | ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2021<br>The Karnataka Gram Swaraj and Panchayat Raj (Amendment) Bill, 2021 | 18.09.2021 | ರಾಜ್ಯಪಾಲರು |
| 2. | ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2021<br>The Karnataka Stamp (Amendment) Bill, 2021 | 01.10.2021 | ರಾಜ್ಯಪಾಲರು |
| 3. | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2021<br>The Karnataka State Civil Services (Regulation of Transfer of Teachers (Amendment) Bill, 2021 | 01.10.2021 | ರಾಜ್ಯಪಾಲರು |
| 4. | ಕರ್ನಾಟಕ ಪೊಲೀಸು (ತಿದ್ದುಪಡಿ) | 04.10.2021 | ರಾಜ್ಯಪಾಲರು |

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

| | | | |
|---|---|---|---|
| | ವಿಧೇಯಕ, 2021<br>The Karnataka Police (Amendment) Bill, 2021 | | |
| 5. | ಬೆಂಗಳೂರು ನೀರು ಸರಬರಾಜು ಮತ್ತುಗ್ರಾಮಸಾರ ಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2021<br>The Bangalore Water Supply and Sewerage (Amendment) Bill, 2021 | 05.10.2021 | 'ರಾಜ್ಯಪಾಲರು |
| 6. | ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ವಿಧೇಯಕ, 2021<br>The Karnataka Khaadi and Village Industries (Amendment) Bill, 2021 | 05.10.2021 | ರಾಜ್ಯಪಾಲರು |
| 7. | ಕರ್ನಾಟಕ ಪೌರಸಭೆಗಳು ಮತ್ತು ಕೆಲವು ಇತರ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2021<br>The Karnataka Municipalities and Certain Other law (Second Amendment) Bill, 2021 | 05.10.2021 | ರಾಜ್ಯಪಾಲರು |
| 8. | ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2021<br>The Karnataka Town and Country Planning (Amendment) Bill, 2021 | 05.10.2021 | ರಾಜ್ಯಪಾಲರು |
| 9. | ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2021<br>The Karnataka Souharda Sahakari (Amendment) Bill, 2021 | 05.10.2021 | ರಾಜ್ಯಪಾಲರು |
| 10. | ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 2021<br>The Karnataka Co-Operative Societies (Amendment) Bill, | 05.10.2021 | ರಾಜ್ಯಪಾಲರು |

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

| | | | |
|---|---|---|---|
| | 2021 | | |
| 11. | ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2020<br>The Karnataka State Civil Services (Amendment) Bill, 2020 | 05.10.2021 | ರಾಜ್ಯಪಾಲರು |
| 12. | ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ವಿಧೇಯಕ, 2021<br>The Karnataka Prison Development Board Bill, 2021 | 05.10.2021 | ರಾಜ್ಯಪಾಲರು |
| 13. | ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2021<br>The Karnataka Local Fund Authorities Fiscal Responsibility (Amendment) Bill, 2021 | 11.10.2021 | ರಾಜ್ಯಪಾಲರು |
| 14. | ಕರ್ನಾಟಕ ಕೃಷಿ ಸಂಬಂಧಿ ಕೀಟಗಳು ಮತ್ತು ರೋಗಗಳ (ತಿದ್ದುಪಡಿ) ವಿಧೇಯಕ, 2021<br>The Karnataka Agricultural Pests and Diseases (Amendment) Bill, 2021 | 11.10.2021 | ರಾಜ್ಯಪಾಲರು |
| 15. | ಚಾಣಕ್ಯ ವಿಶ್ವವಿದ್ಯಾಲಯ ವಿಧೇಯಕ, 2021<br>The Chanakya University Bill, 2021 | 11.10.2021 | ರಾಜ್ಯಪಾಲರು |
| 16. | ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2021<br>The Karnataka Appropriation (No.3) Bill, 2021 | 11.10.2021 | ರಾಜ್ಯಪಾಲರು |

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

| | | | |
|---|---|---|---|
| 17. | ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2021<br>The Karnataka Goods and Services Tax (Amendment) Bill, 2021 | 11.10.2021 | ರಾಜ್ಯಪಾಲರು |
| 18. | ಕರ್ನಾಟಕಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ವಿಧೇಯಕ, 2021<br>The Karnataka Religious Structures (Protection) Bill, 2021 | 19.10.2021 | ರಾಜ್ಯಪಾಲರು |

**ಸಭಾಪತಿಯವರು:-** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

------------------------------------------------------------------------------------------

## 5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(ಮೊದಲನೇ ಪಟ್ಟಿ)

**I ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಭಾರತ ಸಂವಿಧಾನದ 213ರ ಅನುಚ್ಛೇದದ 1ನೇ ಖಂಡದ ಮೇರೆಗೆ:

ಕರ್ನಾಟಕ ನಗರ ಪಾಲಿಕೆಗಳ ಮತ್ತು ಕೆಲವು ಇತರೆ ಕಾನೂನು (ತಿದ್ದುಪಡಿ) ಅಧಿನಿಯಮ 1976ನ್ನು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿನಿಯಮ, 2020ನ್ನು ಮತ್ತಷ್ಟು ತಿದ್ದುಪಡಿ ಮಾಡಿ ದಿನಾಂಕ: 16.11.2021ರಂದು ಹೊರಡಿಸಲಾದ 2021ರ ಅಧ್ಯಾದೇಶ ಸಂಖ್ಯೆ 08.

**II ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

1978ರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮದ ಪ್ರಕರಣ 8(3)ರ ಮೇರೆಗೆ:

1990ರ ಕರ್ನಾಟಕ ಸಿವಿಲ್ ಸೇವೆಗಳ ಅಧಿನಿಯಮ ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿ ನಿಯಮಗಳನ್ನು ರಚಿಸಿ ದಿನಾಂಕ: 25.03.2017ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಎಫ್‌ಡಿ 29 ಮುಭನಿ 2012.

**III ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

1978ರ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮದ 8(3)ರ ಪ್ರಕರಣದ ಮೇರೆಗೆ:

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. 2013ರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ನೇಮಕಾತಿಯಲ್ಲಿ ಮೀಸಲಾತಿ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ, ಹುದ್ದೆಗಳನ್ನು ಗುರುತಿಸಿ ದಿನಾಂಕ:26.07.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 57 ಜಿಪಲ 2021.
2. 2021ರ ಕರ್ನಾಟಕ ಪಂಚಾಯತ್ ರಾಜ್ ಇಂಜಿನಿಯರಿಂಗ್ ಸೇವೆಗಳು (ವೃಂದ ಮತ್ತು ನೇಮಕಾತಿ) ನಿಯಮಗಳನ್ನು ರಚಿಸಿ ದಿನಾಂಕ:23.06.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 241 ಎಸ್‌ಆರ್‌ಕೆ 2019 (ಪಿ-1).
3. 2013ರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ನೇಮಕಾತಿಯಲ್ಲಿ ಮೀಸಲಾತಿ) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ ದಿನಾಂಕ:28.07.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 68 ಜಿಪಲ 2020.
4. 2020ರ ಕರ್ನಾಟಕ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಸೇವೆಗಳು ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ದಿನಾಂಕ:13.05.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 17 ಜಿಪಲ 2020.

1993ರ (ಕರ್ನಾಟಕ ಅಧಿನಿಯಮದ 14) 311(2)ರ ಪ್ರಕರಣದ ಮೇರೆಗೆ:

1993ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ (ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಸ್ಥಾನಗಳನ್ನು ಆವರ್ತನೆಯ ಮೇಲೆ ಮೀಸಲಿಡುವ) ನಿಯಮಗಳನ್ನು ರಚಿಸಿ ದಿನಾಂಕ:10.03.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 60 ಜಿಪಸ 2021.

1993ರ (ಕರ್ನಾಟಕ ಅಧಿನಿಯಮದ 14) 311(2)ರ ಪ್ರಕರಣದ ಮೇರೆಗೆ:

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

1. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳ ನಿಯಮ 1, 12, 4 ಮತ್ತು 5ನ್ನು ತಿದ್ದುಪಡಿಗೊಳಿಸಿ ದಿನಾಂಕ:24.03.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪಂರಾ 318 ಜಿಪಸ 2020.
2. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಸೂಚನೆ ಮಂಡನೆ) ನಿಯಮಗಳನ್ನು ರಚಿಸಿ ದಿನಾಂಕ:18.11.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಗ್ರಾಅಪಂರಾ 67 ಜಿಪಸ 2020.
3. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಸೂಚನೆ ಮಂಡನೆ) ನಿಯಮಗಳನ್ನು ರಚಿಸಿ ದಿನಾಂಕ:15.09.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಗ್ರಾಅಪಂರಾ 64 ಜಿಪಸ 2019.
4. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ ಸಿಬ್ಬಂದಿ ಸ್ವರೂಪ, ವೇತನ ಶ್ರೇಣಿಗಳು ನೇಮಕಾತಿ ವಿಧಾನ ಮತ್ತು ಇತರೆ ಸೇವೆಗಳ ಷರತ್ತುಗಳು) ನಿಯಮಗಳನ್ನು ರಚಿಸಿ ದಿನಾಂಕ:29.09.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016.
5. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿ) ನಿಯಮಗಳನ್ನು ರಚಿಸಿ ದಿನಾಂಕ:17.11.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 507 ಗ್ರಾಪಂಅ 2019.
6. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಗ್ರಾಮ ಆರೋಗ್ಯ, ನೈರ್ಮಲ್ಯ ಮತ್ತು ಪೌಷ್ಠಿಕ ಸಮಿತಿ) ನಿಯಮಗಳನ್ನು ರಚಿಸಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ದಿನಾಂಕ:17.11.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 870 ಗ್ರಾಪಂಅ 2019.

7. 2019ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಗ್ರಾಮ ಪಂಚಾಯಿತಿಗಳ (ಕೆರೆ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ) ನಿಯಮಗಳನ್ನು ರಚಿಸಿ ದಿನಾಂಕ:17.01.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 1309 ಗ್ರಾಪಂಅ 2017.
8. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಬಾಲವಿಕಾಸ ಸಮಿತಿ) ನಿಯಮಗಳನ್ನು ರಚಿಸಿ ದಿನಾಂಕ:05.06.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 657 ಗ್ರಾಪಂಅ 2019.
9. 2020ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಮಹಿಳೆಯರ ಮತ್ತು ಮಕ್ಕಳ ರಕ್ಷಣೆಯ ಕಾವಲು ಸಮಿತಿ) ನಿಯಮಗಳನ್ನು ರಚಿಸಿ ದಿನಾಂಕ:17.11.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 660 ಗ್ರಾಪಂಅ 2020.
10. 2021ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾ ಪಂಚಾಯಿತಿಗಳ, ತಾಲ್ಲೂಕು ಪಂಚಾಯಿತಿಗಳ ಮತ್ತು ಗ್ರಾಮ ಪಂಚಾಯಿತಿಗಳ ನಿಯಂತ್ರಣ) ನಿಯಮಗಳ 1ನೇ ಉಪಬಂಧಿ ಯನ್ನು ತಿದ್ದುಮಾಡಿ ದಿನಾಂಕ:11.06.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಗ್ರಾಅಪ 835 ಗ್ರಾಪಂಅ 2020.

**IV ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

2018ರ ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ ಕಲಂ 39(2)ರ ಮೇರೆಗೆ:

1. 2018ರ ಪಿಲಿಕುಳಿ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಎಲ್ಲಾ ಉಪಬಂಧಗಳನ್ನು ದಿನಾಂಕ: 24.12.2019ರಿಂದ ಜಾರಿಗೆ ಬರತಕ್ಕದೆಂದು ಗೊತ್ತುಪಡಿಸಿ ದಿನಾಂಕ: 24.12.2019ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಐಟಿಬಿಟಿ 223 ಎಸ್‌ಟಿಎಸ್ 2019.
2. 2019ರ ಪಿಲಿಕುಳಿ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ರಾಜ್ಯ ಸರ್ಕಾರವು ಸಮಿತಿಯನ್ನು ರಚಿಸಿ ದಿನಾಂಕ: 27.12.2019ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಡಿಎಸ್‌ಟಿ 157 ಎಸ್‌ಟಿಎಸ್ 2017 (ಪಿ).

**V ಶ್ರೀ ವಿ.ಸುನೀಲ್ ಕುಮಾರ್(ಇಂಧನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ,

2003ರ ವಿದ್ಯುಚ್ಛಕ್ತಿ ಅಧಿನಿಯಮದ ಪರಿಚ್ಛೇದ 182ರ ಮೇರೆಗೆ:

1. ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳು (COS) 8ನ್ನು ತಿದ್ದುಪಡಿ ಮಾಡಿ ದಿನಾಂಕ: 22.10.2019ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಸಿಓಎಸ್/ಡಿ/1/2018-19/908.
2. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಾತಿ) ವಿನಿಯಮಗಳು 2004ನ್ನು ತಿದ್ದುಪಡಿ ಮಾಡಿ ದಿನಾಂಕ: 01.01.2020ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಕೆಇಆರ್‌ಸಿ/ಆರ್‌ಓಇ/ ಡಿಡಿಡಿ/03/2019-20/1200.
3. ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ಸರಬರಾಜು ಷರತ್ತುಗಳು (COS) 9ನೇ ತಿದ್ದುಪಡಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಾತಿ) 11ನೇ ತಿದ್ದುಪಡಿ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) 2ನೇ ವಿನಿಯಮಗಳು 2004ನ್ನು ತಿದ್ದುಪಡಿ ಮಾಡಿ ದಿನಾಂಕ: 11.12.2020ರಂದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಸಿಓಎಸ್/ತಾಂ/ಡಿಡಿಡಿ/05/2020-21/976.

4. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಇತರೆ ವ್ಯವಹಾರಗಳಿಂದ ಪ್ರಸರಣ ಮತ್ತು/ಅಥವಾ ವಿತರಣಾ ಪರವಾನಿಗೆದಾರರು ಪಡೆದ ಆದಾಯದ ಹಂಚಿಕೆ) ವಿನಿಯಮಗಳು 2020ನ್ನು ರಚಿಸಿ, ದಿನಾಂಕ: 05.03.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ:ಕವಿನಿಆ/ಡಿಡಿ(ಟ್ರಾನ್ಸ್‌ಮಿಷನ್)/ ಕೆಪಿಟಿಸಿಎಲ್ /ಇತರೆ-1/2019-20/1552.

**ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆಗಳ ಅಧಿನಿಯಮದ 1999ರ ಪರಿಚ್ಛೇದ 57(2)ರ ಮೇರೆಗೆ:**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಾರ್ಷಿಕ ಲೆಕ್ಕಪತ್ರ ಪಟ್ಟಿ) ನಿಯಮ 2 ಮತ್ತು 4ನ್ನು ತಿದ್ದುಪಡಿ ಮಾಡಿ ನಮೂನೆ-3ನ್ನು ಹೊಸದಾಗಿ ಸೇರ್ಪಡಿಸಿ, ದಿನಾಂಕ: 03.02.2021ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಇಂಧನ/100/ಪಿಎಸ್‌ಆರ್/2020.

**(ಎರಡನೇ ಪಟ್ಟಿ)**

**I ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ

68-ಸಿ (4) ಮತ್ತು ಡಿ-(2)ರನ್ವಯ.

1. ತಿಪಟೂರು ಯೋಜನಾ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ಶಿರಾ ಯೋಜನಾ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2014-15 ಮತ್ತು 2015-16ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.
3. ಅರಕಲಗೂಡು ಸ್ಥಳೀಯ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಕುಣಿಗಲ್ ಯೋಜನಾ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು ಹಾಗೂ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
5. ದೊಡ್ಡಬಳ್ಳಾಪುರ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಚನ್ನರಾಯನಪಟ್ಟಣ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಅರಸೀಕೆರೆ ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಬೇಲೂರು-ಹಳೇಬೀಡು ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
9. ಗೌರಿಬಿದನೂರು ಯೋಜನಾ ಪ್ರಾಧಿಕಾರದ 2019-20ನೇ ಸಾಲಿನ ವಾರ್ಷಿಕ ವರದಿ.
10. ಬಾದಾಮಿ ನಗರ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
11. ಆನೇಕಲ್ ನಗರ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
12. ರಾಮನಗರ ನಗರಾಭಿವೃದ್ಧಿ ಯೋಜನಾ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

13. ಉಪನಗರ ವರ್ತುಲ ರಸ್ತೆ(ಎಸ್‌ಟಿಆರ್‌ಆರ್) ಯೋಜನಾ ಪ್ರಾಧಿಕಾರ ಬೆಂಗಳೂರು ಇದರ 2020-21ನೇ ಸಾಲಿನ ವಾರ್ಷಿಕ ವರದಿ.

(2) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾಯ್ದೆ 1973

ಕಲಂ 39ರನ್ವಯ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ 2020-21ನೇ ಸಾಲಿನ ವಾರ್ಷಿಕ ವರದಿ.

(3) ಕರ್ನಾಟಕ ಪುರ ಸಭೆಗಳ ಅಧಿನಿಯಮ 1964ರ ಕಲಂ 295(6) ತಿದ್ದುಪಡಿಯಂತೆ ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 150(2)(ಬಿ) ತಿದ್ದುಪಡಿಯಂತೆ.

ಬಿ.ಬಿ.ಎಂ.ಪಿ. ಮತ್ತು ಇತರ ಮಹಾನಗರ ಪಾಲಿಕೆಗಳ ಕ್ರೋಢೀಕೃತ 2014-15 ರಿಂದ 2018-19 ರವರೆಗಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳು.

(4) ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕರಣ 12(5)ರಡಿಯಲ್ಲಿ ಸಲ್ಲಿಸಲಾಗಿರುವ ವರದಿಗೆ ಪ್ರಕರಣ 12(7)ರಡಿ ಉಪ ಬಂದಿಸಿದಂತೆ(ಬಿ.ಬಿ.ಎಂಪಿ.-1).

ಶ್ರೀ ಎಂ. ಶರಣು ನಂ.88/2, 12ನೇ ಮುಖ್ಯ ರಸ್ತೆ, ರಾಘವೇಂದ್ರ ಬ್ಲಾಕ್, ಶ್ರೀನಗರ, ಬೆಂಗಳೂರು ಇವರು ಲೋಕಾಯುಕ್ತರಿಗೆ ನೀಡಿರುವ ದೂರಿನ ಬಗ್ಗೆ.

**II ಶ್ರೀ ಗೋವಿಂದ ಎಂ. ಕಾರಜೋಳ (ಜಲ ಸಂಪನ್ಮೂಲ ಸಚಿವರು):-** ಮಾನ್ಯ ಸಭಾಪತಿಯವರೇ,

(1) ಕಾಡಾ ಅಧಿನಿಯಮ 1980ರ ಕಲಂ 24(2)ರನ್ವಯ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಕಾಡಾ ಅಚ್ಚುಕಟ್ಟು ಪ್ರಾಧಿಕಾರ ಕಾವೇರಿ ಜಲಾನಯನ ಯೋಜನೆಗಳ (ಮೈಸೂರು) 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕಾಡಾ ಕೃಷ್ಣ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ ಪ್ರಾಧಿಕಾರದ (ಯಾದಗಿರಿ) 2020-21ನೇ ಸಾಲಿನ ವಾರ್ಷಿಕ ವರದಿ
3. ಭಧ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕಾಡಾ) ಶಿವಮೊಗ್ಗ, 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

(2) ಕಂಪನಿ ಕಾಯ್ದೆ, (2013 ಸೆಕ್ಷನ್ 394/395)ರನ್ವಯ.

1. ಕರ್ನಾಟಕ ನೀರಾವರಿ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ(ಲೆಕ್ಕ ಪರಿಶೋಧನಾ ವರದಿ ಒಳಗೊಂಡಂತೆ).
2. ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ(ಲೆಕ್ಕ ಪರಿಶೋಧನಾ ವರದಿ ಒಳಗೊಂಡಂತೆ).

**III ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಅನುಚ್ಛೇದ 253 (3) ಮತ್ತು 262(3)ರಂತೆ.

1. ಕೋಲಾರ ಜಿಲ್ಲಾ ಪಂಚಾಯತ್‌ನ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಬೀದರ್ ಜಿಲ್ಲಾ ಪಂಚಾಯತ್‌ನ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಮೈಸೂರು ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

5. ಕೊಡಗು (ಮಡಿಕೇರಿ) ಜಿಲ್ಲಾ ಪಂಚಾಯತ್‌ನ 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ವಿಜಯಪುರ (ಬಿಜಾಪುರ) ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
9. ಉತ್ತರ ಕನ್ನಡ (ಕಾರವಾರ) ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
10. ದಾವಣಗೆರೆ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
11. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
12. ರಾಮನಗರ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
13. ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
14. ಹಾಸನ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
15. ಮಂಡ್ಯ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
16. ಕರ್ನಾಟಕ ರಾಜ್ಯದ ತಾಲ್ಲೂಕು ಪಂಚಾಯಿತಿಗಳ 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ವಾರ್ಷಿಕ ಲೆಕ್ಕಪತ್ರಗಳ ಕ್ರೋಢೀಕೃತ ಪ್ರತ್ಯೇಕ ಆಡಿಟ್ ವರದಿ.
17. ಹಾವೇರಿ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

(2) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 300 ರ ಉಪ ಪ್ರಕರಣ(5)ರನ್ವಯ.

1. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ವಿಜಯಪುರ(ಬಿಜಾಪುರ) ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
3. ಧಾರವಾಡ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
4. ಕಲಬುರಗಿ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
5. ಚಾಮರಾಜನಗರ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
6. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
7. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ ಹಾಗೂ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ 2019-20ನೇ ಸಾಲಿನ ವಾರ್ಷಿಕ ವರದಿ.
9. ಮಂಡ್ಯ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ವರದಿ.
10. ಉಡುಪಿ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿ.
11. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ 2020-21ನೇ ಸಾಲಿನ ವಾರ್ಷಿಕ ಆಡಳಿತ ವರದಿ.

**IV ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಾರಿಗೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ರಸ್ತೆ ಸಾರಿಗೆ ನಿಗಮ ಕಾಯ್ದೆ 1950 ಅಧಿನಿಯಮ 33(4)ರನ್ವಯ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕಲಬುರಗಿ) 2019-20ನೇ ಸಾಲಿನ ಲೆಕ್ಕಪರಿಶೋಧನಾ ರದಿ.

**V ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು) (ವಸತಿ, ಮೂಲಸೌಕರ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಗೃಹ ಮಂಡಳಿಯ ಕಾಯ್ದೆ 1962ರ ಸೆಕ್ಷನ್ 69 ರನ್ವಯ.

ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇದರ 2020-21ನೇ ಸಾಲಿನ ವಾರ್ಷಿಕ ವರದಿ.

**VI ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಅರಣ್ಯ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳು ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕಂಪನಿಗಳ ಕಾಯ್ದೆ, 2013ರ ಕಲಂ 395(1)(ಬಿ)ರಡಿಯಲ್ಲಿ

1. ಕರ್ನಾಟಕ ಪಲ್ಪ್‌ವುಡ್ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ.
2. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ.

**VII ಶ್ರೀ ಕೋಟಾ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಣ್ಣ ನೀರಾವರಿ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 ರ ಕಲಂ 20(1) ಮತ್ತು (2) ಮತ್ತು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ (ಕಾರ್ಯವಿಧಾನ) ನಿಯಂತ್ರಣಗಳು 2007 ರ ಕಲಂ 32 ರನ್ವಯ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ 2019-20 ನೇ ಸಾಲಿನ ವಾರ್ಷಿಕ ವರದಿ

(2) ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿಯಮಗಳ, 1987 ರ ಸೆಕ್ಷನ್ 18(4)ಮತ್ತು (6) ರನ್ವಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 2017-18 ನೇ ಸಾಲಿನ ಲೆಕ್ಕಪರಿಶೋಧನಾ ವರದಿ

**VIII ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಸಭಾನಾಯಕರು)(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪ್ರಕರಣ 47(4) ಮತ್ತು 50 (2) ರನ್ವಯ

1. ಮಂಗಳೂರು ವಿಶ್ವವಿದ್ಯಾಲಯದ 2016-17 ನೇ ಸಾಲಿನ ಲೆಕ್ಕಪರಿಶೋಧನಾ ವರದಿ
2. ದಾವಣಗೆರೆ ವಿಶ್ವವಿದ್ಯಾಲಯದ 2016-17 ನೇ ಸಾಲಿನ ಲೆಕ್ಕಪರಿಶೋಧನಾ ವರದಿ
3. ತುಮಕೂರು ವಿಶ್ವವಿದ್ಯಾಲಯದ 2020-21 ನೇ ಸಾಲಿನ ವಾರ್ಷಿಕ ವರದಿ
4. ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ 2020-21 ನೇ ಸಾಲಿನ ವಾರ್ಷಿಕ ವರದಿ

**IX ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ,

ಕಂಪನಿಗಳ ಕಾಯ್ದೆ 2013ರ ನಿಯಮ 395(1)ರನ್ವಯ.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ 2016-17ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**X ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪಶುಸಂಗೋಪನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕಾಯ್ದೆ 2004ರ ಸೆಕ್ಷನ್ 43(3)ರನ್ವಯ.

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬೀದರ್ ಇದರ 2017-18 ಮತ್ತು 2018-19ನೇ ಸಾಲಿನ ವಾರ್ಷಿಕ ವರದಿಗಳು.

**XI ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕಂಪನಿ ಕಾಯ್ದೆ 2013ರ ಕಲಂ 394(2)ರ ಪ್ರಕಾರ.

ದಿ. ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ 2020-21ನೇ ಸಾಲಿನ ವಾರ್ಷಿಕ ವರದಿ.

**XII ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತು) ಕಾಯ್ದೆ 1996 ಪರಿಚ್ಛೇದ 27(4)ರನ್ವಯ.

ಕರ್ನಾಟಕ ಕಟ್ಟಡದ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 2006-07 ರಿಂದ 2015-16ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಗಳು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**XIII ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಸಹಕಾರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಕಾಯ್ದೆ 1965 ಸೆಕ್ಷನ್ 31(11)ರನ್ವಯ.

ಕರ್ನಾಟಕ ರಾಜ್ಯ ಉಗ್ರಾಣ ನಿಗಮ, ಬೆಂಗಳೂರು ಇದರ 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳು ಮತ್ತು ಲೆಕ್ಕಪರಿಶೋಧನಾ ವರದಿಗಳು.

(2) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 63 (11) ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 29 (ಡಿ) ರನ್ವಯ.

1. ಕರ್ನಾಟಕ ರಾಜ್ಯ ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಳ ನಿಯಮಿತ, ಬೆಂಗಳೂರು ಇದರ 2018-19 ಮತ್ತು 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳಿ ನಿಯಮಿತ, ಬೆಂಗಳೂರು ಇದರ 2019-20ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ 2016-17 ಹಾಗೂ 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳು.

**XIV ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಕೃಷಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 57 ರಂತೆ.

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇದರ 2020-21ನೇ ಸಾಲಿನ ವಾರ್ಷಿಕ ವರದಿ.

(2) ಕಂಪನಿ ಕಾಯ್ದೆ 2013ರ ಸೆಕ್ಷನ್ 394(2)ರನ್ವಯ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ(ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ).
2. ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಕಲಬುರಗಿ ಇದರ 2019-20 ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತದ 2019-20ನೇ ಸಾಲಿನ ವಾರ್ಷಿಕ ವರದಿ.

**XV ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ನಗರಾಭಿವೃದ್ಧಿ ಸಚಿವರ ಪರವಾಗಿ (ಕೆಯುಡಬ್ಲ್ಯೂಎಸ್‌ಡಿಬಿ ಮತ್ತು ಕೆಯುಐಡಿಎಫ್‌ಸಿ ಸೇರಿದಂತೆ, ಬೆಂಗಳೂರು ಅಭಿವೃದ್ಧಿ, ಬಿ.ಬಿ.ಎಂ.ಪಿ, ಬಿ.ಡಿ.ಎ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಬಿಎಂಆರ್‌ಡಿಎ, ಬಿಎಂಆರ್‌ಸಿಎಲ್ ಮತ್ತು ನಗರಯೋಜನೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆಯನ್ನು ಹೊರತುಪಡಿಸಿ,):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 48 (5) ಮತ್ತು 49ರನ್ವಯ.

1. ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
2. ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ 2018-19, 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು ಮತ್ತು 2016-17, 2017-18, 2018-19 ಹಾಗೂ 2019-20ನೇ ಲೆಕ್ಕಪರಿಶೋಧನಾ ವರದಿಗಳು.
3. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

4. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2017-18, 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ವರದಿಗಳು.
5. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
6. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
7. ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳು.
8. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.
9. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
10. ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ 2017-18 ಮತ್ತು 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳು.
11. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ 2012-13, 2016-17 ಹಾಗೂ 2018-19ನೇ ಸಾಲಿನ ವಾರ್ಷಿಕ ವರದಿಗಳು.
12. ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ 2017-18, 2018-19 ಹಾಗೂ 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳು.
13. ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ 2020-21ನೇ ಸಾಲಿನ ವಾರ್ಷಿಕ ವರದಿ.
14. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 2011-12, 2012-13 ಮತ್ತು 2017-18 ರಿಂದ 2020-21ನೇ ಸಾಲಿನವರೆಗಿನ ವಾರ್ಷಿಕ ವರದಿಗಳು ಹಾಗೂ 2011-12, 2012-13 ಮತ್ತು 2015-16 ರಿಂದ 2020-21ನೇ ಸಾಲಿನವರೆಗಿನ ಲೆಕ್ಕ ಪರಿಶೋಧನಾ ವರದಿಗಳು.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

15. ಕೆ.ಜಿ.ಎಫ್. ನಗರಾಭಿವೃದ್ಧಿ ಪ್ರಾಧಿಕಾರದ 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿ.

**XVI ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ಪೌರಾಡಳಿತ, ಸಣ್ಣ ಕೈಗಾರಿಕೆಗಳು, ಸಾರ್ವಜನಿಕ ವಲಯ ಉದ್ಯಮಗಳ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

(1) ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ 395(1)(ಬಿ) ಪ್ರಕಾರ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 2018-19ನೇ ಸಾಲಿನ ವಾರ್ಷಿಕ ವರದಿ.

(2) ಕರ್ನಾಟಕ ಪುರ ಸಭೆಗಳ ಅಧಿನಿಯಮ 1964ರ ಕಲಂ 295(6) ತಿದ್ದುಪಡಿಯಂತೆ ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 150(2)(ಬಿ) ತಿದ್ದುಪಡಿಯಂತೆ.

ನಗರ ಸ್ಥಳೀಯ ಸಂಸ್ಥೆಗಳ ಕ್ರೋಢೀಕೃತ 2014-15 ರಿಂದ 2018-19ರವರೆಗಿನ ವಾರ್ಷಿಕ

ಲೆಕ್ಕ ಪರಿಶೋಧನಾ ವರದಿಗಳು.

**XVII ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)(ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರು ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಸೆಕ್ಷನ್-65 (2) ರನ್ವಯ.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ 2019-20ನೇ ಸಾಲಿನ ವಾರ್ಷಿಕ ವರದಿ.

**ಸಭಾಪತಿಯವರು:-** ಮಂಡಿಸಲಾಯಿತು. ಈಗ ಸದನವನ್ನು ಅಪರಾಹ್ನ 3:00 ಗಂಟೆಯವರೆಗೆ ಮುಂದೂಡಲಾಗಿದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1045)/3-10/13-12-2021/ಎಲ್ಎಂ/ಎಕೆ

**(ಭೋಜನ ವಿರಾಮಕ್ಕಾಗಿ ಅಪರಾಹ್ನ 2 ಗಂಟೆ 08 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಅಪರಾಹ್ನ 3 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎಸ್.ಆರ್.ಪಾಟೀಲ್**:- ಮಾನ್ಯ ಸಭಾಪತಿಗಳೆ ಬೆಳಗ್ಗೆ ತಾವು ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದಿರಿ.

**ಸಭಾಪತಿಯವರು**:- ಅದನ್ನು ನಿಯಮ ೬೮ಕ್ಕೆ ಪರಿವರ್ತಿಸಲಾಗಿದೆ.

**ಶ್ರೀ ಎಸ್. ಆರ್. ಪಾಟೀಲ್ :-** ಮಾನ್ಯ ಸಭಾಪತಿಗಳೆ, ನಿಲುವಳಿ ಸೂಚನೆಯನ್ನು ಓದಿಬಿಡುತ್ತೇನೆ. ರೆಕಾರ್ಡ್‌ಗೆ ಹೋಗಲಿ.

**<u>6. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿ ಪ್ರಸ್ತಾವ</u>**

**ವಿಷಯ**: ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಟಿಯಿಂದ ಉಂಟಾಗಿರುವ ರೈತರ ಬೆಳೆ ನಾಶ ಮತ್ತು ಸಾರ್ವಜನಿಕರ ಆಸ್ತಿಪಾಸ್ತಿ ನಷ್ಟವಾಗಿರುವ ಬಗ್ಗೆ.

------

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೆ, ರಾಜ್ಯದಲ್ಲಿ ಇತ್ತೀಚಿಗೆ ಸಂಭವಿಸಿದ ಪ್ರವಾಹ ಮತ್ತು ಅತಿವೃಷ್ಟಿಯಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬೆಳೆದು ನಿಂತು ರೈತರ ಬೆಳೆ ಸೇರಿದಂತೆ ರಸ್ತೆ, ಸೇತುವೆ, ಸರ್ಕಾರಿ ಕಟ್ಟಡಗಳು, ಸಾರ್ವಜನಿಕ ಮನೆಗಳು ನಾಶವಾಗಿವೆ. ಹಾಗೂ ಜನ ಜಾನುವಾರಗಳ ಪ್ರಾಣ ಹಾನಿಯಾಗಿದೆ. ಇದರಿಂದ ಸಾವಿರಾರು ಕೋಟಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ರೂಪಾಯಿಗಳ ನಷ್ಟವಾಗಿದೆ. ಈಗಾಗಲೇ ಹಲವಾರು ಸಂಕಷ್ಟದಲ್ಲಿರುವ ರಾಜ್ಯದ ಜನತೆಯನ್ನು ಅತಿವೃಷ್ಟಿ ಇನ್ನಷ್ಟು ಸಂಕಷ್ಟಕ್ಕೆ ದೂಡಿದೆ. ರಾಜ್ಯದಲ್ಲಿರುವ ಉಂಟಾಗಿರುವ ಈ ಸಂಕಷ್ಟವನ್ನು ನಿವಾರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಇದು ರಾಜ್ಯದ ಹಿತದೃಷ್ಟಿಯಿಂದ ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಸದನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ನಿಯಮ ೫೯ರಡಿಯಲ್ಲಿ ಮಂಡಿಸಿರುವ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕು. ಏಕೆಂದರೆ ೭೦ ಲಕ್ಷ ಎಕರೆ ಭೂಮಿಯಲ್ಲಿ ಬೆಳೆದಿರುವ ತೋಟಗಾರಿಕೆ, plantation crops ಇರಬಹುದು, ಅಥವಾ ಕೃಷಿ ಬೆಳೆ ಇರಬಹುದು. ಈ ಎಲ್ಲ ಬೆಳೆಯು ಕೊಚ್ಚಿಕೊಂಡು ಹೋಗಿದೆ. ೩೭೬ ಪ್ರಾಣಿಗಳ ಜೀವ ಹಾನಿಯಾಗಿದೆ. ೨೦,೦೦೦ ಮನೆಗಳು ಕೊಚ್ಚಿಕೊಂಡು ಹೋಗಿವೆ. ಬಹಳ ತೀವ್ರತರವಾದ ಹಾನಿಯಾಗಿದೆ. ರೈತರು, ಜನಸಾಮಾನ್ಯರು ಕಣ್ಣೀರಿನಲ್ಲಿ ಕೈ ತೊಳೆಯುವಂತಹ ಪರಿಸ್ಥಿತಿ ಉಂಟಾಗಿದೆ. ಇಂತಹ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬೇಕು. ೧೧ ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಾನಿಯಾಗಿದೆಯೆಂದು ಸರ್ಕಾರದವರೇ ಹೇಳಿದ್ದಾರೆ. SDRM norms ಪ್ರಕಾರ ಹನ್ನರಡು ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಆದರೆ ರಾಜ್ಯಸರ್ಕಾರ ತನ್ನ ಬೊಕ್ಕಸದಿಂದ ಹಣವನ್ನು ಕೊಡಬೇಕು. ಆದರೆ ಸರ್ಕಾರ ಇಲ್ಲಿಯವರೆಗೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ. ಮಾನ್ಯ ಸಭಾಪತಿಯವರು ಕೃಷಿ ಕುಟುಂಬದಿಂದ ಬಂದವರು, ಅವರು ಕೃಷಿಯಲ್ಲಿ ಅಪಾರವಾದ ಪಾಂಡಿತ್ಯವನ್ನು ಹೊಂದಿದ್ದಾರೆ. ಈ ಮಳೆಯಿಂದ ಯಾವ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ ಎನ್ನುವುದು ಅವರಿಗೆ ಗೊತ್ತಿದೆ. Adverse climate ಇರುವುದರಿಂದ pest and disease ನಿಂದ horticulture crops, especially grape, ಏನೂ ಉಳಿದಿರುವುದಿಲ್ಲ. ಸಭಾಪತಿಯವರು ತಾವು ಕೂಡ ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಾರೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(1046)13-12-2021(03-20)bsd-ak

**ಶ್ರೀ ಎಸ್.ಆರ್. ಪಾಟೀಲ್ (ಮುಂದು)**

ಮಾನ್ಯ ಸಭಾಪತಿಯವರೇ, ತಾವು ತೋಟಗಾರಿಕೆ ಬೆಳೆಗಳನ್ನು ಬೆಳೆಯುವವರಾಗಿದ್ದೀರಿ. ಅತಿವೃಷ್ಟಿ-ಅನಾವೃಷ್ಟಿಯನ್ನು ಹೊರತುಪಡಿಸಿ adverse climate ನಿಂದ cloudy atmosphere ಆಗಿ pest, disease ಗಳು increase ಆಗಿ ಏನೂ ಉಳಿದಿಲ್ಲ. ಎಲ್ಲಾ ತೋಟಗಾರಿಕಾ ಬೆಳೆಗಳು ಸರ್ವನಾಶವಾಗಿವೆ. ಸರ್ಕಾರವು ಎಚ್ಚೆತ್ತುಕೊಂಡು ಮಹತ್ವದ ವಿಷಯವನ್ನು ನಿರ್ಲಕ್ಷ್ಯ ಮಾಡಬಾರದು. ತಕ್ಷಣ ರೈತರ ಮತ್ತು ಸಾರ್ವಜನಿಕರ ಕಷ್ಟದಲ್ಲಿ ಭಾಗಿಯಾಗಬೇಕು. ಸಾರ್ವಜನಿಕರ ಕಟ್ಟಡಗಳಿಗೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದ್ದು, ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಸರ್ಕಾರಕ್ಕೆ ಎಚ್ಚರಿಸುವ ಹಾಗೂ ಸಲಹೆ ಕೊಡುವ ದೃಷ್ಟಿಯಿಂದ ನಿಯಮ ೫೯ರಡಿಯಲ್ಲಿ ನಿಲುವಳಿ ಸೂಚನೆಯನ್ನು ಮಂಡಿಸಿದ್ದು, ದಯಮಾಡಿ ಈ ನಿಯಮದಲ್ಲಿ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ನಾನು ಸೂಚನೆಯನ್ನು ಓದಿದ್ದು, ಬಹಳ important ವಿಷಯಗಳಿದ್ದು, ಇಡೀ ರಾಜ್ಯ ಮತ್ತು ಉತ್ತರ ಕರ್ನಾಟಕದಲ್ಲಿ ಬಹಳ ಕಷ್ಟ ಇದೆ. ನಾವು ಸಹ ಇದರಿಂದ suffer ಆಗಿದ್ದೇವೆ. ಈ ಹಿನ್ನಲೆಯಲ್ಲಿ ಸರ್ಕಾರದ ಮಾಹಿತಿ ತೆಗೆದುಕೊಂಡು ಕೊಡಬೇಕು. ಈ ವಿಚಾರವನ್ನು ನಿಯಮ ೬೮ರ ಚರ್ಚೆಗೆ convert ಮಾಡಿ, date, time fix ಮಾಡುತ್ತೇನೆ. ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು ಅವರ ಸದಸ್ಯರುಗಳಿಗೆ ಒಳಗೆ ಬಂದು ಆಸೀನರಾಗಲು ತಿಳಿಸಬೇಕು. ಎಲ್ಲಾ ಆಸನಗಳು ಖಾಲಿ ಇವೆ. ನಾವು ಉತ್ತರ ಕರ್ನಾಟಕ ಎಂದು ಮಾತನಾಡುತ್ತೇವೆ. ಎಲ್ಲರೂ ಆರಾಮವಾಗಿ ಹೊರಗೆ ಇದ್ದಾರೆ, ಎಲ್ಲರನ್ನೂ ಕರೆಯಿರಿ.

**(ನಿಯಮ 68ಕ್ಕೆ ಪರಿವರ್ತಿಸಲಾಯಿತು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 7. ಗಮನ ಸೆಳೆಯುವ ಸೂಚನೆಗಳು

**ಅ) ವಿಷಯ:- 2013ನೇ ಸಾಲಿನಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ್ದರೂ ಸಹ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈಗಲೂ ಸಹ ಹಸ್ತಚಾಲಿತ ಸ್ಕ್ಯಾವೆಂಜರ್ ಪದ್ಧತಿ ಚಾಲ್ತಿಯಲ್ಲಿರುವ ವಿಷಯದ ಬಗ್ಗೆ.**

------

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ೨೦೧೩ನೇ ಸಾಲಿನಲ್ಲಿ ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನಿಷೇಧಿಸಿದ್ದರೂ ಸಹ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈಗಲೂ ಸಹ ಹಸ್ತಚಾಲಿತ ಸ್ಕ್ಯಾವೆಂಜರ್ ಪದ್ಧತಿ ಚಾಲ್ತಿಯಲ್ಲಿರುವ ವಿಷಯದ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ೧೯೭೨ ರಲ್ಲಿ ಮಾನ್ಯ ಬಸವಲಿಂಗಪ್ಪನವರು ಕ್ರಾಂತಿಕಾರಕ ಕಾಯ್ದೆಯನ್ನು ತಂದಿದ್ದು, ಇದಕ್ಕೆ ಪೂರಕವಾಗಿ ೧೯೯೩ ರಲ್ಲಿ ಕೇಂದ್ರ ಸರ್ಕಾರವು ಈ ಕಾಯ್ದೆಗೆ ಮತ್ತಷ್ಟು manual scavenger ನೇಮಕಾತಿ ಮತ್ತು ಪುನರ್ವಸತಿ ಅಧಿನಿಯಮವನ್ನು ತಂದಿರುತ್ತದೆ. ಮುಂದುವರೆದು ೨೦೧೩ ರಲ್ಲಿ ಕೇಂದ್ರ ಸರ್ಕಾರವು ಮತ್ತಷ್ಟು ವಿಸ್ತೃತವಾಗಿ ಸಮಸ್ಯೆಗಳ ಪರಿಹಾರಕ್ಕೆ ಮತ್ತೊಂದು ಕಾಯ್ದೆಯನ್ನು ತಿದ್ದುಪಡಿ ಮಾಡಿರುತ್ತದೆ. ಈ ಹಿನ್ನೆಲೆಯಲ್ಲಿ manual scavenger ಗಳ ನೇಮಕಾತಿ ಮತ್ತು ಪುನರ್ವಸತಿ ಅಧಿನಿಯಮವು ಕರ್ನಾಟಕ ಸರ್ಕಾರದಲ್ಲಿ ಚಾಲ್ತಿಯಲ್ಲಿದೆ. ಮಾನ್ಯ ಸದಸ್ಯರು ವಿಸ್ತೃತವಾದ ಪ್ರಶ್ನೆಯನ್ನು ಕೇಳಿರುವುದಕ್ಕೆ ನನ್ನ ಇಲಾಖೆಯ ಮೂಲಕ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಕಟ್ಟಕಡೆಯ ಮನುಷ್ಯರ ಹಾಗೂ ಬದುಕಿಗಾಗಿ ಬಡಿದಾಡುವವರ ವಿಚಾರವನ್ನು ಚರ್ಚೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿ, ಅವರ ಸಮಸ್ಯೆಗಳನ್ನು ಪರಿಹಾರ ಮಾಡಲು ನಿಯಮ ೭೨ ರಲ್ಲಿ ವಿಷಯವನ್ನು ತಂದಿರುವುದಕ್ಕೆ ಅಭಿನಂದನೆಯನ್ನು ಹೇಳುತ್ತೇನೆ.

ಭಾರತ ಸರ್ಕಾರವು ೨೦೧೩ರಲ್ಲಿ ಮ್ಯಾನುಯಲ್ ಸ್ಕ್ಯಾವೆಂಜರ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯ್ದೆ ಅಧಿನಿಯಮ ೨೦೧೩ರ ಕಾಯ್ದೆ ಹಾಗೂ ನಿಯಮಗಳನ್ನು ರೂಪಿಸಿ ಜಾರಿಗೆ ತರಲಾಗಿದೆ. ಅದರಂತೆ ರಾಜ್ಯ ಸರ್ಕಾರದಿಂದ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ಎಂ.ಎಸ್. ಕಾಯ್ದೆ ೨೦೧೩ನ್ನು ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್‌ನಲ್ಲಿ ತೊಡಗಿರುವವರನ್ನು ಕಾಯ್ದೆಯ ನಿಯಮಗಳನುಸಾರ ೫೦೮೦ ಜನರನ್ನು ಗುರುತಿಸಲಾಗಿರುತ್ತದೆ. ಗುರುತಿಸಿರುವ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳಿಗೆ ಪುನರ್ವಸತಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಒಂದು ಬಾರಿ ನಗದು ಸಹಾಯಧನವಾಗಿ ರೂ.೪೦ ಸಾವಿರಗಳನ್ನು ಭಾರತ ಸರ್ಕಾರದಿಂದ ಕೆಲವರಿಗೆ ನೀಡಲಾಗಿದ್ದು, ರಾಜ್ಯ ಸರ್ಕಾರದ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಸಾಲ/ಸಹಾಯಧನ ನೀಡಲಾಗುತ್ತಿದೆ.

ಮ್ಯಾನ್‌ಹೋಲ್ ಸ್ವಚ್ಛಗೊಳಿಸುವಾಗ ಮೃತಪಟ್ಟಿದ್ದಲ್ಲಿ ಸಂಬಂಧಿಸಿದ ಗುತ್ತಿಗೆದಾರರು/ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮ್ಮೆ ದಾಖಲಿಸಲಾಗಿದೆ. ಮೃತಪಟ್ಟ ಕುಟುಂಬದ ವಲಂಬಿತರಿಗೆ ರೂ.೧೦ ಲಕ್ಷ ಪರಿಹಾರ ಧನವನ್ನು ನೀಡಲಾಗುತ್ತಿದೆ. ೧೯೯೩ ರಿಂದ ಈವರೆಗೂ ಸುಮಾರು ೮೮ ಕುಟುಂಬಗಳು ಈ ಪರಿಹಾರ ಧನವನ್ನು ಪಡೆದಿವೆ.

ಮಾನ್ಯ ಸಭಾಪತಿಯವರೇ, ಕೆಲವು ಮುಖ್ಯಾಂಶಗಳೆಂದರೆ ರಾಜ್ಯದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲು ೨೦೧೩ ರಿಂದ ಸಮೀಕ್ಷೆ ನಡೆಸಲಾಗಿದೆ. ೨೦೧೮ರಿಂದ ರಾಷ್ಟ್ರೀಯ ಸಮೀಕ್ಷೆಯಲ್ಲಿ ಕರ್ನಾಟಕದ ೧೨ ಜಿಲ್ಲೆಗಳನ್ನು ಪೂರ್ಣಗೊಳಿಸಿದ್ದು, ೧೮ ಜಿಲ್ಲೆಗಳಲ್ಲಿ ಸರ್ವೆ ಕಾರ್ಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-----------------------------------------------------------------------------------------------------------

ಪರಿಪೂರ್ಣವಾಗುವ ಹಂತದಲ್ಲಿದೆ. ಇಲ್ಲಿಯವರೆಗೂ ೧೨ ಜಿಲ್ಲೆಗಳಲ್ಲಿ ಸುಮಾರು ೫೦೮೦ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳನ್ನು ಗುರುತಿಸಲಾಗಿದ್ದು, ಸದರಿಯವರ ಪುನರ್ವಸತಿಗೆ ಕ್ರಮ ಕೈಗೊಳ್ಳಲಾಗಿದೆ. ಗುರುತಿಸಿದ ನಂತರ ಅವರಿಗೆ ಗುರುತು ಚೀಟಿ ಕೊಡುವಂತಹ ಕಾರ್ಯಕ್ರಮ ಇದ್ದು, ಇದನ್ನು ಪೂರ್ಣ ಪ್ರಮಾಣದಲ್ಲಿ ಕೊಡಲು ಆಗಿಲ್ಲ. ಏಕೆಂದರೆ ಗುರುತಿಸುವುದು ವಿಳಂಬವಾಗಿರುತ್ತದೆ. ಒಂದು ಬಾರಿ ನಗದು ಸಹಾಯಧನವನ್ನು ಕೇಂದ್ರ ಸರ್ಕಾರದ ನೆರವಿನಿಂದ ೨೮೯೦ ಜನರಿಗೆ ಮಾತ್ರ ನೀಡಲಾಗಿದೆ. ಸರ್ವೆ ಕಾರ್ಯ ಆದ ತಕ್ಷಣ ಉಳಿದವರೆಲ್ಲರಿಗೂ ನೀಡಲು ಕೇಂದ್ರ ಸರ್ಕಾರಕ್ಕೆ ಅನುದಾನದ ಪ್ರಸ್ತಾವವನ್ನು ನೀಡಿದ್ದೇವೆ. ಅದನ್ನು ಕೊಡುವ ಕೆಲಸ ಮಾಡುತ್ತೇವೆ. ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ೯೯೨ ಜನರಿಗೆ ಸಾಲ ಸೌಲಭ್ಯಗಳನ್ನು ನೀಡಲಾಗಿದೆ. ಸ್ಕ್ಯಾವೆಂಜರ್ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಮ್ಯಾನುಯಲ್ ಸ್ವಚ್ಛಗೊಳಿಸುವಾಗ ಮೃತಪಟ್ಟದಲ್ಲಿ ರೂ.೧೦ ಲಕ್ಷ ಕೊಡುವುದನ್ನು ಈಗಾಗಲೇ ಉಲ್ಲೇಖ ಮಾಡಿದ್ದೇನೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ**:- ಮಾನ್ಯ ಸಭಾನಾಯಕರು ಯಾವ ಉತ್ತರವನ್ನು ಹೇಳುತ್ತಿದ್ದಾರೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ನಾನು ಕೊಟ್ಟಿರುವ ಉತ್ತರದಲ್ಲಿ ಒಂದಷ್ಟು point ಗಳನ್ನು ಹೇಳುತ್ತಿದ್ದೇನೆ.

**Mr. CHAIRMAN:-** Extra points ಹೇಳುತ್ತಿದ್ದಾರೆ.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:-** ಮಾನ್ಯ ಸದಸ್ಯರು ಕೇಳಿದ ನಂತರ ಹೇಳಬೇಕು.

**ಸಭಾಪತಿಯವರು**:- ಅವರು ಕೇಳಿದ ನಂತರ ಹೇಳಬೇಕು. ಮಾನ್ಯ ಸಭಾನಾಯಕರೇ, ನಿಮ್ಮನ್ನು ಸೇರಿ Treasury Bench ನಲ್ಲಿ ೫ ಜನ ಇದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ**:- ಬರುತ್ತಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಸಭಾಪತಿಯವರು:-** ಬರುತ್ತಾರೆ ಎನ್ನಲು ಇದೇನು ಬೀಗರ ಮನೆಯೇ? ಎಲ್ಲರನ್ನು ಕರೆಯಬೇಕು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಬಹಳಷ್ಟು ಸದಸ್ಯರು ಚುನಾವಣೆ ಇರುವುದರಿಂದ ಬಂದಿಲ್ಲ.

**ಸಭಾಪತಿಯವರು:-** ಬೆಳಗ್ಗೆ ಎಲ್ಲರೂ ಬಂದಿದ್ದಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಇನ್ನೈದು ನಿಮಿಷಗಳಲ್ಲಿ ಬರುತ್ತಾರೆ.

**Sri S.R. PATIL:-** Candidate ಬಂದಿದ್ದಾರೆ ಎಂದ ಮೇಲೆ ಉಳಿದವರದ್ದು ಏನಿದೆ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಚಿವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದು, ನಾನು ವೈಯಕ್ತಿಕವಾಗಿ ಅಥವಾ ಪಕ್ಷದ ವಿರುದ್ಧವಾಗಿ ಮಾತನಾಡುವುದಿಲ್ಲ. ನಮ್ಮ ಸಮಾಜದಲ್ಲಿ ಕಟ್ಟಕಡೆಯ ವ್ಯಕ್ತಿಯ ಸ್ಥಿತಿ ಯಾವರೀತಿ ಇದೆ ಎನ್ನುವುದನ್ನು ಗಮನಕ್ಕೆ ತರಲು ಬಯಸುತ್ತೇನೆ.

ನಮ್ಮ ದೇಶದಲ್ಲಿ ಈಗಾಗಲೇ ಮಂಗಳ ಗ್ರಹದವರೆಗೂ ಹೋಗುತ್ತೇವೆ. ೨೧ನೇ ಶತಮಾನದಲ್ಲಿ ನಾಗರೀಕ ಸಮಾಜದಲ್ಲಿ ಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ನೋಡಿದಾಗ Smart City ಎಂದು ಕೇಂದ್ರ ಸರ್ಕಾರದಿಂದ ಮಾಡಿದ್ದೇವೆ. ಆ Smart City ನಲ್ಲಿ ಒಬ್ಬ engineer ಒಂದು ಹೇಳಿಕೆಯನ್ನು ಕೊಡುತ್ತಾರೆ. Smart City ಯಲ್ಲಿ ಹೀಗಾಗುತ್ತದೆ ಎಂದು ಕೇಳಿದಾಗ ಅದಕ್ಕೆ ಉತ್ತರ ನೀಡಿದ engineer ಹೇಳಿಕೆ ನೋಡಿದಾಗ ತಪ್ಪಾಗಲ್ಲ ಅನಿಸುತ್ತದೆ. ಈ manual scavenging ಜಾತಿ ವಿಶೇಷವಾದ ಕೆಲಸ, ಅವರಿಗೆ ಸೀಮಿತ ಮಾಡಿದ್ದು, ಅವರೇ ಆ ಕೆಲಸವನ್ನು ಮಾಡುತ್ತಾರೆ ಎನ್ನುವಂತೆ ಇದೆ. ಆ engineer ಬಹಳ ಬುದ್ಧಿವಂತ, ಬಹಳ ಓದಿದ್ದಾನೆ ಎಂದುಕೊಂಡಿರುತ್ತೇವೆ. ಇಂತಹ ಹೇಳಿಕೆ ಬಂದಾಗ ಸಾಕ್ಷರತೆ ಇರುತ್ತದೆಯೇ ವಿನಃ ಅವರು ವಿದ್ಯಾವಂತರಾಗಿರುವುದಿಲ್ಲ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವುದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಕೇಂದ್ರ ಸರ್ಕಾರದಲ್ಲಿ ಒಂದು ಪ್ರಶ್ನೆ ಬಂದು ನಮ್ಮ ಮಾನ್ಯ ರಾಮದಾಸ್ ಅತ್‌ವಾಲೆ ರವರು ಈ ಸಮುದಾಯಕ್ಕೆ ಸೇರಿದವರಾಗಿದ್ದು, I would like to quote which is as follows: -

> "The manual scavengers identified under the National Survey of Manual Scavengers are also eligible for the rehabilitation benefits under the self-employment scheme for the rehabilitation of the manual scavengers. The rehabilitation benefits include the following – 1/10th cash assistance of Rs.40,000/- each; skill training with a monthly stipend of Rs.3,000/-..."

ಈ ರೀತಿ Rehabilitation Scheme ಗಳು ಸಾಕಷ್ಟು ಇವೆ. There is no dearth of programmes for these people. ಕಳೆದ ಸಾರಿ ಒಂದು ಪ್ರಶ್ನೆ ಬಂದಿದ್ದು, ಮಂಡ್ಯ-ರಾಮನಗರದಲ್ಲಿ manhole ನಲ್ಲಿ ಕೆಲಸ ಮಾಡುವಾಗ ಪ್ರಾಣ ಕಳೆದುಕೊಂಡಿದ್ದರು. ಆ ಸಂದರ್ಭದಲ್ಲಿ ಕೇಳಿದ ಪ್ರಶ್ನೆಗೆ ಅವರು manhole ನಲ್ಲಿ ಸತ್ತಿಲ್ಲ, accident ಆಗಿ ಬಿದ್ದು ಸತ್ತರು ಎಂದು ಅಲ್ಲಿರುವ ಅಧಿಕಾರಿಗಳು ಉತ್ತರ ಕೊಟ್ಟಿದ್ದಾರೆ. High Court ನಲ್ಲಿ ಒಂದು PIL ಮಾಡುತ್ತಾರೆ. High Court ನವರು ಸ್ಪಷ್ಟವಾದ ನಿರ್ದೇಶನ ಕೊಡುತ್ತಾರೆ. ಶೌಚಗುಂಡಿಯಲ್ಲಿನ ಸಾವಿನಿಂದ D.C ಗಳ ಖುದ್ದು ಹಾಜರಿಗೆ ಆದೇಶ ಎಂದು ಆಗುತ್ತದೆ. ಅಷ್ಟೊಂದು ಗಂಭೀರವಾದ ಪರಿಸ್ಥಿತಿ ಇದೆ. ಒಂದು ವಾರದ ಹಿಂದೆಯೂ ಸಾವು ಆಗಿದೆ. ಆದರೆ ಉತ್ತರದಲ್ಲಿ scavenging ನಿಂದ ಸಾವು ಆಗಿಲ್ಲ ಎಂದು ಹೇಳುತ್ತಾರೆ. ಬೆಂಗಳೂರು Smart City ನಲ್ಲಿ Infantry Road ಎಂದು ಇದೆ. It is one of the oldest streets in Bangalore City. ಅಲ್ಲಿ ಪ್ರಜ್ಞಾವಂತರು, most civilized ಜನರು ಓಡಾಡುವ ಜಾಗವಾಗಿದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1047)/13.12.2021/3.30/ಹೆಚ್‌ವಿ:ಆರ್‌ಎನ್

**ಶ್ರೀ ಬಿ.ಕೆ.ಹರಿಪ್ರಸಾದ್(ಮುಂದುವರೆದದ್ದು)**

ಸನ್ಮಾನ್ಯ ಸಭಾಪತಿಯವರೇ, ಒಬ್ಬ ಮನುಷ್ಯನನ್ನು ಮ್ಯಾನ್‌ಹೋಲ್‌ನಲ್ಲಿ ಇಳಿಸಿ ಕೆಲಸ ಮಾಡಿಸುತ್ತಿದ್ದ ಸಂದರ್ಭದಲ್ಲಿ ಸ್ಥಳೀಯರು 'ಮನುಷ್ಯರನ್ನು ಮ್ಯಾನ್‌ಹೋಲ್ ಒಳಗೆ ಇಳಿಸುವುದಕ್ಕೆ ಸಾಧ್ಯವಿಲ್ಲ' ಎಂದು ಪ್ರತಿಭಟಿಸುತ್ತಾರೆ. ಅಲ್ಲಿ ಒಬ್ಬ ಇಂಜಿನಿಯರ್ ಇರುತ್ತಾನೆ. ಆತನ ಹೆಸರನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. At this Engineer said: "In India, we have a caste system. Also, there are certain people who have to do certain occupations...."ಆ ಅಧಿಕಾರಿಗೆ ಮಾನವೀಯತೆ ಎನ್ನುವುದನ್ನು ಇದ್ದಿದ್ದರೆ ಈ ರೀತಿಯಾದ ಹೇಳಿಕೆಯನ್ನು ಕೊಡುವುದಕ್ಕೆ ಹೋಗುತ್ತಿರಲಿಲ್ಲ. "...These people are meant to clean. We are engineers. You cannot keep insisting that they should not clean the sewage." ಅವರಿಗೆ ಇವರೇ ಕ್ಲೀನ್ ಮಾಡಬೇಡಿ ಎಂದು ಹೇಳುತ್ತಾರಂತೆ. ಈ ರೀತಿಯಾದ ಪರಿಸ್ಥಿತಿ ಬೆಂಗಳೂರಿನಲ್ಲಿ ಇರುವಾಗ, ಬೆಂಗಳೂರನ್ನು ನಾವು ಹೇಗೆ ಸ್ಮಾರ್ಟ್ ಸಿಟಿ ಎಂದು ಕರೆಯುವುದಕ್ಕೆ ಸಾಧ್ಯವಾಗುತ್ತದೆ? ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಡೆಕ್ಕನ್ ಹೆರಾಲ್ಡ್ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳಲ್ಲಿ ಸಹ ಲೇಖನ ಪ್ರಕಟವಾಗಿದೆ. ಈಗಲೂ ಸಹ ಈ ಕ್ರಿಯೆಗಳು ನಡೆಯುತ್ತಿವೆ. 1973-74ನೇ ಇಸವಿಯಲ್ಲಿ ಬಸವಲಿಂಗಪ್ಪನವರು ತಲೆಯ ಮೇಲೆ ಮಲ ಹೊರುವಂತಹ ಪದ್ಧತಿಯನ್ನು ನಿಷೇಧಿಸಿದಂತಹ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೌಚಾಲಯ ಇರಲಿಲ್ಲ. ಈಗ ಬಹಳ ದೊಡ್ಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲ ಕಡೆಗಳಲ್ಲಿ ಶೌಚಾಲಯಗಳನ್ನು ಸ್ಥಾಪನೆ ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಆದರೆ, ಇವತ್ತಿಗೂ ಸಹ ಬೆಂಗಳೂರು ನಗರದಲ್ಲಿ ಮಲ ಹೊರುವಂತಹ ಕೆಲಸ ನಡೆಯುತ್ತಿದೆ. ಉತ್ತರ ಕರ್ನಾಟಕದ ರಾಣಿಬೆನ್ನೂರಿನಲ್ಲಿ ಮೊನ್ನೆಯೂ ಸಹ ಇಂತಹದೊಂದು ಪ್ರಕರಣ ನಡೆದಿದೆ. ಇವತ್ತಿಗೂ ಆ ಜನರ ಮೇಲೆ ದಬ್ಬಾಳಿಕೆ ಮತ್ತು ದೌರ್ಜನ್ಯಗಳು ನಡೆಯುತ್ತಿದೆ. ಅವರ ಬಗ್ಗೆ ಮಾತನಾಡುವವರು ಯಾರೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರು ಏನು ಮಾಡುವುದಕ್ಕೆ ಸಾಧ್ಯವಿದೆ?

---

ಪಾಪದ ಜನರು ಜೀವ ಕಳೆದುಕೊಳ್ಳುತ್ತಿದ್ದಾರೆ. ಸಂವಿಧಾನದಲ್ಲಿ ಯಾವುದೇ ಜನರಿಂದ ಆಯ್ಕೆಗೊಂಡ, ಸರ್ಕಾರಗಳಲ್ಲಿ ಇರುವಂತಹ ಜನಪ್ರತಿನಿಧಿಗಳಾಗಿರುವ ಪ್ರಧಾನಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು, the fundamental duty of every citizen is to protect the life and property of the citizen. ಅಂದರೆ, ಇವರ ಜೀವವನ್ನು ನಾವು ರಕ್ಷಣೆ ಮಾಡುವುದಕ್ಕೆ ಹೋಗುತ್ತಿಲ್ಲ. ಕೆಲವರು ನಾಯಿಗಳನ್ನು ಸಾಕಿಕೊಂಡಿರುತ್ತಾರೆ. ಆದರೆ, ಈ ಮನುಷ್ಯರು ನಾಯಿಗಿಂತ ಕಡಿಮೆಯಾಗಿದ್ದಾರೆ. ಇದರ ಬಗ್ಗೆ ತೀವ್ರವಾಗಿರುವ ಕಾನೂನು ತರಬೇಕಾಗುತ್ತದೆ. ಈಗ ಇರುವಂತಹ ಕಾನೂನಿನಲ್ಲಿ ಯಾವುದೇ ಲೋಪದೋಷಗಳಿಲ್ಲ. ಆದರೆ, ಅದನ್ನು ಜಾರಿಗೆ ತರುವುದರಲ್ಲಿ ವಿಫಲವಾಗಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ಮ್ಯಾನ್‌ಹೋಲ್‌ಗಿಳಿದು ಸ್ವಚ್ಛತಾ ಕಾರ್ಯವನ್ನು ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಇದುವರೆವಿಗೂ ಸುಮಾರು 400 ಜನರು ಮೃತಪಟ್ಟಿದ್ದಾರೆ. ಆದರೆ, ಸರ್ಕಾರ 40 ಜನ ಮಾತ್ರ ಸತ್ತಿದ್ದಾರೆಂದು ಲೆಕ್ಕ ಕೊಡುತ್ತಿದೆ. ಅದಕ್ಕಿಂತ ಹೆಚ್ಚು ಸಂಖ್ಯೆಯನ್ನು ತೋರಿಸಿದರೆ ಪರಿಹಾರ ರೂಪವಾಗಿ 10 ಲಕ್ಷ ರೂಪಾಯಿಗಳನ್ನು ನೀಡಬೇಕಾಗುತ್ತದೆ. ಮೃತಪಟ್ಟಿರುವವರ ಕುಟುಂಬಕ್ಕೆ ಈ ಪರಿಹಾರವಾದರೂ ಸಿಕ್ಕಿದರೆ ಅವರ ಜೀವನ ನಡೆಯುತ್ತದೆ. Manual scavenging ಮಾಡುವವರಿಗೆ ಸರ್ಕಾರ ಯಾವುದೇ ರೀತಿಯ ಸಂರಕ್ಷಣಾ ವಸ್ತ್ರವನ್ನು ಅಥವಾ ಸಂರಕ್ಷಣಾ ಕಿಟ್ ಅನ್ನು ನೀಡುವುದಿಲ್ಲ. ಕೇಳಿದರೆ, ಇಂಜಿನಿಯರ್ಸ್ ಹೇಳುತ್ತಾರೆ, ನಾವು ಅವರಿಗೆ gumboot and glove ಗಳನ್ನು ಕೊಡುತ್ತೇವೆ. ಅವರು ಅವುಗಳನ್ನು ಮಾರಿಕೊಂಡು, ಕುಡಿಯುತ್ತಾರೆ' ಎಂದು ಹೇಳುತ್ತಾರೆ. Manual Scavenging ಮಾಡುವ ಶೇಕಡಾ 99ರಷ್ಟು ಜನರು ಹೆಂಡ ಸಾರಾಯಿ ಕುಡಿದೇ ಮ್ಯಾನ್‌ಹೋಲ್‌ಗಳಲ್ಲಿ ಇಳಿಯುತ್ತಾರೆ. ಕುಡಿಯುವುದರಿಂದ ಅವರ ಆರೋಗ್ಯಕ್ಕೆ ತೊಂದರೆಯಾಗುತ್ತದೆ. ಒಂದು ವೇಳೆ ಅವರು ಹೆಚ್ಚಿನ ಪ್ರಮಾಣದಲ್ಲಿ ಕುಡಿದರೆ, ಆ ಮ್ಯಾನ್‌ಹೋಲ್‌ನಿಂದ ಹೊರಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾನು ಸರ್ಕಾರದ ಗಮನಕ್ಕೆ ತರಬಯಸುವ ವಿಚಾರವೇನೆಂದರೆ, ಕರ್ನಾಟಕ ರಾಜ್ಯದ ಉಚ್ಚ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನ್ಯಾಯಾಲಯ ನೀಡಿರುವಂತಹ ತೀರ್ಪನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಒಂದು ವಿಧೇಯಕವನ್ನು ಸರ್ಕಾರ ತರಬೇಕಾಗುತ್ತದೆ. ಮುಂದೆ ಯಾರಾದರು manual scavenging ಗೆ ಉತ್ತೇಜನ ನೀಡಿದರೆ ನೇರವಾಗಿ ಅವರಿಗೆ ಜೈಲು ವಾಸವನ್ನು ವಿಧಿಸಲಾಗುತ್ತದೆ ಎನ್ನುವ ವಿಧೇಯಕವನ್ನು ತರಬೇಕಾಗಿದೆ. ಆಗ ಇಂತಹ ಪ್ರಕರಣಗಳು ಕಡಿಮೆಯಾಗಬಹುದೇನೋ! ಯಾವ ಯಾವುದೋ ವಿಧೇಯಕಗಳನ್ನು ತರುವುದಕ್ಕೆ ಬದಲಾಗಿ ಮನುಷ್ಯನ ಜೀವ ಉಳಿಸುವಂತಹ ವಿಧೇಯಕವನ್ನು ತರುವುದು ಉತ್ತಮ ಎನ್ನುವುದು ನನ್ನ ಅನಿಸಿಕೆಯಾಗಿದೆ. ಏಕೆಂದರೆ, ಸರ್ಕಾರ ಇರುವುದು ಮನುಷ್ಯರಿಗಾಗಿ. ನಮ್ಮ ಸಂವಿಧಾನದಲ್ಲಿ ಎಲ್ಲ ರೀತಿ ಜೀವ ಪ್ರಾಣಿಗಳಿಗೆ ರಕ್ಷಣೆಯನ್ನು ನೀಡಲಾಗಿದೆ. ಕಾರ್ಯವನ್ನು ನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ರೀತಿಯ ಸಾವು ಘಟಿಸಿಲ್ಲವೆಂದು ಸಂಸತ್ತಿಗೂ ಉತ್ತರವನ್ನು ನೀಡಿದ್ದಾರೆ, ಆದರೆ, 941 ಸಾವು ಸಂಭವಿಸಿದೆಯೆಂದು ಒಂದು ಮಾಹಿತಿ ಹೇಳುತ್ತಿದೆ. Karnataka High Court to the State: “Give direction to stop manual scavenging except under certain circumstances.” Scavenging except under certain circumstances ಅಂದರೆ ಏನು ಎನ್ನುವುದು ನನಗೂ ಅರ್ಥವಾಗುತ್ತಿಲ್ಲ. Unless it is mechanized, ಒಂದು ಜಾತಿ ವಿಶೇಷವಾಗಿ ಈ ಕಾರ್ಯವನ್ನು ಕೊಟ್ಟು ಅವರು ಮಾಡಬೇಕೆನ್ನುವುದು ಎಷ್ಟರ ಮಟ್ಟಿಗೆ ಸರಿ? ವಾರಣಾಸಿಯಲ್ಲಿ ಮಾನ್ಯ ಪ್ರಧಾನಮಂತ್ರಿಗಳು ಒಂದು ಕಾರ್ಯಕ್ರಮಕ್ಕೆ ಹೋದಾಗ, ಸಫಾಯಿ ಕರ್ಮಚಾರಿಯ ಕಾಲನ್ನು ತೊಳೆದು, ಇವರು ಕೆಲಸ ಮಾಡುವಾಗ ಆಧ್ಯಾತ್ಮಿಕ ಸುಖ ಸಿಗುತ್ತದೆಂದು ಹೇಳಿದ್ದರು. ಆ ವ್ಯಕ್ತಿ ಸಫಾಯಿ ಕರ್ಮಚಾರಿಯೋ ಅಲ್ಲವೋ ನನಗೆ ಗೊತ್ತಿಲ್ಲ. ಆಧ್ಯಾತ್ಮಿಕ ಸುಖ manual scavenging ನಿಂದ ಸಿಗುತ್ತದೆಯೇ? ಹಾಗಾದರೆ ನಾವೆಲ್ಲರೂ ದೇವಸ್ಥಾನ ಮಠಗಳಿಗೆ ಹೋಗುವುದನ್ನು ಬಿಟ್ಟು ಇದೇ ಕೆಲಸವನ್ನು ಮಾಡಿದರೆ ಎಲ್ಲರಿಗೂ ಆಧ್ಯಾತ್ಮಿಕ ಸುಖ ಸಿಗುತ್ತದೆ. ಇದನ್ನು ವೈಭವೀಕರಣ ಮಾಡುವುದು ಸಹ ತಪ್ಪು. ಜವಾಬ್ದಾರಿ ಸ್ಥಾನದಲ್ಲಿರುವವರು ಇಂತಹ ಹೇಯಕೃತ್ಯಗಳನ್ನು ವೈಭವೀಕರಣ ಮಾಡುವುದು ಸಹ ತಪ್ಪು. ಸದನದಲ್ಲಿ ಕಾನೂನು ಸಚಿವರು ಸಹ ಉಪಸ್ಥಿತರಿದ್ದಾರೆ ಈ ಸದನದ ಮೂಲಕ ಸರ್ಕಾರಕ್ಕೆ ಸಲಹೆ

ನೀಡುವುದೇನೆಂದರೆ, ಒಂದು ಬಲಯುತವಾದ ಕಾನೂನು ಅನ್ನು ಜಾರಿಗೆ ತರುವಂತಹ ಅವಶ್ಯಕತೆಯಿದೆ. ನಾನು ಯೂನಿರ್ವಸಿಟಿಯಲ್ಲಿದ್ದಾಗ, ಮಾನ್ಯ ಬಸವಲಿಂಗಪ್ಪನವರ ಬೆಂಬಲಿಗನಾಗಿದ್ದೆ. ಇಡೀ ಯೂನಿರ್ವಸಿಟಿ ಅವರ ವಿರುದ್ಧವಿದ್ದಾಗ, ನಾನು ಮತ್ತು ರೋಷನ್‌ಬೇಗ್ ಇಬ್ಬರು ಮಾತ್ರ ಅವರ ಬೆಂಬಲವಾಗಿ ನಿಂತಿದ್ದೆವು. 1973-74ರಲ್ಲಿ ಮಾನ್ಯ ಬಸವಲಿಂಗಪ್ಪನವರು ಈ ಪದ್ಧತಿಯನ್ನು ನಿಷೇಧಿಸಬೇಕೆನ್ನುವ ಉದ್ದೇಶವನ್ನು ಹೊಂದಿದ್ದರು. ಆದರೆ, 1993ರಲ್ಲಿ ಮಾನ್ಯ ಪಿ.ವಿ.ನರಸಿಂಹರಾವ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ, ನಾನು ಸಹ ಲೋಕಸಭಾ ಸದಸ್ಯನಾಗಿದ್ದೆ ಆ ಸಂದರ್ಭದಲ್ಲಿ ಮತ್ತೊಂದು ವಿಧೇಯಕವನ್ನು ತರಲಾಯಿತು. ಅದರಲ್ಲಿಯೂ ಸಹ manual scavenging ಅನ್ನು ಇಡೀ ಭಾರತದಲ್ಲಿ ನಿಷೇಧಿಸಬೇಕೆನ್ನುವ ಉದ್ದೇಶವನ್ನು ಹೊಂದಿದ್ದರು. ಆದರೆ, ಅದು ಕೇವಲ ಕರ್ನಾಟಕ ರಾಜ್ಯದಲ್ಲಿ ಮಾತ್ರ ಅನುಷ್ಠಾನಕ್ಕೆ ತರಲಾಯಿತು. ನಂತರ 2013ರಲ್ಲಿ ಇವರುಗಳ ರಕ್ಷಣೆಗಾಗಿ ಒಂದು ಕಾನೂನು ತರಲಾಯಿತು. ಇಷ್ಟಾದರೂ ಸಹ ಇಂತಹ ಪ್ರಕರಣಗಳು ಪದೇಪದೇ ಸಂಭವಿಸುತ್ತಿರುವುದನ್ನು ನೋಡುತ್ತಿದ್ದರೇ, ಇವರ ರಕ್ಷಣೆಗಾಗಿ ಹಮ್ಮಿಕೊಂಡಿರುವಂತಹ ಯಾವುದೇ ಕಾರ್ಯಕ್ರಮಗಳಾಗಿರಬಹುದು ಅಥವಾ ಕಾನೂನುಗಳಾಗಿರಬಹುದು ಅಷ್ಟೊಂದು ಪರಿಣಾಮಕಾರಿಯಾಗಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. The High Court had in its interim order passed earlier issued several directions to the State Government and observed that there can be no dispute that our Constitutional philosophy does not permit any form of manual scavenging. Rights of people to live with dignity is an integral part of the fundamental rights guaranteed to the citizen under Article 21 of the Constitution of India. It had observed. The preamble of the Constitution shows that the Constitution seeks to protect the dignity of individual. There can be no dispute that manual scavenging is most inhuman and it infringes the fundamental rights guaranteed under Article 21. ಇಷ್ಟೊಂದು

ಅಮಾನವೀಯವಾಗಿರುವ ಕೃತ್ಯಗಳು ಇನ್ನೂ ನಡೆಯುತ್ತಿವೆ ಎಂದರೆ, ನಾವೆಲ್ಲರೂ ಸರ್ಕಾರದಲ್ಲಿ, ವಿರೋಧ ಪಕ್ಷದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿದ್ದು ಏನು ಪ್ರಯೋಜನ ಎನ್ನುವಂತಹ ಪ್ರಶ್ನೆ ಉದ್ಭವವಾಗುತ್ತದೆ. ಇಂತಹ ಪ್ರಕರಣಗಳು ಪುನರಾವರ್ತನೆಯಾಗುತ್ತಿರುವುದನ್ನು ನೋಡಿದರೆ ಸರ್ಕಾರ ಇದನ್ನು ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎನ್ನುವುದು ಗೊತ್ತಾಗುತ್ತದೆ. Unless the Civil Society gears up, ನಾವು ಸಮುದಾಯದವರಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮಾನ್ಯ ಕಾನೂನು ಸಚಿವರು ಈ ಸದನದಲ್ಲಿ ಉಪಸ್ಥಿತರಿದ್ದಾರೆ, ಅವರು ಈ ಸದನ ಮುಕ್ತಾಯಗೊಳ್ಳುವಷ್ಟರಲ್ಲಿ ಈ ಸಮುದಾಯದವರ ರಕ್ಷಣೆ ಮತ್ತು ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಿದ್ದರೂ, ಕೆಲವೊಂದು ಕಡೆಗಳಲ್ಲಿ ಅನುಸರಿಸುತ್ತಿರುವುದರ ಬಗ್ಗೆ ಕಠಿಣ ಕಾನೂನು ತರುವುದರ ಮೂಲಕ ಕರ್ನಾಟಕ ರಾಜ್ಯದಲ್ಲಿ Manual Scavengingಗೆ ಅವಕಾಶವನ್ನು ನೀಡುವುದಿಲ್ಲ ಎನ್ನುವ ನಿರ್ಧಾರವನ್ನು ತೆಗೆದುಕೊಂಡು ನಮ್ಮ ರಾಜ್ಯವನ್ನು ಪ್ರಗತಿಪರ ರಾಜ್ಯವನ್ನಾಗಿ ಮಾಡಬೇಕಾಗಿದೆ. ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ಎಸ್.ಆರ್.ಪಾಟೀಲ್‌ರವರು ಉತ್ತರ ಕರ್ನಾಟಕ ಬಸವಣ್ಣನವರ ನಾಡು ಎಂದು ಹೇಳುತ್ತಿರುತ್ತಾರೆ. ಇಲ್ಲಿ ಆ ಸಮುದಾಯದವರಿಗೆ ನ್ಯಾಯ ಸಿಗದಿದ್ದರೆ ಹೇಗೆ? ಅದರಲ್ಲಿಯೂ ಭಾರತೀಯ ಜನತಾ ಪಕ್ಷದವರು ಬಸವಣ್ಣನವರ ಮೇಲಿನ ಹೆಚ್ಚಿನ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಸಂವಿಧಾನದಲ್ಲಿ ಉಲ್ಲೇಖಿದ ಅಂಶಗಳು ಮತ್ತು ಬಸವಣ್ಣನವರ ಮಾನವೀಯ ಮೌಲ್ಯಗಳು ಮತ್ತು ಮಾನವೀಯತೆಯ ದೃಷ್ಟಿಯಿಂದ ಈ ನಿಟ್ಟಿನಲ್ಲಿ ಒಂದು ವಿಧೇಯಕವನ್ನು ತರಬೇಕೆನ್ನುವುದು ನನ್ನ ಒತ್ತಾಯವಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ಬಸವಣ್ಣನವರು ಯಾವುದೇ ಒಂದು ಪಕ್ಷಕ್ಕೆ ಅಥವಾ ಒಂದು ಸಮಾಜಕ್ಕೆ ಸೀಮಿತವಾಗಿರುವ ವ್ಯಕ್ತಿ ಅಲ್ಲ. ಇಡೀ ಮನುಕುಲಕ್ಕೆ ಸೇರಿದವರಾಗಿದ್ದಾರೆ.

---

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, 12ನೇ ಶತಮಾನದಲ್ಲಿ ಬಸವಾದಿ ಶರಣರು ರಚನೆ ಮಾಡಿದಂತಹ ವಚನಗಳು, ಡಾ||ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊಟ್ಟಂಥ ಸಂವಿಧಾನದ ಜೊತೆಗೆ ನಮ್ಮ ಪಕ್ಷದ ಸಂವಿಧಾನ ಈ ಮೂರನ್ನೂ ಒಟ್ಟಿಗೆ ಇಟ್ಟರೇ ಅಲ್ಪ ವಿರಾಮ, ಪೂರ್ಣ ವಿರಾಮಗಳು ಸಹ ಬದಲಾವಣೆ ಇಲ್ಲದಷ್ಟು ಸಾಮ್ಯತೆಯಿಂದ ಇದೆ. ಅದಕ್ಕಾಗಿ ಮಾನ್ಯ ಹರಿಪ್ರಸಾದ್‌ರವರ ಬಸವಣ್ಣನವರ ಹೆಸರನ್ನು ಉಲ್ಲೇಖ ಮಾಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕವಟಗಿಮಠರವರು ನನಗೆ ಒಳ್ಳೆಯ ಸ್ನೇಹಿತರಾಗಿದ್ದಾರೆ. ಅವರ ಊರಿಗೆ ಬಂದಿದ್ದೇವೆಂದು ಏನಾದರೂ ಛೇಡಿಸಬೇಕೆಂದು ಈ ರೀತಿ ಮಾತನಾಡುತ್ತಿದ್ದಾರೆ. ಬಸವಣ್ಣನವರು ಯಾವುದೇ ಜಾತಿ, ಪಕ್ಷಕ್ಕೆ ಸೇರಿದವರಲ್ಲ. ಆದರೆ, ಅವರು ಮಾತ್ರ ತಮ್ಮ ಜೊತೆಗೆ ಅವರನ್ನು ಇಟ್ಟುಕೊಂಡಿದ್ದಾರೆನ್ನುವುದು ನಮ್ಮ ನೋವಾಗಿದೆ. ಬಸವಣ್ಣನವರನ್ನು ಅವರು ನಮಗೂ ಬಿಟ್ಟುಕೊಡಬೇಕಾಗಿದೆ. ನಮಗೂ ಬಿಟ್ಟುಕೊಟ್ಟರೆ ನಾವು ಸರಿ ಹೋಗಬಹುದು ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಬಸವಣ್ಣನವರು ಪೂಜೆ ಮಾಡಿದಂತಹ ಈಶ್ವರನನ್ನೇ ಅವರ ನಾಯಕರು ಹಿಡಿದುಕೊಂಡಿದ್ದಾರೆ.ಈಗ ಅವರಿಗೆ ಬಸವಣ್ಣನವರು ಯಾಕೆಬೇಕು?

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

(1048) 13.12.2021 3.40 ಪಿಕೆಆರ್‌ಎನ್

**ಶ್ರೀ ಜೆ.ಸಿ.ಮಾಧುಸ್ವಾಮಿ(ಮುಂದು)**

ಮಾನ್ಯ ಬಸವಣ್ಣನವರು ಮತ್ತು ನಾವು ಎಲ್ಲರೂ ಈಶ್ವರನ ಮಕ್ಕಳು. ನಿಮ್ಮ ಲೀಡರ್ ಆದವರು ಚುನಾವಣೆಯಲ್ಲಿ ಈಶ್ವರನನ್ನೇ ಮುಂದಿಟ್ಟುಕೊಂಡು ಹೋದರು. ಹಾಗಾಗಿ ಅದರ ಬಗ್ಗೆ ಈಗೇಕೆ ಚರ್ಚೆ ಮಾಡಬೇಕು?

**ಶ್ರೀ ಬಿ.ಕೆ.ಹರಿಪ್ರಸಾದ್**:- ಈಶ್ವರ ಶೂದ್ರ ದೇವತೆಯಾದ್ದರಿಂದ ನಿಮ್ಮ ಲೀಡರ್ ಈಶ್ವರನನ್ನು ಇಟ್ಟುಕೊಂಡರು. ಆತ ಸ್ಮಶಾನದಲ್ಲಿ ಇರುತ್ತಾನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ**:- ದೇವರುಗಳಿಗೆ ಅವರು-ಇವರು ಎಂದೇನೂ ಇಲ್ಲ. ಆತ ಎಲ್ಲರಿಗೂ ದೇವರಾಗಿರುತ್ತಾನೆ. ಮಾನ್ಯ ಬಸವಣ್ಣನವರು ಆ ಧರ್ಮವನ್ನು ಒಪ್ಪಿ ಅನುಯಾಯಿಗಳಾದರು. ಆದರೆ ನಿಮ್ಮ ಲೀಡರ್ ದೆಹಲಿಯ ಲೆವೆಲ್‌ನಲ್ಲೇ ಈಶ್ವರನನ್ನು ಇಟ್ಟುಕೊಂಡು ಬಿಟ್ಟಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್**:- ಆದರೆ ಇನ್ನೂ ಬಸವಣ್ಣನವರನ್ನು ಇಟ್ಟುಕೊಂಡಿಲ್ಲ. ಮಾನ್ಯ ಕವಟಗಿಮಠರವರು, ಬಸವಣ್ಣನವರು ಎಲ್ಲರಿಗೂ ಸೇರಿದವರು ಎಂದು ಹೇಳಿದರು. ಹಾಗಾಗಿ ಅವರು ಎಲ್ಲರಿಗೂ ಸೇರಿದವರು.

ಮಾನ್ಯ ಸಭಾಪತಿಯವರೇ, ನಾನು ಜಾತಿಯನ್ನು ನಂಬುವವನಲ್ಲ. ಆದರೆ ಅವರನ್ನು ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಹೇಯವಾದ ಮತ್ತು ಅಮಾನವೀಯವಾದ ಕೆಲಸವನ್ನು ಮಾಡಿಸುತ್ತಿದ್ದಾರೆ. ಇದನ್ನು ತಡೆಯಬೇಕಾದರೆ ಒಂದು ಕಠಿಣ ಕಾನೂನು ಆಗಬೇಕು.

**ಸಭಾಪತಿಯವರು:**- ಈ ವಿಷಯ ಮಹತ್ವಪೂರ್ಣವಾದುದು ಎಂದು ಮೊದಲೇ ನಾವು ಅಜೆಂಡಾದಲ್ಲಿ ಹಾಕಿಕೊಂಡೆವು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಅದಕ್ಕಾಗಿ ತಮಗೆ ಧನ್ಯವಾದಗಳು. ಇಂತಹ ಗಂಭೀರವಾದ ವಿಚಾರವನ್ನು ಸದನ ಪ್ರಾರಂಭದ ಮೊದಲನೆ ದಿವಸವೇ ಗಮನ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸೆಳೆಯುವ ಸೂಚನೆ ಅಡಿ ಹಾಕಿಕೊಂಡು ಆ ಕುರಿತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮನಿರ್ದೇಶನ ಹೊಂದಿದವರು)**:- ಮಾನ್ಯ ಸಭಾಪತಿಗಳೆ, ಬೆಂಗಳೂರಿನಲ್ಲಿ ನಡೆದ ಅಧಿವೇಶನದಲ್ಲಿ ನಾನು ಚುಕ್ಕೆ ಗುರುತಿನ ಪ್ರಶ್ನೆಯನ್ನು ಕೇಳಿದ್ದಾಗ ಮಾನ್ಯ ಧರ್ಮಸೇನಾರವರೂ ಸಹ ಉಪಸ್ಥಿತರಿದ್ದರು. ನಾವು ಈ ಕುರಿತು ಮಾತನಾಡಿದಾಗ ಎರಡು-ಮೂರು ವಿಷಯಗಳು ಹೊರಗೆ ಬಂತು. ಯಾರು Manual scavenging ಮಾಡುತ್ತಾರೋ ಅವರು ಎಡವರ್ಗಕ್ಕೆ ಸೇರಿದವರು ಮತ್ತು ಆ ಭಾಗದಲ್ಲಿ ಹೆಚ್ಚಾಗಿ ತೆಲುಗು ಭಾಷೆ ಮಾತನಾಡುವವರಾಗಿದ್ದು, ಪುರಾತನ ಕಾಲದಿಂದಲೂ ಪರಂಪರಾನುಗತವಾಗಿ ಈ ಕೆಲಸವನ್ನೇ ಮಾಡಿಕೊಂಡು ಬಂದಿರುತ್ತಾರೆ, ಇದನ್ನು ತಪ್ಪಿಸಬೇಕು. ಇದು ವರ್ಣಭೇದ ನೀತಿಯನ್ನು ತೋರಿಸುತ್ತದೆ ಎನ್ನುವ ಅಂಶಗಳು ಬಂತು. ಮೊನ್ನೆ ಮಾನ್ಯ ಪ್ರಧಾನ ಮಂತ್ರಿಗಳು ಇವರ ಸಲುವಾಗಿ, ಇವರ ಪುನರ್ವಸತಿಯ ಸಲುವಾಗಿ ಒಂದು ಯೋಜನೆಯನ್ನು ಮಾಡಿದ್ದಾರೆ. ಮಾನ್ಯ ಹರಿಪ್ರಸಾದ್‌ರವರು ಹೇಳಿದ ಹಾಗೆ mechanical operation ಆಗಬೇಕು. ನಾವು ನೋಡಿದ ಹಾಗೆ, ಮ್ಯಾನ್‌ಹೋಲ್ ಕ್ಲೀನ್ ಮಾಡಬೇಕಾದರೆ, ಅಗತ್ಯವಿದ್ದಾಗ, ತುರ್ತು ಅವಶ್ಯಕತೆ ಇದ್ದಾಗ scavenger ಕರೆಸಿ ಬಿದಿರುಗಳನ್ನು ಹಾಕಿ ಕ್ಲೀನ್ ಮಾಡಿಸುತ್ತಾರೆ. ಇಲ್ಲದೇ ಇದ್ದರೆ ಆತನನ್ನು ಒಳಗಡೆ ಇಳಿಸಿ ಕೆಲಸ ಮಾಡಿಸುತ್ತಾರೆ. ಇದರಿಂದ ಆತನ ಪ್ರಾಣಕ್ಕೆ ಸಂಚಕಾರ ಬರುತ್ತದೆ. ಮಾನ್ಯ ಪ್ರಧಾನಮಂತ್ರಿಗಳು ಏನು ಘೋಷಿಸಿದ್ದಾರೋ ಆ ಕಾರ್ಯಕ್ರಮದ ಅಡಿಯಲ್ಲಿ mechanical equipment ಕೊಡುವ ವ್ಯವಸ್ಥೆ ಇದೆ ಅದನ್ನು ಸರ್ಕಾರ ಉಚಿತವಾಗಿ ಕೊಡುವ ವ್ಯವಸ್ಥೆ ಮಾಡಬೇಕು. Smart City ನಲ್ಲಿ ಏನು ಈ component ಇದೆಯೋ ಅಲ್ಲೂ ಕೂಡ ಯಾವರೀತಿ scientific ಆಗಿ cleaning ಮಾಡುವ ವ್ಯವಸ್ಥೆ ಮಾಡಲು ಸಂಬಂಧಪಟ್ಟವರಿಗೆ ತರಬೇತಿ ಕೊಡಬೇಕು. ಆ ರೀತಿ ತರಬೇತಿ ಕೊಟ್ಟರೆ ಒಂದೆರಡು ದಶಕಗಳಲ್ಲಿ ಕೇವಲ ಇದೇ ವರ್ಗದವರಲ್ಲದೇ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬೇರೆಯವರೂ ಸಹ ಈ ರೀತಿ equipment ನಿಂದ clean ಮಾಡುವಂತಹ ತರಬೇತಿ ಪಡೆದುಕೊಂಡು ಕೆಲಸಕ್ಕೆ ಬರಬಹುದು, ಆ ನಿಟ್ಟಿನಲ್ಲಿ ಸಿದ್ಧರಾಗುತ್ತಾರೆ. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖರಾಗಬೇಕು ಎಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಸರ್ಕಾರ ಉತ್ತರ ಕೊಟ್ಟಿರುವುದರ ಆಧಾರದ ಮೇಲೆ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ THE PROHIBITION OF EMPLOYMENT AS MANUAL SCAVENGERS AND THEIR REHABILITATION ACT, 2013 ಎನ್ನುವ ಒಂದು ಆಕ್ಟ್ ತಂದಿದ್ದೇವೆ ಎಂದು ಹೇಳಿದ್ದಾರೆ. ಈ ಆಕ್ಟ್ ಪರಿಪೂರ್ಣವಾಗಿ, ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎನ್ನುವುದು ಇಲ್ಲಿ ಮಾತನಾಡುತ್ತಿರುವ ಅಂಶಗಳ ಹಿನ್ನೆಲೆಯಲ್ಲಿ ಗೊತ್ತಾಗುತ್ತಿದೆ. ಇದರ ಜೊತೆಗೆ, Manhole Scavengers ಮತ್ತು ಕಾರ್ಯಕ್ರಮಗಳನ್ನೇನು ಮಾಡುತ್ತಿದ್ದಾರೆ 1993 ರಿಂದ ಇಲ್ಲಿಯವರೆಗೂ 83 ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ ಎಂದು ಹೇಳುತ್ತಿದ್ದಾರೆ. ಸರ್ಕಾರ 1993 ರಿಂದಲೂ ಇವರುಗಳಿಗೆ ರೂ. 10 ಲಕ್ಷ ಗಳನ್ನು ಕೊಡುತ್ತಿದೆಯೇ? ತಲಾ ಒಂದು ಕುಟುಂಬಕ್ಕೆ ರೂ. 10 ಲಕ್ಷಗಳನ್ನು ಕೊಟ್ಟರೆ, 88 ಕುಟುಂಬಗಳಿಗೆ ರೂ. 8 ಕೋಟಿ 80 ಲಕ್ಷ ಆಗುತ್ತದೆ. ಇಷ್ಟು ಮೊತ್ತವನ್ನು ಹಿಂದಿನಿಂದ ಕೊಡುವುದಕ್ಕಾಗುವುದಿಲ್ಲ. ಇದರಲ್ಲಿ ವ್ಯತ್ಯಾಸಗಳಿವೆ. ನೀವು State Action Plan for elimination of manual scavenging ಎಂಬ ಕ್ರಿಯಾ ಯೋಜನೆ ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದೀರಿ. ಈ ಕ್ರಿಯಾ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಯಾವ ಮಟ್ಟದಲ್ಲಿ ನೀವು ಸ್ಪಷ್ಟಮಾಡಿದ್ದೀರಿ. ತಮ್ಮ ಉತ್ತರದಲ್ಲಿ, ನಗರಾಭಿವೃದ್ಧಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ Desilting machine, Suction machine, Suction cum Jetting machine ಇತರೇ ಸ್ವಚ್ಛಗೊಳಿಸುವ ಯಂತ್ರಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ನಮ್ಮಲ್ಲಿ Urban Local Bodies ಬಗ್ಗೆ ಹೇಳುವುದಾದರೆ, ಸುಮಾರು 250ಕ್ಕೂ ಹೆಚ್ಚು ಇವೆ. ದೊಡ್ಡ ದೊಡ್ಡ 12 ಕಾರ್ಪೋರೇಷನ್‌ಗಳಿವೆ. ಇಂತಹ ಕಡೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
---

ಸಾಕಷ್ಟು ಸಮಸ್ಯೆಗಳು ಕಾಣಸಿಗುತ್ತವೆ. ಆದರೆ, ಗ್ರಾಮೀಣ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅಲ್ಲಿ ಸರಿಯಾದ ಮೆಷಿನರೀಸ್ ಇಲ್ಲ. ಇದು ಎಲಿಮಿನೇಟ್ ಆಗಬೇಕಾದರೆ ಪೈಪ್ ಲೈನಿಂಗ್ ಕೊಟ್ಟು STPs (Sewage Treatment Plants) ಮಾಡಿ ಸಂಪೂರ್ಣವಾದ ಒಂದು network ಅನ್ನು ಗ್ರಾಮೀಣ ಪ್ರದೇಶದಲ್ಲೂ ಮಾಡಬೇಕು. ಅದೇರೀತಿ ನಗರ ಪ್ರದೇಶಗಳಲ್ಲೂ ಮಾಡಬೇಕು. ಈ ಕುರಿತು ಸಮಗ್ರ ಚಿಂತನೆ ಮಾಡಿದರೆ ಈ ಸಮಸ್ಯೆ ಪರಿಹಾರವಾಗುತ್ತದೆ. Manual Scavenging ಎನ್ನುವುದು ಒಂದು ಸಾಮಾಜಿಕ ಪಿಡುಗು ಆಗಿದೆ ಮತ್ತು ನಮ್ಮ ರಾಜ್ಯದ ಪರಿಸರದ ಹಾನಿ ಹೇಗಾಗುತ್ತಿದೆ ಎನ್ನುವುದು ಮುಖ್ಯವಾಗುತ್ತದೆ. ಈ ಎರಡೂ ವಿಷಯಗಳನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಮತ್ತೆ, ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ 6 ತಿಂಗಳಲ್ಲಿ ಒಂದು ಸಲ ಸಭೆ ಸೇರುತ್ತದೆ ಎಂದು ಹೇಳಿದ್ದೀರಿ. ಇದುವರೆಗೂ ಎಷ್ಟು ಸಭೆ ಮಾಡಿದ್ದೀರಿ; ಇದರಿಂದ outcome ಏನಿದೆ, ಇದರ ಪರಿಣಾಮಗಳೇನು ಮತ್ತು ಇದರಿಂದ ನಿಮಗೆ ಈ ಸಮಸ್ಯೆಯನ್ನು eradicate ಮಾಡುವುದಕ್ಕೆ ಯಾವ ಯಾವರೀತಿ ಅವಕಾಶ ಸಿಕ್ಕಿದೆ; ಉತ್ತಮವಾದ ಸಿಸ್ಟಂ ಅನ್ನು establish ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

**ಶ್ರೀ ಆರ್.ಧರ್ಮಸೇನಾ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಅತ್ಯುತ್ತಮವಾದ ವಿಚಾರದ ಬಗ್ಗೆ ಮಾನ್ಯ ಹರಿಪ್ರಸಾದ್‌ರವರು ಗಮನ ಸೆಳೆಯುವ ಸೂಚನೆ ಅಡಿ ತಂದಿರುವುದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು ವ್ಯಕ್ತಿಗತವಾಗಿ ಒಬ್ಬ ಮನುಷ್ಯನ ಮೇಲೆ ಆಗುವ ದೌರ್ಜನ್ಯ ಎನ್ನುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ತಂದಿದ್ದಾರೆ ಎಂದು ನಾನಾದರೂ ಭಾವಿಸಿದ್ದೇನೆ. ನನಗೆ ಗೊತ್ತಿರುವ ಹಾಗೆ ಭಾರತದಲ್ಲಿ ಅಥವಾ ಮೈಸೂರು ಪ್ರಾಂತ್ಯದ ಮಹಾರಾಜರು ಒಳಚರಂಡಿ ವ್ಯವಸ್ಥೆಯನ್ನು 1938ರಲ್ಲಿ ತರುತ್ತಾರೆ. ಆ ಸಂದರ್ಭದಲ್ಲಿ, ಒಳಚರಂಡಿಯನ್ನು ಶುದ್ಧಗೊಳಿಸುವುದಕ್ಕೋಸ್ಕರ ಕರ್ನಾಟಕದ ಯಾವ ಜನ ಕೂಡ ಮುಂದೆ ಬರುವುದಿಲ್ಲ. ಆಗ ಆಂಧ್ರ ಪ್ರದೇಶದಿಂದ ಮತ್ತು ತಮಿಳು ನಾಡಿನಿಂದ ಈ ಪೌರ ಕಾರ್ಮಿಕರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಬರುತ್ತಾರೆ. ಮಾನ್ಯ ತಿಪ್ಪೇಸ್ವಾಮಿಯವರು ಹೇಳಿದ ಹಾಗೆ, ಈ ಕುರಿತು ನಾವು ಹಿಂದೆ ಕೂಡ ಚರ್ಚೆ ಮಾಡಿದ್ದೇವೆ. ಇವರು ಎಡಗೈ ಜನಾಂಗಕ್ಕೆ ಬರುತ್ತಾರೆ ಎಂದು ಹೇಳಿದರು. ಈಗಾಗಲೇ ಪೌರ ಕಾರ್ಮಿಕರು ಪಂಚಾಯಿತಿಗಳಲ್ಲಿ ಸಾಕಷ್ಟು ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲೇ ಲಕ್ಷಾಂತರ ಜನ ಕೆಲಸ ಮಾಡುವಂಥದ್ದಿದೆ. ಅತಿ ಹೆಚ್ಚು ಮೈಸೂರಿನಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಈ ವಿಚಾರವಾಗಿ ನನ್ನದೊಂದು ಅಭಿಪ್ರಾಯ ಇದೆ. ಕರ್ನಾಟಕದಲ್ಲಿ ಈಗಾಗಲೇ ದಲಿತರು 1 ಕೋಟಿಗೂ ಮೇಲ್ಪಟ್ಟಿದ್ದಾರೆ. ಅವರ ಮಧ್ಯದಲ್ಲಿ ಇವರನ್ನು ಸೇರಿಸಿದರೆ ಇವರಿಗೆ ಎಲ್ಲಿಂದ ಸವಲತ್ತು ಕೊಡುವುದಕ್ಕಾಗುತ್ತದೆ? ಬೆಂಗಳೂರು ಕಾರ್ಪೋರೇಷನ್‌ನಲ್ಲಿ ಪೌರ ಕಾರ್ಮಿಕರಲ್ಲದೇ ಇರುವವರೂ ಕೂಡ ಕೆಲಸ ಮಾಡಿ ಸಂಬಳ ತೆಗೆದುಕೊಂಡು ಇವರ ಕೈಯಲ್ಲಿ sub-contract ಕೊಟ್ಟು ಕೆಲಸ ಮಾಡುತ್ತಿರುವುದು ನನ್ನ ಗಮನದಲ್ಲಿದೆ. ದಯಮಾಡಿ, ಈ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಸರ್ಕಾರಗಳು ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ, ಇದೊಂದು manual scavengers ಎಂದಿದ್ದಾರೆ, ಅವರಿಗೆ ಸೌಲಭ್ಯ ಕೊಡುವುದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದ್ದಾರೆ. Suction cum Jetting Machine, Desilting Machine ಈ ಮೆಷನರಿಗಳಿವೆ ಎಂದು ಹೇಳಿದ್ದಾರೆ. ಮಾನ್ಯ ಸಭಾಪತಿಗಳೆ, ಸುತ್ತೂರು ಗ್ರಾಮಾಂತರ ಪ್ರದೇಶಕ್ಕೆ UGD ಮಾಡಿದ್ದಾರೆ. ಗ್ರಾಮ ಪಂಚಾಯಿತಿಗಳಿಗೆ UGD ಮಾಡಿದ ನಿದರ್ಶನಗಳಿವೆ. ಹಾಗಾಗಿ, ಒಬ್ಬ ವ್ಯಕ್ತಿಯನ್ನು ಸಂರಕ್ಷಣೆ ಮಾಡಬೇಕು, ಅವನಿಗೆ ಶಕ್ತಿ ತುಂಬಬೇಕು ಎಂದರೆ ಇವರನ್ನು ಬೇರೊಂದು ವರ್ಗವಾಗಿ ಕ್ರಿಯೇಟ್ ಮಾಡಿ. ನಾವೇ ಹೆಚ್ಚು-ಕಡಿಮೆ ರಾಜ್ಯದಲ್ಲಿ 70 ಲಕ್ಷ ಜನ ಇದ್ದೇವೆ. ಅವರು ನಮ್ಮ ಜೊತೆ ಬಂದು ಏನು ಸೌಲಭ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗುತ್ತದೆ?

(ಮುಂದು)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

1049) 13-12-2021 3.50 DS-VK

**ಶ್ರೀ ಆರ್.ಧರ್ಮಸೇನ (ಮುಂದು)**

ಮತ್ತೆ ಈಗಿನ ಸರ್ಕಾರದಲ್ಲಿ ಕೋವಿಡ್-೧೯ ಬಂದ ನಂತರ ನಿಗಮ-ಮಂಡಳಿಗಳಲ್ಲಿ ಅವರು ಯಾವುದೇ ಹಣವನ್ನು ಕೊಡುವುದಕ್ಕಾಗುತ್ತಿಲ್ಲ. ಈ ರೀತಿಯ ಪರಿಸ್ಥಿತಿಯಲ್ಲಿ ಅವರಿಗೆ ವಿಶೇಷವಾದಂಥ ಸವಲತ್ತನ್ನು ಕೊಡಬೇಕು, ವಿಶೇಷವಾದ ಕಾಳಜಿಯನ್ನು ವಹಿಸಬೇಕು ಮತ್ತು ಆರೋಗ್ಯದ ಬಗ್ಗೆ ನಿಗಾ ವಹಿಸಬೇಕು. ಆರೋಗ್ಯದ ದೃಷ್ಟಿಯಿಂದ ಈಗ ಇವರುಗಳು ಹೇಳುವ ಹಾಗೆ 25-30 ವರ್ಷಗಳಿಗೆ ಬಹಳ ಜನ ಸತ್ತು ಹೋಗುತ್ತಾರೆ. ಮಾನ್ಯ ಹರಿಪ್ರಸಾದ್‌ರವರು ಹೇಳಿದ ಹಾಗೆ ಅವರುಗಳು ಅತಿಯಾಗಿ ಕುಡಿದು ಕೊನೆಗೆ ಸಾವನ್ನಪ್ಪುತ್ತಾರೆ. ಅವರುಗಳು ಯಾರೂ ಸಹ ಪೂರ್ತಿ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರ್ಕಾರದ ಗಮನ ಹರಿಸಿ, ಅವರನ್ನು ವಿಶೇಷವಾಗಿ ಹೊರಗಡೆ ತೆಗೆದುಕೊಂಡು ಬನ್ನಿ. ಅವರು ಯಾವ ಒಂದು ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡದ ಮೀಸಲಾತಿಯಲ್ಲಿದ್ದಾರೆ ಅವರನ್ನು ಹೊಸದಾಗಿ ಹೊರಗಡೆ ತೆಗೆದುಕೊಂಡು ಬರಬೇಕು. ಆ ಕೆಲಸವನ್ನು ಯಾರು ಮಾಡುತ್ತಾರೆ? ನಾವುಗಳು ಯಾರೂ ಸಹ ಆ ಕೆಲಸವನ್ನು ಮಾಡುವುದಿಲ್ಲ. ಆ ವರ್ಗದಲ್ಲಿ ನಾನೂ ಕೂಡ ಇದ್ದೇನೆ. ನಮ್ಮ ಕುಟುಂಬದಲ್ಲಾಗಲಿ, ನಮ್ಮ ಜಾತಿಯಲ್ಲಾಗಲಿ ಯಾರೂ ಸಹ ಕೆಲಸವನ್ನು ಮಾಡುವುದಿಲ್ಲ. ಹಾಗಾಗಿ ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನವನ್ನು ಹರಿಸಬೇಕಾಗುತ್ತದೆ. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, *Karnataka State Commission for Safai Karamcharis* ದು ವರದಿಯನ್ನು ಕೊಟ್ಟಿದ್ದಾರೆ. ಅಂದರೆ *36 manual scavenging* ಕೇಸ್‌ಗಳಲ್ಲಿ ಸುಮಾರು 75 ಜನರು ತೀರಿಕೊಂಡಿದ್ದಾರೆಂದು ಹೇಳಿದ್ದಾರೆ ಹಾಗೂ ಪೊಲೀಸ್ ಕೇಸ್ ಸಹ ಆಗಿದೆ. ಆದರೆ ಒಬ್ಬರಿಗೂ ಸಹ *conviction* ಆಗಲಿಲ್ಲ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಹರಿಪ್ರಸಾದ್‌ರವರು ತಂದಿದ್ದಾರೆ. ಅವರ ಜೊತೆಯಲ್ಲಿ ಶ್ರೀ ಕೆ.ಎಸ್.ತಿಪ್ಪೇಸ್ವಾಮಿಯವರು, ಮಾನ್ಯ ರಮೇಶ್‌ರವರು, ಮಾನ್ಯ ಧರ್ಮಸೇನರವರು ಅವರಿಗೆ ಧ್ವನಿಗೂಡಿಸಿ ಈ ಸಮಸ್ಯೆ ಪರಿಹಾರವಾಗಬೇಕೆಂದು ಹೇಳಿದ್ದಾರೆ. ಇಲ್ಲಿರುವ ವಿಚಾರ ಇಷ್ಟೇ. ದೇಶದಲ್ಲಿ ಮತ್ತು ರಾಜ್ಯದಲ್ಲಿ ಈ ಒಂದು ಪದ್ಧತಿ ನಿಷೇಧವಿದ್ದರೂ ಕೂಡ ಇನ್ನು ಕೂಡ ಹಸ್ತಚಾಲಿತ *scavenging* ನಡೆಯುತ್ತಿದೆ. ಇದನ್ನು ತಕ್ಷಣವೇ ಸರಿಪಡಿಸಬೇಕು, ಯಂತ್ರಚಾಲಿತವಾಗಿ ಮಾಡಬೇಕು ಮತ್ತು ಅಲ್ಲಿ ಯಾರು ಕೆಲಸಗಾರರಿದ್ದಾರೆ ಅವರ ಆರೋಗ್ಯಕ್ಕೆ, ಜೀವನಕ್ಕೆ ಸುರಕ್ಷತೆಯ ದೃಷ್ಟಿಯಿಂದ ರಕ್ಷಣೆಯನ್ನು ಕೊಡಬೇಕು. ಎಲ್ಲಾ ಕಡೆಗಳಲ್ಲಿಯೂ ಸಹ ಯಂತ್ರಚಾಲಿತ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕೆಂಬುದು ಇದರ ಮೂಲ ಉದ್ದೇಶವಾಗಿದೆ. ಯಾರು ಮೃತರಾಗಿದ್ದಾರೆ ಅವರಿಗೆ ಪರಿಹಾರವನ್ನು ಕೊಡಬೇಕೆನ್ನುವ ಬಗ್ಗೆ ಮಾನ್ಯ ಹರಿಪ್ರಸಾದ್‌ರವರು ಈ ಪ್ರಶ್ನೆಯನ್ನು ಕೇಳಿದ್ದಾರೆ. ತಮ್ಮ ಮೂಲಕ ಅವರಿಗೆ ಕೊಟ್ಟಿರುವಂತಹ ಉತ್ತರದಲ್ಲಿ ಹಲವಾರು ವಿಚಾರಗಳನ್ನು ಹೇಳಿದ್ದೇನೆ. ಆದರೆ ನಮಗೆಲ್ಲರಿಗೂ ಒಂದು ಸ್ಪಷ್ಟತೆ ಇರಲಿ. ಸಮಾಜದ ಕಡೆಯ ಮನುಷ್ಯನೊಬ್ಬನಿಗೆ ಈ ಸಮಸ್ಯೆ ಬಗ್ಗೆ ಸ್ಪಂದಿಸುವಂತಹ ಪ್ರಶ್ನೆಯನ್ನು ಕೇಳಿದ್ದೀರಿ ಮಾನ್ಯ ಹರಿಪ್ರಸಾದ್‌ರವರಿಗೆ ಅಭಿನಂದನೆ ಎಂದು ನಾನು ಹೇಳಿದ್ದೇನೆ. ಈ ವಿಚಾರದಲ್ಲಿ ನನಗನ್ನಿಸುವ ಹಾಗೆ ಸರ್ಕಾರ ಮತ್ತು ನಾವುಗಳು ಒಟ್ಟಾಗಿ ಕೆಲಸ ಮಾಡಬೇಕು. ಯಾವುದೇ ಸರ್ಕಾರವಿದ್ದರೂ ಇಂತಹ ಸಮಸ್ಯೆಗಳಿಗೆ ಒಟ್ಟಾಗಿ ಒಂದು ಧ್ವನಿಯಾಗಿ ಕೆಲಸ ಮಾಡಬೇಕೆಂದು ನಾನು ತಿಳಿದುಕೊಂಡು ಅವರಿಗೆ ಉತ್ತರವನ್ನು ಹೇಳಿದ್ದೇನೆ. ಮತ್ತಷ್ಟು ವಿಸ್ತೃತವಾಗಿ ಹೇಳುವುದಾದರೆ, ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಇಡೀ ರಾಜ್ಯದಲ್ಲಿ ಸಮಾಜ ಕಲ್ಯಾಣ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿ ಇದೆ. ಆ ಸಮಿತಿ ಆರು ತಿಂಗಳಿಗೊಮ್ಮೆ ಸಭೆ ಕರೆದು ಅಲ್ಲಿರುವಂತಹ ಪರಿಸ್ಥಿಯನ್ನು ಅಧ್ಯಯನ ಮಾಡಬೇಕೆಂದು ಇದೆ. ಕೆಲವು ಸಮಯದಿಂದ ಅದು ಆಗಿಲ್ಲವೆಂದು ನನಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಗೊತ್ತಾದ ಕೂಡಲೇ ನಾನು ಜವಾಬ್ದಾರಿಯನ್ನು ತೆಗೆದುಕೊಂಡು ಹದಿನೈದು ದಿವಸಗಳಲ್ಲಿ ಆ ಸಮಿತಿ ಸಭೆಯನ್ನು ಕರೆದು ಇಡೀ ದಿವಸ ಆ ಸಭೆಯನ್ನು ಮಾಡಿದಾಗ ಹಲವಾರು ಸಮಸ್ಯೆಗಳ ಬಗ್ಗೆ ತಿಳಿಯಿತು.  ಬೆಂಗಳೂರಿನ ಬಿಬಿಎಂಪಿ ಯಂತಹ ಬಹುದೊಡ್ಡ ಸಂಸ್ಥೆಯಲ್ಲಿಯೂ ಸಹ ಸಂಪೂರ್ಣ ನಿರ್ಲಕ್ಷ್ಯ ಮಾಡುವುದನ್ನು ನಾನು ಗಮನಿಸಿದ್ದೇನೆ.  ಜನವರಿ 10ನೇ ತಾರೀಖಿನೊಳಗೆ ಮತ್ತೆ ಸಭೆಯನ್ನು ಕರೆಯುತ್ತೇವೆಂದು ನಾನು ನಿರ್ದೇಶನ ಕೊಟ್ಟಿದ್ದೇನೆ.  ಆ ಸಭೆಯನ್ನು ಕರೆದು ಆಸಕ್ತಿ ಇರುವ ಎಲ್ಲರಿಗೂ ಹೇಳುತ್ತೇವೆ.  ಅಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿಕೊಳ್ಳಲಿಕ್ಕೆ ಹಾಗೂ ಈ ಸಮಸ್ಯೆಗಳನ್ನು ಸರಿಪಡಿಸಲು ಅವಕಾಶಗಳಿವೆ ಎಂದು ನನಗನ್ನಿಸಿದೆ.  ಸಫಾಯಿ ಕರ್ಮಚಾರಿ ಆಯೋಗಕ್ಕೆ ಕೆಲವೊಂದು ನಿರ್ದೇಶನಗಳನ್ನು ನೀಡಲಾಗಿದೆ.  ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮೂಲಕವೂ ಅದನ್ನು ಸರಿಪಡಿಸಲಿಕ್ಕೆ ಕೆಲವೊಂದು ಕೆಲಸಗಳು ನಡೆಯುತ್ತಿವೆ.  ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಿರುವ ಹಾಗೆ 30 ಜಿಲ್ಲೆಗಳ ಪೈಕಿ 12 ಜಿಲ್ಲೆಗಳಲ್ಲಿ ಕೆಲವೊಂದು ಸಮೀಕ್ಷೆ ಮುಗಿದಿದೆ.  ಐದು ಸಾವಿರಕ್ಕೂ ಹೆಚ್ಚು ಜನರನ್ನು ಸಮೀಕ್ಷೆಯನ್ನು ಗುರುತಿಸಿ ಅವರಿಗೆ ಗುರುತಿನ ಚೀಟಿಯನ್ನು ಕೊಡುವುದು ಹಾಗೂ ನಗದು ಪರಿಹಾರವನ್ನು ಕೊಡುವಂಥ ಯೋಜನೆಯೂ ಸಹ ಆಗಿದೆ.  ಇನ್ನು ಕೂಡ 18 ಜಿಲ್ಲೆಗಳಲ್ಲಿ ಸಮೀಕ್ಷೆಗಳಾಗಿಲ್ಲ.  7 ಮತ್ತು 9ನೇ ತಿಂಗಳಿನಲ್ಲಿ (ಜುಲೈ ಮತ್ತು ಸೆಪ್ಟೆಂಬರ್) ಕೊಟ್ಟಿರುವಂಥ ಸೂಚನೆ ಮೇರೆಗೆ ಫೆಬ್ರುವರಿ ತಿಂಗಳಿನೊಳಗೆ  ಸಂಪೂರ್ಣ ಸಮೀಕ್ಷೆಯಾಗಿ ಎಲ್ಲಾ ಪಟ್ಟಿಗಳು ನಮ್ಮ ಇಲಾಖೆಯ ವ್ಯಾಪ್ತಿಗೆ ಬರಬೇಕೆಂದು ಹೇಳಿದ್ದೆ.  ಈಗಾಗಲೇ ನನಗಿರುವ ಮಾಹಿತಿಯ ಪ್ರಕಾರ ನಿಶ್ಚಯವಾಗಿ ಇಷ್ಟು ಮಾಹಿತಿಗಳು ನಮಗೆ ಸಿಗುತ್ತವೆ.  ಆನಂತರ ಅವರಿಗೆ ಏನೇನು ಮಾಡಬೇಕೆಂದು ಯೋಚನೆ ಮಾಡಲಿಕ್ಕೆ ನಮಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ಆ ಯೋಜನೆಯನ್ನು ಮಾಡಿದ್ದೇನೆ.  ಕೆಲವು ಗ್ರಾಮೀಣ ಪ್ರದೇಶದ ಶೌಚಾಲಯಗಳಲ್ಲಿ single pit ಇದೆ.  ಅದನ್ನು *double pit* ಆಗಿ ಮಾಡಬೇಕೆನ್ನುವ ನಿರ್ದೇಶವನ್ನು ನಾವು ಸಭೆಯಲ್ಲಿ ಕೊಟ್ಟಿದ್ದೇವೆ.  ಅರಿವು ಮೂಡಿಸುವಂಥ ಕಾರ್ಯಕ್ರಮಗಳು ಕೆಲವು ಕಡೆಗಳಲ್ಲಿ ಆಗುತ್ತಿದೆ.  ಇನ್ನು ನಮ್ಮ ರಾಜ್ಯದಲ್ಲಿ ಸಕ್ಕಿಂಗ್ ಮಷಿನ್ 177 ಇದೆ, ಜಟ್ಟಿಂಗ್

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಷಿನ್ 255 ಇದೆ. ಇದರಿಂದ ಗಟ್ಟಿಯಾಗಿರುವ ದ್ರಾವಣಗಳನ್ನು ತೆಗೆಯಲಿಕ್ಕೆ ಉಪಯೋಗಿಸುತ್ತಾರೆ. ರಾಡರಿಂಗ್ ಯಂತ್ರ 28 ಇದೆ, ಸಕ್ಕಿಂಗ್ ಕಮ್ ಜಟ್ಟಿಂಗ್ ಮಷಿನ್ 132 ಇದೆ. ಹೀಗೆ ಒಂದಷ್ಟು ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಸರ್ಕಾರ ಗಟ್ಟಿಯಾಗಿರುವಂಥ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಆ ಕೆಲಸವನ್ನು ಮಾಡುವ ಯಾರಿಗಾದರೂ ಅಪಮಾನ ಮಾಡುವಂಥ ಅಥವಾ ಅವರ ಬದುಕಿನೊಂದಿಗೆ ಚೆಲ್ಲಾಟವಾಡಿದರೆ ನಿಶ್ಚಯವಾಗಿ ಸರ್ಕಾರ ಇದನ್ನು ಸಹಿಸುವುದಿಲ್ಲ. ಬಹಳ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳುತ್ತೇವೆ. ಅಪಹಾಸ್ಯ ಮಾಡುವವರನ್ನು ರಕ್ಷಣೆ ಮಾಡುವಂಥ ಪ್ರಶ್ನೆ ಇಲ್ಲ. ಯಾವ ಇಂಜಿನಿಯರ್ ಬಗ್ಗೆ ಹೇಳಿದ್ದೀರಿ, ಅವರ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಈಗಲೂ ಅವರ ಮೇಲೆ ಸಹ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರಕ್ಕೆ ಯಾವ ದಾಕ್ಷಿಣ್ಯವೂ ಇಲ್ಲ ಎನ್ನುವುದನ್ನು ತಮ್ಮ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ರಮೇಶ್‌ರವರು ನೀಡುವ ಸಲಹೆಗಳನ್ನು ಗಮನಿಸಿದ್ದೇನೆ. ಮಾನ್ಯ ತಿಪ್ಪೇಸ್ವಾಮಿಯವರು, ಮಾನ್ಯ ಧರ್ಮಸೇನರವರು ಹೇಳಿದ್ದನ್ನು ಗಮನಿಸಿದ್ದೇನೆ. ಈ ವಿಚಾರವಾಗಿ ಒಂದು ಮನವಿ ಮಾಡುವುದೇನೆಂದರೆ, ಸಮಾಜದ ಕೊನೆಯ ಮನುಷ್ಯನೊಬ್ಬನ ಪಾದಸ್ಪರ್ಶ ಎನ್ನುವುದು ಪ್ರಚಾರಕ್ಕಾಗಿ ಅಲ್ಲ, ಸಮಾನತೆಯನ್ನು ಹೊಂದಿದ್ದೇನೆ ಎನ್ನುವ ಕಾರಣಕ್ಕೋಸ್ಕರ ಹೇಳಿದ್ದೇನೆ. ಇಂತಹ ಸಂದಿಗ್ಧ ಸಮಯದಲ್ಲಿ ಹಿಂದೆ ಅಧಿಕಾರದಲ್ಲಿರುವವರು ಯಾರ್ಯಾರು ಏನೇನು ಇಂತಹ ಯೋಜನೆಗಳನ್ನು ತಂದಿದ್ದಾರೋ, ಇಂತಹ ಸಮಯದಲ್ಲಿ ಸಮಸ್ಯೆಗಳನ್ನು ಸರಿಪಡಿಸುವುದಕ್ಕೋಸ್ಕರ ಅವರಿಗೆ ಸಹಮತ ವ್ಯಕ್ತಪಡಿಸಿದಂಥ ನಿದರ್ಶನಗಳು ಸಹ ಈ ರಾಷ್ಟ್ರದಲ್ಲಿದೆ. ಅದರ ಜೊತೆಗೆ ನಾವು ಸಹ ಸನ್ಮಾನ್ಯ ಪ್ರಧಾನ ಮಂತ್ರಿಯವರು ಪೌರಕಾರ್ಮಿಕನೊಬ್ಬನ ಪಾದ ಸ್ಪರ್ಶ ಮಾಡಿದ್ದನ್ನು ವೈಭವೀಕರಿಸುವುದಕ್ಕಿಂತ, ಅಷ್ಟು ದೊಡ್ಡ ಹುದ್ದೆಯಲ್ಲಿರುವವರು ಒಬ್ಬ ಸಾಮಾನ್ಯನ ಕಾಲನ್ನು ಸ್ಪರ್ಶ ಮಾಡುವುದರ ಮೂಲಕ ಸಮಾಜಕ್ಕೆ ಸಂದೇಶವನ್ನು ಬೀರಲಿಕ್ಕೆ ಪ್ರಯತ್ನ ಪಟ್ಟಿದ್ದಾರೆಂದು ಅಂದುಕೊಂಡಿದ್ದರೆ ನಾನು ಸಂತೋಷ ಪಡುತ್ತಿದ್ದ. ಇನ್ನು ಕಾಲ ಮಿಂಚಿಲ್ಲ, ನೀವು ಹಾಗೆಂದುಕೊಳ್ಳುತ್ತೀರಿ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಹರಿಪ್ರಸಾದ್‌ರವರೆ, ನೀವು ಏನೇ ಹೇಳಿದರೂ ಸಹ ನಿಮ್ಮಲ್ಲಿ ಒಂದು ವಿಶ್ವಾಸಾರ್ಹವಾದ ನಡವಳಿಕೆ ಇದೆ ಎಂಬುದನ್ನು ನಾನು ಗುರುತಿಸಿದವನು. ಆ ಹಿನ್ನೆಲೆಯಲ್ಲಿ ನಾನು ಈ ಸದನಕ್ಕೆ ತಮ್ಮ ಮೂಲಕ ಎಲ್ಲರಿಗೂ ವಿನಂತಿಯನ್ನು ಮಾಡುತ್ತೇನೆ, ನಿರ್ದಾಕ್ಷಿಣ್ಯವಾಗಿ ಈ ಹಸ್ತಚಾಲಿತ ಮಲ ಹೊರುವ ಪದ್ಧತಿ ಏನಿದೆ, ಅದನ್ನು ನಿಯಂತ್ರಣ ಮಾಡುತ್ತೇವೆ ಮತ್ತು ಆ ಕೆಲಸ ಮಾಡುವಂಥ ಸಮಾಜದ ಕಡೆಯ ಮನುಷ್ಯನಿಗೆ ಸವಲತ್ತುಗಳನ್ನು ಕೊಡುವುದಕ್ಕೆ, ಅವರ ಬದುಕನ್ನು ರಕ್ಷಣೆ ಮಾಡಲಿಕ್ಕೆ ಸರ್ಕಾರ ಬದ್ಧವಾಗಿದೆ. ಬರುವ ಜನವರಿ ೧೦ನೇ ತಾರೀಖಿನ ಒಳಗೆ ಸಭೆಯನ್ನು ಕರೆದು ಯಾರ್ಯಾರಿಗೆ ಇದರಲ್ಲಿ ಆಸಕ್ತಿ ಇದೆ, ಅವರೆಲ್ಲರನ್ನು ಕರೆದು ಅವರ ಸಲಹೆಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುತ್ತೇವೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ಈಗಾಗಲೇ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ತಂದಿರುವಂಥ ಕಾಯ್ದೆಗಳಿವೆ. ಇದರಲ್ಲಿ ಬಹಳ ಕಠಿಣವಾದ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಧಿಕಾರಗಳಿವೆ. ಹೊಸದಾಗಿ ಕಾನೂನು ಬೇಕೆಂದು ನನಗೆ ಅನ್ನಿಸುವುದಿಲ್ಲ. ಇರುವ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಜನಜಾಗೃತಿಯನ್ನು ಮೂಡಿಸುವಂಥ ಕೆಲಸವನ್ನು ಸಹ ಮಾಡುತ್ತೇವೆ. ಈ ವಿಚಾರವಾಗಿ ಸಹಕಾರವನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಆ) ವಿಷಯ: ಕಬ್ಬಿಗೆ ವೈಜ್ಞಾನಿಕವಾದ ಬೆಲೆ ನಿಗದಿಪಡಿಸಿ
ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಬಾಕಿ ಹಣ
ಪಾವತಿಸುವ ಬಗ್ಗೆ.

--------

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಬ್ಬಿಗೆ ವೈಜ್ಞಾನಿಕವಾದ ಬೆಲೆ ನಿಗದಿಪಡಿಸಿ ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಬಾಕಿ ಹಣ ಪಾವತಿಸುವ ವಿಚಾರದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬಯಸುತ್ತಿದೇನೆ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ,

(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಮಾನ್ಯ ಸಭಾಪತಿಯವರೇ, ಉತ್ತರದಲ್ಲಿ ಸಂಪೂರ್ಣವಾದ ಮಾಹಿತಿ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಏನಾದರೂ clarifications ಇದ್ದರೆ ಕೇಳಲಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಎರಡು-ಮೂರು clarifications ಅನ್ನು ಕೇಳಬಯಸುತ್ತಿದ್ದೇನೆ. ೨೦೧೮-೧೯ನೇ ಸಾಲಿನಲ್ಲಿ ಮೆ|| ಶಿವಸಾಗರ ಶುಗರ್ಸ್ ಲಿ., ಉದಪುಡಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ, ಈ ಕಾರ್ಖಾನೆಯು ರೂ.೧೧.೬೫ ಕೋಟಿಗಳಷ್ಟು ಕಬ್ಬು ಬಿಲ್ಲು ಬಾಕಿ ಉಳಿಸಿಕೊಂಡಿದೆ ಎಂಬುದನ್ನು ಮಾನ್ಯ ಸಚಿವರು ಉತ್ತರದಲ್ಲಿ ಹೇಳಿದ್ದಾರೆ. ಇದನ್ನು ಎಷ್ಟು ದಿವಸಗಳಲ್ಲಿ ರೈತರಿಗೆ ಪಾವತಿ ಮಾಡಿಸುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಈ ವರ್ಷ ಬೆಳೆ ಹಾನಿ ವಿಚಾರದ ಬಗ್ಗೆ ಈಗಾಗಲೇ ಪ್ರಸ್ತಾಪವಾಗಿದೆ. ತಮ್ಮ ಮುಖಾಂತರ ಇದರ ಬಗ್ಗೆ ಎರಡು ವಿಚಾರಗಳನ್ನು ಹೇಳಬಯಸುತ್ತಿದ್ದೇನೆ. ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಬಹಳ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ.

(ಮುಂದು)

1050/13-12-2021/4-00/bkp-vk

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ**(ಮುಂದು)

ಎಲ್ಲಾ ಬೆಳೆಗಳನ್ನು ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನೆಯಡಿಯಲ್ಲಿ ತರಲಾಗಿದೆ. ಆದರೆ, ಈ ಕಬ್ಬನ್ನು ಮಾತ್ರ ಈ ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನೆಯಡಿಯಲ್ಲಿ ತಂದಿಲ್ಲ. ಈ ವರ್ಷ ಬಂದಂತಹ ಪ್ರವಾಹ ಇರಬಹುದು, ಮಳೆ ಇರಬಹುದು, ಮತ್ತು ವಿಪತ್ತಿನಿಂದ ಆಗಿರತಕ್ಕಂತಹ ಹಾನಿ, ಕಬ್ಬನ್ನು ಬೆಳೆಯತಕ್ಕಂತಹ ಪ್ರದೇಶ, ಅದರಲ್ಲೂ ಉತ್ತರ ಕರ್ನಾಟಕ ಜಿಲ್ಲೆಗಳಾಗಿರತಕ್ಕಂತಹ ಬಾಗಲಕೋಟೆ, ವಿಜಯಪುರ , ಬೆಳಗಾವಿ ಈ ಎಲ್ಲಾ ಭಾಗಗಳಲ್ಲಿನ ರೈತ ತೊಂದರೆಯನ್ನು ಅನುಭವಿಸಿದ್ದಾನೆ. ಆ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ರೈತರ ರಕ್ಷಣೆಗೆ ಬರಬೇಕು. ಆದ್ದರಿಂದ, ಕಬ್ಬನ್ನು ಸಹಿತ ಈ ಒಂದು ಪ್ರಧಾನ್ ಮಂತ್ರಿ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಫಸಲ್ ಬಿಮಾ ಯೋಜನೆಯಡಿಯಲ್ಲಿ ತರಬೇಕೆನ್ನುವ ವಿಚಾರವನ್ನು ಈಗಾಗಲೇ ಸಾಕಷ್ಟು ಬಾರಿ ಸದನದಲ್ಲಿ ಚರ್ಚೆಯಾಗಿದೆ. ಈ ವಿಚಾರದಲ್ಲಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನೆಯಡಿಯಲ್ಲಿ ಕಬ್ಬನ್ನು ಸಹ ಕೂಡಿಸಬೇಕು. ಇದು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಜಂಟಿ ಯೋಜನೆ ಈ ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನೆಯಾಗಿದೆ. ಈ ಬಗ್ಗೆ ಸರ್ಕಾರದ ನಿಲುವನ್ನು ಮಾನ್ಯ ಸಚಿವರು ಹೇಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಕೇಂದ್ರ ಸರ್ಕಾರ Ethanol ಬಗ್ಗೆ ಪ್ರತ್ಯೇಕವಾದ ಪಾಲಿಸಿಯನ್ನು ಮಾಡುತ್ತಿದೆ. ಯಾವ ಸರ್ಕಾರಗಳು Ethanol ಅನ್ನು ಮಾಡಿದರೆ ಅದಕ್ಕೆ ಬೆಂಬಲವನ್ನು ಕೊಡತಕ್ಕಂತಹ ಅನೇಕ ಯೋಜನೆಗಳನ್ನು ಕೇಂದ್ರ ಸರ್ಕಾರ ರೂಪಿಸಿದೆ. ರಾಜ್ಯ ಸರ್ಕಾರವು ಸಹಿತ Ethanol ಉತ್ಪಾದನೆ ಮಾಡತಕ್ಕಂತಹ ಸಕ್ಕರೆ ಕಾರ್ಖಾನೆಗಳಿಗೆ ತಾವು ಏನು ಹೊಸ ಪಾಲಿಸಿಯನ್ನು ತರುತ್ತೀರಿ ಎನ್ನುವ ಬಗ್ಗೆ ದಯವಿಟ್ಟು ಸಭೆಯನ್ನು ಕರೆಯಬೇಕು. ಇದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ಸದನದಲ್ಲಿ ಹೇಳಬೇಕೆಂದು ವಿನಂತಿಯನ್ನು ಮಾಡುತ್ತಾ, ಇವತ್ತು ಕಬ್ಬು, ಸಕ್ಕರೆ, Bagasse, Molasses, Rectified Spirit ಮತ್ತು ಅದರಿಂದ ಉತ್ಪಾದನೆಯಾಗತಕ್ಕಂತಹ Indian made foreign liquor, Ethanol ಈ ಎಲ್ಲಾ ಉತ್ಪನ್ನಗಳಿಂದ ಅಂದರೆ, ಕಬ್ಬು ಮತ್ತು ಉಪ ಉತ್ಪನ್ನಗಳಿಂದ ರಾಜ್ಯ ಸರ್ಕಾರಕ್ಕೆ ಪ್ರತಿ ಟನ್ ಕಬ್ಬಿನಿಂದ ಸುಮಾರು 3000 ಸಾವಿರ ರೂಪಾಯಿಗಳ ಟ್ಯಾಕ್ಸ್ ಬರುತ್ತದೆ. ಹಿಂದೆ 2014 ರಲ್ಲಿ ಬೆಳಗಾವಿಯಲ್ಲಿ ನಡೆದಂತಹ ಅಧಿವೇಶನದಲ್ಲಿ ಈ ವಿಷಯವನ್ನು ಸಹಿತ ನಾನು ಪ್ರಸ್ತಾಪ ಮಾಡಿರುತ್ತೇನೆ. ಸರ್ಕಾರಕ್ಕೆ ಪ್ರತಿ ವರ್ಷ 15 ಸಾವಿರ ಕೋಟಿ ರೂಪಾಯಿಗಳಿಂದ 20 ಸಾವಿರ ಕೋಟಿ ರೂಪಾಯಿಗಳ ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆ ಸಕ್ಕರೆ ಕಾರ್ಖಾನೆಗಳಿಂದ, ಸಕ್ಕರೆ ಮತ್ತು ಕಬ್ಬು ಇತರೆ ಉತ್ಪನ್ನಗಳಿಂದ ಬರುತ್ತದೆ. ಇಷ್ಟೊಂದು ದೊಡ್ಡ ಆದಾಯ ಬರತಕ್ಕಂತಹ ಸಂದರ್ಭದಲ್ಲಿ ರೈತರ ರಕ್ಷಣೆಗೆ ಸರ್ಕಾರ ಮುಂದಾಗಬೇಕೆನ್ನುವ ವಿಚಾರವನ್ನು ಈ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಾ, Ethanol ಬಗ್ಗೆ ತಾವು ಪಾಲಿಸಿಯನ್ನು ಮಾಡಬೇಕೆನ್ನುವುದು ಮತ್ತು ಈ ಕಬ್ಬು ಬೆಳೆಯನ್ನು ಪ್ರಧಾನ್ ಮಂತ್ರಿ ಫಸಲ್ ಬಿಮಾ ಯೋಜನೆಯಡಿಯಲ್ಲಿ ತರುವುದರ ಮುಖಾಂತರ ಇವತ್ತು ಏನು ಪ್ರವಾಹ ಪೀಡಿತ ಇರಬಹುದು, ಹೆಚ್ಚು ಮಳೆಯಾಗತಕ್ಕಂತಹ ಸಂದರ್ಭದಲ್ಲಿ ರೈತರು ಏನು ತೊಂದರೆಯನ್ನು ಅನುಭವಿಸುತ್ತಾರೆ, ರೈತರ ರಕ್ಷಣೆಗೆ ಸರ್ಕಾರ ಮುಂದಾಗಬೇಕು. ಉತ್ತರ ಕರ್ನಾಟಕದ ಬೆಳಗಾವಿಯ ಈ ಸುವರ್ಣಸೌಧದಲ್ಲಿ ನಡೆಯತಕ್ಕಂತಹ ಈ ಒಂದು ವಿಧಾನಮಂಡಲದ ಅಧಿವೇಶನದಲ್ಲಿ ಸರ್ಕಾರ ಈ ಒಂದು ಹೊಸ ವಿಚಾರಕ್ಕೆ ನಾಂದಿ ಹಾಡಬೇಕೆನ್ನುವ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಬೆಳಗಾವಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾಗಿದ್ದಂತಹ ದಿ|| ಎಸ್. ನಿಜಲಿಂಗಪ್ಪನವರ ಹೆಸರಿನಿಂದ ಆಗಿರತಕ್ಕಂತಹ ಸಕ್ಕರೆ ಸಂಸ್ಥೆ ಬಹಳ ಮುಖ್ಯವಾಗಿರುವಂತಹ ಸಂಸ್ಥೆಯಾಗಿದೆ . ಮಹಾರಾಷ್ಟ್ರದ ಪುಣೆಯಲ್ಲಿರತಕ್ಕಂತಹ ವಸಂತದಾದ ಸಕ್ಕರೆ ಸಂಸ್ಥೆಯ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯೂ ಸಹಿತ ಕಬ್ಬು ಮತ್ತು ಕಬ್ಬು ಬೆಳೆಗಾರರಿಗೆ ಸಹಾಯ ಮಾಡತಕ್ಕಂತಹ ಹೊಸ ತಳಿಗಳನ್ನು ಮತ್ತು ರೈತರಿಗೆ ಮಾರ್ಗದರ್ಶನ ಮಾಡತಕ್ಕಂತಹ ರೀತಿಯಲ್ಲಿ ಈ ಒಂದು ನಿಜಲಿಂಗಪ್ಪ ಸಕ್ಕರೆ ಸಂಸ್ಥೆಯನ್ನು ಹುಟ್ಟು ಹಾಕಲಾಗಿದೆ. ಅದಕ್ಕೆ ಇನ್ನು ಹೆಚ್ಚಿನ ಅನುದಾನವನ್ನು ಇವತ್ತು ಕೊಡಬೇಕಾಗಿದೆ. ಇದಕ್ಕೆ ಪ್ರತಿವರ್ಷ ಕನಿಷ್ಠ 10 ಕೋಟಿ ರೂಪಾಯಿ ಗಳನ್ನು ಕೊಡಬೇಕಾಗಿದೆ. ಈ ರೀತಿಯಲ್ಲಿ ವಿಶೇಷ ಅನುದಾನವನ್ನು ಕೊಡುವುದರ ಮೂಲಕ ಈ ಸಂಸ್ಥೆಯನ್ನು ಬೆಳೆಸಬೇಕೆನ್ನುವ ವಿಚಾರವನ್ನು ತಮ್ಮ ಮೂಲಕ ಸಚಿವರಿಗೆ ಕೇಳಲಿಕ್ಕೆ ಬಯಸುತ್ತಿದ್ದೇನೆ.

**ಶ್ರೀ ಶಂಕರ ಬ. ಪಾಟೀಲ ಮುನೇನಕೊಪ್ಪ(ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ ಶಿವಸಾಗರ ಸಕ್ಕರೆ ಕಾರ್ಖಾನೆ ಬಗ್ಗೆ ಮಾರ್ಚ್ 2022 ರೊಳಗಾಗಿ, ಈ 5 ವರ್ಷಗಳ ಹಿಂದೆ ಬಂದ್ ಆಗಿರತಕ್ಕಂತಹ ಸಕ್ಕರೆ ಕಾರ್ಖಾನೆಯನ್ನು ಪುನರುಜ್ಜೀವನ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೊಳಿಸಲು ಈಗಾಗಲೇ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಈಗಾಗಲೇ 3 ಕೋಟಿ ರೂಪಾಯಿಗಳನ್ನು ಅದಕ್ಕೆ ತುಂಬಿಸಿ, ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ಕಾನೂನಾತ್ಮಕ ಅವಕಾಶವನ್ನು ಮಾಡಿಕೊಟ್ಟು ರೈತರಿಗೆ ಮೊದಲು ಬಿಲ್ ಕೊಡಬೇಕೆನ್ನುವ ಉದ್ದೇಶದಿಂದ ಈಗಾಗಲೇ ಕಂಪನಿ ಜೊತೆಗೆ ಕಾನೂನಾತ್ಮಕವಾಗಿ ಅನೇಕ ಕ್ರಮಗಳನ್ನು ಜರುಗಿಸುವುದರ ಮುಖಾಂತರವಾಗಿ ಮಾರ್ಚ್ 2022 ರೊಳಗಾಗಿ ಎಲ್ಲಾ ಬಿಲ್‌ಗಳನ್ನು ಪಾವತಿ ಮಾಡಬೇಕೆಂದು ಈಗಾಗಲೇ ಕ್ರಮಗಳನ್ನು ಜರುಗಿಸಿದ್ದೇವೆ. ಅದರ ಜೊತೆಯಲ್ಲಿ ಈಗಾಗಲೇ ನಮ್ಮ ಶಿವಸಾಗರ ಸಕ್ಕರೆ ಸಂಸ್ಥೆ ಬಹಳ ಹಳೆಯದಾಗಿರುವಂತಹ ವರ್ಷಗಳ ಹಿಂದೆ ನಿಂತು ಹೋಗಿರುವ ಕಾರ್ಖಾನೆಯಾಗಿದ್ದು, ಈಗ ಪುನರಾರಂಭ ಮಾಡಿ ಅದನ್ನು ತುಂಬಿಸಲಿಕ್ಕೆ ಈಗ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ 3 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡುವಂತಹ ಕೆಲಸ ಆಗಿದೆ. ಕಾನೂನಾತ್ಮಕ ನಮ್ಮ ಅನೇಕ ಕ್ರಮಗಳನ್ನು ಜರುಗಿಸುವುದರ ಮುಖಾಂತರವಾಗಿ ಮಾರ್ಚ್ 2022 ರೊಳಗಾಗಿ ಎಲ್ಲಾ ಬಿಲ್‌ಗಳನ್ನು ಪಾವತಿ ಮಾಡಬೇಕೆಂದು ಈಗಾಗಲೇ ಕ್ರಮಗಳನ್ನು ಜರುಗಿಸಿದ್ದೇವೆ. ಅದರ ಜೊತೆಗೆ ಮಾನ್ಯ ಸದಸ್ಯರು Ethanol ಬಗ್ಗೆ ಮಾತನಾಡಿದ್ದಾರೆ. ಈಗಾಗಲೇ Ethanol ಬಗ್ಗೆ ನಿಜಲಿಂಗಪ್ಪ ಸಂಶೋಧನಾ ಸಂಸ್ಥೆ ಏನು ಇದೆ, ಇದರ ಬಗ್ಗೆ ಈ ಅಧಿವೇಶನದ ಸಮಯದಲ್ಲಿಯೇ ಒಂದು ಸಭೆಯನ್ನು ಮಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರ Ethanol ಇರಬಹುದು ಮತ್ತು byproducts ಇರತಕ್ಕಂತಹ ಈ ಕಬ್ಬಿಗೆ ಸಂಬಂಧಪಟ್ಟಂತಹ ಅನೇಕ ವಿಚಾರಗಳನ್ನು ಅವರ ಜೊತೆಯಲ್ಲಿ ಚರ್ಚೆ ಮಾಡಬೇಕೆಂದು ನಿರ್ದಾರ ಮಾಡಿದ್ದೇವೆ. ಮತ್ತೆ, ಬೆಳೆ ವಿಮೆ ಬಗ್ಗೆಯೂ ಅವರು ಮಾತನಾಡಿದ್ದಾರೆ. ಇವತ್ತು ನಮ್ಮ ರೈತರಿಗೆ ಬೇರೆ ಬೆಳೆಗಳಿಗೆ ಬೆಳೆ ವಿಮೆಯನ್ನು ತರಬೇಕೆನ್ನುವುದರ ಬಗ್ಗೆ ಮಾನ್ಯ ಸದಸ್ಯರು ಏನು ಒತ್ತಾಯ ಮಾಡಿದ್ದಾರೆ, ಅದು ಬಹಳ ಸೂಕ್ತವಾಗಿದೆ. ಈಗಾಗಲೇ ಹಿಂದಿನ ಅನೇಕ ಬೆಳೆಗಳನ್ನು ಇವತ್ತು ಬೆಳೆ ವಿಮೆ ವ್ಯಾಪ್ತಿಗೆ ಬಾರದೇ ಇರತಕ್ಕಂತಹ ವ್ಯವಸ್ಥೆ ಇದೆ. ನಾನು ಕೃಷಿ ಮಂತ್ರಿಗಳ ಜೊತೆ ಈ ಬಗ್ಗೆ

---

ಮಾತನಾಡುತ್ತೇನೆ. ಏಕೆಂದರೆ, ಬೆಳೆ ವಿಮೆ ಪಾಲಿಸಿ ಮಾಡುವಂತಹದ್ದು ಕೃಷಿ ಮಂತ್ರಿಗಳಿಗೆ ಸಂಬಂಧಪಟ್ಟಿರುತ್ತದೆ. ನಾನು ಕೃಷಿ ಮಂತ್ರಿಗಳ ಜೊತೆ ಮಾತನಾಡುತ್ತೇನೆ.

**ಶ್ರೀ ಗೋವಿಂದ ಎಂ. ಕಾರಜೋಳ(ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಕಬ್ಬಿಗೂ ಸಹ ಬೆಳೆ ವಿಮೆಯನ್ನು ಸೇರಿಸಬೇಕೆಂದು ಬಹಳ ಹಿಂದೆಯೇ ಪ್ರಯತ್ನವನ್ನು ಮಾಡಿದ್ದೇವೆ. ಆದರೆ ಸಮಸ್ಯೆ ಏನಿದೆ ಎಂದರೆ ರೈತರು ವಿಮೆಯ ಕಂತನ್ನು ಏನು ಕಟ್ಟಬೇಕಾಗುತ್ತದೆ. ಅದನ್ನು ಅವರು ಕಟ್ಟಲಿಕ್ಕೆ ಸಮಸ್ಯೆಯಾಗುತ್ತದೆ. ಏಕೆಂದರೆ ಇದು ಬಹಳ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಏಕೆಂದರೆ ಇದು ಒಂದು ಆರ್ಥಿಕವಾಗಿ ದೊಡ್ಡ ಬೆಳೆ. ಹೀಗಾಗಿ ಇದು ರೈತರಿಗೆ ಹೊರೆಯಾಗುತ್ತದೆ ಎನ್ನುವ ಕಾರಣಕ್ಕೆ ವಿಮೆಗೆ ಇದನ್ನು ತರಲಿಲ್ಲ. ಇದರ ವಿಚಾರವಾಗಿ ೧೦ ವರ್ಷಗಳ ಹಿಂದೆಯೇ ಪ್ರಯತ್ನ ಮಾಡಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಕಂತನ್ನು ಕಟ್ಟಲಿಕ್ಕೆ ಸಾಧ್ಯ ಎನ್ನುವುದಾದರೆ, ಈ ವಿಮೆಯನ್ನು ಜಾರಿಗೆ ತರಬಹುದಲ್ಲವೇ?

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ ರವರು ಈ ಸಕ್ಕರೆ ಕಾರ್ಖಾನೆ ಮತ್ತು ಬಿಲ್ಲಿನ ಬಾಕಿ ಮತ್ತು Ethanol policy ಬಗ್ಗೆ ರಾಜ್ಯ ಸರ್ಕಾರ ಏನು ಮಾಡಬಹುದು ಎನ್ನುತಕ್ಕಂತಹ ವಿಚಾರ ವನ್ನು ಇಟ್ಟುಕೊಂಡು ಕೆಲವೊಂದು ಪ್ರಶ್ನೆಗಳನ್ನು ಕೇಳಿದ್ದಾರೆ. ಮಾನ್ಯ ಸಚಿವರು ಸಹ ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ನಮ್ಮ ಅಧಿಕಾರಿಗಳು ಮಾನ್ಯ ಸಚಿವರಿಗೆ ಸರಿಯಾದ ಮಾಹಿತಿಯನ್ನು ಕೊಡುತ್ತಿದ್ದಾರೋ ಇಲ್ಲವೋ ಎನ್ನುವ ಸಂಶಯ ನನಗೆ ಬರುತ್ತಿದೆ. ಕೇವಲ ಶಿವಸಾಗರ ಕಾರ್ಖಾನೆ ಅಷ್ಟೇ ಅಲ್ಲ. ಇನ್ನು ಅನೇಕ ಕಾರ್ಖಾನೆಗಳಿವೆ. ಈ ಬಗ್ಗೆ

-----------------------------------------------------------------------------------------------------------

ನನ್ನ ಹತ್ತಿರ ಮಾಹಿತಿ ಇದ್ದು, ಬೇಕಾದಲ್ಲಿ ಸಚಿವರಿಗೆ ಕೊಡುತ್ತೇನೆ. ಕಳೆದ ವರ್ಷದ್ದು ಸಹ ಕಬ್ಬಿನ ಬಿಲ್ ಕೊಡಬೇಕಾಗಿದೆ. ಈ ವರ್ಷದ್ದಲ್ಲ. ಕಳೆದ ಹಂಗಾಮಿನಲ್ಲಿ ನುರಿಸಿರತಕ್ಕಂತಹ ಕೆಲವು ಕಬ್ಬಿನ ಕಾರ್ಖಾನೆಯವರು ಇದುವರೆವಿದಗೂ ಕೂಡಾ ರೈತರಿಗೆ ಬಾಕಿ ಬಿಲ್ಲನ್ನು ಪಾವತಿ ಮಾಡಿರುವುದಿಲ್ಲ. ಅದರ ಜೊತೆಗೆ ಆ ಕಾರ್ಖಾನೆಗಳಲ್ಲಿ ಕೆಲವು ಕಾರ್ಖಾನೆಗಳು ಬಂದ್ ಆಗಿವೆ. ಪುನಃ ಪ್ರಾರಂಭ ಮಾಡಲಿಕ್ಕೆ ಅನೇಕ ಚರ್ಚೆಗಳು, ವಾದ -ವಿವಾದಗಳು ನಡೆದಿರತಕ್ಕದ್ದು ನಮ್ಮ ಗಮನದಲ್ಲಿ ಇದೆ. ಈ ಬಗ್ಗೆ ಸಚಿವರಿಗೆ ಖುದ್ದಾಗಿ ಭೇಟಿಯಾಗಿ ಮಾಹಿತಿಯನ್ನು ಒದಗಿಸುತ್ತೇನೆ . ಅದರ ಜೊತೆಯಲ್ಲಿ ಇಡೀ ದೇಶದಲ್ಲಿ Ethanolಗೆ ಕೊಡತಕ್ಕಂತಹ ಮಹತ್ವ ನಮ್ಮ ರಾಜ್ಯದಲ್ಲೂ ಕೊಡಬೇಕೆನ್ನುವುದು ನಮ್ಮ ಅಪೇಕ್ಷೆಯಾಗಿದೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ನಡೆಯತಕ್ಕ ಅಧಿವೇಶನದಲ್ಲಿ ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಕಬ್ಬನ್ನು ಬೆಳೆಯತಕ್ಕಂತಹ ಪ್ರದೇಶ ಇದಾಗಿದೆ. ಅದು ವಿಜಯಪುರ ಇರಬಹುದು, ಬಾಗಲಕೋಟೆ ಇರಬಹುದು, ಬೆಳಗಾವಿ ಇರಬಹುದು. ಬೀದರ್ ಜಿಲ್ಲೆ ಇರಬಹುದು. ಈ ಭಾಗದಲ್ಲಿಅತಿ ಹೆಚ್ಚು ಕಬ್ಬು ಬೆಳೆಯತಕ್ಕಂತಹ ಪ್ರದೇಶವಾಗಿದೆ. Ethanol policy ಬಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿ ಅವರದ್ದೇ ಅದ ಪಾಲಿಸಿಗಳನ್ನು ಈಗಾಗಲೇ ಮಾಡಿದ್ದಾರೆ. ಕೇಂದ್ರ ಸರ್ಕಾರ ಮಾಡಿರತಕ್ಕಂತಹ ಪಾಲಿಸಿಗೆ ಆ ರಾಜ್ಯ ಸರ್ಕಾರಗಳು ಕೂಡ incentive ಅನ್ನು ಕೊಡಲಿಕ್ಕೆ ಪ್ರಾರಂಭ ಮಾಡಿವೆ. ಎಷ್ಟು ಸಾಲವನ್ನು ನಾವು ಸಾಲವನ್ನಾಗಿ ಪಡೆದುಕೊಳ್ಳುತ್ತೇವೆ ಅದಕ್ಕೆ ಶೇಕಡ 6 ರಷ್ಟು ಬಡ್ಡಿಯನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಉಳಿದ ಬಡ್ಡಿಯನ್ನು ಆ ಕಾರ್ಖಾನೆಯವರೇ ಕಟ್ಟಬೇಕು. ಇ ರೀತಿಯ ರೇ ಟ್‌ಗಳನ್ನು ನಿಗದಿ ಮಾಡಿದ್ದಾರೆ. Ethanol juice ಗೆ ಒಂದು ರೇಟ್, ಡಿ ಮೊಲ್ಯಾಸಿಸ್‌ಗೆ ಒಂದು ರೇಟ್ ನಿಗದಿ ಮಾಡಿದ್ದಾರೆ. ಸಿ- ಮೊಲ್ಯಾಸಿಸ್‌ಗೆ ಒಂದು ರೇಟ್ ನಿಗದಿ ಮಾಡಿದ್ದಾರೆ . ಅದರ ಜೊತೆಗೆ ಇವತ್ತು grain based ethanol ಪ್ರಾರಂಭ ಮಾಡಲಿಕ್ಕೆ ಕೇಂದ್ರ ಸರ್ಕಾರ ಸಾಕಷ್ಟು ಆಸಕ್ತಿಯನ್ನು ವಹಿಸಿದೆ. ಅದಕ್ಕೂ ಕೂಡ ಸಾಕಷ್ಟು ಸಬ್ಸಿಡಿಗಳನ್ನು, inter

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

subsidy ಗಳನ್ನು ಕೊಡಲಿಕ್ಕೆ ಪ್ರಾರಂಭ ಮಾಡಿದೆ. ಆದರೆ, ಮಧ್ಯಪ್ರದೇಶ ಮತ್ತು ಬೇರೆ ಬೇರೆ ರಾಜ್ಯಗಳಲ್ಲಿ ಕೇಂದ್ರ ಸರ್ಕಾರ ಏನು ಇವತ್ತು inter subsidy ಯನ್ನು ಕೊಡುತ್ತಿದೆ. ಅದರ ಜೊತೆಗೆ ರಾಜ್ಯ ಸರ್ಕಾರವು ಸಹ ಕೊಡಲಿಕ್ಕೆ ಪ್ರಾರಂಭ ಮಾಡಿದೆ.

**(ಮುಂದು)**

**(1051) 13.12.2021 04.10 ಎಸ್‌ವಿ-ಬಿಎನ್‌ಎಸ್**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಮುಂದು):-**

ಕಾರಣ ಏನೆಂದರೆ ಇಂದು ಇಡೀ ದೇಶದಲ್ಲಿ ಮಾತ್ರವಲ್ಲ, ಪ್ರಪಂಚದಲ್ಲಿ ಅತಿ ಹೆಚ್ಚು ಡೀಸೆಲ್, ಪೆಟ್ರೋಲ್ ದರ ಹೆಚ್ಚಾಗುತ್ತಿದೆ. ಅದನ್ನು ನಿಯಂತ್ರಣ ಮಾಡಬೇಕು ಎನ್ನುವುದು ಮೊದಲನೆಯದು ಹಾಗೂ import duty ಕಡಿಮೆಯಾಗಬೇಕು ಎನ್ನುವುದು ಎರಡನೆಯದು. ಮೂರನೆಯದಾಗಿ ನಮ್ಮ ದೇಶದಲ್ಲಿ ಮೂರು ಬೆಳೆಗಳನ್ನು ಅತಿಹೆಚ್ಚು ಬೆಳೆಯಲಾಗುತ್ತಿದೆ. ಅವು ಕಬ್ಬು, ಭತ್ತ ಮತ್ತು ಗೋವಿನಜೋಳ. ಇದನ್ನು ಅತಿಹೆಚ್ಚು ಬೆಳೆದಂತಹ ರೈತರಿಗೆ ದರ ಬಿದ್ದು ಹೋಗಿ ತೊಂದರೆಯಾಗಬಾರದು, ನ್ಯಾಯಯುತವಾಗಿರುವಂತಹ ಬೆಲೆ ಸಿಗಬೇಕು ಎನ್ನುವಂತಹ ಉದ್ದೇಶವನ್ನು ಇಟ್ಟುಕೊಂಡು grain based ethanol ಮಾಡಲು ಮುಂದೆ ಬರುವವರಿಗೆ......

**ಶ್ರೀ ಎಸ್.ಆರ್.ಪಾಟೀಲ್:-** ENA (Extra Neutral Alcohol) ಮಾಡುತ್ತಾರೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ನಿಮಗೆ ಮಾಹಿತಿಯನ್ನು ನಾನು personal ಆಗಿ ಕೊಡುತ್ತೇನೆ. ಮಾರ್ಚ್ ನಂತರ ಎಷ್ಟು ಕಾರ್ಖಾನೆಗಳಲ್ಲಿ production start ಆಗುತ್ತದೆ ಎನ್ನುವ ಮಾಹಿತಿಯನ್ನು ನಾನು ನಿಮಗೆ ಕೊಡುತ್ತೇನೆ. ಮಾರ್ಚ್‌ನಿಂದ grain based ethanol 120 KLPD production ಪ್ರಾರಂಭವಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ಆರ್.ಪಾಟೀಲ್:-** Ethanol or ENA produce ಮಾಡುತ್ತೀರೋ ಏನು? Scotch, whisky ಗೆ grain based ENA ಅನ್ನು ಬಳಸಲಾಗುತ್ತದೆ.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:-** ಮಾನ್ಯ ಪಾಟೀಲರೇ, ನಾವು ರಾತ್ರಿ 8 ರ ನಂತರ ಅದನ್ನು ಚರ್ಚೆ ಮಾಡೋಣ. ಈಗ grain based ethanol ಅನ್ನು ಯಾರು ಪ್ರಾರಂಭ ಮಾಡುತ್ತಾರೆಯೋ ಅಂತಹವರಿಗೆ ಕೇಂದ್ರ ಸರ್ಕಾರ 6% ಬಡ್ಡಿಯ ದರದಲ್ಲಿ ಸಾಲವನ್ನು ಕೊಡುತ್ತಿದೆ. ಕೇಂದ್ರ ಸರ್ಕಾರವು ಅದರ ಮಾಲೀಕರೊಂದಿಗೆ PPP agreement ಅನ್ನು ಕೂಡ ಮಾಡಿಕೊಂಡಿರುತ್ತದೆ. ನಾವೂ ಮಾಡಿಕೊಂಡಿದ್ದೇವೆ. ನಾನು ಸಕ್ಕರೆ ಸಚಿವರಲ್ಲಿ ಕೇಳಿಕೊಳ್ಳುವುದು ಏನೆಂದರೆ ರಾಜ್ಯ ಸರ್ಕಾರದ ಮುಖಾಂತರ ಬೇರೆ ಬೇರೆ ರಾಜ್ಯಗಳಲ್ಲಿ ಮಾಡಿರುವ ಸವಲತ್ತುಗಳನ್ನು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಯುತ್ತಿರುವ ಈ ಸಂದರ್ಭದಲ್ಲಿ ಈ ಭಾಗದ ಕಬ್ಬು ಬೆಳೆಗಾರರಿಗೆ ಹೆಚ್ಚಿನ ದರ ಸಿಗುವಂತಾಗಬೇಕು. ಕಾರ್ಖಾನೆಗಳು ಕೂಡ ಸಬಲಗೊಳ್ಳಬೇಕು. ಇದರ ಜೊತೆಗೆ ಪೆಟ್ರೋಲ್ ದರ ಕಡಿಮೆಯಾಗಬೇಕು ಎನ್ನುವ ಉದ್ದೇಶ ಇಟ್ಟುಕೊಂಡು ರಾಜ್ಯ ಸರ್ಕಾರ ಚರ್ಚಿಸಬೇಕು. ಇದೇ ಬೆಳಗಾವಿ ಅಧಿವೇಶನದಲ್ಲಿ ನೀವು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ರಾಜ್ಯ ಸರ್ಕಾರದಿಂದ ನಮ್ಮದೇ ಆದಂತಹ ಒಂದು ethanol policy ಯನ್ನು ತರುತ್ತೇವೆಂದು ಹೇಳಿದರೆ ಉತ್ತರ ಕರ್ನಾಟಕ ಭಾಗದ ಜನರಿಗೆ ಒಂದು ಒಳ್ಳೆಯ ಸಂದೇಶ ಹೋದಂತಾಗುತ್ತದೆ. ಮಾನ್ಯ ಸಕ್ಕರೆ ಸಚಿವರು ಪಕ್ಕದ ಜಿಲ್ಲೆಯವರೇ ಆಗಿದ್ದು, ಈ ಭಾಗದ ರೈತರನ್ನು ಉದ್ಧಾರ ಮಾಡಬೇಕು ಎನ್ನುವ ಸಂಕಲ್ಪವನ್ನು ಇಟ್ಟುಕೊಂಡು ಬಂದಿದ್ದಾರೆ. ಮಾನ್ಯ ಶಂಕರ ಪಾಟೀಲರು ದಿಟ್ಟವಾದ ಹೆಜ್ಜೆಯನ್ನು ಇಡುವಂತಹ ಒಬ್ಬ ಸಮರ್ಥ ಸಚಿವರು ಎಂಬುದು ನನ್ನ ಆಶಯ. ಈ ಅಧಿವೇಶನದಲ್ಲಿ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ethanol policy ಯನ್ನು ಗಟ್ಟಿಯಾದಂತಹ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೇ ಆದರೆ ಈ ಭಾಗದ ಕಬ್ಬು ಬೆಳೆಗಾರರಿಗೆ ಒಳ್ಳೆಯ ಸಂದೇಶ ಹೋಗಲು ಸಾಧ್ಯವಾಗುತ್ತದೆ. ಈ ಕೆಲಸವನ್ನು ಹೆಚ್ಚು ಮುತುವರ್ಜಿ ವಹಿಸಿ ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು:-** ಮಾನ್ಯ ಸಭಾಪತಿಯವರೇ, ಇಲ್ಲಿ ಸಚಿವರು ಬಹಳ ವಿವರವಾದ ಉತ್ತರವನ್ನು ನೀಡಿದ್ದಾರೆ. 88 ಸಕ್ಕರೆ ಕಾರ್ಖಾನೆಗಳಿದ್ದು, ಅದರಲ್ಲಿ ಸರ್ಕಾರಿ ವಲಯ 13, ಸಹಕಾರಿ ವಲಯ 8, ಖಾಸಗಿ ವಲಯ 44. Parliament ನಲ್ಲಿ conflict of interest ಎಂದು ಬರುತ್ತದೆ. ಖಾಸಗಿ ವಲಯದಲ್ಲಿ ಯಾರಿಗಾದರೂ interest ಇದ್ದರೆ ಅದು ಚರ್ಚೆಗೆ ಬರುವುದಿಲ್ಲ. ಖಾಸಗಿ ವಲಯದವರಿಗೆ ಎಷ್ಟು ಪಾವತಿ ಬಾಕಿ ಇದೆ, ಸಹಕಾರಿ ವಲಯದಲ್ಲಿ ಎಷ್ಟು ಬಾಕಿ ಇದೆ, ಸಹಕಾರಿ ವಲಯ(ಗುತ್ತಿಗೆ) ಅದರಲ್ಲಿ ಎಷ್ಟು ಬಾಕಿ ಇದೆ ಎಂಬುದನ್ನು ಹೇಳಿದರೆ ನಮಗೆ ಅರ್ಥವಾಗುತ್ತದೆ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಖಾಸಗಿಯವರಿಗಾಗಿ ನಾವು ಸದನದ ಸಮಯವನ್ನು ವ್ಯರ್ಥ ಮಾಡುವುದು ಬೇಡ ಎಂಬುದು ನನ್ನ ಭಾವನೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಸನ್ಮಾನ್ಯ ಸಭಾಪತಿಗಳೇ, ಈಗ ಮಾನ್ಯ ಕಾರಜೋಳ ಅವರು ಪ್ರಸ್ತಾಪಿಸಿದಂತೆ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಕಬ್ಬನ್ನು ಸೇರಿಸಲಿಕ್ಕೆ ಚರ್ಚೆಯಾಗಿದ್ದು, ತೊಂದರೆಯಾಗಿದೆ. ಒಂದು ವೇಳೆ ರೈತನಿಗೆ ಸಂಪೂರ್ಣವಾದಂತಹ ವಿಮಾ ಕಂತನ್ನು ತುಂಬಲಿಕ್ಕೆ ಆಗದಿದ್ದರೆ, there should be sharing basis of the State Government and the farmer. Some amount has to be borne by the farmer. ಕಬ್ಬು ಮತ್ತು ಕಬ್ಬಿನ ಉಪ ಉತ್ಪನ್ನಗಳಿಂದ ಸುಮಾರು 20 ಸಾವಿರ ಕೋಟಿಗಳಷ್ಟು direct and indirect taxes ಇಂದು ರಾಜ್ಯ ಸರ್ಕಾರಕ್ಕೆ ಬರುತ್ತಿದೆ. ಪ್ರತಿ ಬಾರಿಯೂ ಪ್ರವಾಹ ಬರುತ್ತಿದೆ. ಈ ಭಾಗದಲ್ಲಿರುವ ಕೃಷ್ಣಾ, ಮಲಪ್ರಭಾ, ದೂಧ್ ಗಂಗಾ, ಘಟಪ್ರಭಾ ನದಿಗಳು ಉಕ್ಕಿ ಹರಿದು ಪ್ರತಿ ವರ್ಷವೂ ಕಬ್ಬು ಬೆಳೆ ಹಾನಿಯಾಗುತ್ತಿದೆ. ಇದಕ್ಕೆ ವಿಮೆಯನ್ನು ನೀಡಬೇಕಾದುದು ಸರ್ಕಾರದ ಜವಾಬ್ದಾರಿ. ಅದಕ್ಕೆ ಸರ್ಕಾರ ಮುಂದಾಗಬೇಕು ಎನ್ನುವ ಮನವಿಯನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಲಕ್ಷ್ಮಣ ಸವದಿಯವರು ಮಾತನಾಡುತ್ತಾ ಮಾನ್ಯ ಸಚಿವರಿಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಅಧಿಕಾರಿಗಳು ಸರಿಯಾದಂತಹ ಮಾಹಿತಿಯನ್ನು ಒದಗಿಸುತ್ತಾರೆಯೋ ಇಲ್ಲವೋ ಎಂದು ನನಗೆ ಸಂಶಯವಿದೆ ಎನ್ನುವ ಒಂದು ವಿಚಾರವನ್ನು ವ್ಯಕ್ತಪಡಿಸಿದರು. ಅವರು ಸಚಿವರಾಗಿ ಸಾಕಷ್ಟು ಅನುಭವವನ್ನು ಹೊಂದಿದಂತಹವರು, ಸಕ್ಕರೆ ಕಾರ್ಖಾನೆಗಳ ಜೊತೆ ನಿಕಟ ಸಂಬಂಧವನ್ನು ಹೊಂದಿದವರು. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅಧಿಕಾರಿಗಳಿಗೆ ಸಕ್ಕರೆ ಕಾರ್ಖಾನೆ ಮಾಲೀಕರು ನಾವು ಎಲ್ಲಾ ಪೇಮೆಂಟ್‌ಗಳನ್ನು ಮಾಡಿದ್ದೇವೆ ಎಂದು ಹೇಳಿಬಿಟ್ಟರೆ ಬಾಕಿ ಇರುವುದೇ ಇಲ್ಲ. ಸಕ್ಕರೆ ಕಾರ್ಖಾನೆಗಳ ಮಾಲೀಕರು ಜಿಲ್ಲಾಧಿಕಾರಿಗಳಿಗೆ ಮಾಹಿತಿಯನ್ನು ಕೊಡುತ್ತಾರೆ. 50 ಕೋಟಿ ಎಂದರೆ 20 ಕೋಟಿ ಎಂದು ಕೊಟ್ಟಿರುತ್ತಾರೆ. Crushing season ಬಂದಾಗ ಅವರ ಮೇಲೆ pressure ಆದಾಗ ಪೂರ್ತಿ ಪೇಮೆಂಟ್ ಮಾಡಿದ್ದೇವೆ ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದ ಕೂಡಲೇ ಅವರು ಕಬ್ಬು ಆಯುಕ್ತರಿಗೆ ತಿಳಿಸುತ್ತಾರೆ. ಹೋದ ಸೀಸನ್‌ನಲ್ಲಿ ಕಬ್ಬು ನುರಿಸಿದಂತಹ ಕಬ್ಬು ಬೆಳೆಗಾರರಿಗೆ ಕೊಡುವಂತಹ ಹಣವನ್ನು ಖಾಸಗಿಯಾಗಿ ನಿಮಗೆ ಒದಗಿಸಲಾಗುವುದು ಎಂದು ಹೇಳುತ್ತಾರೆ. ಇದು ನನ್ನ ಕೊನೆಯ ಅಧಿವೇಶನ. ನಾನು ಸಕ್ಕರೆ ಕಾರ್ಖಾನೆ ನಡೆಸುವವನಾಗಿದ್ದು, ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಸರ್ಕಾರಕ್ಕೆ ಪ್ರತಿ ವರ್ಷ 20 ಸಾವಿರ ಕೋಟಿಯಷ್ಟು ಹಣ ಬರುತ್ತದೆ. ಪ್ರತಿ ಸಕ್ಕರೆ ಕಾರ್ಖಾನೆ ಎದುರು ಒಂದು weighbridge ಅನ್ನು ಏಕೆ ಹಾಕಬಾರದು? ತೂಕದಲ್ಲಿ ದೊಡ್ಡ ಪ್ರಮಾಣದ ಮೋಸ ನಡೆಯುತ್ತದೆ. ನ್ಯಾಯಸಮ್ಮತವಾಗಿ ತೂಕ ಇಟ್ಟುಕೊಂಡು 14 ದಿನಗಳಿಗೆ ಒಂದು ಬಾರಿ ಪೇಮೆಂಟ್ ಮಾಡಬೇಕಾದರೆ ಇದು ಹೇಗೆ ಪೇಮೆಂಟ್ ಆಗುತ್ತದೆ ಎಂದು ನನಗೆ ಬಹಳ ಸಂಶಯ ಬರುತ್ತಿದೆ. ಅದಕ್ಕೆ ನನ್ನದೊಂದು ಮನವಿ ಎಂದರೆ ರಾಜ್ಯ ಸರ್ಕಾರದಿಂದ ರೂ.20-25 ಲಕ್ಷ ವೆಚ್ಚದಲ್ಲಿ weighbridge ಅನ್ನು ಹಾಕಿಸಬೇಕು. ಅದು ಖಾಸಗಿ ಇರಲಿ, ಸಹಕಾರಿ ಇರಲಿ ಅಥವಾ ಜಂಟಿ ಇರಲಿ ಸಕ್ಕರೆ ಕಾರ್ಖಾನೆ ಸಮೀಪದಲ್ಲಿ ಸರ್ಕಾರದವರು ಒಂದು weighbridge ಅನ್ನು ಹಾಕಿದರೆ ತೂಕ ಮಾಡಿಕೊಂಡು ಹೋದ ರೈತರು ಅಲ್ಲಿನ ತೂಕದ ಜೊತೆಯಲ್ಲಿ compare ಮಾಡುತ್ತಾರೆ. ಒಂದು ಟ್ರಿಪ್‌ಗೆ ಎರಡು ಮೂರು ಟನ್ ಹಾಕಿದರೆ ಒಂದು ಟನ್‌ಗೆ ಎರಡೂವರೆ ಸಾವಿರ ರೂಪಾಯಿಯಂತೆ ಮೂರು ಟನ್‌ಗೆ ಏಳು ಸಾವಿರ

-----

ರೂಪಾಯಿಗಳಾಗುತ್ತದೆ. ಕೆಲವು ಕಡೆಗಳಲ್ಲಿ ಬೇಕಾದರೆ ಕೊಡು ಸಾಕಾದರೆ ಬಿಡು ಎಂದು ಹೇಳುವ ಮಾತನ್ನು ನಾನು ಕೇಳ್ಪಟ್ಟಿದ್ದೇನೆ. ಮಾನ್ಯ ಸಚಿವರು ನಮ್ಮ ಪಕ್ಕದ ಜಿಲ್ಲೆಯವರಾಗಿದ್ದು, ಅವರಲ್ಲಿ ಬದ್ಧತೆ, ನಿಯತ್ತು, ಪ್ರಾಮಾಣಿಕತೆ ಇದೆ. ಅವರು ಇದನ್ನು ಮಾಡಿದರೆ ಇತಿಹಾಸದ ಪುಟದಲ್ಲಿ ಅವರ ಹೆಸರು ಖಾಯಂ ಆಗಿ ಉಳಿಯುತ್ತದೆ. ಪ್ರತಿ ಸಕ್ಕರೆ ಕಾರ್ಖಾನೆ ಸಮೀಪ weighbridge ಅನ್ನು ಹಾಕಿದರೆ ತೂಕ ಮಾಡಿಕೊಂಡು ಹೋಗಿ compare ಮಾಡುತ್ತಾರೆ. ನಿನ್ನೆ ಟಿ.ವಿ.ಯಲ್ಲಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಪ್ರಾರಂಭವಾಗಿರುವ ಬಗ್ಗೆ ನೋಡಿದ್ದೇನೆ. ಹಾಗಾದರೆ ಅವರದ್ದೂ ಬಿಲ್ ಬಾಕಿ ಇದೆ. ಕಬ್ಬು ನುರಿಸುವ ಹಂಗಾಮು ಪ್ರಾರಂಭವಾಗಿದೆ. ಕವಟಗಿಮಠ ಅವರಿಗೆ ಮಾನ್ಯ ಕಾರಜೋಳ ಅವರು premium cost ಬಹಳವಾಗಿದ್ದು, ರೈತರಿಗೆ burden ಆಗಿರುವುದರಿಂದ ಫಸಲ್ ಬಿಮಾ ಯೋಜನೆಯಡಿಯಲ್ಲಿ ಇದನ್ನು ತಂದಿರುವುದಿಲ್ಲ ಎಂದು ಹೇಳಿದರು. ಅನೇಕ ಕಡೆಗಳಲ್ಲಿ ಪ್ರವಾಹ ಬಂದು ಬೆಳೆಗಳು ಮುಳುಗಡೆಯಾಗುತ್ತಿದೆ.

**(ಮುಂದು)**

**(1052) 13-12-2021 (4.20) ಕೆಜಿ – BNS**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಆರ್.ಪಾಟೀಲ್ (ಮುಂದು)**

ಕಬ್ಬು 1 ಅಥವಾ 2 ಅಡಿ ನೀರಿನಲ್ಲಿ ಮುಳುಗಿದರೆ ಏನಾಗುವುದಿಲ್ಲ. ಕಬ್ಬು ಮತ್ತಷ್ಟು ಹೆಚ್ಚು ಇಳುವರಿ ಬರುತ್ತದೆ. ಕಬ್ಬು ಬೆಳೆಯ ಸುಳಿಯ ಮೇಲೆ ಪೂರ್ತಿಯಾಗಿ 1-4 feet ನೀರು ಬಂದರೆ ಬೆಳೆ ನಾಶವಾಗುತ್ತದೆ. ನಾವು ಕೆಲವು ಸಂದರ್ಭದಲ್ಲಿ ಕಬ್ಬಿನ ಬೆಳೆ ಮೇಲೆ ನಿಂತಿದ್ದ ನೀರಿನಲ್ಲಿ boat ನಲ್ಲಿ ಓಡಾಡಿದ್ದೇವೆ. ಅಷ್ಟು ನೀರು ಬಂದಿತ್ತು. ಅಷ್ಟು ನೀರು ಕಬ್ಬಿನ ಬೆಳೆ ಸುಳಿಯ ಮೇಲೆ ಬಂದರೆ, ಕಬ್ಬು ಬೆಳೆ ಪೂರ್ತಿಯಾಗಿ ನಾಶವಾಗುತ್ತದೆ. ಪ್ರತಿಯೊಂದು ಕಬ್ಬಿನ ಕಣ್ಣಿನಲ್ಲಿ ಸೂಲಂಗಿ ಎಂದು ಬರುತ್ತದೆ. ಅದು ಮೊಳಕೆ ಹೊಡೆದರೆ ಅದರಲ್ಲಿ ಸಕ್ಕರೆ ಅಂಶ ಇರುವುದಿಲ್ಲ. ಸಕ್ಕರೆ ಕಾರ್ಖಾನೆ ಮಾಲೀಕರು ಅಂತಹ ಸುಲಂಗಿ ಬಂದಿರುವಂತಹ ಕಬ್ಬನ್ನು ತೆಗೆದುಕೊಳ್ಳುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ರೈತರ ಸ್ಥಿತಿ ಬಹಳಷ್ಟು ಚಿಂತಾಜನಕವಾಗುತ್ತದೆ. ಮಾನ್ಯ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಹೇಳಿದಂತೆ, ಏಕೆ ನೀವು sharing......, ಕೆಲವು percentage ನಲ್ಲಿ ಕೊಡಿ. ರೈತರನ್ನು ಉಳಿಸಬೇಕಲ್ಲವೇ; ಹಿಂದೆ ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ 1500 ಕೋಟಿ ರೂಪಾಯಿಗಳನ್ನು ಕಬ್ಬು ಬೆಳೆಗಾರರಿಗೆ ಕೊಟ್ಟಿದ್ದರು. ಆಗ ಶ್ರೀ ಪ್ರಕಾಶ್ ಹುಕ್ಕೇರಿಯವರು ಸಕ್ಕರೆ ಸಚಿವರಾಗಿದ್ದರು. ಅವರು declare ಮಾಡಿಬಿಟ್ಟರು. ಆಗ ಸಕ್ಕರೆ ಕಾರ್ಖಾನೆ ಮಾಲೀಕರಿಗೆ ಸಕ್ಕರೆ ಬೆಲೆ ಕಡಿಮೆ ಆಯಿತು. ಅವರಿಗೆ ರೈತರಿಗೆ ಹಣ ಪಾವತಿ ಮಾಡುವುದಕ್ಕೆ ಆಗಲಿಲ್ಲ. ಆಗ ಸರ್ಕಾರ ಕೊಡುವಂತಹ ಒಂದು ಪ್ರಸಂಗ ಬಂದಿತ್ತು. ಅದಕ್ಕೆ weighbridge ಹಾಕುವುದನ್ನು ಮಾಡಬೇಕು. ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ರವರು ಹೇಳಿದಂತೆ, sharing basis ಮೇಲೆ ಸರ್ಕಾರ ಸ್ವಲ್ಪ premium ಕೊಡಲಿ. ಅದಕ್ಕೆ ಸರ್ಕಾರದ ಹಣ ಸ್ವಲ್ಪ ಇರಲಿ. ಮಾನ್ಯ ಸಚಿವರು ಇಷ್ಟನ್ನು ಮಾಡಬೇಕು.

ಮಾನ್ಯ ಸಭಾಪತಿಯವರೇ, ಈಗ fair and remunerative price (FRP) ಇದೆ. Every 14 days ಗೆ payment ಮಾಡಬೇಕು. Every 14 days ಗೆ payment ಮಾಡಲು ನಮ್ಮ ಸಕ್ಕರೆ ಕಾರ್ಖಾನೆ 250 ಕೋಟಿ ರೂಪಾಯಿಗಳನ್ನು ಕೊಡಬೇಕು. ನಾವು well in advance ಸಾಲ ತೆಗೆದುಕೊಂಡು ಬಂದು ಅವರಿಗೆ payment ಮಾಡಬೇಕು. ಅದಕ್ಕೆ ನಿಖರವಾಗಿ every 14 days ಗೆ payment ಮಾಡುತ್ತೇವೆ. ಇನ್ನೂ ಒಂದು ದಿವಸ ಮೊದಲೇ payment ಮಾಡುತ್ತೇವೆ. ರೈತರಿಗೆ ಒಂದು ವರ್ಷದವರೆಗೆ ಕಬ್ಬಿಗೆ fair and remunerative price ಸಿಗಲಿಲ್ಲವೆಂದರೆ, ರೈತರು ಏನು ಮಾಡಬೇಕು? ರೈತರು ಗೊಬ್ಬರದ ಅಂಗಡಿ, ಅರಿವೆ ಅಂಗಡಿ, ಕಿರಾಣಿ ಅಂಗಡಿ, ಬೀಜದ ಅಂಗಡಿಯಲ್ಲಿ ಸಾಲ ಮಾಡಿರುತ್ತಾರೆ. ಜೊತೆಗೆ ಮಾನ್ಯ ಸಭಾಪತಿಯಂತಹವರ ಬಳಿ ಸಾಲ ತೆಗೆದುಕೊಂಡಿರುತ್ತಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ನನ್ನ ಕಬ್ಬು ನಿಮ್ಮ ಕಡೆಗೆ ನೋಡುತ್ತಿದೆ. ನಿಮ್ಮ ಕಬ್ಬು ನಿಮ್ಮ ಕಡೆಗೆ ನೋಡುತ್ತಿದೆ.

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, FRP fix ಮಾಡಿ 14 days ಗೆ payment ಮಾಡುವಂತೆ ಮಾಡಿ. ನಮ್ಮ ದೇಶದ ರೈತರು ಸಾಲದಲ್ಲಿ ಹುಟ್ಟಿದ್ದಾರೆ. ಸಾಯುವ ಮುನ್ನ ಸಾಲದಲ್ಲಿ ಸಾಯುತ್ತಾರೆ. ಕಬ್ಬು ಬೆಳೆಗಾರರು ಆರ್ಥಿಕವಾಗಿ ಸುಸ್ಥಿತಿಗೆ ಬಂದಿದ್ದಾರೆಂದು ಹೇಳುತ್ತಾರೆ. ಅದಕ್ಕೆ ಈ payment ಅನ್ನು ಸರಿಮಾಡಿಸುವಂತಹ ವ್ಯವಸ್ಥೆ ಮಾಡಿ. Weighbridge ಹಾಕಿ. ಈ premium ನಲ್ಲಿ ಸರ್ಕಾರದ್ದು ಸ್ವಲ್ಪ ಪಾಲು ಇರಲಿ. ಇದನ್ನು ಮಾನ್ಯ ಸಚಿವರು ಮಾಡಿದರೆ, ಅವರು ಇತಿಹಾಸದ ಪುಟದಲ್ಲಿ ಅಜರಾಮರರಾಗಿ ಉಳಿಯುತ್ತಾರೆ. ಅಲ್ಲದೇ ಮಾನ್ಯ ಸಚಿವರು ಇನ್ನಷ್ಟು ಎತ್ತರಕ್ಕೆ ಬೆಳೆಯುತ್ತಾರೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಒಂದು clarification ಅನ್ನು ಕೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರು ಪ್ರಧಾನ ಮಂತ್ರಿ 'ಫಸಲ್ ಬಿಮಾ ಯೋಜನೆ' ಬಗ್ಗೆ ಹೇಳಿದ್ದಾರೆ. ಫಸಲ್ ಬಿಮಾ ಯೋಜನೆಯಲ್ಲಿ ಮಾಡುವಂತಹ insurance ನಲ್ಲಿ ಏಕೆ ತಾರತಮ್ಯ ಮಾಡುತ್ತಾರೆ? Sugarcane ಗೆ ಏಕೆ ತಾರತಮ್ಯ? Cotton ಗೆ ಏಕೆ ತಾರತಮ್ಯ? Chilli ಗೆ ಏಕೆ ತಾರತಮ್ಯ? Vegetables ಗೆ ಏಕೆ ತಾರತಮ್ಯ? ಇಲ್ಲಿ ತಾರತಮ್ಯ ಮಾಡುವಂತಹ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ, ಒಂದು ಎಕರೆ ಜಮೀನಿನಲ್ಲಿ ಬ್ಯಾಡಗಿ ಮೆಣಸಿನ ಕಾಯಿ ಬೆಳೆ ಬೆಳೆದರೆ, ಸುಮಾರು 10 ಕ್ವಿಂಟಾಲ್ ಬರುತ್ತದೆ. 10 ಕ್ವಿಂಟಾಲ್ ಬಂದರೆ, ಒಂದು ಕ್ವಿಂಟಾಲ್ ಸುಮಾರು 16 ರಿಂದ 17 ಸಾವಿರ ರೂಪಾಯಿಗಳಿಗೆ ಮಾರಾಟವಾಗುತ್ತದೆ. ಅಲ್ಲಿಗೆ ಸುಮಾರು ರೂ.1,70,000/- ಆಗುತ್ತದೆ. ಇದೇ sugarcane on an average ಒಂದು ಎಕರೆಯಲ್ಲಿ ಬೆಳೆದರೆ 40-50 tonnes ಬರುತ್ತದೆ. 50 tonnes ಗೆ Rs.3,000 per ton ಇಟ್ಟರೂ ಸಹ Rs.1,50,000/- ಆಗುತ್ತದೆ. ಇದು Rs.1,60,000/- ಆಗುತ್ತದೆ. ಇದಕ್ಕೆ ಏಕೆ burden ಆಗುವುದಿಲ್ಲ? ಅದಕ್ಕೆ ಏಕೆ burden ಆಗುತ್ತದೆ? ಇದರಲ್ಲಿ cropping pattern system ಇದೆ. ನಾವು ಫಸಲ್ ಬಿಮಾ ಯೋಜನೆಯಲ್ಲಿ ಕಟ್ಟುವಂತಹ insurance ನ ಹಣವನ್ನು ಯಾರು ಸಹ ಪೂರ್ತಿ ಕೊಡುವುದಿಲ್ಲ. ಒಂದು ವೇಳೆ, cost input ಕೊಟ್ಟರೆ ಅದೊಂದು ದೊಡ್ಡ ದೈವ. ನಾವು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೀಜ ಮತ್ತು ಗೊಬ್ಬರಕ್ಕೆ ಖರ್ಚು ಮಾಡಿರುವಷ್ಟು ಕೊಡಬಹುದಷ್ಟೇ. All India level ನಲ್ಲಿರುವಂತಹ ದೊಡ್ಡ ದೊಡ್ಡ ಕಂಪನಿಗಳಿಗೆ ಒಪ್ಪಿಸಿರುತ್ತಾರೆ. ಅವರು ಏನು ಮಾಡುತ್ತಾರೆಂದರೆ, cropping pattern ಮಾಡಿ ಒಂದೊಂದು ಹೋಬಳಿಯಲ್ಲಿ ಮಾಡಿ ಇಷ್ಟು minimum ಎಂದು fix ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, ಅವರು ಹೇಳುವಂಥದ್ದು, ನನಗೆ ತಿಳಿದಮಟ್ಟಿಗೆ ಅಷ್ಟೊಂದು ಸಮಂಜಸವಲ್ಲ. ಮಾನವ ಬೆಳೆಯುವಂತಹ ಪ್ರತಿಯೊಂದು ಬೆಳೆಗೆ 'ಫಸಲ್ ಬಿಮಾ ಯೋಜನೆಯ' insurance ಸರ್ಕಾರದಿಂದ ಆಗಬೇಕು. ಏಕೆಂದರೆ, ಎಲ್ಲಾ ಬೆಳೆಗಳಿಗೂ insurance ಬೇಕಾಗಿದೆ. ಕಳೆದ ಎರಡು ವರ್ಷಗಳಿಂದ ಬೆಳಗಾವಿ ಜಿಲ್ಲೆಯಲ್ಲಿ vegetables ಬೆಳೆ ಬಂದಿಲ್ಲ. ಯಾವ ಬೆಳೆಯೂ ಸಹ ಸರಿಯಾಗಿ ಬಂದಿಲ್ಲ. ಅಲ್ಲದೇ, ರೈತರಿಗೆ ಹೊಡೆತದ ಮೇಲೆ ಹೊಡೆತ ಬೀಳುತ್ತಿದೆ. ಮಳೆ ಮೇಲೆ ಮಳೆಯಾಗುತ್ತಿದೆ. ಹಾಗಾಗಿ, ಎಲ್ಲಿ ಫಸಲ್ ಬಿಮಾ ಬಂದಿದೆ ಹೇಳಿ? Cost of input ಸಹ ಕೊಡುತ್ತಿಲ್ಲ. ನಾವು ಫಸಲ್ ಬಿಮಾ ಯೋಜನೆಗೆ ಹಣ ಕಟ್ಟಿದ್ದೇವೆ. ಆದರೆ, ಯಾವುದೇ ಹಣ ಬಂದಿಲ್ಲ. Total loss ಆಗಿದೆ. ಅದಕ್ಕೆ ಕಟ್ಟುವುದು loss, ಬೆಳೆ ಸಹ loss ಆಗಿದೆ. ಸುಮ್ಮನೆ 10 ಸಾವಿರ ರೂಪಾಯಿ ಹಿಡಿದುಕೊಳ್ಳುತ್ತಾರೆ. ಆದರೆ, ಅದು ಬರುವುದಿಲ್ಲ. ಇದು ಬರುವುದಿಲ್ಲ. ಏಕೆಂದರೆ, ಮಳೆಯಾದ ಸಂದರ್ಭಗಳಲ್ಲಿ ಸರಿಯಾದ ಸಮಯಕ್ಕೆ ಅಧಿಕಾರಿಗಳು ಬಂದು ನೋಡುವುದಿಲ್ಲ. ಅಧಿಕಾರಿಗಳು ಅದರ ಆದೇಶ ಮಾಡುವಷ್ಟರಲ್ಲಿ 20 ದಿವಸಗಳು ಆಗಿರುತ್ತವೆ. ಅಷ್ಟರಲ್ಲಿ ರೈತರು ಆ ಜಮೀನಿನಲ್ಲಿ ಬೇರೆ ಬೆಳೆಯನ್ನು ಇಟ್ಟಿರುತ್ತಾರೆ. ಏಕೆಂದರೆ, ರೈತರು ಬದುಕಬೇಕಲ್ಲವೇ; ಅಧಿಕಾರಿಗಳು ಬರುವವರೆಗೆ ರೈತರು ಕಾದುಕೊಂಡು ಕುಳಿತಿರಬೇಕೇ? ಮಾನ್ಯ ಸಭಾಪತಿಯವರೇ, ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತೇನೆ. ಈ ಸದನ ಮುಗಿಯುವುದರೊಳಗೆ ಯಾವಾಗಲಾದರೂ ಒಂದು ಅಥವಾ ಎರಡು ಗಂಟೆಗಳ ಕಾಲ agriculture and irrigation ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲವೆಂದರೆ, ಎಲ್ಲಾ ರೈತರು ಸತ್ತೇ ಹೋಗುತ್ತಾರೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರೇ, BAC meeting ನಲ್ಲಿ ತೀರ್ಮಾನ ಮಾಡೋಣ. ಮಾನ್ಯ ಸಚಿವರೇ ತಾವೀಗ ಮಾತನಾಡಿ.

**ಶ್ರೀ ಶಂಕರ್ ಬ. ಪಾಟೀಲ ಮುನೇನಕೊಪ್ಪ (ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಹಿರಿಯ ಸದಸ್ಯರಾಗಿರುವಂತಹ ಶ್ರೀ ಎಸ್.ಆರ್.ಪಾಟೀಲ್‌ರವರು, ಶ್ರೀ ಲಕ್ಷ್ಮಣ ಸಂಗಪ್ಪ ಸವದಿಯವರು, ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ethanol ಮತ್ತು weighbridge ಬಗ್ಗೆ ಹಾಗೂ ರೈತರಿಗೆ ಕಬ್ಬಿನ ಬಿಲ್ಲು ಬಾಕಿ ಇರುವ ಬಗ್ಗೆಯೂ ಸಹ ಹೇಳಿದ್ದಾರೆ. ಮೊದಲನೆಯದಾಗಿ, ತಮ್ಮ ಮೂಲಕ ಅವರಿಗೆ ವೈಯಕ್ತಿಕವಾಗಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರದ್ದು ಇದೇ ಅವಧಿ ಕೊನೆಯಾಗಬಾರದೆಂದು ನನ್ನ ಕಳಕಳಿಯ ಮನವಿ. ಅವರು ಮುಂದೆಯೂ ಸಹ ಈ ಸದನದಕ್ಕೆ ಬರಬೇಕು. ಏಕೆಂದರೆ, ನಾವು ಇಲ್ಲಿರುವಂತಹ ಬಹಳಷ್ಟು ಸದಸ್ಯರು ಕಳೆದ 30-40 ವರ್ಷಗಳಿಂದ ಒಟ್ಟಾಗಿ ಇದ್ದೇವೆ. ಅವರು ಯಾವುದಾದರೊಂದು ದಾರಿಯಿಂದ ಮತ್ತೆ ಈ ಸದನಕ್ಕೆ ಬರಬೇಕು ಎನ್ನುವುದು ನನ್ನ ಮನವಿ. ಇದು ನನ್ನ ಮನದಾಳದ ಮಾತು. ತಾವು ಈಗಾಗಲೇ ಪ್ರಸ್ತಾಪ ಮಾಡಿರುವಂತಹ ಬಿಲ್ಲು ಪಾವತಿಯ ಬಗ್ಗೆ ಒಂದು ಸಭೆಯನ್ನು ಮಾಡಿದ್ದೇನೆ. 2020-21 ನೇ ಸಾಲಿನಲ್ಲಿ ಬಾಕಿ ಇರುವಂತಹ ಸರ್ಕಾರದ್ದು ಇರಬಹುದು ಅಥವಾ ಖಾಸಗಿಯಲ್ಲಿರುವಂತಹ ಎಲ್ಲಾ ಫ್ಯಾಕ್ಟರಿಗಳಿಂದ ರೈತರಿಗೆ ಬಿಲ್ಲು ಕೊಡಿಸುವಂತಹ ಮೊದಲನೆ ಕೆಲಸವನ್ನು ನಾನು ಮಾಡಿದ್ದೇನೆ. ಅದು ತಮಗೂ ಗೊತ್ತಿರಬೇಕು. ತಮ್ಮ ಫ್ಯಾಕ್ಟರಿಯವರು ಸಹ ಆ ಸಭೆಯಲ್ಲಿ ಭಾಗವಹಿಸಿದ್ದರು. ಬಹಳ ಒಂದು ದಿಟ್ಟ ನಿರ್ಣಯವನ್ನು ಮಾಡಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸಚಿವರ ಬಗ್ಗೆ ವಿಶ್ವಾಸ, ನಂಬಿಕೆ ಇದೆ ಎಂದು ಕೆಲವು ಸಲಹೆಗಳನ್ನು ಹೇಳಿದ್ದೇನೆ. ಇಲ್ಲವೆಂದರೆ ಮಾಡುತ್ತಿರಲಿಲ್ಲ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಶಂಕರ್ ಬ. ಪಾಟೀಲ ಮುನೇನಕೊಪ್ಪ:-** ಮಾನ್ಯ ಸಭಾಪತಿಯವರೇ, ನಾನು ಅವರ ಸಲಹೆಗಳನ್ನು ಖಂಡಿತವಾಗಿ ಸ್ವೀಕಾರ ಮಾಡುತ್ತೇನೆ. ಮಾನ್ಯ ಸದಸ್ಯರಾದ ಲಕ್ಷ್ಮಣ್ ಸಂಗಪ್ಪ ಸವದಿಯವರು ಸಹ ethanol ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. Ethanol ಮತ್ತು ಸಕ್ಕರೆಗೆ ಸಂಬಂಧಪಟ್ಟಂತೆ ಅವರ ಸ್ವಂತ ಅನೇಕ ಕಾರ್ಖಾನೆಗಳು ಇರುವುದರಿಂದ, ನಮ್ಮ ಸರ್ಕಾರದಿಂದ ethanol production ಗೆ ಯಾವ ರೀತಿಯ ಪ್ರೋತ್ಸಾಹ ಕೊಡಬೇಕು, ethanol production ಅನ್ನು ಮಾಡುವಂತಹ ಸಕ್ಕರೆ ಕಾರ್ಖಾನೆಗಳು ಏನಿವೆ, ಗೋವಿನ ಜೋಳ ಇರಬಹುದು, ಇರಬಹುದು, ethanol production ಅನ್ನು ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಜೊತೆಗೆ ಚರ್ಚೆ ಮಾಡಿ ಇದಕ್ಕೆ ಸರಿಯಾದಂತಹ ರೀತಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ethanol production ಗೆ ಪ್ರೋತ್ಸಾಹ ನೀಡುವಂತಹ ಕೆಲಸವನ್ನು ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಬಸವರಾಜ ಪಾಟೀಲ್ ಇಟಗಿಯವರು ಬೆಳೆಯ ವಿಮೆಯ ಬಗ್ಗೆ ಮಾತನಾಡಿದ್ದಾರೆ. ಇವತ್ತಿನ ದಿವಸ ಕೃಷಿ ಬಗ್ಗೆ ರೈತರು ಬೆಳೆದಿರುವಂತಹ ಅನೇಕ ಬೆಳೆಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ, ಮತ್ತೆ ಮೊದಲು ಹೋಬಳಿ ಮಟ್ಟದಲ್ಲಿ ಸರ್ವೆಯಾಗುತ್ತಿತ್ತು. ಅನ್ವೇರಿ ಆಗುತ್ತಿತ್ತು. ಅದು ಗ್ರಾಮ ಮಟ್ಟಕ್ಕೆ ಬಂತು. ಗ್ರಾಮ ಮಟ್ಟದಿಂದ ಹೊಲಕ್ಕೇ ಬಂದಿದೆ. Application ಮೂಲಕ ಇವತ್ತಿನ ದಿವಸ download ಮಾಡುವಂತಹ ಹೊಸ ತಂತ್ರಜ್ಞಾನವನ್ನು ಬಳಕೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, insurance ಅನ್ನು ಹಿಂದೆ ಯಾವ ರೀತಿ ಮಾಡುತ್ತಿದ್ದರು ಎಂದರೆ, ಹೋಬಳಿ ಮಟ್ಟದಲ್ಲಿ ಸರ್ವೆಯಾಗುತ್ತಿತ್ತು. ಇದು ತಮಗೂ ಗೊತ್ತಿದೆ. Insurance ಗೆ ಸತತವಾಗಿ ಹೋರಾಟ ಮತ್ತು ಬೆಳೆ ವಿಮೆ ಬಗ್ಗೆ ನಮ್ಮ ಕಡೆಗೆ ಏನೇನು ಮಾಡಿದ್ದೇವೆಂದು ಮಾನ್ಯ ಸಭಾಪತಿಗಳಾದ ತಮಗೂ ಗೊತ್ತಿದೆ. Crop insurance ಗಾಗಿ ಪಾಲಿಸಿಗಳನ್ನು ಬದಲು ಮಾಡುವಂಥದ್ದು. ಹೋಬಳಿ ಮಟ್ಟದಲ್ಲಿ ಸರ್ವೆಗಳು ಆಗುವಂಥದ್ದು ಬದಲಾಗಿ ಈಗ ಗ್ರಾಮ ಮಟ್ಟಕ್ಕೆ ಬಂದಿದೆ. ಈಗ ಗ್ರಾಮ ಮಟ್ಟದಿಂದ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಹೊಲಗಳಿಗೆ ಬಂದಿದೆ. ಇವತ್ತಿನ ದಿವಸ ನಾನು ಬೆಳೆದ ಬೆಳೆಯನ್ನು ನಾನೇ application download ಮಾಡುವ ಮುಖಾಂತರವಾಗಿ ಪಾರದರ್ಶಕವಾಗಿ ಇರಬೇಕು. ಇವತ್ತು ರೈತನಿಗೆ ಅನ್ಯಾಯವಾಗದ ರೀತಿಯಲ್ಲಿ ಬೆಳೆ ವಿಮೆ ಪಾಲಸಿಯನ್ನು ತರಬೇಕು ಎನ್ನುವಂತಹ ಉದ್ದೇಶದಿಂದ ಬಹಳ ವರ್ಷಗಳಿಂದಲೂ ಸಹ, ಕೇಂದ್ರದಲ್ಲಿ ಕೃಷಿ ಸಚಿವರಾಗಿದ್ದ ಶ್ರೀ ಶರದ್ ಪವಾರ್‌ರವರನ್ನು ಸಹ ನಾನು ಆ ಸಂದರ್ಭದಲ್ಲಿ ಭೇಟಿಯಾಗಿದ್ದೆ. ಕಳೆದ 15 ವರ್ಷಗಳ ಹೋರಾಟದ ಫಲವಾಗಿ ಏನಾಗಿದೆ ಎಂದರೆ, ಹೋಬಳಿ ಮಟ್ಟದಿಂದ ಗ್ರಾಮ ಮಟ್ಟಕ್ಕೂ ಗ್ರಾಮ ಮಟ್ಟದಿಂದ ನೇರವಾಗಿ ರೈತರ ಹೊಲಗಳಿಗೆ application download ಮಾಡುವಂತಹ ಒಂದು ಹೊಸ ಪದ್ಧತಿಯನ್ನು ತೆಗೆದುಕೊಂಡು ಬಂದಿದ್ದೇವೆ. ರೈತರು ಬೆಳೆದಿರುವಂತಹ ಯಾವ ಯಾವ ಬೆಳೆಗಳನ್ನು ಬೆಳೆ ವಿಮೆ ಪಾಲಿಸಿಯಲ್ಲಿ ತರಬೇಕು ಎನ್ನುವುದನ್ನು ಒಂದು ಬಾರಿ ಹಿರಿಯ ಸದಸ್ಯರ ಜೊತೆಗೆ ಚರ್ಚೆ ಮಾಡಿದರೆ ಒಳ್ಳೆಯದು. ಏಕೆಂದರೆ ರಾಜ್ಯ ಸರ್ಕಾರ ಸಹ ರೈತರ ಪರವಾಗಿ ಇರುವಂತಹ ಸರ್ಕಾರವಾಗಿರುವುದರಿಂದ ಇದರ ಬಗ್ಗೆ ಚರ್ಚೆಯಾದರೆ ಇನ್ನೂ ರೈತರಿಗೆ ಬಹಳ ಅನುಕೂಲವಾಗುತ್ತದೆ. ಅಲ್ಲದೇ, ಇದಕ್ಕೆ ನಮ್ಮ ಇಲಾಖೆಯಿಂದಲೂ ಸಹ ಸಂಪೂರ್ಣವಾದಂತಹ ಸಹಕಾರವನ್ನು ಕೊಡುತ್ತೇನೆ.

**(ಮುಂದು)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**(1053) 13-12-2021 (4.30) ಎಂವಿ-ಜಿಆರ್**

**(ಸಭಾಪತಿಯವರ ಉಪಸ್ಥಿತಿ)**

**ಇ) ವಿಷಯ: ಕೃಷಿ ಉದ್ದೇಶಕ್ಕಾಗಿ ಬಳಸುವ ಭೂಮಿಯ ಸರ್ವೆ ನಂಬರ್‌ಗಳ ಕನಿಷ್ಠ ವಿಸ್ತೀರ್ಣವನ್ನು ಕೊಡಗು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೂರು ಗುಂಟೆಗೆ ನಿಗದಿಪಡಿಸಿ, ಇನ್ನುಳಿದ ಜಿಲ್ಲೆಗಳಲ್ಲಿ ಐದು ಗಂಟೆಗೆ ನಿಗದಿಪಡಿಸಿರುವುದರಿಂದ ಸಣ್ಣ ಹಿಡುವಳಿ ಜಮೀನು ಹೊಂದಿರುವ ರೈತರುಗಳು ವಿಭಾಗ ಮಾಡಿಕೊಳ್ಳಲು ಹಾಗೂ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲದಿರುವುದರಿಂದ ದಿನಾಂಕ:12.11.2021ರ ಆದೇಶ ಸಂಖ್ಯೆ:ಕಂ.ಇ.85 ಭೂದಾನ 2018ನ್ನು ಹಿಂದಕ್ಕೆ ಪಡೆಯುವ ಬಗ್ಗೆ.**

- - - - -

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೃಷಿ ಉದ್ದೇಶಕ್ಕಾಗಿ ಬಳಸುವ ಭೂಮಿಯ ಸರ್ವೆ ನಂಬರ್‌ಗಳ ಕನಿಷ್ಠ ವಿಸ್ತೀರ್ಣವನ್ನು ಕೊಡಗು, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮೂರು ಗುಂಟೆಗೆ ನಿಗದಿಪಡಿಸಿ, ಇನ್ನುಳಿದ ಜಿಲ್ಲೆಗಳಲ್ಲಿ ಐದು ಗಂಟೆಗೆ ನಿಗದಿಪಡಿಸಿರುವುದರಿಂದ ಸಣ್ಣ ಹಿಡುವಳಿ ಜಮೀನು ಹೊಂದಿರುವ ರೈತರುಗಳು ವಿಭಾಗ ಮಾಡಿಕೊಳ್ಳಲು ಹಾಗೂ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲದಿರುವುದರಿಂದ ದಿನಾಂಕ:12.11.2021ರ ಆದೇಶ ಸಂಖ್ಯೆ:ಕಂ.ಇ.85 ಭೂದಾನ 2018ನ್ನು ಹಿಂದಕ್ಕೆ ಪಡೆಯುವ ಕುರಿತು ಮಾನ್ಯ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರ ಹಾಗೂ ಸಣ್ಣ ನೀರಾವರಿ ಸಚಿವರು) (ಕಂದಾಯ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರಿಗೆ ಬಹಳ ವಿವರವಾದ ಉತ್ತರವನ್ನು ನೀಡಿದ್ದೇವೆ. ಅವರಿಗೆ ಉತ್ತರ ಕೊಡಬೇಕಾದರೆ, this is inbuilt in the Land Revenue Act. ಅಲ್ಲಿರುವಂತಹ ಅಧಿಕಾರಿ ಕನಿಷ್ಠ ಎಷ್ಟು ಪ್ರಮಾಣದ ಜಾಗಕ್ಕೆ ರಿಜಿಸ್ಟ್ರೇಷನ್ ಮಾಡುವುದಕ್ಕೆ ಅಡಚಣೆ ಮಾಡಬಹುದು ಎಂದು. ಈ ಎರಡು ಭಾಗದಲ್ಲಿ ನಮಗೆ ಏನಾಗಿದೆ ಎಂದರೆ,, ಒಂದು ಸೆಂಟ್, ಎರಡು ಸೆಂಟ್ಸ್, ಒಂದು ಗುಂಟೆ ಮತ್ತು ಎರಡು ಗುಂಟೆಯನ್ನು ಮಾರಾಟ ಮಾಡಿ, ಅದನ್ನು ಅವರು ಸೈಟ್ ಆಗಿ ಪರಿವರ್ತಿಸಿಕೊಂಡು ಬಿಲ್ಡಿಂಗ್ ಕಟ್ಟುವುದು ಮತ್ತು without alienation ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದು, single site ಆಗುತ್ತಿವೆ ಎಂದು ಹೇಳಿಬಿಟ್ಟು. Alienation ಮಾಡಬೇಕಾದರೆ, ಒಂದು ಗುಂಟೆ, ಎರಡು ಗುಂಟೆ ಮತ್ತು ಮೂರು ಗುಂಟೆ ಎಂದು ಈ ರೀತಿ ಮಾಡುವುದಕ್ಕೆ ಹೋದರೆ, ಅದು ಟೌನ್ ಪ್ಲ್ಯಾನಿಂಗ್‌ನ ವ್ಯಾಪ್ತಿಗೆ ಬರುವುದಿಲ್ಲ. ಆಗ ಅವರಿಗೆ ನಾಗರಿಕ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುವುದಿಲ್ಲ ಎಂಬ ಕಾರಣಕ್ಕೆ ಆ fragmentation ಅನ್ನು stop ಮಾಡಬೇಕು ಎಂಬುದು ಸರ್ಕಾರದ ಉದ್ದೇಶ. ಇದು ಆ ಕಾಯ್ದೆಯಲ್ಲಿಯೇ ಇದೆ. The Revenue Authority can decide. ಅಂದರೆ, ಯಾವ್ಯಾವ ಭಾಗದಲ್ಲಿ minimum ಎಷ್ಟು protect ಮಾಡಬೇಕು ಎಂದು. ಹಾಗಾಗಿ, ಸರ್ಕಾರಕ್ಕೆ ಬೇರೆ ಉದ್ದೇಶವಿಲ್ಲ. ಅವರು alienation ಮಾಡಬಹುದು. That alienation is free of cost ಎಂದು ಹೇಳಿದ್ದೇವೆ. ಅಂತಹ ಕಡೆಗಳಲ್ಲಿ free of cost alienation ಅನ್ನು ಕೊಡುತ್ತೇವೆ. ನೀವು ಅದನ್ನು ಮಾಡಿಕೊಂಡು ಮಾರಾಟ ಮಾಡಿಕೊಳ್ಳಿ, ಎಂದು. ಇದು ಮಾನ್ಯ ಸದಸ್ಯರು ಹೇಳಿದ ಹಾಗೆ partition ಗೆ affect ಮಾಡುವುದಿಲ್ಲ. ಅವರು partition ಆಗಬಹುದು. ಈಗ ಮೂರು ಗುಂಟೆ ಜಮೀನು ಇದ್ದಾಗ ಅವರು ಒಂದೂವರೆ ಗುಂಟ, ಒಂದೂವರೆ ಗುಂಟೆ ಎಂದು partition ಮಾಡಬಹುದು. ಆದರೆ, ಮಾರಾಟ ಮಾಡುವುದಕ್ಕೆ ನಿರ್ಬಂಧವಿದೆ. ಅಂದರೆ, ಅವುಗಳ ಮಾರಾಟಕ್ಕೆ ರಿಜಿಸ್ಟ್ರೇಷನ್ ನಿಲ್ಲಿಸಿದ್ದೇವೆ. ಇದರ ಒಂದೇ ಉದ್ದೇಶವೆಂದರೆ, ಇವುಗಳನ್ನೆಲ್ಲಾ ಸೈಟ್‌ಗೋಸ್ಕರ ತೆಗೆದುಕೊಳ್ಳುತ್ತಿದ್ದಾರೆ. ಅವರು ಸೈಟ್ ಮಾಡಿಕೊಳ್ಳದೆ, ಕೇವಲ revenue land ಅನ್ನು ತೆಗೆದುಕೊಂಡು ಕಟ್ಟಿಕೊಂಡು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋದರೆ, ಆಮೇಲೆ ಸರ್ಕಾರ ಅವರಿಗೆ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ ಎಂಬುದು ಇದರ ಹಿಂದಿನ ಉದ್ದೇಶವನ್ನು ಬಿಟ್ಟರೆ, ಬೇರೆ ಏನೂ ಅನಾನುಕೂಲ ಮಾಡಬೇಕು ಅನ್ನುವಂಥದಲ್ಲ. ಅದನ್ನು ತೆಗೆದುಕೊಳ್ಳುವವರಿಗೆ ಸೈಟ್ ಮಾಡಲೇಬೇಕೆಂದು ಇದ್ದರೆ, ಅಂತಹವರು ಅದನ್ನು alienation ಮಾಡಿ ತೆಗೆದುಕೊಳ್ಳಬಹುದು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ಆದೇಶದ ಮೇಲೆ ಮಂಡ್ಯ ಜಿಲ್ಲೆಯ ಅಸಿಸ್ಟೆಂಟ್ ಕಮೀಷನರ್‌ಗೆ ಒಂದು ಪತ್ರ ಬರುತ್ತದೆ. ಒಂದು ಹಳ್ಳಿಯ ನಿಯೋಗದವರು ಅದನ್ನು ನನಗೆ ತಂದು ಕೊಟ್ಟರು. 1964ರ ಕರ್ನಾಟಕ ಭೂ ಕಂದಾಯ  ಅಧಿನಿಯಮದ ಕಲಂ 108ರ ಅನ್ವಯ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಿಗೆ ಮೂರು ಗುಂಟೆ ಜಮೀನಿಗೆ ಪೋಡ್ ಮಾಡುವುದಕ್ಕೆ ಮಿತಿ ಮಾಡಿದ್ದಾರೆ. ಉಳಿದ ಭಾಗಗಳಿಗೆ ಐದು ಗುಂಟೆ ಎಂದು ಮಿತಿ ಮಾಡಿದ್ದಾರೆ. ನಾನು ಮಾನ್ಯ ಸಚಿವರ ಬಳಿ ಒಂದು ಮೂಲಭೂತವಾದ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನನಗೆ ಮಾನ್ಯ ಕಂದಾಯ ಸಚಿವರೇ ಇರಬೇಕಾಗಿತ್ತು. ಸುಮಾರು 200-300 ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಗ್ರಾಮಠಾಣಾ ಇತ್ತು. ಅದರ ವಿಸ್ತಾರ ಎಲ್ಲಿ ಆಗಿದೆ? ಅವರು ದೊಡ್ಡ ದೊಡ್ಡ ನಗರಗಳಿಗೆ ಅಭಿವೃದ್ಧಿ ಪ್ರಾಧಿಕಾರಗಳನ್ನು ಮಾಡಿಕೊಂಡಿದ್ದಾರೆ. ಐದು-ಹತ್ತು ವರ್ಷಗಳಿಗೆ ಹೊಸ ಹೊಸ ಯೋಜನೆಗಳನ್ನು ಮಾಡುತ್ತಾರೆ. ಮಾಸ್ಟರ್ ಪ್ಲ್ಯಾನ್ ಎಂದು ಮಾಡಿಕೊಳ್ಳುತ್ತಾರೆ. ಅದನ್ನು ಯೋಜನಾ ವ್ಯಾಪ್ತಿಗೆ ತರುತ್ತಾರೆ. ಅದು ಸರಿಯಿದೆ. ಹಾಗಾದರೆ, ನಮ್ಮ ಹಳ್ಳಿಗಳ ಕಥೆ ಏನು? ಹಳ್ಳಿಗಳಿಗೆ 250 ರಿಂದ 300 ವರ್ಷಗಳಾಗಿವೆ. ಈಗ ಮಗ, ಮೊಮ್ಮಗ ಮತ್ತು ಮರಿ ಮೊಮ್ಮಕ್ಕಳು ಬರುತ್ತಿದ್ದಾರೆ. ಅವರು ಮನೆಯನ್ನು ಕಟ್ಟಬೇಕು. ಅದಕ್ಕೆ ಇವರು ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತಾರ ಮಾಡುತ್ತಿಲ್ಲ. ಇದು ನಮಗೆ ಅರ್ಥವಾಗುತ್ತಿಲ್ಲ. ಅವರು ಇರುವಂತಹ ಹೊಲದ ಜಾಗದಲ್ಲಿ ಒಬ್ಬರಿಗೆ ಮೂರು ಗುಂಟೆ ಮತ್ತೊಬ್ಬರಿಗೆ ಐದು ಗುಂಟೆ ಜಾಗ ಕೊಡುತ್ತಾನೆ. ಆಗ ಅವರು ಅಲ್ಲಿ ಮನೆ ಕಟ್ಟಿಕೊಳ್ಳುತ್ತಾರೆ. ಈ ರೀತಿಯ ದಂಧೆ ನಗರ ಪ್ರದೇಶಗಳಲ್ಲಿ ಇದೆ. ಅದಕ್ಕೆ ಒಂದು ಮಿತಿ ಹಾಕಿ. ಈಗ ಮೈಸೂರು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಗರ ಹತ್ತು ಕಿಲೋಮೀಟರ್ ವ್ಯಾಪ್ತಿಯೊಳಗೆ ಹೊರತುಪಡಿಸಿ. ಈಗ ಗ್ರಾಮಾಂತರ ಪ್ರದೇಶದ ಜನರಿಗೆ ಏಕೆ ಈ ರೀತಿಯ ತೊಂದರೆ? ಈಗ ನಮ್ಮ ಕಡೆಗಳಲ್ಲಿ ಕೀರೆ ಮಡಿ ಎಂದು ಇದೆ. ಈಗ ಕೀರೆ ಮಡಿಗಳಲ್ಲಿ ಅವರು ನಾಲ್ಕರಿಂದ ಐದು ಗುಂಟೆಗಳಲ್ಲಿ ಐವತ್ತು ಗುಳಿ ವಿಳ್ಯದೆಲೆಯನ್ನು ಬೆಳೆಯುತಾರೆ. ಅವರು ಅಲ್ಲಿ ಕೀರೆ ಸೊಪ್ಪು ಮತ್ತು ದಂಟಿನ ಸೊಪ್ಪು ಹಾಕುತ್ತಾರೆ. ಮೂಲಂಗಿ, ಟೊಮೆಟೊ ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ಅವುಗಳಿಗೆ ನೀರನ್ನು ಬಾವಿಯಿಂದ ಸೇದಿಕೊಂಡು ಹಾಕುತ್ತಾರೆ. ಈ ತರಹದ ವ್ಯವಸ್ಥೆ ಇದೆ. ಇವತ್ತಿಗೂ ಈ ರಾಜ್ಯದಲ್ಲಿ ಶೇಕಡಾ 52ರಷ್ಟು ಜನರಿಗೆ ಭೂಮಿ ಇಲ್ಲ. ಭೂಮಿ ಇಲ್ಲದ ಜನರು ಇದ್ದಾರೆ. ಶೇಕಡಾ 47 ರಿಂದ 48ರಷ್ಟು ಜನರು ಭೂಮಿ ಹೊಂದಿರುವವರು ಇದ್ದಾರೆ. ಈಗ ಹಳ್ಳಿಗಳಲ್ಲಿ ಅಷ್ಟು ಎಕರೆ, ಇಷ್ಟು ಎಕರೆ ಎನ್ನುವುದು ಹೊರಟು ಹೋಗಿದೆ. ಈಗ ನಮ್ಮ ನೀರಾವರಿ ಭಾಗಗಳಲ್ಲಿ ಗುಂಟೆಗಳ ಲೆಕ್ಕದಲ್ಲಿವೆ. ಈ ರೀತಿಯ ದಂಧೆ ನಡೆಯುವುದು ನಗರ ಪ್ರದೇಶಗಳಲ್ಲಿ. ಅದು ಹಳ್ಳಿಗಳಲ್ಲಿ ಅಲ್ಲ. ನಮ್ಮಲ್ಲಿ ಅನಿವಾರ್ಯವಾದರೆ ಮಾತ್ರ ಅವರು ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಅವರು ತಾಲ್ಲೂಕು ಕೇಂದ್ರಗಳಿಗೆ ನಿರ್ಬಂಧ ಮಾಡಲಿ. ಅದನ್ನು ಹಳ್ಳಿಯವರಿಗೆ ಏಕೆ ಮಾಡುತ್ತಾರೆ? ಈಗ ನಗರ ಪ್ರದೇಶಕ್ಕೆ ಹತ್ತು ಕಿಲೋಮೀಟರ್ ವ್ಯಾಪ್ತಿಗೆ ನಿರ್ಬಂಧ ಮಾಡಲಿ. ಅದಕ್ಕೆ ನಮಗೆ ಚಿಂತೆಯಿಲ್ಲ. ಅವರು ಉಳಿದ ಹಳ್ಳಿಯವರಿಗೆ ಏಕೆ ತೊಂದರೆ ಕೊಡುತ್ತಾರೆ. ಅವರು ತರಕಾರಿಯನ್ನು ಬೆಳೆದುಕೊಂಡಾದರೂ ಊಟ ಮಾಡಿಕೊಂಡು ಇರಬೇಕಲ್ಲವೇ? ಮತ್ತೊಬ್ಬ ತರಕಾರಿ ಬೆಳೆಯುವುದಕ್ಕೆ ಮೂರರಿಂದ ನಾಲ್ಕು ಗುಂಟೆ ಜಾಗವನ್ನು ತೆಗೆದುಕೊಳ್ಳುತ್ತಾನೆ. ಈಗ ಆ ನಾಲ್ಕು ಗುಂಟೆ ಜಾಗ ಕಡಿಮೆ ಏನು ಅಲ್ಲ. ಈಗ ಐದು ಗುಂಟೆಯಲ್ಲಿ ವಿಳ್ಯದೆಲೆ ತೋಟ ಮಾಡಿ, ಪ್ರತಿ ಭಾನುವಾರ ಅದನ್ನು ಸಂತೆಗೆ ತಂದು ಹಾಕಿ, ಅವನು ಇಡೀ ಕುಟುಂಬವನ್ನು ಸಾಕುತ್ತಾನೆ. ನಮ್ಮಲ್ಲಿ ಆ ರೀತಿಯ ಪರಿಸ್ಥಿತಿ. ಈ ರೀತಿಯ ದಂಧೆ ನಡೆಯುವುದು ನಗರ ಪ್ರದೇಶಗಳಲ್ಲಿ. ಒಂದು ಕಿಲೋಮೀಟರ್ ಗೆ ಇಷ್ಟು ಎಂದು ಅವರು ನಗರ ಪ್ರದೇಶಗಳಿಗೆ ಮಿತಿ ಮಾಡಲಿ. ಅದನ್ನು ಇಡೀ ರಾಜ್ಯಕ್ಕೆ ಅನ್ವಯ ಮಾಡಿಬಿಟ್ಟರೆ, ಹಳ್ಳಿಯವರ ಕಥೆ ಹೇಗೆ? ಹಾಗಾಗಿ ನನ್ನ ಮನವಿ ಏನಿದೆ ಎಂದರೆ, ದಯವಿಟ್ಟು ತಾವು ಏನು ಮಾಡುತ್ತೀರೋ ಗೊತ್ತಿಲ್ಲ.

---

ಗ್ರಾಮೀಣ ಪ್ರದೇಶಗಳ ಗ್ರಾಮಠಾಣಾ ವ್ಯಾಪ್ತಿಯನ್ನು ಕೂಡಲೇ ವಿಸ್ತರಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತೆಗೆದುಕೊಳ್ಳಲೇಬೇಕಾಗುತ್ತದೆ. ಏಕೆಂದರೆ, ನಗರ ಪ್ರದೇಶದ ಜನರು ಮಾತ್ರ ಮನುಷ್ಯರು. ಹಾಗಾದರೆ, ಹಳ್ಳಿಯವರು ಮನುಷ್ಯರು ಅಲ್ಲವೇ? ಹಳ್ಳಿಯವರು ಸಹ ಮನೆಯನ್ನು ಕಟ್ಟಿಕೊಳ್ಳಬೇಕಲ್ಲವೇ? ಅವರು ಏನು ಮಾಡದಿದ್ದರೂ ಸಹ ಹಳ್ಳಿ ವಿಸ್ತಾರವಾಗಿಬಿಟ್ಟಿದೆ. ಅದಕ್ಕೂ ಸಹ ಅವರು ಏನಾದರೂ ಯೋಜನಾಬದ್ಧ ಸ್ವರೂಪವನ್ನು ಕೊಡಬೇಕಲ್ಲವೇ? ದಯಮಾಡಿ ಅದರ ಬಗ್ಗೆಯೂ ಸಹ ಚಿಂತೆ ಮಾಡಲಿ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನ್ನದು ಒಂದೇ ಒಂದು ಸಲಹೆ ಅಷ್ಟೇ. ಈ ತುಂಡು ಭೂಮಿ ಕಾಯ್ದೆಯೊಳಗೆ ಏನಾಗುತ್ತದೆಂದರೆ, ಈಗ ನನಗೆ ಮೂರು ಗುಂಟೆ ಜಮೀನು ಇದೆ ಎಂದು ತಿಳಿದುಕೊಳ್ಳಿ. ನಾವು ಇಬ್ಬರು ಅಣ್ಣ-ತಮ್ಮಂದಿರು ಇದ್ದೇವೆ. ನಾವು ಒಂದೂವರೆ ಗುಂಟೆ, ಒಂದೂವರೆ ಗುಂಟೆ ಜಮೀನನ್ನು ಹಂಚಿಕೊಂಡು, ನಾವು alienation ಕೊಟ್ಟು, ಅದು single site. ಈಗ ನನಗೆ ಬೇರೆ ದಾರಿಯೇ ಇಲ್ಲ. ನಾನು ಆ ಜಮೀನನ್ನು ಮಾರಲೇ ಬೇಕು. ಆಗ ನಾನು ಏನು ಮಾಡುವುದು. ನನ್ನ ಜೀವನವನ್ನು ಮುಂದುವರೆಸಿಕೊಂಡು ಹೋಗಬೇಕು. ಆಗ ಅದನ್ನು ಮಾರಿಕೊಳ್ಳಲೇಬೇಕು. ನೀವು ಅಂತಹವರಿಗೆ margin ಕೊಡಬೇಕು. ಈಗ ಈ ಕಾನೂನನ್ನು ಯಾರಿಗೋಸ್ಕರ ತಂದಿದ್ದಾರೆಂದರೆ, ಈಗ ಎರಡು ಎಕರೆ ಜಮೀನು ಇದೆ. ನಾನು ಆ ಎರಡು ಎಕರೆ ಜಮೀನನ್ನು alienation ಮಾಡಿ, ಅದನ್ನು ನಿವೇಶನಕ್ಕೆ ಪರಿವರ್ತಿಸಿದರೆ, ನಾಗರಿಕ ಸೌಲಭ್ಯಕ್ಕೋಸ್ಕರವೆಂದು 44+44=88 ಸಾವಿರ ಅಡಿ ಹೋಗುತ್ತದೆ. ಇನ್ನು ಒಂದು ಎಕರೆ 43 ಸಾವಿರ ಅಡಿ ಉಳಿಯುತ್ತದೆ. ಅಂದರೆ, ಎರಡು ಎಕರೆ alienation ಮಾಡಿ ಸೈಟ್ ಮಾಡಿದರೆ, ಅದರಲ್ಲಿ ಅರ್ಧಕ್ಕರ್ಧ ಹೋಗುತ್ತದೆ. ಆಗ ಏನು ಮಾಡುತ್ತಾರೆಂದರೆ, ಐದೈದು ಗುಂಟೆಯನ್ನು ಕಟ್ ಮಾಡಿ, alienation ಮಾಡಿ, ಮಾರಾಟ ಮಾಡಿದರು. ಇಂತಹವರು ಈ ರೀತಿ ಮಾಡಿರುವುದಕ್ಕೋಸ್ಕರ ಇದನ್ನು ತಂದು. ಪಾಪ ಯಾರೋ ಪರದೇಶಿ ಮೂರು ಗುಂಟೆ ನಾಲ್ಕು ಗುಂಟೆ ಜಮೀನು ಇಟ್ಟುಕೊಂಡಿರುತ್ತಾರಲ್ಲ, ಅಂತಹವರಿಗೆ ಇದರಿಂದ ತೊಂದರೆಯಾಗುತ್ತದೆ. ಇದರ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗುತ್ತದೆ. ಈಗ ಈ ರೀತಿ ತುಂಡು ಭೂಮಿ ಮಾಡಿಕೊಂಡು, ಮಾರಿಕೊಂಡು ಹೋಗುತ್ತಾರಲ್ಲ ಅಂತಹವರಿಗೆ ಇದು ಮಾಡಿರುವುದು ಸರಿಯಿದೆ. ಸದಸ್ಯರಾದ ಮಾನ್ಯ ನಾರಾಯಣಸ್ವಾಮಿಯವರು ಸಿಟಿಯಲ್ಲಿ ದೊಡ್ಡ landlord ಅವರನ್ನು ಕೇಳಿ. ಹಾಗಾಗಿ, ವಿಶೇಷವಾಗಿ ಹಳ್ಳಿಗಳಲ್ಲಿ ಅವರು ಮಾರಿಕೊಂಡು ಹೋಗುವುದಾದರೆ, ಮಾರಿಕೊಂಡು ಹೋಗಲಿ. ನೀವು ಅದಕ್ಕೆ ಒಂದು ಅವಕಾಶ ಮಾಡಿಕೊಡಬೇಕಾಗುತ್ತದೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:--** ಮಾನ್ಯ ಸಭಾಪತಿಯವರೇ, ನಾವು ಇದರ ಉದ್ದೇಶವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಮಾನ್ಯ ಎಸ್.ಎಲ್.ಭೋಜೇಗೌಡರು ಸಹ ಅದಕ್ಕೆ ಸಹಮತಿ ವ್ಯಕ್ತಪಡಿಸಿದ್ದಾರೆ. ಈಗ ಒಂದೊಂದು ಗುಂಟೆ, ಎರಡು ಗುಂಟೆ ಭೂಮಿಯನ್ನು ಪೀಸ್ ಮಾಡಿ. ಕಂದಾಯ ನಿವೇಶನವನ್ನು ಮಾಡಿಕೊಂಡು ಹೋದರೆ, ನಾವು ಅಲ್ಲಿಗೆ ಟೌನ್ ಪ್ಲ್ಯಾನಿಂಗ್ ಅನ್ನು ಅನ್ವಯಿಸುವುದಕ್ಕೆ ಆಗುವುದಿಲ್ಲ ಮತ್ತು ಅವರಿಗೆ ನಾಗರಿಕ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, ಅವರೇ alienation ಮಾಡಿಕೊಂಡು, ಮಾರಬಹುದು ಎಂದು provision ನೀಡಿದ್ದೇವೆ. ಅವರಿಗೆ alienation ಕೂಡ free of cost ಮಾಡಿಕೊಡುತ್ತೇವೆ. If you want to convert it as a site, please ಮಾಡಿಕೊಳ್ಳಿ ಮತ್ತು ಮಾರಿಕೊಳ್ಳಿ ಎಂದು ಹೇಳಿದ್ದೇವೆ. ಅವರು ಹೇಳಿದ ಹಾಗೆ ಅದು partition ಗೆ ಅನ್ವಯಿಸುವುದಿಲ್ಲ. ಅದು ಎಷ್ಟಾದರೂ fragment ಆಗಬಹುದು. ಈಗ ಇರುವ ಪ್ರಶ್ನೆ ಮೂರು ಗುಂಟೆ ಮತ್ತು ನಾಲ್ಕು ಗುಂಟೆಯನ್ನು ಒಂದೊಂದು ಗುಂಟೆ ಮಾಡಿ, ಅದನ್ನು ಮಾರುತ್ತಾರೆ. ಇದರಿಂದ ಯಾರೋ ಒಬ್ಬರಿಗೆ ರಸ್ತೆ ಬಿಡುವುದಿಲ್ಲ. ಇನೊಬ್ಬರಿಗೆ throughway ಇರುವುದಿಲ್ಲ. ಈಗ ಸೈಟ್‌ಗಳನ್ನು ಮಾಡುತ್ತಾ ಹೋದರೆ, how will the Gram Panchayath or rural area administration will solve this problem ಎನ್ನುವ ಉದ್ದೇಶದಿಂದ fragmentation ಅನ್ನು ರಿಜಿಸ್ಟರ್ ಮಾಡಬೇಡಿ ಎನ್ನುವುದನ್ನು ಬಿಟ್ಟರೆ, ಸದಸ್ಯರಾದ ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಹೇಳಿದ ಹಾಗೆ, ನಿಜವಾದ ರೈತರು ಅದನ್ನು ನಿಜವಾಗಿ ಕೃಷಿಗೆ ಬಳಸುತ್ತಾರೆಂದರೆ, ನನಗೆ ಏನೂ ಅದರಲ್ಲಿ ಅಡಚಣೆ ಕಾಣುವುದಿಲ್ಲ. ಅದಕ್ಕೆ ನಾನು

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಕಂದಾಯ ಸಚಿವರ ಮುಖಾಂತರ ನಿರ್ದೇಶನ ಕೊಡಿಸುತ್ತೇನೆ. If it is for a bonafide agriculture use, no problem. ನನಗೆ ಅದು ಸಮಸ್ಯೆ ಎಂದು ಅನಿಸುವುದಿಲ್ಲ. ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅದು bonafide agricultural use ಗೆ ಹೋಗುವುದರಿಂದ, ಸರ್ಕಾರಕ್ಕೆ ಏನು ತೊಂದರೆ ಅನಿಸುವುದಿಲ್ಲ. ಆದರೆ, ಶೇಕಡಾ 99ರಷ್ಟು ಏನಾಗಿದೆ ಎಂದರೆ, ಒಂದು ಗುಂಟೆ ಮತ್ತು ಎರಡು ಗುಂಟೆ ಇದನ್ನು ಎಲ್ಲರೂ ಮನೆ ಕಟ್ಟುವುದಕ್ಕೆ ಮತ್ತು ಸೈಟ್‌ಗೋಸ್ಕರ ಮಾಡಿಕೊಳ್ಳುತ್ತಿದ್ದಾರೆ. ತಮಗೆ ಗೊತ್ತಿರುವಂತೆ ಹಾಸನದಲ್ಲಿ ಅದು ದೊಡ್ಡ ಹಗರಣವಾಯಿತು. ಇಡೀ ಹಾಸನವನ್ನು ಟೌನ್ ಪ್ಲ್ಯಾನಿಂಗ್ ಮಾಡುವುದಕ್ಕೆ ಆಗಿರಲಿಲ್ಲ. ಐದೈದು ಗುಂಟೆ ಮತ್ತು ಹತ್ತತ್ತು ಗುಂಟೆ ಎಂದು, less than 20 guntas ಆಗಿಬಿಟ್ಟರೆ ಟೌನ್ ಪ್ಲ್ಯಾನಿಂಗ್ ಅಡಿ ಬರುವುದಿಲ್ಲವೆಂದು ಮಾಡಿಬಿಟ್ಟರು. ಈಗ ಯಾರ ಜಮೀನನ್ನು ತೆಗೆದುಕೊಂಡರು ಸಹ 20 ಗುಂಟೆ ಒಳಗೆ ಇರುತ್ತದೆ. ಅದು 20 ಗುಂಟೆಯನ್ನು ಮೀರುವುದೇ ಇಲ್ಲ. ಈಗ ಟೌನ್ ಪ್ಲ್ಯಾನಿಂಗ್‌ಗೆ ಬಂದರೆ, ಅವರು ಶೇಕಡಾ 45 ರಿಂದ 55ರವರೆಗೆ ಸರ್ಕಾರಕ್ಕೆ surrender ಮಾಡಬೇಕಾಗುತ್ತದೆ. ಕಟ್ ಮಾಡು ಮಾರು, ಕಟ್ ಮಾಡು ಮಾರು, ಅಲ್ಲಿ ಸೈಟ್ ಮಾಡಿ, ಹೋಗು ಎನ್ನುವಂತಹ ಸ್ಥಿತಿ ನಿರ್ಮಾಣವಾದಾಗ, ರಾಜ್ಯದಲ್ಲಿ ಹೇಗೆ ಪ್ಲ್ಯಾನ್ ಮಾಡುವುದಕ್ಕೆ ಆಗುತ್ತದೆ ಮತ್ತು alienation ಮಾಡುವುದಕ್ಕೆ ಆಗುತ್ತದೆ. ಅದಕ್ಕೆ ಈ ನಿರ್ಬಂಧವನ್ನು ಹೇರಿದ್ದಾರೆ. ಈಗ ವಿಶೇಷ ಪ್ರಕರಣಗಳಿದ್ದರೆ, ಅವರಿಗೆ ಅಧಿಕಾರವಿದೆ. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ, our Land Revenue Officers will consider the issue. ಎರಡನೆಯದಾಗಿ, extension of ಗ್ರಾಮತಾಣಾ ಎಂದು ಹೇಳಿದರು. ಈಗ ಗ್ರಾಮತಾಣಾದ ಪಕ್ಕದ ಜಮೀನುಗಳಲ್ಲಿ alienation ಮನೆ ಕಟ್ಟಬೇಡಿ ಎಂದು ಯಾರೂ ಹೇಳಿಲ್ಲ. ಅವರು alienation ಮಾಡಿ ಮನೆಯನ್ನು ಕಟ್ಟಿಸಿಕೊಳ್ಳಬಹುದು. ಆದರೆ, ನಾವು acquire ಮಾಡುವುದಕ್ಕೆ ಆಗುತ್ತಿಲ್ಲ. ಈಗ ಎಲ್ಲಿ ಸರ್ಕಾರಿ ಜಾಗವಿಲ್ಲ, ಎಲ್ಲಿ land less ಮತ್ತು site less ಎಂದು ಇದ್ದಾರೆ, ಅಲ್ಲಿ ಏನಾದರೂ ಜಾಗವಿಲ್ಲ ಎನ್ನುವಂತಹ ಕಡೆಗಳಲ್ಲಿ, ಅಲ್ಲಿ ಜಾಗವನ್ನು acquire ಮಾಡಿ, ಸೈಟ್‌ಗಳನ್ನು form ಮಾಡಿ ಕೊಡುತ್ತಿದ್ದೇವೆ. ಅದಕ್ಕೆ ನಾವೇ ಪೇಮೆಂಟ್ ಸಹ ಮಾಡುತ್ತಿದ್ದೇವೆ. ಅವರು ಜಿಲ್ಲಾಧಿಕಾರಿಗಳಿಗೆ ಒಂದು ಅರ್ಜಿ

ಕೊಟ್ಟರೆ, site less ನವರಿಗೆ ನಾವು housing ನಲ್ಲಿ ತೆಗೆದುಕೊಳ್ಳುತ್ತೇವೆ. ಈಗ ಬೇರೆ private ನಲ್ಲಿ ಮನೆ ಕಟ್ಟಬೇಕಾದರೆ, ಅವರು ಅದನ್ನು ಖರೀದಿ ಮಾಡಿ ಮನೆ ಕಟ್ಟಬೇಕು.

**(ಮುಂದು...**

(1054) 13.12.2021 04.40 LL-GR

(ಸಭಾಪತಿಯವರ ಉಪಸ್ಥಿತಿ)

**8. <u>ಪ್ರಕಟಣೆಗಳು</u>**

**ಸಭಾಪತಿಯವರು:-**

ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 222ರ ಮೇರೆಗೆ 144ನೇ ಅಧಿವೇಶನದಲ್ಲಿ ಈ ಕೆಳಕಂಡಂತೆ ರಚಿಸಲಾದ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಪ್ರಸಕ್ತ ಅಧಿವೇಶನಕ್ಕೂ ಮುಂದುವರೆಸಲಾಗಿದೆ.

| ಕ್ರಮ ಸಂಖ್ಯೆ | ಹೆಸರುಗಳು<br>ಶ್ರೀಯುತರುಗಳಾದ | ಸ್ಥಾನ |
|---|---|---|
| 01. | ಎಂ.ಕೆ. ಪ್ರಾಣೇಶ್<br>ಮಾನ್ಯ ಉಪಸಭಾಪತಿಯವರು | ಸದಸ್ಯರು |
| 02. | ಕೋಟ ಶ್ರೀನಿವಾಸ ಪೂಜಾರಿ<br>ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಮತ್ತು ಸಭಾನಾಯಕರು | ಸದಸ್ಯರು |
| 03. | ಎಸ್.ಆರ್. ಪಾಟೀಲ್<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ನಾಯಕರು | ಸದಸ್ಯರು |

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

| | | |
|---|---|---|
| 04. | ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ<br>ವಿಧಾನ ಪರಿಷತ್ತಿನ ಮಾನ್ಯ ಸರ್ಕಾರಿ ಮುಖ್ಯ ಸಚೇತಕರು | ಸದಸ್ಯರು |
| 05. | ಎಂ. ನಾರಾಯಣಸ್ವಾಮಿ<br>ವಿಧಾನ ಪರಿಷತ್ತಿನ ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು | ಸದಸ್ಯರು |
| 06. | ಕೆ. ಪ್ರತಾಪಚಂದ್ರ ಶೆಟ್ಟಿ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 07. | ಮರಿತಿಬ್ಬೇಗೌಡ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 08. | ಬಿ.ಕೆ. ಹರಿಪ್ರಸಾದ್<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |
| 09. | ಶಶೀಲ್ ಜಿ. ನಮೋಶಿ<br>ವಿಧಾನ ಪರಿಷತ್ತಿನ ಸದಸ್ಯರು | ಸದಸ್ಯರು |

**<u>ವಿಶೇಷ ಆಹ್ವಾನಿತರು</u>**

| | | |
|---|---|---|
| 1. | ಶ್ರೀ ಬಸವರಾಜ ಬೊಮ್ಮಾಯಿ | ಮಾನ್ಯ ಮುಖ್ಯಮಂತ್ರಿಗಳು |
| 2. | ಶ್ರೀ ಜೆ.ಸಿ. ಮಾಧುಸ್ವಾಮಿ | ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು |

**ಮಾನ್ಯ ಸಭಾಪತಿಯವರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ.**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಮಾನ್ಯ ಸಭಾಪತಿಯವರ ಸ್ಥಾನದಲ್ಲಿ ಪದಧಾರಣ ಮಾಡಲು ಈ ಮುಂದಿನ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲಾಗಿದೆ.

**01. ಡಾ: ತೇಜಸ್ವಿನಿ ಗೌಡ**

**02. ಶ್ರೀ ಕೆ.ಟಿ. ಶ್ರೀಕಂಠೇಗೌಡ**

**03. ಶ್ರೀಮತಿ ಭಾರತಿಶೆಟ್ಟಿ**

**04. ಶ್ರೀಮತಿ ವೀಣಾ ಅಚ್ಚಯ್ಯ**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

## 9. ನಿಯಮ 330ರ ಮೇರೆಗೆ ಚರ್ಚೆ

**(ಅ)ವಿಷಯ**:-ಸರ್.ಎಂ. ವಿಶ್ವೇಶ್ವರಯ್ಯ 2ನೇ ಹಂತ ಬಡಾವಣೆ ರಚನೆಗಾಗಿಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಉಲ್ಲಾಳ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ಜಮೀನುಗಳ ಭೂ ಮಾಲೀಕರಿಗೆ ಪರಿಹಾರ ನೀಡದಿರುವ ವಿಷಯದ ಕುರಿತು

\- - - - - -

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುವುದಿಲ್ಲ. ಆದರೆ, ಮಾನ್ಯ ಕಾನೂನು ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ನಾನೇ ಉತ್ತರ ನೀಡುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಈ ವಿಷಯದ ಬಗ್ಗೆ ನನಗೆ ಮಾಹಿತಿ ಇದೆ. ಹಾಗಾಗಿ, ನಾನೇ ಉತ್ತರ ನೀಡುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಉಲ್ಲಾಳು ಗ್ರಾಮದ ಶ್ರೀ ಬಿ. ಕೃಷ್ಣಮೂರ್ತಿಯವರ ಸರ್ವೆ ನಂ.14 ರಿಂದ 23, 51, 52, 53ರಲ್ಲಿ ಜಮೀನುಗಳನ್ನು ಸರ್.ಎಂ. ವಿಶ್ವೇಶ್ವರಯ್ಯ 2ನೇ ಹಂತದ ಬಡಾವಣೆ ರಚನೆಗಾಗಿ 2001-02ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ, ಭೂಮಾಲೀಕರು 2002ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಸಂಖ್ಯೆ:1853/2003ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ದಿನಾಂಕ:03.09.2004ರ ಆದೇಶದಲ್ಲಿ ಪ್ರಶ್ನಿತ ಭೂಸ್ವಾಧೀನ ಪ್ರಕ್ರಿಯೆಯನ್ನು

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರದ್ದುಗೊಳಿಸಿ, ಅಧಿಸೂಚನೆಯನ್ನು ಹಿಂಪಡೆಯುವಂತೆ ಭೂಮಾಲೀಕರ ಪರವಾಗಿ ತೀರ್ಪು ನೀಡಿದೆ. ತದನಂತರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು(ಸಮಿತಿ ಸಭೆಯ ಠರಾವು ಸಂಖ್ಯೆ126/2005)ಸೇರಿ ಸದರಿ ಜಮೀನಿನಲ್ಲಿ ಅವಶ್ಯವಿರುವ ಜಮೀನನ್ನು ರಸ್ತೆ ಉಪಯೋಗಕ್ಕಾಗಿ ಮಾತ್ರ ಬಳಸಿಕೊಂಡು ಉಳಿದ ಜಮೀನನ್ನು ಕೈಬಿಡಲು ತೀರ್ಮಾನಿಸಲಾಗಿದೆ. ಅದರಂತೆ, ಪ್ರಾಧಿಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಪರಿಹಾರ ಹಣವನ್ನು ಸಿವಿಲ್ ನ್ಯಾಯಾಲಯಕ್ಕೆ ಜಮಾ ಮಾಡಿ, ನಂತರ ಸಿವಿಲ್ ನ್ಯಾಯಾಲಯದಿಂದ ಭೂಪರಿಹಾರ ಹಣವನ್ನು ವಿಶೇಷ ಭೂಸ್ವಾಧೀನಾಧಿಕಾರಿಯವರು ಹಿಂಪಡೆದು ದಿನಾಂಕ:11.11.2008ರಂದು ಸದರಿ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡಲಾಗಿದೆಯೆಂದು ಹಿಂಬರಹ ಸಹ ನೀಡಿರುತ್ತಾರೆ. ಇದರ ಆಧಾರದ ಮೇಲೆ ಭೂಮಾಲೀಕರು ಸದರಿ ಜಮೀನುಗಳನ್ನು ದಿನಾಂಕ:11.11.2008ರಂದು ಭೂ ಪರಿವರ್ತನೆ ಮಾಡಿ, ಬಿ.ಬಿ.ಎಂ.ಪಿ. ಕಂದಾಯ ಪರಿಮಿತಿಯೊಳಗೆ ತಂದಿರುತ್ತಾರೆ.

**(ಈ ಹಂತದಲ್ಲಿ ವೈಸ್ ಚೇರ್ಮನ್‌ರವರಾದ ಡಾ: ತೇಜಸ್ವಿನಿ ಗೌಡರವರು ಸಭಾಪೀಠವನ್ನು ಅಲಂಕರಿಸಿದರು)**

ಮುಂದುವರೆದು, 2015ರಲ್ಲಿ ಭೂಮಾಲೀಕರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ, ಸದರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಟ್ಟಿರುವುದನ್ನು ಗೆಜೆಟ್ ಪ್ರಕಟಣೆ 48(1) ಅಧಿಸೂಚನೆ ಹೊರಡಿಸುವಂತೆ ಕೋರಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:33742-33757/2015ರಂದು ಆದೇಶವಾಗಿರುತ್ತದೆ. ನಂತರ ಮಾನ್ಯ ಉಚ್ಚ ನ್ಯಾಯಾಲಯದ ಆದೇಶಗಳನ್ನು ಪ್ರಶ್ನಿಸಿ, ಸರ್ಕಾರವು ರಿಟ್ ಅಪೀಲು ಸಲ್ಲಿಸಿದ್ದು (ಸಂಖ್ಯೆ:4563/2016) ಸದರಿ ಜಮೀನಿನಲ್ಲಿ ರಸ್ತೆ, ಚರಂಡಿ ಮತ್ತು ಕೆಲವು ನಿವೇಶನಗಳನ್ನು ನಿರ್ಮಿಸಿದ್ದು, ಸದರಿ ಜಮೀನಿಗೆ ಪರಿಹಾರ ನೀಡುತ್ತೇವೆಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಮತ್ತು ಭೂಮಾಲೀಕರೊಂದಿಗೆ ಒಡಂಬಡಿಕೆ ಮಾಡಿಕೊಂಡು ಜಂಟಿ ಮೆಮೋವನ್ನು ಕೋರ್ಟ್‌ಗೆ ಸಲ್ಲಿಸಿರುತ್ತಾರೆ. ಕೋರ್ಟ್‌ಗೆ ಸಲ್ಲಿಸಿರುವ ಜಂಟಿ ಮೆಮೋನಲ್ಲಿ ಸದರಿ ಮೇಲ್ಮನವಿಯನ್ನು ಹಿಂಪಡೆದು,

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಪ್ರಕರಣವನ್ನು ಇತ್ಯರ್ಥಗೊಳಿಸಿ 02 ತಿಂಗಳಿನಲ್ಲಿ (ದಿನಾಂಕ:09.10.2018 ರ ಸರ್ಕಾರದ ಆದೇಶದಂತೆ) ಭೂಮಾಲೀಕರಿಗೆ ಮಾರುಕಟ್ಟೆ ಮೌಲ್ಯದಂತೆ ಪರಿಹಾರ ನೀಡುತ್ತೇವೆಂದು ತಿಳಿಸಿರುತ್ತಾರೆ. ಇಷ್ಟೆಲ್ಲಾ ಪ್ರಕ್ರಿಯೆ ಆಗಿದ್ದರೂ ಇದುವರೆವಿಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಭೂಮಾಲೀಕರಿಗೆ ಯಾವುದೇ ಪರಿಹಾರ ನೀಡದೇ ತುಂಬ ಅನ್ಯಾಯವಾಗಿದೆ. ಈ ಹಿಂದೆ ಕಳೆದ ಅಧಿವೇಶನದಲ್ಲಿ ಚರ್ಚೆ ಆಗಿದ್ದು, ಮಾನ್ಯ ಮಂತ್ರಿಗಳು 15 ರಿಂದ 30 ದಿವಸದೊಳಗೆ ಪರಿಹಾರ ಮಾಡುತ್ತೇವೆಂದು, ಕಾನೂನು ಪ್ರಕಾರ ಅವರಿಗೆ ಏನು ಪರಿಹಾರ ಸಿಗಬೇಕೋ ಅದನ್ನು ಮಾಡುತ್ತೇವೆಂದು ಹೇಳಿದ್ದರು. ಆದರೆ, ಅಧಿಕಾರಿಗಳು ಏತಕ್ಕೋ ಗೊತ್ತಿಲ್ಲ, ಇದುವರೆವಿಗೂ ಒಂದು ಹೆಜ್ಜೆ ಮುಂದೆ ಇಟ್ಟಿರುವುದಿಲ್ಲ. ನಾನು ಹೇಳುತ್ತಿರುವುದೇನೆಂದರೆ, ನಾವು ಈ ಸದನದಲ್ಲಿ ಚರ್ಚೆ ಆಗುವಂತಹ ವಿಷಯ ಅಧಿಕಾರಿಗಳಿಗೆ ಕೇಳಿಸುತ್ತದೆಯೋ ಅಥವಾ ಇಲ್ಲವೋ ಎನ್ನುವುದಾಗಿದೆ. ಅಂದರೆ, ಈ ಸದನದಲ್ಲಿ ಏನೇ ತೀರ್ಮಾನವಾಗಿರುವುದಕ್ಕೆ ಅವರು ಜವಾಬ್ದಾರರಲ್ಲವೇ? ಅಂದರೆ, ಸಂಬಂಧಪಟ್ಟ ಮಂತ್ರಿಗಳು ಉತ್ತರ ನೀಡಿದರಷ್ಟೇ ಸಾಕೇ, ಅದೇ ನಮಗೆ ತೃಪ್ತಿನಾ? 2001ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ್ದು, 2002ರಲ್ಲಿ ಅಂತಿಮ ಅಧಿಸೂಚನೆ ಬಂದು, 2004ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಇದನ್ನು ಕೈಬಿಟ್ಟಿದ್ದಾರೆ. ಈಗ 2021ನೇ ಇಸವಿ ಮುಕ್ತಾಯವಾಗುತ್ತಿದ್ದು, 2022ನೇ ವರ್ಷ ಬರುತ್ತಿದೆ. ಈಗಾಗಲೇ ಸುಮಾರು 20 ವರ್ಷಗಳು ಕಾಲ ಅವರು ಕಳೆದಿದ್ದಾರೆ. ಇನ್ನೂ ಆ ರೈತರಿಗೆ ಪರಿಹಾರ ಕೊಡುವುದು ಬೇಡವೇ? ಈ ಬಗ್ಗೆ ಮಾನ್ಯ ಸಚಿವರು ಕಳೆದ ಬಾರಿ ತಮ್ಮ ಕಾಳಜಿಯನ್ನು ವ್ಯಕ್ತಪಡಿಸಿ, “ಇಲ್ಲಾ, ಆ ರೈತರಿಗೆ/ಭೂಮಾಲೀಕರಿಗೆ ಅನ್ಯಾಯವಾಗಿದೆ. ಹಾಗಾಗಿ, ಇನ್ನೂ 15 ರಿಂದ 30 ದಿವಸದೊಳಗೆ ಅವರಿಗೆ ಪರಿಹಾರ ಕೊಡುತ್ತೇವೆ” ಎಂದು ಹೇಳಿರುತ್ತಾರೆ. ಆದರೆ, ಇದುವರೆವಿಗೂ ಆ ಪರಿಹಾರ ನೀಡಿರುವುದಿಲ್ಲ ಮತ್ತು ಈ ಬಗ್ಗೆ ಇದುವರೆವಿಗೂ ಯಾವುದೇ ಕ್ರಮವನ್ನು ಸರ್ಕಾರದ ಅಧಿಕಾರಿಗಳು ಕೈಗೊಂಡಿರುವುದಿಲ್ಲ. ಹಾಗಾಗಿ, ಈ ಬಗ್ಗೆ ಮಾನ್ಯ ಕಾನೂನು ಸಚಿವರು ಉತ್ತರವನ್ನು ಕೊಡುತ್ತಾರೆ, ದಯಮಾಡಿ ಅವರು ಆ ಉತ್ತರವನ್ನು ನೀಡಲಿ. ನಂತರ, ನಾನು ಮಾತನಾಡುತ್ತೇನೆ.

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ,

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಇದರಲ್ಲಿ land acquisition proceedings ಆಯಿತು. ಕೆಲವರು ಸರ್ಕಾರದ ತೀರ್ಮಾನವನ್ನು ಹೈಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದರು. ಬಿ.ಡಿ.ಎ., ನಲ್ಲಿ ಸಿವಿಲ್ ಡಿಪಾಸಿಟ್ ಕೊಟ್ಟು ಜಮೀನು ಭೂಸ್ವಾಧೀನ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿ ಅದರಂತೆ, ನಾವು ಡಿಪಾಟಿಸ್ ಮಾಡಿದೆವು. ಆ ನಂತರ, ಕೋರ್ಟ್‌ನಲ್ಲಿ ಅದನ್ನು relinquish ಮಾಡಿ ಅದು ಬೇಕಾಗಿಲ್ಲ ಎಂದು ಆದೇಶವಾದ ಮೇಲೆ ನಾವು ಡಿಪಾಸಿಟ್ ಮಾಡಿದ್ದಂತಹ ಹಣವನ್ನು ವಿತ್‌ಡ್ರಾ ಮಾಡಿಕೊಂಡಿರುತ್ತೇವೆ. ಆ ನಂತರ, ಕಾರ್ಪೋರೇಷನ್‌ರವರಿಗೆ ರಸ್ತೆ ನಿರ್ಮಿಸುವುದಕ್ಕಾಗಿ ಆ ಜಾಗದಲ್ಲಿ ಸ್ವಲ್ಪ ಜಾಗ ಬೇಕಾಗಿತ್ತು. ಅವರು ಸದರಿ ಜಮೀನು ಹೇಗೋ ಭೂಸ್ವಾಧೀನ ಆಗಿರುವ ಜಾಗ ಎಂದು ಅಲ್ಲಿ ರಸ್ತೆ ಮಾಡುವುದಕ್ಕೆ ಹೋದಾಗ, ಸುಮಾರು extent of land ನಲ್ಲಿ 4 ಚಿಲ್ಲರೆ ಎಕರೆ ಜಾಗಕ್ಕೆ ಭೂಸ್ವಾಧೀನ ಆಗಿದೆಯೇ ಇಲ್ಲವೇ ಎನ್ನುವ ಅಂತಹ dispute ನಲ್ಲಿರುತ್ತದೆ. ನಾವು ಭೂಸ್ವಾಧೀನ ಆಗಿದೆ ಎಂದರೆ, ಅವರಿಗೆ ಪರಿಹಾರ ಕೊಡಬೇಕು. ಒಂದು ವೇಳೆ ಭೂಸ್ವಾಧೀನ ಪ್ರಕ್ರಿಯೆ ಆಗಿಲ್ಲವೆಂದು ಡಿ-ನೋಟಿಫೈ ಮಾಡಬೇಕಾಗಿತ್ತು.

ಈ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ಹೇಳಿದಾಗ, ಅವರನ್ನು ಸಹ ಒಂದು ಸಭೆಗೆ ಆಹ್ವಾನಿಸಿ, ಅಧಿಕಾರಿಗಳೊಂದಿಗೆ ಒಂದು ಸಭೆ ನಡೆಸಿರುತ್ತೇನೆ. ಅದಕ್ಕಾಗಿಯೇ ಈ ಬಗ್ಗೆ ನಾನೇ ಉತ್ತರ ನೀಡುತ್ತೇನೆಂದು ಹೇಳಿರುತ್ತೇನೆ. ನಮ್ಮ ಮುಂದೆ ಯಾವ ಸಮಸ್ಯೆ ಇದೆಯೆಂದರೆ, ಒಂದು ವೇಳೆ ಆ ಜಮೀನನ್ನು ಕೈಬಿಟ್ಟರೆ, ಬಹಳ ಬೆಲೆಬಾಳುವಂತಹ ಜಮೀನನ್ನು ಸರ್ಕಾರ ಶಾಮೀಲಾಗಿ ಡಿ-ನೋಟಿಫೈ ಮಾಡಿ ಕೈಬಿಟ್ಟರು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ ಎನ್ನುವ ಭಾವನೆ ಒಂದು ಕಡೆ. ಮತ್ತೊಂದು ಕಡೆ ಈ ಜಮೀನನ್ನು ಬಳಸಿಕೊಳ್ಳುತ್ತೇವೆಂದು ನಾವು ಅಫಿಡವಿಟ್ ಹಾಕಿರುತ್ತೇವೆ. ಈ ಮಧ್ಯೆ ಅಪೀಲು ಪೆಂಡಿಂಗ್ ಇರುವುದರಿಂದ ಸ್ವತಃ ನಾನೇ ಮಾನ್ಯ ಪುಟ್ಟಣ್ಣನವರ ಸಮಕ್ಷಮದಲ್ಲಿ ಎ.ಜಿ., ಯವರನ್ನು ಕರೆಯಿಸಿಬಿಟ್ಟು ಇದಕ್ಕೆ ಒಂದು ಪರಿಹಾರ ಕಂಡುಹಿಡಿಯಿರಿ, either pay the compensation or de-notify the land, ಇದರಲ್ಲಿ ಕೋರ್ಟ್ ಆದೇಶ ಇರುವುದರಿಂದ ನಮಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ಸೂಚನೆ ಕೊಟ್ಟಿರುತ್ತೇವೆ.

---

ಇದರಲ್ಲಿ ಎ.ಜಿ., ಯವರ ಪ್ರಶ್ನೆ ಏನೆಂದರೆ, "ಈ ಬಗ್ಗೆ ಜಂಟಿ ಮೆಮೋ ಫೈಲ್ ಮಾಡುವುದಕ್ಕೆ ಅವರಿಗೆ ಯಾರು ತಿಳಿಸಿದ್ದಾರೆ" ಎಂಬ ಪ್ರಶ್ನೆ ಉದ್ಭವವಾಗಿರುತ್ತದೆ. ಬಿ.ಡಿ.ಎ., ನವರು ಹೈಕೋರ್ಟ್ ಮುಂದೆ ಸರ್ಕಾರದ ಗಮನಕ್ಕೆ ಬರದ ರೀತಿ ಜಂಟಿ ಮೆಮೋ ಹಾಕಿಬಿಟ್ಟರೆ, ಸರ್ಕಾರ ಕೋರ್ಟ್ ಮುಂದೆ ಯಾವ ಉತ್ತರ ನೀಡಬೇಕೆಂಬ ಜಿಜ್ಞಾಸೆ ಆಗಿರುತ್ತದೆ. ಹಾಗಾಗಿ, ಮಾನ್ಯ ಪುಟ್ಟಣ್ಣನವರೇ, ಈ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆ. ಈ ಬಗ್ಗೆ ತಮ್ಮ ಸಮಕ್ಷಮದಲ್ಲಿ ಸಭೆ ಮಾಡಿ, ಚರ್ಚಿಸುತ್ತೇನೆ. ಹಾಗಾಗಿ, ನಾನು ಈ ದಿನ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇದ್ದರೂ ಸಹ ನಾನೇ ಉತ್ತರ ನೀಡಿರುತ್ತೇನೆಂದು ಹೇಳಿರುತ್ತೇನೆ. ಪ್ರಸ್ತುತ ಇರುವಂತಹ ಅಪೀಲನ್ನು ವಿತ್‌ಡ್ರಾ ಮಾಡುತ್ತೇವೆ. ಒಂದು ಕಡೆ ನಮ್ಮದೇ ಅಪೀಲು ಇದೆ, ಮತ್ತೊಂದು ಕಡೆ ಜಂಟಿ ಮೆಮೋ ಸಹ ಇರುತ್ತದೆ. ಇದರಲ್ಲಿ ನಮ್ಮದೇ contradiction ಇರುವುದರಿಂದ ಅಪೀಲು ವಿತ್‌ಡ್ರಾ ಮಾಡಿಕೊಂಡು ಪರಿಹಾರವನ್ನು ಖಂಡಿತವಾಗಿ ಕೊಡಿಸುತ್ತೇವೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ಸಚಿವರೇ, ಇದರಲ್ಲಿ ಕಾಲಮಿತಿಯನ್ನು ಹೇಳಬಹುದೇ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಈಗಾಗಲೇ 20 ವರ್ಷ ಕಳೆದಿರುತ್ತದೆ. ಅಲ್ಲದೇ, ಈ ಬಗ್ಗೆ ಪ್ರಸ್ತಾಪಿಸಿದಾಗ 15 ರಿಂದ 30 ದಿನಗಳೊಳಗೆ ಪರಿಹಾರ ಕೊಡಿಸುತ್ತೇವೆಂದು ಹೇಳಿದ್ದರು. ಇದರಲ್ಲಿ ಮಾನ್ಯ ಸಚಿವರು ಹೇಳುವುದನ್ನು ಖಂಡಿತವಾಗಿ ಒಪ್ಪಿಕೊಳ್ಳುತ್ತೇನೆ. ಈ ವಿಷಯ ಮಾನ್ಯ ಸಚಿವರಿಗೆ ಸಂಪೂರ್ಣವಾಗಿ ಅರ್ಥವಾಗಿದ್ದು, ಪರಿಹಾರ ಕೊಡಿಸಬೇಕೆಂದು ಇದೆ. ಆದುದರಿಂದ, ಇದರಲ್ಲಿ ದಯವಿಟ್ಟು ಒಂದು ಕಾಲಮಿತಿ ಹೇಳಬೇಕು. ಅಂದರೆ, ಒಂದು ವಾರದಲ್ಲಿ ಪರಿಹಾರ ಕೊಡಿಸುತ್ತಾರೆಯೇ ಅಥವಾ ಈ ಅಧಿವೇಶನ ಮುಗಿಯುವದರೊಳಗೆ ಪರಿಹಾರ ಕೊಡಿಸುತ್ತಾರೆಯೇ? ಇದರಲ್ಲಿ ಮಾನ್ಯ ಸಚಿವರ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲದೇ, ಈ ಬಗ್ಗೆ ಮಾನ್ಯ ಸಚಿವರು ಹೇಳಿರುವ ಎಲ್ಲಾ ವಿಷಯವನ್ನು ಒಪ್ಪಿಕೊಳ್ಳುತ್ತೇನೆ ಹಾಗೂ ಅವರು ಹೇಳಿರುವ ಎಲ್ಲಾ ಉತ್ತರವೂ

ಸರಿಯಿದೆ. ಅದರ ಬಗ್ಗೆ ನನಗೆ ಯಾವುದೇ dispute ಮಾಡುತ್ತಿಲ್ಲ. ಆದರೆ, ಇದರಲ್ಲಿ ಎಷ್ಟು ದಿನಗಳಲ್ಲಿ ಪರಿಹಾರ ಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ನಾಡಿದ್ದು ಸದನಕ್ಕೆ ಹಾಜರಾಗುತ್ತಾರೆ. ಅವರ ಜೊತೆ ಈ ವಿಷಯದ ಬಗ್ಗೆ ಮಾತನಾಡಿ ಮಾನ್ಯ ಪುಟ್ಟಣ್ಣರವರಿಗೆ ಸಮಾಧಾನಕರವಾದ ಉತ್ತರ ಕೊಡಿಸುತ್ತೇನೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ಸಚಿವರೇ, ಈ ಅಧಿವೇಶನದಲ್ಲಿ ಕೊಡುತ್ತೀರಾ?

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಮಾನ್ಯ ಮುಖ್ಯಮಂತ್ರಿಗಳ ಖಾತೆಯಾಗಿದ್ದು, ಈ ಬಗ್ಗೆ ನೇರವಾಗಿ ಹೇಳುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಬಂದ ನಂತರ, ನಾನು ಈ ಬಗ್ಗೆ ಗಂಭೀರವಾಗಿ ಮಾತನಾಡಿ, ಮಾನ್ಯ ಪುಟ್ಟಣ್ಣನವರನ್ನು ಕರೆದುಕೊಂಡು ಹೋಗಿ ಈ ಸಮಸ್ಯೆಯನ್ನು ಪರಿಹರಿಸುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಕಾನೂನು ಸಚಿವರು ಈ ಸದನದಲ್ಲಿ ಉತ್ತರ ಕೊಡಬೇಕು ಎನ್ನುವುದನ್ನು ಬಿಟ್ಟರೆ, ಈ ಕೆಲಸ ಅಧಿಕಾರಿಗಳ ಹಂತದಲ್ಲಿ ಆಗುವಂಥದ್ದಾಗಿದೆ. ಇದು ತಮಗೂ ಸಹ ಗೊತ್ತಿರುತ್ತದೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳನ್ನು ಕಾಯುವ ಅಗತ್ಯ ಇರುವುದಿಲ್ಲ. ಈಗಾಗಲೇ ತಾವು ಹೇಳಿದ ರೀತಿಯಲ್ಲಿ ಈ contradiction ಇರುವುದೇ ಸರ್ಕಾರ ಮತ್ತು ಬಿ.ಡಿ.ಎ., ಮಧ್ಯದಲ್ಲಿ. ಹಾಗಿದ್ದಾಗ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಈ ಸಮಸ್ಯೆಯನ್ನು ಬಗೆಹರಿಸಿದರೆ, ಈ ಕೂಡಲೇ ಅಂದರೆ, ಅರ್ಧ ಗಂಟೆಯಲ್ಲಿಯೇ ಬಗೆಹರಿಸಬಹುದಾಗಿರುತ್ತದೆ. ತಮ್ಮ ಗೊತ್ತಿರುವಂತೆ, ಎ.ಜಿ., ಯವರು ಸಹ, "ಕಡತ ಕಳುಹಿಸಿ ನಾನು ಅದನ್ನು ಸರಿಪಡಿಸಿ ಕೊಡುತ್ತೇನೆ" ಎಂದು ಹೇಳಿರುತ್ತಾರೆ. ಆದರೆ, ಆ ಕಡತ ಅವರ ಬಳಿ ಸಹ ಹೋಗಿರುವುದಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಜೊತೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾತನಾಡಿದರೂ ಸಹ ಈ ಪ್ರಕ್ರಿಯೆ ಆಗಲೇಬೇಕಲ್ಲವೇ? ಅಂದರೆ, ಎ.ಜಿ., ಯವರಿಗೆ ಸರ್ಕಾರದಿಂದ ಕಡತ ಹೋಗಬೇಕು. ಪುನಃ ಅಲ್ಲಿಂದ ಕಡತ ವಾಪಸ್ಸು ಬರಬೇಕು. ದಯಮಾಡಿ, ಅದನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಬಳಿಯಲ್ಲಿಯೇ ಬಿ.ಡಿ.ಎ., ಖಾತೆ ಇರುವುದರಿಂದ ಮುಖ್ಯಮಂತ್ರಿಗಳಿಗೆ ಹೇಳಿ ಈ ಸಮಸ್ಯೆ ಬಗೆಹರಿಸುತ್ತೇವೆಂದು ಹೇಳಿದರೆ, ಇದರಲ್ಲಿ ಸಕಾರಾತ್ಮಕವಾಗಿ ಮಾಡಿಸಿಕೊಡುತ್ತೇವೆಂದಲೇ ಅರ್ಥ. ಈ ಬಗ್ಗೆ ನಾವು ಸಂಬಂಧಪಟ್ಟವರನ್ನು ಕರೆದು ಹೇಳಿದ್ದೇ, ಅವರು ಮಾತನಾಡಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಸಭೆ ಕರೆದು ಅದನ್ನು ಮಾಡಿಸಿಕೊಡುತ್ತೇವೆ. ಸದರಿ ಕೆಲಸವನ್ನು ನಾನು ಮಾಡಿದ್ದೇನೆಂದು ಹೇಳಿದ ಮೇಲೆ ಇನ್ನೂ ಹೇಗೆ ಹೇಳುವುದು?

**ಡಾ: ಕೆ.ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿವಯರೇ, ಈ ವಿಷಯದಲ್ಲಿ ಮಾನ್ಯ ಮಂತ್ರಿಗಳು 'ಗಂಭೀರವಾಗಿ' ಎಂದು ಹೇಳಿದ್ದರಿಂದ ಮಾನ್ಯ ಸದಸ್ಯರಿಗೆ ಅನುಮಾನ ಆಗಿರುತ್ತದೆ.

(ಮುಂದು)

(1055) 13.12.2021 4.50 YL-MD

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ವೈಸ್ ಛೇರ್ಮನ್‌ರವರು:-** ಮಾನ್ಯ ಸದಸ್ಯರೇ, ಮಾನ್ಯ ಸಚಿವರು ಬಗೆಹರಿಸುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಅವರಿಗೆ ವಿಶ್ವಾಸ ಇದೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹೌದು. ಮಾನ್ಯ ಸಚಿವರಿಗೆ ನನ್ನ ಅಭಿನಂದನೆಗಳು. ಒಳ್ಳೆಯ ಉತ್ತರವನ್ನು ನೀಡಿದ್ದಾರೆ. ಧನ್ಯವಾದಗಳು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರಿಗೆ ಹೇಗೆ ಬೇಕೋ ಆ ರೀತಿ ಕೆಲಸವಾಗಿರುತ್ತದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಕಳೆದ 20 ವರ್ಷಗಳಿಂದ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿಲ್ಲ. ನಮ್ಮ ಮನೆ ಬಾಗಿಲಿಗೆ ಆಗಾಗ ಬರುತ್ತಾರೆ, ಅವರಿಗೆ ಏನು ಹೇಳಬೇಕು?

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈಗಲಾದರೂ ಸಮಸ್ಯೆ ಬಗೆಹರಿದಿದೆ ಅಲ್ಲವೇ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ನಾನು ಅಷ್ಟೆಲ್ಲಾ ಹೇಳಿದ್ದು. ಈಗ ಮಾನ್ಯ ಸಚಿವರಿಗೆ ಚೆನ್ನಾಗಿ ಅರ್ಥವಾಗಿರುವುದರಿಂದ ಅವರೇ ಹೇಳಲಿ ಎಂದು ಹೇಳಿದ್ದು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಆ) ವಿಷಯ:-** ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ ಹಾಗೂ ಇನ್ನಿತರೆ ಕಾರಣಗಳಿಂದ ಖಾಲಿಯಾಗಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳನ್ನು ನಿಯಮ ಬಾಹಿರವಾಗಿ ತಿರಸ್ಕರಿಸುತ್ತಿರುವ ಕುರಿತು.

- - - - -

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಸಚಿವರು ಸದನಕ್ಕೆ ಬಂದ ಮೇಲೆ ಚರ್ಚೆಗೆ ತೆಗೆದುಕೊಳ್ಳಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾಳೆ ಹಾಕಿಕೊಳ್ಳಲಿ. ಶಿಕ್ಷಣ ಸಚಿವರು ಬಂದ ಮೇಲೆ ಚರ್ಚೆ ಮಾಡುತ್ತೇವೆ. ಇದು ಬಹಳ burning issue ಆಗಿದೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಮಗೆ ಮಾನ್ಯ ಸಚಿವರೆ ಬರಬೇಕು.

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಸರ್ಕಾರದ ಪರವಾಗಿ ಉತ್ತರ ನೀಡಲು ನಾನು ತಯಾರಿದ್ದೇನೆ.

**ಶ್ರೀ ಅರುಣ ಶಹಾಪುರ:-** ಮಾನ್ಯ ಸಭಾಪತಿಯವರೇ, ನಮಗೆ ಉತ್ತರ ಬೇಡ, ಪರಿಹಾರ ಬೇಕಾಗಿದೆ. ಪರಿಹಾರ ಕಂಡುಕೊಳ್ಳಬೇಕಾಗಿದೆ.

**ವೈಸ್ ಛೇರ್ಮನ್‌ರವರು:-** ಮಾನ್ಯ ಸದಸ್ಯರುಗಳೇ, ಮಾನ್ಯ ಸಚಿವರು ಇಂದಿನ ಗೈರು ಹಾಜರಾತಿ ಕುರಿತು ಅನುಮತಿ ಪಡೆದುಕೊಂಡಿದ್ದಾರೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಆದರೂ ಮಾನ್ಯ ಸಚಿವರ ಸಮ್ಮುಖದಲ್ಲಿಯೇ ಚರ್ಚೆ ಆಗಬೇಕೆನ್ನುವುದು ಮಾನ್ಯ ಸದಸ್ಯರುಗಳ ಒತ್ತಾಯವಾಗಿದೆ. ಇದಕ್ಕೆ ಸರ್ಕಾರದವರು ಏನು ಹೇಳುತ್ತಾರೆ ಕೇಳೋಣ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಜೆ.ಸಿ.ಮಾಧುಸ್ವಾಮಿ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, Rules of Procedure and Conduct of Business ನಲ್ಲಿ ಆ ರೀತಿಯಾಗಿ insist ಮಾಡಲು ಅವಕಾಶ ಇಲ್ಲ. As mentioned in the Rules of Procedure and Conduct of Business, you have to seek the reply from the Government, not from an individual Minister.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಾಧುಸ್ವಾಮಿಯವರ ಮೇಲೆ ನಮಗೆ ಅಪಾರವಾದ ವಿಶ್ವಾಸ ಇದೆ. ಏಕೆಂದರೆ ಎಲ್ಲಾ ಪ್ರಶ್ನೆಗೂ ಅವರ ಹತ್ತಿರ ಉತ್ತರ ಇದೆ.

**ಡಾ: ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆದರೆ ಈ ಪ್ರಶ್ನೆಗೆ ಮಾನ್ಯ ಸಚಿವರಿಂದ ಉತ್ತರ ಬೇಕು.

**ವೈಸ್ ಛೇರ್ಮನ್‌ರವರು:-** ಹಾಗಾದರೆ, ತಮಗೆ ವಿಶ್ವಾಸ ಇದ್ದರೆ ಅವರ ಉತ್ತರವನ್ನು ಒಪ್ಪಿಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಮಗೆ ಉತ್ತರ ಬೇಡ, ಪರಿಹಾರಬೇಕು.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಾಧುಸ್ವಾಮಿಯವರ ವಿದ್ಯುತ್ ಬಗ್ಗೆ ಯಾರಿಗೂ ಅನುಮಾನ ಇಲ್ಲ. ಆದರೆ, ಮಾನ್ಯ ನಾಗೇಶ್‌ರವರು ಈ ವಿಷಯಕ್ಕೆ ಉತ್ತರ ನೀಡಲಿ ಎಂಬುದು ನಮ್ಮ ಆಸೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಇ) ವಿಷಯ:-** ಗ್ರಾಮಗಳಲ್ಲಿರುವ ನ್ಯಾಯಬೆಲೆ ಅಂಗಡಿಗಳು ಗ್ರಾಮದಿಂದ 3-4 ಕಿ.ಮೀ. ದೂರವಿರುವ ಕಾರಣ, ತಾಂಡಾ ಜನರಿಗೆ ಅನಾನುಕೂಲ ಆಗುತ್ತಿರುವುದರಿಂದ ಕನಿಷ್ಠ 100 ರೇಷನ್ ಕಾರ್ಡ್ ಹೊಂದಿರುವ ಪ್ರತಿಯೊಂದು ತಾಂಡಾಗಳಿಗೆ ಒಂದು ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡುವುದಾಗಿ ಘೋಷಣೆ ಮಾಡಿದ್ದರೂ ಸಹ ಸದರಿ ಯೋಜನೆಯನ್ನು ಜಾರಿಗೆ ತಂದಿಲ್ಲದಿರುವ ಬಗ್ಗೆ.

- - - - -

**ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಡಿಯಲ್ಲಿ ಬರುವ ಗ್ರಾಹಕರ ನ್ಯಾಯಬೆಲೆ ಅಂಗಡಿಗಳ ಬಗ್ಗೆ ರಾಜ್ಯದಲ್ಲಿ ಕೆಲವು ಸಮಸ್ಯೆಗಳು ಮತ್ತು ಅವ್ಯವಸ್ಥೆಗಳು ಕಂಡುಬಂದಿದ್ದು, ರಾಜ್ಯದ ಸಾವಿರಾರು ಗ್ರಾಮಗಳಲ್ಲಿ ಆಯಾ ಗ್ರಾಮಗಳಿಗೆ ಒಳಪಡುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳಿವೆ, ಭೋವಿ ಹಟ್ಟಿಗಳು, ಲಂಬಾಣಿ ತಾಂಡಾಗಳಿವೆ. ಇವರೆಲ್ಲರೂ ಈ ಗ್ರಾಮದಿಂದ 3-4 ಕಿ.ಮೀ ದೂರವಿದ್ದು, ಅಲ್ಲಿನ ಜನರು ನ್ಯಾಯಬೆಲೆ ದಿನಸಿಯನ್ನು ತರಬೇಕಾದರೆ 3-4 ಕಿ.ಮೀ. ದೂರದಿಂದ ಬಂದು ತೆಗೆದುಕೊಳ್ಳಬೇಕಾಗಿರುತ್ತದೆ. ಇದರಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ, ಭೋವಿ ಹಟ್ಟಿ ಮತ್ತು ಲಂಬಾಣಿ ತಾಂಡಾಗಳ ಜನರಿಗೆ ತುಂಬಾ ಅನಾನುಕೂಲಗಳು ಆಗುತ್ತಿದ್ದು ಸರ್ಕಾರವು ಇದರ ಬಗ್ಗೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬುದು ವಿಷಾದನೀಯವನ್ನು ಪ್ರಸ್ತಾಪಿಸಲು ತಮ್ಮ ಅನುಮತಿ ಕೇಳಬಯಸುತ್ತೇನೆ.

ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹಾಗೂ ಮಾಜಿ ಲೋಕೋಪಯೋಗಿ ಸಚಿವರಾದ ಮಾನ್ಯ ಗೋವಿಂದ ಎಂ.ಕಾರಜೋಳರವರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ, ಭೋವಿ ಹಟ್ಟಿ ಮತ್ತು ಲಂಬಾಣಿ ತಾಂಡಾಗಳ ಗ್ರಾಮಗಳ ಬಗ್ಗೆ ಪ್ರಸ್ತಾಪ ಮಾಡಿದಾಗ ಅವರುಗಳು ಕನಿಷ್ಠ 100 ರೇಷನ್ ಕಾರ್ಡ್ ಹೊಂದಿರುವ ಪ್ರತಿಯೊಂದು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ, ಭೋವಿ ಹಟ್ಟಿ ಮತ್ತು ಲಂಬಾಣಿ ತಾಂಡಾಗಳಿಗೆ ಒಂದು ನ್ಯಾಯಬೆಲೆ

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
---

ಅಂಗಡಿಯನ್ನು ಹಂಚಿಕೆ ಮಾಡಲಾಗುವುದು ಎಂದು ಘೋಷಣೆ ಮಾಡಿದರು. ಆದರೆ, ಇದು ಇವತ್ತಿಗೂ ಸಹ ಕೇವಲ ಘೋಷಣೆಯಾಗಿಯೇ ಉಳಿದಿದ್ದು, ಇನ್ನೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಸರ್ಕಾರಿ ಆದೇಶವು ಹೊರಡಿಸಿಲ್ಲ. ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ಎಂಬುದರ ಕುರಿತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬೇಕಾಗಿತ್ತು. ಆದರೆ, ಆಹಾರ ಸಚಿವರು ಉತ್ತರ ನೀಡುವುದಾದರೆ ನೀಡಲಿ. ಈ ಹಿಂದೆ ವಿಶೇಷವಾಗಿ ಈ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಸಮಸ್ಯೆಗಳಿವೆ ಅಥವಾ ದೌರ್ಜನ್ಯದ ಪ್ರಕರಣಗಳಾಗಿರಬಹುದು. ಆ ದೌರ್ಜನ್ಯದ ಪ್ರಕರಣಗಳು ನಡೆದರೆ ಅದನ್ನು ವಿಡಿಯೋಕರಣ ಮಾಡುತ್ತೇವೆ ಎಂದು ತಿಳಿಸಿದ್ದು, ಈಗ ಎಷ್ಟು ವಿಡಿಯೋಕರಣ ಮಾಡಿದ್ದಾರೆ, ಅದು ಲಾಭದಾಯಕವಾಗಿದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ. ಈ ಹಿಂದೆ ಸರ್ಕಾರ ಈ ರೀತಿಯಾದ ಆಶ್ವಾಸನೆ ನೀಡಿದ್ದು ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ. ಅದರ ಜೊತೆಗೆ ಈ ಹಿಂದೆ ಜಿಲ್ಲಾ ಮಟ್ಟದಲ್ಲಿ ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡಗಳ ಜಾಗೃತ ಸಮಿತಿಗಳು ಏನಿವೆ, ಅದು 3 ತಿಂಗಳಿಗೊಮ್ಮೆ ಭೇಟಿ ಆಗಬೇಕು ಎಂದು ಸೂಚಿಸಿದರು. ಆದರೆ, ಇನ್ನೂ ಎಲ್ಲಿಯು ಅದರ ಲಾಭ ಬರುತ್ತಿಲ್ಲ. ಇದಕ್ಕೆ ಸರ್ಕಾರ ಉತ್ತರ ನೀಡಿ, ವಿಶೇಷವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಆಶ್ವಾಸನೆ ನೀಡಿದೆ, ಅದನ್ನು ಈಡೇರಿಸುವಲ್ಲಿ ಸರ್ಕಾರ ಜಾರಿಗೆ ತರದೇ ಎಲ್ಲಾ ಕಡೆ ವಿಳಂಬ ನೀತಿ ತೋರಿದ್ದೆ. ಇದು ವಿಶೇಷವಾಗಿ ಬಡವರಿಗೆ ಆಗುವಂಥ ಅನಾನುಕೂಲಗಳಾಗಿವೆ. ತಮಗೂ ತಿಳಿದಿರುವ ಹಾಗೆ ಲಾಂಬಾಣಿ ತಾಂಡಾಗಳಲ್ಲಿ ವಲಸೆ ಹೋಗುತ್ತಾರೆ. ವಲಸೆ ಹೋಗುವ ಸಂದರ್ಭದಲ್ಲಿ ಮಕ್ಕಳನ್ನು ಬಿಟ್ಟು ಹೋಗುತ್ತಾರೆ. ನ್ಯಾಯಬೆಲೆ ಅಂಗಡಿಗೆ ಹೋಗಬೇಕಾದರೆ 3-4 ಕಿ.ಮೀ. ನಡೆದುಕೊಂಡು ಹೋಗಬೇಕು. ದಿನಗೂಲಿ ಮಾಡುವವರು ದಿನಗೂಲಿ ಕೆಲಸ ಬಿಟ್ಟು ಅಂದಿನ ದಿವಸ ನ್ಯಾಯಬೆಲೆ ಅಂಗಡಿಗೆ ಹೋಗಬೇಕಾಗುತ್ತದೆ. ಸರ್ಕಾರದ ಈಗಾಗಲೇ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಘೋಷಣೆ ಮಾಡಿದ್ದೆ. ಆದರೆ, ಇಲ್ಲಿಯವರೆಗೂ ಕಾರ್ಯರೂಪಕ್ಕೆ ಬಂದಿಲ್ಲ. ಹಾಗಾಗಿ

ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದಕ್ಕೆ ಸಂಬಂಧಿಸಿದಂತೆ ಸರ್ಕಾರ ಉತ್ತರ ನೀಡಿದ ಮೇಲೆ ಮತ್ತೆ ಪ್ರಶ್ನೆ ಕೇಳಬಯಸುತ್ತೇನೆ.

**ಶ್ರೀ ಉಮೇಶ್ ವಿ.ಕತ್ತಿ (ಆಹಾರ, ನಾಗರಿಕ ಮತ್ತು ಸರಬರಾಜು ಸಚಿವರು):-** ಮಾನ್ಯ ಸಭಾಪತಿಯವರೇ,...

**(ಸಚಿವರ ಹೇಳಿಕೆಯ ಪ್ರತಿಯನ್ನು ಲಗತ್ತಿಸಲಾಗಿದೆ)**

“ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

ಈಗಾಗಲೇ ರಾಜ್ಯದಾದ್ಯಂತ 376 ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದ್ದು, ಇನ್ನು ಬೇಡಿಕೆ ಇದೆ. ಆದಾಗ್ಯೂ ಬೇಡಿಕೆ ಇದ್ದರೆ ಇನ್ನು ಹೆಚ್ಚಿನ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗುವುದು, ಅದಕ್ಕೆ ಯಾವುದೇ ತೊಂದರೆ ಇಲ್ಲ. ಸಂಬಂಧಪಟ್ಟ ಜಿಲ್ಲಾ ಮಟ್ಟದ ಆಹಾರ ಇಲಾಖೆ ಮತ್ತು ಜಿಲ್ಲಾಧಿಕಾರಿಗೆ ಗೊಲ್ಲರಹಟ್ಟಿ, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವ ಅಧಿಕಾರ ನೀಡಲಾಗಿದೆ. ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ವಿಶೇಷವಾಗಿ ವಿಜಾಪುರ ಜಿಲ್ಲೆಯಲ್ಲಿ 78 ನ್ಯಾಯಬೆಲೆ ಅಂಗಡಿಗಳನ್ನು ಘೋಷಣೆ ಮಾಡಿದ್ದು, ಇನ್ನು ಬೇಡಿಕೆ ಇದ್ದರೆ ನೀಡಲಾಗುವುದು. ಆದರೆ, ಕನಿಷ್ಠ 100 ರೇಷನ್ ಕಾರ್ಡ್ ಹೊಂದಿರಲೇಬೇಕೆಂದು ಆದೇಶ ಹೊರಡಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ವಿಶೇಷವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳು ಏನಿವೆ, ಭೋವಿ ಹಟ್ಟಿ, ಲಂಬಾಣಿ ತಾಂಡಾಗಳಿವೆ, ಅದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ತಮ್ಮ ಹತ್ತಿರ ಕೇಳಿದ್ದೇನೆ. ಅವರ ಉತ್ತರದಲ್ಲಿ ಈಗಾಗಲೇ 376 ನ್ಯಾಯಬೆಲೆ ಅಂಗಡಿಗಳನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ. ಮಾನ್ಯ ಸಚಿವರ ಗಮನಕ್ಕೂ ಗೊತ್ತಿದೆ, ನನಗೂ ಗೊತ್ತಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 3300 ತಾಂಡಾಗಳಿವೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳನ್ನು ಸೇರಿಸಿದರೆ ಸುಮಾರು 10000 ದಿಂದ 11000 ಕ್ಕೂ ಹೆಚ್ಚಾಗುತ್ತವೆ. ಆದರೆ, ತಾವು ಕೇವಲ 376 ನ್ಯಾಯಬೆಲೆ ಅಂಗಡಿಗಳನ್ನು ಸ್ಥಾಪನೆ ಮಾಡಿದ್ದೀರಿ. ಇನ್ನೂ ಕೆಲವು ಕಡೆ ಅದೇ ಸಮಸ್ಯೆ ಇದೆ. ನನಗೂ ಸರಿಯಾಗಿ ತಿಳಿದಿಲ್ಲ, ಸರ್ಕಾರಕ್ಕೆ ಮಾಹಿತಿ ಬಂದ ಮೇಲೆ ದಿನಾಂಕ: 22.09.2021 ರಂದು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ.

(ಮುಂದು)

(1056) 13-12-2021 5.00 SK-MD

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):-**

ನನಗಿರುವ ಮಾಹಿತಿ ಪ್ರಕಾರ ಪ್ರಾರಂಭವಾದರೂ ಸಹ ಕೆಲವು ಕಡೆ ಇನ್ನೂ ಸಂಪೂರ್ಣವಾಗಿ ಪ್ರಾರಂಭವಾಗಿಲ್ಲ. ನಾನು ಹೇಳುತ್ತಿರುವುದೇನೆಂದರೆ, ಸರ್ಕಾರ ಪ್ರಾರಂಭ ಮಾಡಿರುವುದು ಬಹಳ ಕಡಿಮೆ ಇದೆ. ಇದನ್ನು ಜಾಸ್ತಿ ಮಾಡಬೇಕು. ಅದು ಕೇವಲ ಲಂಬಾಣಿ ತಾಂಡವಷ್ಟೇ ಅಲ್ಲ. ನಮ್ಮ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ಹಟ್ಟಿಗಳು ಮತ್ತು ಪರಿಶಿಷ್ಟ ಜಾತಿಗಳ ಕಾಲೋನಿಗಳೇನಿವೆ, ಅವುಗಳನ್ನೆಲ್ಲವನ್ನೂ ಸೇರಿಸಿ ನೋಡಿದರೆ, ಸರ್ಕಾರ ಇವುಗಳಿಗೆ ಬಹಳ ಕಡಿಮೆ ಮಾಡಿದೆ ಎಂಬುದು ನನ್ನ ಭಾವನೆಯಾಗಿದೆ. ಮಾನ್ಯ ಸಚಿವರು ನನಗೆ ಇವತ್ತು ಆಶ್ವಾಸನೆಯನ್ನು ಕೊಡಿ. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಎಷ್ಟು ಜನ ಪಡಿತರ ಚೀಟಿಗಳು ಉಳ್ಳವರಿದ್ದಾರೆ. ಎಲ್ಲಾ ಕಾಲೋನಿಗಳಿಗೆ ನ್ಯಾಯ ಬೆಲೆ ಅಂಗಡಿಗಳನ್ನು ಕೊಡುತ್ತೇವೆಂದು ಮಾನ್ಯ ಸಚಿವರೇ ಘೋಷಣೆಯನ್ನು ಮಾಡಿದ್ದೀರಿ. ಅದನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸುತ್ತೀರಿ. ಎರಡನೆಯದಾಗಿ, ಇದರ ಜೊತೆಗೆ ತಮಗೆ ಗೊತ್ತಿರುವಂತೆ, ನಮಗೆ ದೌರ್ಜನ್ಯ ಸಮಿತಿ ಎನ್ನುವಂತಹದ್ದು ಇದೆ. ಅದು ಮೂರು ತಿಂಗಳುಗೊಮ್ಮೆ ಭೇಟಿಯಾಗುತ್ತದೆಯಾ. ಅದರ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ನಮಗೆ ಮಾಹಿತಿ ಕೊಡಬೇಕು. ಅದರ ಜೊತೆಗೆ ದೌರ್ಜನ್ಯಗಳ ಪ್ರಕರಣಗಳ ಬಗ್ಗೆ ದೂರುಗಳು ದಾಖಲಾದಾಗ, ಅದರ ವಿಡಿಯೋಕರಣ ಮಾಡಬೇಕೆಂದು ಹೇಳಿದ್ದಾರೆ. ಎಷ್ಟು ಪೊಲೀಸ್ ಠಾಣೆಗಳಲ್ಲಿ ವಿಡಿಯೋಕರಣವಾಗುತ್ತಿದೆ. ತಮಗೆ ಗೊತ್ತಿರುವಂತೆ ದೌರ್ಜನ್ಯ ಪ್ರಕರಣದಲ್ಲಿ ಶಿಕ್ಷೆಯಾಗುವುದು ಕೇವಲ ಶೇಕಡ 10 ರಿಂದ 12 ಮಾತ್ರ. ಇನ್ನೂ ದೌರ್ಜನ್ಯ ನಡೆಯುತ್ತಲೆ ಇದೆ. ಇನ್ನು ಅದೇ ತರಹವಾಗುತ್ತಿದೆ. ಆದರೆ ನಮಗೆ ಪರಿಹಾರ ಸಿಗುತ್ತಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಮಾಹಿತಿ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಉಮೇಶ ವಿ.ಕತ್ತಿ (ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು**):- ಮಾನ್ಯ ಸಭಾಪತಿಯವರೇ, ಈಗಾಗಲೇ ಕಳೆದ ಬಾರಿ ಅಧಿವೇಶನದಲ್ಲಿ ಹೇಳಿರುವಂತೆ, ನೂರು ಪಡಿತರ ಚೀಟಿಗಳು ಬೇಕಾದರೂ ಕೊಡುತ್ತೇವೆ. ಅರ್ಜಿ ಬಂದರೆ, ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಅರ್ಜಿಗಳನ್ನು ವಿಲೇವಾರಿ ಮಾಡುವುದಕ್ಕೆ ಹೇಳಿದ್ದೇನೆ. ಈಗಾಗಲೇ 376 ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದೇವೆ. ಇನ್ನು demand ಇದ್ದು, ಅರ್ಜಿಗಳು ಬಂದರೆ, ಪಡಿತರ ಚೀಟಿಗಳನ್ನು ಕೊಟ್ಟೇ ಕೊಡುತ್ತೇವೆ. ಮಾನ್ಯ ಸದಸ್ಯರು ದೌರ್ಜನ್ಯದ ಬಗ್ಗೆ ಹೇಳುತ್ತಿದ್ದಾರೆ. ಅದು ಜಿಲ್ಲಾಧಿಕಾರಿಗಳು ಮತ್ತು ಸಮಾಜ ಕಲ್ಯಾಣ ಸಚಿವರಿಗೆ ಬರುತ್ತದೆ. ದೌರ್ಜನ್ಯ ಪ್ರಕರಣ ನನಗೆ ಬರುವುದಿಲ್ಲ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಿದ್ದೆ.

**ಶ್ರೀ ಉಮೇಶ ವಿ. ಕತ್ತಿ:-** ಈಗಾಗಲೇ 376 ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟಿದ್ದೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ತಾವು ಕೊಟ್ಟಿರುವುದರ ಬಗ್ಗೆ ನನಗೇನೂ ಅಭ್ಯಂತರವಿಲ್ಲ. ತಾವು ಕೊಡಿ. ಆದರೆ ಇದರ ಬಗ್ಗೆ ನನಗೆ ಮಾಹಿತಿಯನ್ನು ಕೊಡಿ. ತಾವು ಕಾಲಾವಕಾಶವನ್ನು ತೆಗೆದುಕೊಂಡು ನಂತರ ಹೇಳಿ.

**ಶ್ರೀ ಉಮೇಶ ವಿ. ಕತ್ತಿ:-** ದೌರ್ಜನ್ಯ ಪ್ರಕರಣದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೀರಿ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಥವಾ ಸಮಾಜ ಕಲ್ಯಾಣ ಸಚಿವರು ಉತ್ತರವನ್ನು ಕೊಡುತ್ತಾರೆ. ನನಗೆ ಕೇಳಿರುವಂತಹ ಸೀಮಿತವಾದ ಪ್ರಶ್ನೆಗೆ ಮಾತ್ರ ಉತ್ತರವನ್ನು ಕೊಡುತ್ತಿದ್ದೇನೆ. ಇನ್ನೂ demand ಇದ್ದರೆ ಇನ್ನೂ ಕೊಡುತ್ತೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಸಾಕಷ್ಟು ಕಡೆ demand ಇದೆ.

**ಶ್ರೀ ಉಮೇಶ ವಿ. ಕತ್ತಿ:-** ಅರ್ಜಿಗಳ ಬಗ್ಗೆ ಹೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

---

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಅರ್ಜಿಗಳು ಕೊಟ್ಟಿರುತ್ತಾರೆ. ಅದು ತಮ್ಮ ಹತ್ತಿರ ಬಂದಿರುತ್ತದೆ. ನನಗೆ ಇರುವ ಮಾಹಿತಿ ಪ್ರಕಾರ ನಾನು ಹೇಳುತ್ತಿದ್ದೇನೆ.

**ಶ್ರೀ ಉಮೇಶ ವಿ. ಕತ್ತಿ:-** ಮಾನ್ಯ ಪ್ರಕಾಶ್ ಕೆ. ರಾಥೋಡ್‌ರವರೇ ಒಂದೇ ಒಂದು ನಿಮಿಷ. ನನಗೆ ಅರ್ಜಿ ಕೊಡುವುದು ಬೇಡ. ಆಯಾಯ ಜಿಲ್ಲೆಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಟ್ಟರೆ, ಕೂಡಲೇ ಮಂಜೂರು ಮಾಡಬೇಕೆಂದು ಹೇಳಿದ್ದೇನೆ. ಅದರ ಬಗ್ಗೆ ಯಾವುದೇ ತೊಂದರೆ ಇದ್ದರೆ ಹೇಳಿ, ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಅರ್ಜಿ ಕೊಟ್ಟ ತಕ್ಷಣ ಕ್ಷುಲ್ಲಕ ಕಾರಣದಿಂದ ಅದನ್ನು ತಿರಸ್ಕಾರ ಮಾಡಬಾರದು. ಬಹಳಷ್ಟು ಕಡೆ ಅದನ್ನು ತಿರಸ್ಕಾರ ಮಾಡಿದ್ದಾರೆ.

**ಶ್ರೀ ಉಮೇಶ ವಿ. ಕತ್ತಿ:-** ಯಾವುದಾದರೂ ಪ್ರಕರಣವಾಗಿರುವ ಬಗ್ಗೆ ಉದಾಹರಣೆ ಇದ್ದರೆ ಹೇಳಿ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ನಾನು ತಮಗೆ ಉದಾಹರಣೆಯನ್ನು ಕೊಡುತ್ತೇನೆ.

**ಶ್ರೀ ಉಮೇಶ ವಿ. ಕತ್ತಿ:-** ಅರ್ಜಿ ಕೊಟ್ಟ ನಂತರ ಎರಡು ವರ್ಷ ಸಮಯಾವಕಾಶ ಕೊಡಲಿ. ಆಗ ಕೊಡಲಿಲ್ಲವೆಂದರೆ, ನಾನು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್:-** ಆಯಿತು.

---

## 10. ಪ್ರಕಟಣೆ

**ಸಭಾಪತಿಯವರು:-** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 136+66+140+08+117 ಕ್ಕೆ ಸಂಬಂಧಿಸಿದಂತೆ ಶ್ರೀ ಶಶೀಲ್ ಜಿ. ನಮೋಶಿಯವರು, ಶ್ರೀ ಕೆ.ಟಿ.ಶ್ರೀಕಂಠೇಗೌಡರು, ಶ್ರೀ ಎಸ್.ವ್ಹಿ.ಸಂಕನೂರರವರು, ಶ್ರೀ ಪುಟ್ಟಣ್ಣನವರು ಮತ್ತು ಶ್ರೀ ಅರುಣ ಶಹಾಪುರರವರು ಅವರೆಲ್ಲರನ್ನೊಳಗೊಂಡಂತೆ ಸಭೆ ಮಾಡುವುದಕ್ಕೆ ಈಗಾಗಲೇ ನಿರ್ದೇಶನ ಕೊಟ್ಟಿದೆ. ಆ ಸಭೆಯನ್ನು ನನ್ನ ಅಧ್ಯಕ್ಷತೆಯಲ್ಲಿ ಕರೆಯಬೇಕೆಂದು ಮಾಡಿದ್ದಾರೆ. ಆ ಸಭೆಯನ್ನು ನನ್ನ ಅಧ್ಯಕ್ಷತೆಯಲ್ಲಿ ಕರೆಯುತ್ತಾರೆ.

ಈಗ ಸಭೆಯು ಮುಕ್ತಾಯವಾಗಿ ಪುನಃ ನಾಳೆ ಬೆಳಗ್ಗೆ 11.00 ಗಂಟೆಗೆ ಸೇರುವುದು.

**(ಸದನವು ಸಾಯಂಕಾಲ 5 ಗಂಟೆ 3 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ 14ನೇ ಡಿಸೆಂಬರ್ ಮಾಹೆ 2021ರ ಮಂಗಳವಾರದಂದು ಬೆಳಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

**<><><>**

"ತಿದ್ದುಪಡಿಯಾಗದ ಪ್ರತಿ/Unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"